ಕಲ್ಯಾಣ ಕಿರಣ


ಸಂಪುಟ ೭
ಸಂಚಿಕೆ ೬-೭
ನವಂಬರ್-ಡಿಸಂಬರ್
೧೯೮೧
ಬಸವ ಶಕೆ ೮೭೫
ಬೆಲೆ : ೩-೦೦



ಭಕ್ತಿ ಪಕ್ಷದ ಸಮ್ಮೇಳನ

2–10–1981ರಂದು ನಡೆದ ಪ್ರಥಮ ಅಧಿವೇಶನ : ಎಡದಿಂದ ಬಲಕ್ಕೆ : ಪೂಜ್ಯ ದಯಾನಂದ ಸ್ವಾಮೀಜಿ, ಎ. ಎಂ. ಬಸನೇಗೌಡರು, ಬೆಲಿಮಠದ ಶ್ರೀ ಶಿವರುದ್ರಸ್ವಾಮಿಗಳು, ಪೂಜ್ಯಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು, ಗ್ರಾಮಾಭಿವೃದ್ಧಿ ಸಚಿವ ಬೇಗಾನೆ ರಾಮಯ್ಯನವರು ಪೂಜ್ಯ ಮಾತಾಜಿಯವರು ಡಾ|| ಸಾ. ಶಿ. ಮರುಳಯ್ಯನವರು.

ಹಿಂದಿನ ಸಾಲು : ಪೂಜ್ಯ ಗಂಗಾದೇವಿ ಮತ್ತು ಪೂಜ್ಯ ಬಸಮ್ಮ ತಾಯಿ



ಕಲ್ಯಾಣ ಕಿರಣ

ಸಂಪುಟ ೭]　　　ನವೆಂಬರ್ 1981　　　[ಸಂಚಿಕೆ ೭

ಕನ್ನಡಮ್ಮಗೆ　　　ನುಡಿ ನೈವೇದ್ಯ

ಕನ್ನಡ ವಾಗ್ದೇವಿ ನಿನ್ನ ವದನ ಸುಂದರ
ಸನ್ನುತ ಶ್ರೀದೇವಿ ನಿನ್ನ ವಾಣಿ ಸುಮಧುರ ॥
ದ್ರವಿಡಭಾಷೆ ನಿನ್ನ ಮಾತೆ ಸಾಕು ತಾಯಿ ಸಂಸ್ಕೃತ
ತಮಿಳು ತೆಲುಗು ಮಲೆಯಾಳಿ ನಿನ್ನ ಅಕ್ಕ ತಂಗಿಯರು ।
ನೀರಿನಲೆಯ ಮೇಲೆ ತೇಲ್ವ ದೋಣಿಯಂತೆ ಹಗುರವು
ನಾಲಿಗೆಯಲ್ಲಿ ನರ್ತಿಸುವ ಕನ್ನಡದುಲಿ ಮಧುರವು ।
ಎಲ್ಲ ಬಗೆಯ ಉಚ್ಚಾರವು ನಿನ್ನ ಮಡಿಲಲುಂಟು ತಾಯೆ
ಸೊಲ್ಲಿನಲ್ಲಿ ಸ್ಪಷ್ಟತೆಯಿರೆ ಸರ್ವಾಂಗಪೂರ್ಣ ಶೀಲೆಯೆ ।
ಮೃದುಭಾಷಿಣಿ, ಕುಕಿಲವಾಣಿ, ಗಾನಗಂಭೀರೆ ನೀ
ಶಾಂತರೂಪಿ, ಆಕರ್ಷಿಣಿ, ಸುಸಂಸ್ಕೃತ ನೀರೆ ನೀ ।
ಬರವಣಿಗೆ ಬಹುಸುಂದರ ಮುತ್ತಿನ ಹಾರದೊಲು
ಸಿರಿವಂತಿಕೆ ತುಂಬಿದೆ ಜ್ಯೋತಿಯಿಂದ ಮಾತಿನೊಳು ।
ತಲೆಕಟ್ಟು ಕೊಂಬು ದೀರ್ಘ ನೇರ ಭವ್ಯ ಜೋಡಣೆ
ಉಲಿಯಲ್ಲಿ ನಲಿಯುವುದು ಕಿರುಗೆಜ್ಜೆಯ ಕಿಣಿಕಿಣಿ ॥
ರನ್ನಪೊನ್ನ ನೃಪತುಂಗ ಪಂಪ ಕಂತಿ ಹರಿಹರ
ಚನ್ನಬಸವ ಅಲ್ಲಮಪ್ರಭು ಅಕ್ಕ ಕನಕ ಪುರಂದರ
ಕನ್ನಡ ನುಡಿ ಕನ್ನಡ ಗುಡಿ ಎಲ್ಲ ನಮಗೆ ಶಿವಮಂತ್ರ
ಚಿನ್ನದಂಥ ಬಸವವಾಣಿ ಮನುಕುಲಕೆ ದಿವ್ಯಾಮೃತ ॥
ಓಂಕಾರದ ಝೇಂಕಾರ ನಮ್ಮ ನೆಲದ ಭಾಷೆಯಲ್ಲಿ
ರಂಜಿಸಲಿ ಎಲ್ಲೆಡೆಯಲಿ ಕನ್ನಡದ ಪ್ರಣವಧ್ವನಿ ॥


– ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ ೧೬   ಆಜೀವ ಸದಸ್ಯತ್ವ ೧೫೧ ರೂ.
ಬಿಡಿ ಪ್ರತಿ ೧-೫೦ ರೂ

ಕಿರಣಗನ್ನಡಿ



—ಮಾತಾಜಿ

ಮನೆಯಲ್ಲೇ ಅಮ್ಮನಿಗಿಲ್ಲ ಸ್ಥಾನ!

ನಮ್ಮಜ್ಜ ಸದೃಢ ವ್ಯಕ್ತಿ; ಅಜ್ಜಿಯೂ ಆರೋಗ್ಯಯುಕ್ತ ಕಾಯದವಳು. ಗುಣವಂತೆ. ಅವರ ಸಂಸಾರ ಲತೆಯಲ್ಲಿ ಅರಳಿದ ಪುಷ್ಪಗಳು ನಾಲ್ವರು ಹೆಣ್ಣುಮಕ್ಕಳು. ಅನಿತರಲ್ಲಿ ಇನ್ನೋರ್ವಳು ವನಿತೆ ಅಜ್ಜನ ಮನೆಯೊಳಕ್ಕೆ ಕಾಲಿಟ್ಟಳು. ಆಕೆ ಬೇರೆ ನಾಡಿನವಳು. ಆದರೂ ಚಿಂತೆಯಿಲ್ಲ. ಸುಂದರಿ, ಗುಣವಂತೆ. ಈಕೆ ಬಂದಮೇಲೆ ನಮ್ಮಜ್ಜಿ ತೀರಿಕೊಂಡಳೋ ಅಥವಾ ಬರುವ ಮುನ್ನವೇ ಕಾಲನ ಗರ್ಭದಲ್ಲಿ ಅಡಗಿದಳೋ! ಅಥವಾ ಯಾವುದಾದರೊಂದು ಸಂಕಷ್ಟಕ್ಕೆ ಸಿಕ್ಕಿ ಎಲ್ಲಾದರೂ ಅಜ್ಞಾತವಾಸದಲ್ಲಿ ಇನ್ನೂ ಇರುವಳೋ ನಾವರಿಯೆವು. ಆಗಾಗ ಮಾತ್ರ ನೇತಾಜಿ ಸುಭಾಷ್ ಚಂದ್ರರ ಬಗ್ಗೆ ಸುದ್ದಿ ಬಂದಂತೆ ನಮ್ಮಜ್ಜಿಯ ಬಗ್ಗೆಯೂ ಬರುತ್ತದೆ; 'ಆಕೆ ಅಜ್ಞಾತವಾಸದಲ್ಲಿದ್ದಾಳೆ' ಎಂದು ನಾನು ಇಂಗ್ಲೆಂಡ್ ಪ್ರವಾಸದಲ್ಲಿದ್ದಾಗ ಭೇಟಿಯಾದ ಓರ್ವ ಆಂಗ್ಲ ವಿದ್ವಾಂಸರು ಹೇಳಿದರು. "ನಿಮ್ಮಜ್ಜಿ ಸತ್ತಿಲ್ಲ; ಇನ್ನೂ ಇದ್ದಾಳೆ. ಆದರೆ ತುಂಬಾ ಜೀರ್ಣಾವಸ್ಥೆಯಲ್ಲಿದ್ದಾಳೆ. ಅಜ್ಞಾತವಾಸದಲ್ಲಿದ್ದಾಳೆ." ಆದರೀವಿಷಯದಲ್ಲಿ ಒಮ್ಮತವಿಲ್ಲ.

ಚಿಕ್ಕಜ್ಜಿ ಮನೆಗೆ ಬರುವ ವೇಳೆಗೆ ನಮ್ಮಜ್ಜಿಯ ಮಕ್ಕಳು ನಾಲ್ವರೂ ಚೆಂದಾಗಿ ಬೆಳೆದಿದ್ದರು. ಸ್ವಯಂ ಪರಿಪೂರ್ಣರಾಗಿದ್ದರು. ಅದರಲ್ಲೂ ನಮ್ಮಮ್ಮ ತೀರಾ ಚೆಲುವೆ. (ನಮ್ಮಮ್ಮ ಎಂಬ ಅಭಿಮಾನದಿಂದ ಹೇಳುವೆ ಎಂದು ಬೇಸರಿಸುವಿರಾ.

ಸ್ವಲ್ಪ ತಾಳ್ಮೆ ಇರಲಿ ನಿಮಗೆ), ಗುಣವಂತೆ. ಚಿಕ್ಕಜ್ಜಿಯ ಆಶ್ರಯ ಅವರಿಗೇನೂ ಅವಶ್ಯಕವಿಲ್ಲದಿದ್ದರೂ, ಆಕೆ ಅಂತೂ ಮಮತೆಯಿಂದ ನೋಡಿಕೊಂಡು ತಾನೂ ಉತ್ತಮ ಆಹಾರವಿತ್ತು ಪೋಷಿಸಿದಳು. ನಾಲ್ವರು ಹೆಣ್ಣುಮಕ್ಕಳಲ್ಲಿ ಒಬ್ಬಳು, 'ನಮ್ಮ ಅಡಿಗೆ ನಾವೇ ಮಾಡಿಕೊಳ್ಳುತ್ತೇವೆ. ನಿನ್ನೂಟ ಬೇಡ' ಎಂದರು. ಇನ್ನು ಮೂವರು ಮಾತ್ರ ಚಿಕ್ಕಜ್ಜಿಯ ಊಟ ಉಣ್ಣುತ್ತಿದ್ದರು. ಇವರಿಗೂ ಸ್ವಯಂ ಪೂರ್ಣತೆ ಇದ್ದರೂ. ಇವರು ಸ್ವಲ್ಪ ದಾಕ್ಷಿಣ್ಯದ ಸ್ವಭಾವದವರು. (ಈವತ್ತು ಇವರು. ಆದರಲ್ಲೂ ನಮ್ಮಮ್ಮ ಕಷ್ಟಪಡುತ್ತಿರುವುದು ಇದರಿಂದಾಗಿಯೆ !) ಒಮ್ಮೊಮ್ಮೆ ಚಿಕ್ಕಜ್ಜಿ ನಮ್ಮಮ್ಮನನ್ನು ಮತ್ತು ಆಕೆಯ ಮೂವರು ಸಹೋದರಿಯರನ್ನು "ಅನಾರ್ಯರು, ಒರಟರು, ಅನಾಗರಿಕರು" ಎಂದೆಲ್ಲ ದೂಷಿಸುತ್ತಿದ್ದಳು. ಆದರೂ ಅಷ್ಟೇನು ದ್ವೇಷಿಸುತ್ತಿರಲಿಲ್ಲ. ಆದರೆ ಇದರಿಂದ ಹಿರಿಯ ಅಕ್ಕಂದಿರಿಬ್ಬರೂ ಸಿಡಿದೆದ್ದು ಮಾತನಾಡುತ್ತಿದ್ದರು. ನಮ್ಮಮ್ಮ ಸಹಿಸಿಕೊಂಡರೂ ಮುಂದೆ ಆಗಾಗ ಆಕೆಯ ಮಕ್ಕಳು ಪ್ರತಿಭಟಿಸುತ್ತಿದ್ದರು.

ಅಷ್ಟರಲ್ಲಿ ಚಿಕ್ಕಜ್ಜಿ ನಾಲ್ವರನ್ನೂ ಮದುವೆ ಮಾಡಿ ದೂರ ಕಳಿಸಿದಳು. ಅವರು ದೂರವಿರಲಿ ಎಂದು ದೂರಕ್ಕೆ ಕಳಿಸಿದಳೋ, ಅಥವಾ 'ನಮಗೆ ಚಿಕ್ಕಜ್ಜಿ ಮತ್ತು ಆಕೆಯ ಅನೇಕ ಮಕ್ಕಳೊಡನೆ ಕಾದಾಟ ಬೇಡ ಎಂದು ಇವರೇ ಬಂದರೋ, ಅಂತೂ ನಾಲ್ವರು ಹೆಣ್ಣು ಮಕ್ಕಳೂ ಒಂದು ದೂರದ ನಾಡಿನಲ್ಲಿದ್ದಾರೆ. ನಮ್ಮ ದೊಡ್ಡಮ್ಮ ಮತ್ತು ಚಿಕ್ಕಮ್ಮಂದಿರು ಪರವಾಗಿಲ್ಲ. ಅವರು ಮೊದಲಿನಿಂದಲೂ ದಾರ್ಷ್ಟ್ಯ ಸ್ವಭಾವದವರು. ಅವರ ಮನೆಯಲ್ಲಿ ಅವರದೇ ಕಾರುಭಾರ, ಅಗ್ರಪೀಠ, ಗೌರವ ರಕ್ಷೆ. ಆಕೆಯ ಮಕ್ಕಳೂ ಅಷ್ಟೇ ಸ್ವಾಭಿಮಾನಿಗಳು. ಆದರೆ ನಮ್ಮಮ್ಮನದು ಕಷ್ಟದ ಬದುಕೆ! ಕಾರಣವೆಂದರೆ ಆಕೆಯ ಮಕ್ಕಳಲ್ಲಿ ಎರಡು ಬಣ. ಕೆಲವರು ನಮ್ಮಮ್ಮನನ್ನು ಮೂಲೆಗೆ ತಳ್ಳಿ, ಮಸಿಮಟ್ಟೆಯಂತಹ ಸೀರೆಯುಡಿಸಿ ಆಕೆಯ ಆರೋಗ್ಯದತ್ತಲೂ ಗಮನಕೊಡದೆ ದೊಡ್ಡಮ್ಮ ಚಿಕ್ಕಮ್ಮಂದಿರನ್ನು ಮನೆಯಲ್ಲಿ ಕರೆಸಿಕೊಂಡು ಉಪಚರಿಸುವರು. ಅವರಿಗೆ ಗೌರವವೀಯುವರು. ಇನ್ನೊಮ್ಮೆ ಆಂಗ್ಲೋ ಇಂಡಿಯನ್ ಚೆಲುವೆಯನ್ನು ಕರೆತಂದು ಸರಸವಾಡುತ್ತ ನಮ್ಮಮ್ಮನ ಸ್ಥಾನವನ್ನು ಕೆಳಮಟ್ಟಕ್ಕಿಳಿಸುವರು.

ಇತ್ತಿತ್ತಲಾಗಿ ಚಿಕ್ಕಜ್ಜಿಯನ್ನು ತಂದು ಅಮ್ಮನನ್ನು ಆಳಲು ವ್ಯವಸ್ಥೆ ಮಾಡುತ್ತಿರುವರು. ಅದರಲ್ಲಿಯೂ ಧಾರ್ಮಿಕ ಸ್ವಭಾವದವರು ಎನ್ನಿಸಿಕೊಂಡ ಕೆಲವು ಮಕ್ಕಳಂತೂ ಸ್ವಂತ ತಾಯಿಯನ್ನು ಅನಾಥಳನ್ನಾಗಿ ಕಾಣುತ್ತಿರುವರು: ನಮ್ಮಮ್ಮ ವೈಭವದಿಂದ ಮೆರೆದ ಕಾಲವಿಲ್ಲವೇ ಇಲ್ಲ ಎಂದೇನೂ ಭಾವಿಸಬೇಡಿ. ಆಕೆ ಸ್ವಲ್ಪ

ದಿನ ಕಿರೀಟ ಉಟ್ಟು ಮೆರೆದಳು. ನಂತರದಲ್ಲಿ ಈ ವೈಭವದಿಂದ ಅಮ್ಮನ ಸಹಜ ಸೌಂದರ್ಯ ಕೆಟ್ಟು ಹೋಗುವುದೆಂದು ಕೆಲವು ಮಕ್ಕಳು ಆಕೆಗೆ ಶುಭ್ರ ಬಿಳಿಯ ಸೀರೆಯುಡಿಸಿ, ತಾತ್ವಿಕ ಶಾಂತ, ಸರಳ ಸ್ವರೂಪ ಬರುವಂತೆ ಮಾಡಿ ಆಕೆಯ ಸಾಂಪತ್ತಿಕ ಚೆಲುವನ್ನು ಲೋಕಕ್ಕೆ ತೋರಿ ಕೊಟ್ಟರು. ಇಂದಷ್ಟೇ, ಆಕೆ ಮೂಲೆಗುಂಪು! ನೀವೇ ಆಲೋಚಿಸಿ; ಸ್ವಂತ ಮನೆಯಲ್ಲಿ ಅಮ್ಮನಿಗೆ ಬೆಲೆ ಸಿಕ್ಕದಿದ್ದರೆ, ಬೇರೆ ಮನೆಯಲ್ಲಿ ಸಿಕ್ಕೀತೆ? ಬೇರೆಯವರು ಕೊಟ್ಟಾರೆಯೆ?

ಧಾರ್ಮಿಕ ಸ್ವಭಾವದ ಮಕ್ಕಳ ಒಲವು ಅಮ್ಮನಿಗಿಂತ ಚಿಕ್ಕಜ್ಜಿಯ ಕಡೆಗೆ ಜಾಸ್ತಿ. ಕಾರಣವೇನೆಂದರೆ ಆಕೆ ಸ್ವಲ್ಪ ಮಡಿವಂತೆ, ಸಂಪ್ರದಾಯನಿಷ್ಟಳು. ನಮ್ಮಮ್ಮ ಸ್ವಲ್ಪ ಸರಳಜೀವಿ. ಹೆತ್ತ ಮಕ್ಕಳನ್ನೆಲ್ಲ ಸಮಾನವಾಗಿ ಮಮತೆಯಿಂದ ಕಾಣಲು ಬೋಧಿಸುವಳು. ಈ ಅಮ್ಮನ ಪರವಾಗಿ ಇರುವ ಮಕ್ಕಳೂ ಸ್ವಲ್ಪ ಪ್ರಗತಿ ಪರ ವಿಚಾರಧಾರೆಯವರು.

ಅಲ್ಲದೇ ಇಲ್ಲೊಂದು ವಿಚಿತ್ರ ವಿಶೇಷವಿದೆ. ನಮ್ಮ ಚಿಕ್ಕಜ್ಜಿಯನ್ನು ಬಹು ದಿವಸಕಾಲ ಧಾರ್ಮಿಕ ಸ್ವಭಾವದ ಮಕ್ಕಳು ಕೂಡಿ ಹಾಕಿದಂತೆ ಇಟ್ಟಿದ್ದರು. ಆಕೆ ದೇವಲೋಕದ ದೇವತೆಯೆಂದು ಹೊಗಳುತ್ತ ಕೆಲವು ಜನ ತನ್ನ ಸ್ವಂತ ಮಕ್ಕಳ ಮನೆಯ ಹೊಸ್ತಿಲು ತುಳಿಯದಂತೆ, ಅವರು ಆಕೆಯನ್ನು ಮುಟ್ಟದಂತೆ, ನಮಸ್ಕರಿಸದಂತೆ ಇಟ್ಟಿದ್ದರು. ಹೀಗಾಗಿ ಇವರೂ ನೊಂದುಕೊಂಡು "ನೀನು ನಮ್ಮ ಮನೆಗೆ ಬರುವುದೂ ಬೇಡ. ನಮ್ಮಮ್ಮನೇ ನಮಗೆ ಸಾಕು. ಆಕೆ ಸದ್ಗುಣದ ಖಣಿ" ಎಂದು ಚಿಕ್ಕಜ್ಜಿಯ ಬಗ್ಗೆ ಉದಾಸೀನತೆ ಪ್ರಾರಂಭಿಸಿದರು. ಆಗ ಈ ಧಾರ್ಮಿಕ ಸ್ವಭಾವದ ಮಕ್ಕಳು ಎಚ್ಚರಗೊಂಡುದೇ ಅಲ್ಲದೆ, 'ಇಲ್ಲ, ಈಕೆಯನ್ನು ಮನೆಗೆ ಸ್ವಾಗತಿಸಿ, ಪಾದಪೂಜೆ ಮಾಡಿ, ಆದರಿಸಿರಿ, ಉಪಚರಿಸಿರಿ." ಎಂದು ಒತ್ತಾಯ ಮಾಡತೊಡಗಿದ್ದಾರೆ. "ಇಷ್ಟು ದಿನಗಳ ಕಾಲ ಕಳಿಸದ ಚಿಕ್ಕಜ್ಜಿಯನ್ನು ಇಂದೇಕೆ ಕಳಿಸುತ್ತಿದ್ದೀರಿ? ಬೇಡ. ಆಕೆ ಬಂದರೆ ಮತ್ತೆ ಮಡಿವಂತಿಕೆ ಪ್ರಾರಂಭಿಸುತ್ತಾಳೆ. ಅವರು-ಇವರು, ಸ್ಪೃಶ್ಯರು-ಅಸ್ಪೃಶ್ಯರು ಎಂದೆಲ್ಲ ಹಾರಾಡುತ್ತಾಳೆ. ಆಕೆ ಬರುವುದೇ ಬೇಡ" ಎಂದು ಕೆಲವು ಮಕ್ಕಳ ಹಟ. ಇನ್ನು ಕೆಲವರು "ಬಂದರೆ ಬರಲಿ. ಅಮ್ಮನ ಸ್ಥಾನ ಅಮ್ಮನಿಗಿರಲಿ. ನಮ್ಮ ಮನೆಯಲ್ಲೂ ಅಜ್ಜಿಯ ದಬ್ಬಾಳಿಕೆ ಬೇಡ. ಕೊಂಚ ಸ್ಥಾನಮಾನ ಕಾಪಾಡಿಕೊಂಡು ಬೇಕಾದರೆ ಇರಲಿ. ಮತ್ತೆ ಚಿಕ್ಕಜ್ಜಿ ಮನೆ ಹೊಕ್ಕು ನಮ್ಮಮ್ಮನನ್ನು ಅನಾರ್ಯೆ, ಅನಾಗರೀಕಳು, ರಾಕ್ಷಸಿ, ಅಸಂಸ್ಕೃತೆ, ಪೂಜೆ ಪುರಸ್ಕಾರಕ್ಕೆ ಅನರ್ಹೆ, ಅಯೋಗ್ಯೆ, ಎಂದೆಲ್ಲ ದೂಷಿಸುವುದು ಬೇಡ. ಚಿಕ್ಕಜ್ಜಿಗೇನು? ಬೇಕಾದಷ್ಟು ಮಕ್ಕಳು. ಎಲ್ಲಿ ಬೇಕಲ್ಲಿ ಇರಬಲ್ಲಳು. ಆಕೆಯ ಸ್ವಂತ ಮಕ್ಕಳೇ ಸಾಕಷ್ಟು ಜನ.

ನಮ್ಮಮ್ಮನಿಗೋ ಇದೊಂದೇ ಮನೆ. ಇಲ್ಲಿ ಸ್ಥಾನವಿಲ್ಲವಾದರೆ ಆಕೆಗೆ ಮತ್ತೆಲ್ಲೂ ಸ್ಥಾನವಿಲ್ಲ. ನಮ್ಮಜ್ಜಿಯು ಏಕೋ ಸತ್ತು ಹೋದಳು, ಉದಾಸೀನವೋ, ದೌರ್ಜನ್ಯವೋ ಗೊತ್ತಿಲ್ಲ. ನಮ್ಮಮ್ಮನನ್ನೂ ಉದಾಸೀನ ಮಾಡಿ ಕ್ಷಯರೋಗಿಯನ್ನಾಗಿಯೋ, ಕುಷ್ಟರೋಗಿಯನ್ನಾಗಿಯೋ ಮಾಡಿದರೆ ಆಕೆಯನ್ನು ಕಳೆದುಕೊಂಡು ನಂತರ ದೊಡ್ಡಮ್ಮ-ಚಿಕ್ಕಮ್ಮಂದಿರ ಆಳ್ವಿಕೆ ಇಲ್ಲಿ ಆರಂಭವಾದೀತು. ಆದ್ದರಿಂದ ಈಗ ಜಾಗೃತಿ ಅವಶ್ಯಕ ಎನ್ನುತ್ತಿದ್ದಾರೆ ಕೆಲವು ಮಕ್ಕಳು.

ಹೌದಲ್ಲವೇ ಹೇಳಿ ? ಹೆತ್ತಮ್ಮನಿಗೆ ಅಗ್ರಪೀಠ ಬೇಡವೆ ? ಹಬ್ಬವು ಹತ್ತಿರ ಬರುತ್ತಿದ್ದರೂ ಆಕೆಗೆ ಅಗ್ರಪೀಠದ ಕಿರೀಟವಿಡಲಾರದಷ್ಟು ಸತ್ವಹೀನ ಮಕ್ಕಳು ಕೆಲವರು, ಧೂರ್ತರು ಇನ್ನು ಕೆಲವರು. ಚಿಕ್ಕಜ್ಜಿಯನ್ನು ಸಾಕೋಣ, ಗೌರವಿಸೋಣ. ಆದರೆ ಅಮ್ಮನ ಸ್ಥಾನವನ್ನು ಆಕೆಗಷ್ಟೇ ಮೀಸಲಿಡೋಣ. ಏಕೆ ? ಆಕೆ ನಮ್ಮ ಜನ್ಮದಾತೆ, ಆಡಲು ಮಡಲು ನೀಡಿದವಳು ! ಅವಳ ವದನ ತುಂಬ ಸುಂದರ, ವಾಣಿ ತುಂಬಾ ಮಧುರ. ಅವಳ ಉಲಿಯಲ್ಲಿ ಸರಸ್ವತಿಯ ವೀಣಾನಾದ. ಜೊತೆಗೆ ಮೃದುಭಾಷಿಣಿ, ಸರಳೆ, ಸೌಮ್ಯಳು, ಸಮತಾ ದೃಷ್ಟಿಯವಳು. ಇನ್ನು ಆಕೆಯನ್ನು ಗೌರವಿಸಲು ಹಿಂದು ಮುಂದು ನೋಡುವುದು ಬೇಡ. ಸಕಲ ಗೌರವದೊಡನೆ ಹೃತ್ಪೂರ್ವಕವಾಗಿ ಸ್ವಾಗತಿಸೋಣ !

ಇದು ನಮ್ಮಮ್ಮನ ಕಥೆ. ಸಾವಿರಾರು ವರ್ಷಗಳಲ್ಲಿ ಆಕೆ ಅನುಭವಿಸಿದ ದುರಂತದ ವ್ಯಥೆಯ ಕಥೆ. ಯಾರು ಈ ಅಮ್ಮ ? ಆಕೆ ಕನ್ನಡ ಭಾಷಾ ಸರಸ್ವತಿ, ಕನ್ನಡಮ್ಮ. ಈಗ ಮಾತೃಹರಕೆಯನ್ನು ಮೊದಲನೇ ವಾಕ್ಯದಿಂದ ಮೆಲುಕಾಡಿಸಿರಿ. ಭಾರತೀಯ ಸಂಸ್ಕೃತಿ ನಮ್ಮಜ್ಜ. ಆರ್ಯರ ಆಗಮನಕ್ಕೆ ಮೊದಲೇ, ವೇದಗಳಿಗೂ ಪೂರ್ವದಲ್ಲಿ ಹಬ್ಬಿ ಹಸರಿಸಿದ್ದ ಸಿಂಧೂ ಸಂಸ್ಕೃತಿ-ದ್ರವಿಡ ಸಂಸ್ಕೃತಿ. ನಮ್ಮ ಅಜ್ಜಿ ಮೂಲ ದ್ರವಿಡ ಭಾಷಾ ಗೀರ್ವಾಣಿ. (ದುರ್ದೈವದಿಂದ ಆಕೆಯ ಹೆಸರು ನಾವರಿಯೆವು ಪೈಶಾಚಿಕ, ಅನಾರ್ಯ ಭಾಷೆ ಎಂಬುದಷ್ಟೆ ಇತರ ಸಾಹಿತ್ಯದಿಂದ ತಿಳಿದು ಬಂದುದು). ಆಕೆ ಸುಭಗಗಾತ್ರಿ. ಆಕೆಯ ನಾಲ್ವರು ಮಕ್ಕಳು-ತಮಿಳು, ಮಲೆಯಾಳಿ, ಕನ್ನಡ ಮತ್ತು ತೆಲುಗು, ತುಳುವೂ ಸಹ ; ಆದರೆ ಸ್ವತಂತ್ರ ಲಿಪಿ ಇಲ್ಲದ ಕಾರಣ ಬಿಟ್ಟಿದ್ದೇನೆ) ಯಾವ ದುರ್ಘಟನೆ ಸಂಭವಿಸಿತೋ ದ್ರವಿಡ ಭಾಷಾ ಮಾತಾಮಹಿ ತೀರಿಹೋದಳು. ಬ್ರಿಟನ್ನಿನ ಓರ್ವರು ವಿದ್ವಾಂಸರು ನನ್ನೊಡನೆ ಮಾತನಾಡುವಾಗ ಹೇಳಿದರು : "ಈ ನಾಲ್ಕು ಭಾಷೆಗಳ (ಮತ್ತು ಕೊಡಗು, ತುಳು, ಉಪಭಾಷೆಗಳ) ತಾಯಿ ಓರ್ವಳೇ ! ಆಕೆಯ ಹೆಸರು ಬ್ರಹೂಯಿ. ಇಂದಿಗೂ ಈ ಭಾಷೆ ಬಲೂಚಿಸ್ಥಾನದ ಗುಡ್ಡಗಾಡು ಪ್ರದೇಶಗಳಲ್ಲಿದೆ. ನಾನು ಸಂಶೋಧನೆ ನಡೆಸಿದ್ದೇನೆ. ಅದರಲ್ಲಿ ನಾಲ್ಕೂ ಭಾಷೆಗಳ

ಶಬ್ದಗಳು ದೊರೆಯುತ್ತವೆ. ಅದು ಬರವಣಿಗೆ ಇಲ್ಲದ ಕೇವಲ ಮಾತನಾಡುವ ಭಾಷೆಯಾಗಿದೆ. ಆದರೆ ಹರಪ್ಪಾ-ಮೊಹೆಂಜೋದಾರೊ ಮುದ್ರೆಗಳಲ್ಲಿ ದೊರೆತ ಲಿಪಿಗಳೇ ಆ ಭಾಷೆಯ ಅಕ್ಷರಗಳಿರಬೇಕು." ಆಗ ನನಗೆ ಅಷ್ಟೊಂದು ಕುತೂಹಲವೂ ಇರಲಿಲ್ಲ. ಅಷ್ಟಕ್ಕೇ ಮಾತು ಬೇರೆಡೆ ಹೊರಳಿತ್ತು. ಬ್ರಹೂಯಿಯು ದ್ರವಿಡ ಭಾಷೆಗಳಲ್ಲಿ ಒಂದು. ಆದರೆ ಈ ನಾಲ್ಕು ಭಾಷೆಗಳ ತಾಯಿಯಲ್ಲ. ಮೂಲ ದ್ರವಿಡ ಭಾಷೆ ಬೇರೆ ಇರಬೇಕೆಂದು ಇನ್ನು ಕೆಲವು ವಿದ್ವಾಂಸರ ಅಭಿಪ್ರಾಯ.

ಹೀಗೆ ದ್ರವಿಡ ಭಾಷಾ ವಾಙ್ಮಯಿಗೆ ಅಜ್ಞಾತವಾಸ ಅಥವಾ ಸಾವು ಸಂಭವಿಸಿತು. ಅಷ್ಟರಲ್ಲಿ ಈ ನಾಡಿಗೆ ಪಾದಾರ್ಪಣ ಮಾಡಿದಳು ಸಂಸ್ಕೃತ ಗೀರ್ವಾಣಿ. ಭಾರತೀಯ ಸಂಸ್ಕೃತಿಯನ್ನು ವರಿಸಿದಳು, ಮನೆ ತುಂಬಿದ ಮಡದಿಯಾಗಿ ಸರ್ವಾಂಗ ಶೋಭಿತೆಯಾಗಿ ಬೆಳೆದಳು. ಆಕೆ ಬಂದು ಆಕ್ರಮಿಸಿಕೊಂಡೇ ದ್ರವಿಡಭಾಷಾ ವಾಙ್ಮಯಿ ತೀರಿಹೋದಳೋ ? ಅಥವಾ ಆಕೆ ಸತ್ತಿದ್ದರಿಂದ ಈಕೆಯ ಪ್ರಭಾವ ಜಾಸ್ತಿಯಾಯಿತೋ ! ನಾವರಿಯೆವು ಇದೆಲ್ಲ ನಡೆದು ಹೋದ ಕಥೆ. ಅದನ್ನು ಮೆಲುಕಾಡಿಸಿದರೆ ಬರೀ ವ್ಯಥೆ.

ತಮಿಳು, ಕನ್ನಡ, ಮಲೆಯಾಳಿ ಮತ್ತು ತೆಲುಗು ಭಾಷಾ ವನಿತೆಯರು ಸ್ವಯಂ ಪರಿಪೂರ್ಣರು. ಸಂಸ್ಕೃತದ ಅವಲಂಬನೆಯಿಲ್ಲದೆಯೂ ಬಾಳ ಬಲ್ಲವರು. ಅದರಲ್ಲಿಯೂ ಕನ್ನಡ ವಾಗ್ದೇವಿಯ ವದನ ಬಹು ಸುಂದರ, ಸ್ಪಷ್ಟ, ಸರಳ. ಒರಟುತನವಿಲ್ಲದ, ನಾಲಿಗೆಯ ಮೇಲೆ ನರ್ತಿಸುವ ಮಧುರವಾದ ಭಾಷಾತರಂಗಿಣಿ. ಒತ್ತಕ್ಷರಗಳ ಸಂಪತ್ತಿನಿಂದಾಗಿ ಎಂಥದೇ ಉಚ್ಚಾರ ಮಾಡಬಲ್ಲ ಸಮರ್ಥೆ ! ತಮಿಳು, ಮಲೆಯಾಳ ಭಾಷಾ ವನಿತೆಯರು ಮುಖ್ಯವಾಗಿ ತಮಿಳಮ್ಮ ಸ್ವಲ್ಪ ಬಿಗುವಿನಿಂದಲೇ ಸಂಸ್ಕೃತದ ಕೊಡುಗೆಯನ್ನು ನಿರಾಕರಿಸುತ್ತ ಹೆಚ್ಚು ತಮ್ಮತನ ಉಳಿಸಿಕೊಳ್ಳುತ್ತ ಬಂದರು. ಕನ್ನಡಮ್ಮ, ಸೌಜನ್ಯಶೀಲೆಯಾಗಿ ಸಾಕಷ್ಟು ಪೋಷಕಾಂಶಗಳನ್ನು ಸಂಸ್ಕೃತದಿಂದ ಪಡೆದಳು. ಸಂಸ್ಕೃತ ಭಾಷೆಯ ಚಿಕ್ಕಜ್ಜಿಯೂ ಕೆಲವೊಮ್ಮೆ ದ್ರವಿಡ ಭಾಷೆಗಳನ್ನು ಅನಾರ್ಯ ಭಾಷೆಗಳೆಂದು, ಉಲ್ಲೇಖಿಸಿ ಉದಾಸೀನದಿಂದ ಕಂಡರೂ ಮತ್ತೊಮ್ಮೆ ಕನ್ನಡವನ್ನು ಸಾಕು ತಾಯಿಯಾಗಿ ಪೋಷಿಸಿದಳು.

ಈ ನಾಲ್ಕು ದ್ರವಿಡ ಭಾಷೆಗಳೂ ದಕ್ಷಿಣ ಭಾರತವನ್ನು ಹೆಚ್ಚಾಗಿ ಆಶ್ರಯಿಸಿದವು, ಇಲ್ಲಿ ಬೇರು ಬಿಟ್ಟು ಬೆಳೆದವು. ತಮಿಳು, ಮಲೆಯಾಳ, ತೆಲುಗು ಜನರು ಬಹಳ ಸ್ವಾಭಿಮಾನಿಗಳು. ಬಲು ಬೇಗನೇ ತಮ್ಮ ಭಾಷಾಮಾತೆಗೆ ಅಗ್ರಪೀಠ ನೀಡಿದರು. ಅದರಲ್ಲೂ ತಮಿಳು ಜನ ತೀವ್ರ ಅಭಿಮಾನಿಗಳು. ಇಲ್ಲದ ಗರ ಬಡಿದುದು

ಕನ್ನಡಿಗರಿಗೆ. ಕನ್ನಡಮ್ಮನನ್ನು ಮೂಲೆಗೆ ತಳ್ಳಿ, ತಮಿಳು, ಮಲೆಯಾಳ ಭಾಷೆಗಳನ್ನು ರಾಜಧಾನಿಯಲ್ಲೇ ಹುಲುಸಾಗಿ ಬೆಳೆಸುತ್ತಿದ್ದಾರೆ. ಇಂಗ್ಲಿಷ್ ಚೆಲುವೆಯ ಕೈಹಿಡಿದು ಓಡಾಡಲು ಪರದಾಡುತ್ತಾರೆ. ಸಂಸ್ಕೃತದ ದೇವತೆಗೆ ಸಿಂಹಾಸನವಿಟ್ಟು ಗೌರವಿಸಲು ಆತುರರಾಗಿದ್ದಾರೆ. ಹೀಗಾಗಿ ಕನ್ನಡಮ್ಮ ಮನೆಯಲ್ಲೇ ಕೀಳ್ತನದರಿವೆಯ ಮುಸಿಬಟ್ಟೆಯುಟ್ಟಿರುವ ಪ್ರಸಂಗ ಒದಗಿದೆ.

ಇಂಥ ವಿಷಮ ಪ್ರಸಂಗದಲ್ಲಿ ಸಂಸ್ಕೃತದ ಚಿಕ್ಕಜ್ಜಿಯನ್ನು ತಂದು ವೈಭವಿಸುವಂತೆ ಮಾಡಲು ಕೆಲವರ ಸತತ ಪ್ರಯತ್ನ. ಧರ್ಮಗುರುಗಳು, ಮಠಾಧೀಶರಿಗಂತೂ ತೀರಾ ಆತುರ. ಇನ್ನೂ ಕೆಲವರು ಮಠಾಧೀಶರಿಗೆ ಕನ್ನಡ ನೆಲದ ಭಾಷೆ, ಜನಪದ ಭಾಷೆ, ಶೂದ್ರ ಭಾಷೆ, ಸಂಸ್ಕೃತವಷ್ಟೇ ದೇವಭಾಷೆ. ಕನ್ನಡಮ್ಮ ಪಂಪರನ್ನರ ಕಾಲದಲ್ಲಿ ಪಾಂಡಿತ್ಯಪೂರ್ಣ ಭಾಷಾವೈಭವದಿಂದ ಮೆರೆದ ಚಕ್ರವರ್ತಿನಿ. ನಂತರ ವಚನ ಸಾಹಿತ್ಯದ ಯುಗದಲ್ಲಿ ಶಾಂತಮೂರ್ತಿ ತಪಸ್ವಿನಿ, ಜನತೆಯನ್ನು ವೈಚಾರಿಕತೆಯಿಂದ ಎಚ್ಚರಿಸಿದ ಕ್ರಾಂತಿಯೋಗಿಣಿ. ವಚನ ಸಾಹಿತ್ಯ ಯುಗದ ಆಕೆಯ ಸ್ವರೂಪವನ್ನು ನೋಡುವಾಗ ಶುದ್ಧ ಅಧ್ಯಾತ್ಮವಿದ್ಯೆಯಿಂದ, ಅಂತರ್ಮುಖಿಯಾಗಿ, ಕಂಗೊಳಿಸುವ ಶುಭ್ರ ಕಾಷಾಯ ವಸನಧಾರಿಣಿ ಧ್ಯಾನೋನ್ಮುಖ ತಪಸ್ವಿನಿಯಂತೆ ಕಂಡರೆ, ಜಾತಿವರ್ಣ ವರ್ಗರಹಿತ ಸಮಾಜ ಕಟ್ಟುವ ಮೌಲ್ಯಗಳನ್ನು ಬಿತ್ತರಿಸುವಾಗ, ಮೂಢನಂಬಿಕೆಗಳನ್ನು ಖಂಡಿಸುವಾಗ, ಭವ್ಯವಾದ ಕುದುರೆಯನ್ನೇರಿ ಕತ್ತಿ ಝಳಪಿಸುತ್ತ ಅರಿಗಳ ಮರ್ದನ ಮಾಡುವ ವೀರಾಗ್ರಣಿಯಂತೆ ಕಾಣುವಳು.

ಇಷ್ಟು ಸರ್ವಾಂಗ ಪರಿಪೂರ್ಣವಿದ್ದರೂ ಕನ್ನಡ ಭಾಷೆಗೆ ಸಿಕ್ಕಬೇಕಾದ ಸ್ಥಾನ ಸಿಕ್ಕಿಲ್ಲ–ಈ ಕರ್ನಾಟಕದಲ್ಲಿ. ಇಲ್ಲಿ ಸಿಗದೆ ಇದ್ದರೆ ಇನ್ನೆಲ್ಲಿ ಸಿಕ್ಕೀತು ? ತಮಿಳುನಾಡು ಆಂಧ್ರಗಳವರು ಕನ್ನಡವನ್ನು ತಮ್ಮ ರಾಜ್ಯಭಾಷೆಯನ್ನಾಗಿ ಸ್ವೀಕರಿಸುವರೆ? ಮಠಾಧೀಶರದೊಂದು ವಿಚಿತ್ರ ಪ್ರವೃತ್ತಿ. ಅವರಿಗೆ ಜನರ ನಾಡಿಮಿಡಿತವನ್ನಾಗಲೀ, ಅನಿಸಿಕೆಗಳನ್ನಾಗಲೀ ಅರಿಯುವ ತಾಳ್ಮೆಯಿಲ್ಲ, ಸೌಜನ್ಯವೂ ಇಲ್ಲ. ವಿದೇಶದಿಂದ ಬಂದು ನೆಲಸಿದ ಕ್ರೈಸ್ತ ಧರ್ಮೀಯರು ಮಾತೃಭಾಷೆಗಳಲ್ಲಿ ಪ್ರಾರ್ಥನೆ, ಚರ್ಚಿನ ವಿಧಿ ವಿಧಾನ ನಡೆಯಬೇಕು ಎಂದು ಉಗ್ರ ಚಳುವಳಿ ಮಾಡುವ ಕಾಲದಲ್ಲಿ ಕರ್ನಾಟಕದ ಮಠಾಧೀಶರು ಕನ್ನಡದಲ್ಲಿ ಧಾರ್ಮಿಕ ವಿಧಿ ವಿಧಾನ ನಡೆಯಬೇಕೆಂಬ ಹೋರಾಟ ಮಾಡುತ್ತಿಲ್ಲ; ಕಡೆಗೆ ಆಸಕ್ತಿಯನ್ನಾದರೂ ತೋರುತ್ತಿಲ್ಲ. ವ್ಯವಹರಿಸಿದಾಗ ಜನರಿಗೆ ಅರ್ಥವಾಗದ ಭಾಷೆಯಲ್ಲಿ ಧಾರ್ಮಿಕ ವಿಧಿ ವಿಧಾನ ನಡೆಸಿ 'ಎಷ್ಟು ತಿಳಿದವರು ಇವರು ?' ಎಂದು ಜನರು ಪಿಳಪಿಳಿ ನೋಡುವಂತೆ ಮಾಡುವ ಉದ್ದೇಶ ಹೊಂದಿದ್ದಾರೋ ಏನೋ ಅರ್ಥವಾಗದು. ಕ್ರೈಸ್ತ ಧರ್ಮ, ಬೌದ್ಧ ಧರ್ಮ

ಗಳು ಜನಸಾಮಾನ್ಯರ ಭಾಷೆಯನ್ನು ಅಳವಡಿಸಿಕೊಂಡು ಜೀವಂತ ಧರ್ಮಗಳಾಗಿ ಉಳಿದವು, ಬೆಳೆದವು. ಲಿಂಗಾಯಿತ ಧರ್ಮದ ಮೂಲ ತತ್ತ್ವವು ಮಾತೃಭಾಷೆಗೆ ಮನ್ನಣೆಕೊಡುವುದಾಗಿದ್ದರೂ ಲಿಂಗಾಯಿತ ಮಠಾಧೀಶರುಗಳಲ್ಲಿ ಸಂಸ್ಕೃತ ಭಾಷೆಯ ಅಭಿಮಾನ ಅಧಿಕವಾಗಿ ಕ್ರೈಸ್ತರು ಬೈಬಲ್ ಶಾಲೆಗಳನ್ನು ತೆರೆದಂತೆ ವಚನ ಪಾಠಶಾಲೆ ತೆಗೆಯುವುದು ಬಿಟ್ಟು ಸಂಸ್ಕೃತ ಪಾಠಶಾಲೆ ತೆರೆಯಲಾರಂಭಿಸಿದರು. ವಚನ ಸಾಹಿತ್ಯದ ಅಧ್ಯಯನ, ಪಠಣ ಕಡಿಮೆಯಾಗುತ್ತಿದ್ದಂತೆಯೇ ಜಾತ್ಯತೀತ ಧೋರಣೆ, ಪ್ರಗತಿಪರ ವಿಚಾರಧಾರೆ ಕುಂಠತೊಡಗಿ, ಮತ್ತೆ ಲಿಂಗಾಯಿತ ಸಮಾಜವೂ ಸಂಪ್ರದಾಯಬದ್ಧ ಗುಂಪುಗಳ ಒಕ್ಕೂಟವಾಗತೊಡಗಿತು.

ಮನೆಗೆ ಯಾರೇ ಅತಿಥಿಗಳು ಬರಲಿ, ಬಂದವರು ಮನೆಯ ಗೃಹಿಣಿಗೆ ಅಗ್ರ ಮರ್ಯಾದೆ ಕೊಡುವರು. ಆಕೆಯ ಪರವಾನಗಿ ಇಲ್ಲದೆ ಯಾವುದನ್ನೂ ಮಾಡರು. ಅದೇ ರೀತಿ ಕರ್ನಾಟಕದ ಮನೆಯೊಳಗೆ ಪ್ರವೇಶಿಸುವವರು ಯಾರೇ ಇರಲಿ ತಮಿಳು, ತೆಲುಗು, ಮಲೆಯಾಳಿ, ಮರಾಠಿ, ಸಂಸ್ಕೃತ ಯಾವುದೇ ಭಾಷೆಯವರು ಇರಲಿ, ಈ ರಾಜ್ಯದೊಡತಿಗೆ ಮನ್ನಣೆ ಕೊಡಲೇಬೇಕು. ನೆಲದ ಭಾಷೆಯನ್ನು ಕಲಿಯದ ಹೊರತು ನೆಲದ ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಈ ರಾಜ್ಯದ ನೆಲದಲ್ಲಿ ಅಡಿಯಿಟ್ಟು, ಅನ್ನವನ್ನುಂಡು, ಜಲ–ಗಾಳಿಗಳನ್ನು ಉಪಯೋಗಿಸಿದ ಬಳಿಕ, ನೆಲದ ಭಾಷೆ–ಸಂಸ್ಕೃತಿಗಳ ಬಗ್ಗೆ ಸಹಾನುಭೂತಿ, ಸಗೌರವ ಬೆಳೆಸಿಕೊಳ್ಳಬೇಕು. ಇಲ್ಲವಾದರೆ ಕನ್ನಡದ ನೆಲದಲ್ಲೇ ಕನ್ನಡ ಅನಾಥವಾಗುತ್ತದೆ, ಇಂದು ಹಿಂದೂದೇಶದಲ್ಲೇ ಹಿಂದುಗಳು ಅನಾಥರಾಗಿರುವಂತೆ !

ಆದ್ದರಿಂದ ಯಾವುದೇ ಮಾಧ್ಯಮದ ಶಾಲೆಗಳಿರಲಿ, ಯಾವುದೇ ಜನಾಂಗದವರು ನಡೆಸುವ ಶಾಲೆಗಳಾಗಲೀ, ಓದುವವನ ಮಾತೃಭಾಷೆ ಯಾವುದೇ ಇರಲಿ, ಅವನು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕು. ಆದ್ದರಿಂದ ಕರ್ನಾಟಕ ಗಡಿರೇಖೆಯೊಳಗೆ ಬರುವ ಸರ್ಕಾರಿ ಮತ್ತು ಖಾಸಗಿ ಎಲ್ಲ ಶಾಲೆಗಳಲ್ಲೂ ಮೂರನೆಯ ತರಗತಿಯಿಂದಲ್ಲ, ಪ್ರಥಮ ತರಗತಿಯಿಂದಲೇ ಕನ್ನಡದ ಕಲಿಕೆ ಪ್ರಾರಂಭವಾಗಬೇಕು.

ಡಾ|| ಗೋಕಾಕರವರ ವರದಿ

ಕನ್ನಡ–ಸಂಸ್ಕೃತಗಳ ಸ್ಥಾನಮಾನ ನಿರ್ಧರಿಸುವ ಬಗ್ಗೆ ಡಾ|| ಗೋಕಾಕರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಆಗ ಅನೇಕರಿಗೆ ಒಳಗೇ ಪುಕುಪುಕು. ಡಾ|| ಗೋಕಾಕರನ್ನು ನೇಮಿಸಿದ್ದರಲ್ಲಿ ದುರುದ್ದೇಶವಿರಬಹುದು. ಅವರು ಜನ್ಮತಃ

ಬ್ರಾಹ್ಮಣರು. ಕನ್ನಡಕ್ಕೆ ಅಗ್ರಸ್ಥಾನ ಕೊಡಲಿಚ್ಛಿಸಲಿಕ್ಕಿಲ್ಲ ಎಂದು ತಿಳಿದು ಪ್ರತಿಭಟನೆ ಸಲ್ಲಿಸಿದರು. ಇನ್ನು ಕೆಲವರು ಮುಸುಕಿನಲ್ಲೇ ಗುದ್ದುವಂತೆ ಮಾತನಾಡು ತ್ತಿದ್ದರು. ಆದರೆ ಇಂಥ ಅನೇಕರ ನಿರೀಕ್ಷೆ ಹುಸಿಯಾಗುವಂತೆ ಡಾ|| ಗೋಕಾಕರು ಕನ್ನಡಮ್ಮನ ಚೊಚ್ಚಿಲ ಮಗನೆಂಬಂತಹ ಅಭಿಪ್ರಾಯ ಬರುವಂತೆ ವರದಿಯನ್ನು ಸಲ್ಲಿಸಿಬಿಟ್ಟರು. ಕನ್ನಡದ ಬಲ್ಮೆ, ಮೇಲ್ಮೆಗಾಗಿ ದುಡಿದ ಅನೇಕ ಅಧ್ವರ್ಯುಗಳು ಬ್ರಾಹ್ಮಣರಲ್ಲಿಲ್ಲವೆ.? ಆದರೂ ಕೆಲವರಿಗೆ ಏನೋ ಆತಂಕವಿತ್ತು. ಆ ಆತಂಕ ಹುಸಿ ಯಾಗಿ ಹರ್ಷದ ಹೊನಲು ಹರಿವಂತೆ, ಡಾ|| ಗೋಕಾಕರ ವರದಿ ಬಂತು. ಆದರೆ ಆಳುವ ಪ್ರಭುಗಳಿಗೆ ಇನ್ನೂ ಸಂತೋಷವಿಲ್ಲ. ಏಕೆಂದರೆ ವರದಿ ಕೆಲವರು ಬಯಸಿ ದಂತೆ ಬರಲಿಲ್ಲ. ವರದಿ ಜಾರಿಗೆ ತರುವಲ್ಲಿ ವಿಳಂಬ. ಮತ್ತೆ ಮತ್ತೆ ಚರ್ಚೆ. ಅದಕ್ಕೆ ಮಠಾಧೀಶರ ಅಭಿಪ್ರಾಯ ಕೇಳಿಕೆ.

ಎಷ್ಟು ನಾಚಿಕೆಗೇಡಿನ ಪ್ರಸಂಗ ! "ನಮ್ಮ ಮನೆಯಲ್ಲಿ ಅಮ್ಮನಿಗೆ ಸ್ಥಾನಕೊಡಿ ಆಕೆಯ ಕೈಯಲ್ಲಿ ಟ್ರೆಜರಿಯ ಕೀಲಿ ಇರಲಿ. ಚಿಕ್ಕಜ್ಜಿ ಬೇಕಾದರೆ ತನಗೆ ಬೇಕಾ ದ್ದನ್ನು ಕೇಳಿ ಪಡೆದುಕೊಂಡು, ಸುಖವಾಗಿ ಶಾಶ್ವತವಾಗಿರಲಿ. ಆದರೆ ಸಾಮ್ರಾಜ್ಞಿಯ ಪಟ್ಟ ಬೇರಾರಿಗೂ ಬೇಡ; ಹೆತ್ತಮ್ಮನಿಗಿರಲಿ" ಎಂದು ಡಾ|| ಗೋಕಾಕರು, ಡಾ|| ದೇ. ಜ. ಗೌರವರು, ಡಾ|| ಚಿದಾನಂದಮೂರ್ತಿಯವರು ಮತ್ತು ಇನ್ನಿತರ ಕನ್ನಡಿಗರು ಮುಂತಾದವರು ಕೇಳಬೇಕಾದುದು ಎಷ್ಟು ಹಾಸ್ಯಾಸ್ಪದ.

ನಾವು ಸಂಸ್ಕೃತದ ದ್ವೇಷಿಗಳೆ?

ಬಹುಶಃ ನನ್ನ ಲೇಖನದಿಂದಾಗಿ ಅನೇಕ ಮಠಾಧೀಶರು, ಸಂಸ್ಕೃತ ವಿದ್ವಾಂಸರು, ಸನಾತನ ವಿಚಾರಧಾರೆಯವರು ಕೆಂಗಣ್ಣು ಹರಿಸಬಹುದು. ಇವರು ಸಂಸ್ಕೃತ ದ್ವೇಷಿಗಳೆನ್ನಬಹುದು. ನಾವು ಸಂಸ್ಕೃತದ ದ್ವೇಷಿಗಳಲ್ಲ. ಯಾವುದೇ ಭಾಷೆ ಬಾಳಿ ಬೆಳೆಯಬೇಕೆನ್ನುವವರು.

1) ಕನ್ನಡವು ಒಂದು ಉತ್ಕೃಷ್ಟ ಭಾಷೆ. ಈ ನೆಲದಲ್ಲಿದ್ದವರು ಅದರ ರುಚಿ ಅರಿಯಬೇಕು. "ಉಣ್ಣೆ ಕೆಚ್ಚಲೊಳಿದ್ದು ಉಣ್ಣದು ನೊರೆವಾಲು" ಎಂಬಂತಾದರೆ ಹೇಗೆ?

2) ಸಂಸ್ಕೃತವು ಬೇರೂರಿ ಬೆಳೆಯಲು ಸಾಕಷ್ಟು ರಾಜ್ಯಗಳಿವೆ. ಅದಕ್ಕೆ ವ್ಯಾಪಕವಾದ ಕ್ಷೇತ್ರವಿದೆ. ಕನ್ನಡಕ್ಕೆ ಇನ್ನಾವ ಕ್ಷೇತ್ರವಿದೆ?

ಒಂದು ಸಂದರ್ಭ ನೆನಪಾಗುತ್ತಿದೆ. ಏಳನೆಯ ತರಗತಿಯಿಂದ ಕನ್ನಡ ಮಾಧ್ಯಮದಿಂದ ಇಂಗ್ಲಿಷ್ ಮಾಧ್ಯಮ ಎಂಟನೆಯ ತರಗತಿಗೆ ನಾನು ಸೇರಬೇಕಿತ್ತು. ಸರ್ಕಾರಿ ಗರ್ಲ್ಸ್ ಹೈಸ್ಕೂಲದು. ಇಂಗ್ಲಿಷ್ ಮಾಧ್ಯಮ ಆರಿಸಿಕೊಂಡರೆ ಸಂಸ್ಕೃತ ತೆಗೆದುಕೊಳ್ಳಬೇಕು, ಎರಡನೆ ಭಾಷೆಯಾಗಿ ಕನ್ನಡ ಕೊಡುವುದಿಲ್ಲ ಎಂದು ಮುಖ್ಯೋಪಾಧ್ಯಾಯಿನಿಯ ತಕರಾರು. "ಇಂಗ್ಲಿಷ್ ಮಾಧ್ಯಮದಲ್ಲಿ ಓದುವಾಸೆ ನನಗೆ-ಏಕೆಂದರೆ ಆ ಭಾಷೆಯ ಪರಿಚಯವಾಗುತ್ತೆ. ಸಂಸ್ಕೃತವನ್ನು ಬೇರೆ ಪರೀಕ್ಷೆ ಕಟ್ಟಿ ವೈಯಕ್ತಿಕವಾಗಿ ಕಲಿಯುತ್ತೇನೆ. ಅದರ ಬಗ್ಗೆಯೂ ನನಗೆ ಆಸ್ಥೆ. ನೀವು ಇಂಗ್ಲಿಷ್-ಸಂಸ್ಕೃತ ಎರಡೇ ಕೊಟ್ಟರೆ ಕನ್ನಡದ ಸಂಸ್ಕಾರ ನಮಗೆ ಹೇಗಾಗಬೇಕು?" ಎಂಬ ಹಟದ ವಾದ ನನ್ನದು, ಅಂತೂ ಗಲಾಟೆ ಮಾಡಿ, ವಿಶೇಷ ಪರವಾನಗಿ ಪಡೆದು ಕನ್ನಡ ಆರಿಸಿಕೊಂಡೆ. ಇದೆಂಥ ವಿಚಿತ್ರ ಕಾಯಿದೆಯೋ ಇನ್ನೂ ಅರ್ಥವಾಗಿಲ್ಲ. ನನಗೆ.

3. ಸಂಸ್ಕೃತ ಜನಸಾಮಾನ್ಯರ ಭಾಷೆಯಲ್ಲ, ಸೂಕ್ತ ಸಂಪರ್ಕ ಭಾಷೆಯಲ್ಲ. ಜೀವನವಿಡೀ ಅರೆದು ಕುಡಿದವರೂ ನಿರರ್ಗಳವಾಗಿ ಅದರಲ್ಲಿ ಮಾತನಾಡಲು ಕಷ್ಟ ಸಾಧ್ಯ. ನಮ್ಮ ದೇಶದಲ್ಲಿ ಹಾಗೆ ಮಾತನಾಡುವವರು ಬೆರಳಮೇಲೆಣಿಸುವಷ್ಟು ಸಿಕ್ಕ ಬಹುದು. ಅದು, ತನ್ನ ಅನುಯಾಯಿಗಳ ಮಡಿವಂತಿಕೆಯಿಂದಾಗಿ, ಸರಿಯಾಗಿ ಬೆಳೆದು ಬರಲಿಲ್ಲ. ಹೊಸ ರೂಪ ಹೊಂದಲಿಲ್ಲ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಡಾ|| ರಿಚರ್ಡ್ ಗಾಂಬ್ರಿಚ್ ನನ್ನೊಡನೆ ಮಾತನಾಡುವಾಗ ಹೇಳಿದರು, "ಆಧುನಿಕ ವಿಧಾನಗಳನ್ನನುಸರಿಸಿ ಜನ ಸಾಮಾನ್ಯರಿಗೆ ಮುಟ್ಟುವಂತೆ ಸಂಸ್ಕೃತ ಕಲಿಸುವ ತಂತ್ರವನ್ನು (technique) ನಿಮ್ಮಲ್ಲಿ ರೂಢಿಸಲೇ ಇಲ್ಲ. ಇಂದಿಗೂ ಶತಶತಮಾನ ಗಳ ಹಿಂದಿನ ಪದ್ಧತಿಯಲ್ಲೇ ಕಲಿಸಲಾಗುತ್ತಿದೆ. ಭಾಷೆಯನ್ನು ಜೀವಂತವಾಗಿಡ ಬೇಕಾದರೆ ಅದರಲ್ಲಿ ನೂತನ ಕಲಿಕೆಯ ತಂತ್ರಗಳು ಆವಿಷ್ಕಾರಗೊಳ್ಳಬೇಕು."

ಬಹಳ ಶತಮಾನಗಳ ಕಾಲ ಅರಸುಗುವರಿಯಂತೆ ಅಂತಃಪುರದ ಒಳಾಂಗಣದಲ್ಲಿ ರಾಜ ಮಹಾರಾಜರನ್ನು ಓಲೈಸಲು ಮತ್ತು ಬ್ರಾಹ್ಮಣ ಕುವರಿಯಂತೆ ಕತ್ತಲೆಯ ಕೋಣೆಯಲ್ಲಿ ಪವಿತ್ರತೆ ಉಳಿಸುವ ಭಾವನೆಯಿಂದ ಕೂಡಿಟ್ಟ ಕಾರಣ, ಸಂಸ್ಕೃತ ವಾಗ್ದೇವಿ ಇನ್ನೂ ಬೆಳೆಯಬೇಕಾದುದನ್ನು ತಪ್ಪಿಸಿದಂತಾಯಿತು. ಹೀಗಾಗಿ ಆ ಭಾಷೆ ಗ್ರಂಥಸ್ಥವು ಮತ್ತು ಭಾಷಣಗಳ ಮಧ್ಯೆ ಅಲ್ಲಲ್ಲೇ ಪೋಣಿಸಲು ಉಕ್ತಿಗಳಂತೆ ಬಳಸಲು ಯೋಗ್ಯವಾಯಿತು. ಸಂಸ್ಕೃತದ ಪ್ರವಹನಕ್ಕೆ ಯಾವುದಾದರೊಂದು ಆಡುಭಾಷೆಯ ಕನ್ನಡವೋ, ತಮಿಳೋ, ಇಂಗ್ಲಿಷೋ, ಹಿಂದಿಯೋ-ಕಾಲುವೆಯ ನೆರವು ಬೇಕು. ಅದು ತನ್ನಿಂದ ತಾನೇ ಜನರಿಗೆ ಮುಟ್ಟಲಾರದು. ಹೀಗಾಗಿ

ಹಬ್ಬಕ್ಕೆಂದಾದರೊಂದು ದಿನ ಉಣ್ಣುವ ಹೋಳಿಗೆ, ಕೇಸರಿಬಾತಿನಂತೆ ಸಂಸ್ಕೃತ ಉಳಿಯಿತೇ ವಿನಾ ದಿನನಿತ್ಯದ ಅಡಿಗೆಗಳಾದ ರೊಟ್ಟಿ, ಮುದ್ದೆ, ಅನ್ನಗಳಂತೆ ನಿತ್ಯ ಜನಜೀವನದಾಳಕ್ಕೆ ಇಳಿಯಲಿಲ್ಲ. ಅಲ್ಲದೇ ಎಲ್ಲರಿಗೂ ಕೊಡಲಾರದ, ಕೇಳಿಸಲಾರದ, ಎಲ್ಲರಿಂದ ನುಡಿಸಲಾರದ ಭಾಷೆಯನ್ನಾಗಿ ಮಾಡಿದ್ದರಿಂದ ಸಂಸ್ಕೃತ ಜನಜೀವನದ ನಾಡಿಯನ್ನು ಮಿಡಿಯಲಿಲ್ಲ. ಇಷ್ಟು ದಿವಸಕಾಲ ಹಸಿದವರಿಗೆ ಕೊಡಲಾರೆವು ಎನ್ನುತ್ತಿದ್ದವರೇ ಈಗ "ನಿಮ್ಮೂಟ ಬೇಡಿರಯ್ಯಾ; ನಮ್ಮ ಕನ್ನಡಮ್ಮ ಮಮತೆಯಿಂದ ಉಣ್ಣಿಸುವ ತಾಯಿ. ನಿಮ್ಮ ಬಳಿ ಭಿಕ್ಷೆ ಬೇಡಿ, ಪಡೆಯಲಾರದೆ ಕೈಸೋತಿವೆ. ಕನ್ನಡಮ್ಮನ ಕೈಯತುತ್ತು ಉಂಡು ಹೊಟ್ಟೆ ತುಂಬಿದೆ" ಎಂದು ಅನ್ನುವ ಶ್ರೀಸಾಮಾನ್ಯರಿಗೆ ಈಗ, "ಚಿಂತೆಯಿಲ್ಲ ತಿಂದೇ ತಿನ್ನಬೇಕು" ಎಂಬ ಕೆಲವರ ಧೋರಣೆ ಕಂಡು ಆಚ್ಚರಿಯಾಗುತ್ತದೆ. ಇದೇನು ಪಶ್ಚಾತ್ತಾಪದ ತಪ್ಪೊಪ್ಪಿಗೆಯೋ ಎಂಬ ಸಂದೇಹ (confussion) ಬರುತ್ತದೆ.

4) ಪೂಜೆ-ಪುರಸ್ಕಾರ, ಪ್ರತಿಜ್ಞಾ ವಿಧಿಗಳನ್ನು ಅವರವರ ಮಾತೃಭಾಷೆಗಳಲ್ಲೇ ಮಾಡಿದರೆ ಧರ್ಮ ನಿಜಕ್ಕೂ ಸತ್ವಶಾಲಿಯಾಗುವುದು. ತಾನು ಮಾಡುವ ಅರ್ಚನೆಯ ಭಾವ ಮಾಡುವವನಿಗೆ ಅರ್ಥವಾಗಬೇಕು. ಆಗ ಧರ್ಮ-ದರ್ಶನಗಳಿಗೆ ಒಂದು ಅರ್ಥ ಬರುತ್ತದೆ. ಇಲ್ಲವಾದರೆ ಅದೊಂದು ಯಾಂತ್ರಿಕ ಕ್ರಿಯೆಯಾಗುವುದು.

ಈ ಎಲ್ಲ ದೃಷ್ಟಿಯಿಂದಲೂ ಡಾ॥ ಗೋಕಾಕರ ವರದಿ ತೀವ್ರವಾಗಿ ಜಾರಿಗೆ ಬರಬೇಕು. ಕನ್ನಡವು ಏಕೈಕ ಪ್ರಥಮ ಭಾಷೆಯಾಗಬೇಕು. ಕಡ್ಡಾಯವಾಗಿ ಅದನ್ನು ಕಲಿಯುವಂತೆ ಮಾಡಬೇಕು, ರಾಜ್ಯ ಸರ್ಕಾರದ ಪರವಾನಗಿಯ ಅವಶ್ಯಕತೆಯಿಲ್ಲದೆ ನಡೆವ ಕರ್ನಾಟಕ ರಾಜ್ಯದಲ್ಲಿರುವ ಕೇಂದ್ರೀಯ ಇಂಗ್ಲಿಷ್ ಶಾಲೆಗಳಲ್ಲೂ ಕನ್ನಡಭಾಷೆ ಕಲಿಸಲ್ಪಡಬೇಕು. ಕನ್ನಡಿಗರ ಆಶಯವನ್ನು ಸರ್ಕಾರ ಅರಿತು, ಕನ್ನಡ ವಾಙ್ಮಯಿಗೆ ತೀವ್ರವಾಗಿ ಪೀಠಾರೋಹಣ ಮಾಡಿಸುವದೆಂದು ನಂಬೋಣ, ಹಾರೈಸೋಣ.


★★

★ ತೊರೆ ಇಳಿದ ಮೇಲೆ ಅಂಬಿಗಂಗೇನುಂಟು ?

—ಬಸವಣ್ಣನವರು

★ ಹಣದ ಹುಚ್ಚು ಹಿಡಿದವನಿಗೆ ಹಿರಿಯರಿಲ್ಲ, ಬಳಗವಿಲ್ಲ; ಕಾಮದ ಹುಚ್ಚು ಹಿಡಿದವನಿಗೆ ನಾಚಿಕೆ ಇಲ್ಲ, ಹೆದರಿಕೆ ಇಲ್ಲ; ಹಸಿವೆಯಿಂದ ಕಂಗಾಲಾದವನಿಗೆ ರುಚಿಯಾಗಲಿ, ಹದವಾಗಲಿ ಎಂಬುದಿಲ್ಲ; ಚಿಂತಾಕ್ರಾಂತನಾದವನಿಗೆ ಸುಖವಿಲ್ಲ, ನಿದ್ರೆಯಿಲ್ಲ.

—ವಿಕ್ರಮ



— ಪೂಜ್ಯ ಶ್ರೀ ಸದ್ಗುರು ಲಿಂಗಾನಂದಸ್ವಾಮಿಗಳು

ತೀವಿ ಕುಳ್ಳಿರ್ದ ಸಭೆಯೀಯಬಲ್ಲುದೆ ದಾನವ ?
ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ ?
ಇರಿಯಬಲ್ಲರೆ ನೂರಕ್ಕೊಬ್ಬ ಸಹಸ್ರಕ್ಕೊಬ್ಬ
ಹುಣಿಸೆಯ ಹೂವೆಲ್ಲ ಕಾಯಾಗಬಹುದೇ ರಾಮನಾಥಾ ?

— ಜೇಡರ ದಾಸಿಮಯ್ಯ

ಜೇಡರ ದಾಸಿಮಯ್ಯನ ವಚನವಿದು. ಗಾತ್ರದಲ್ಲಿ ಚಿಕ್ಕದಾಗಿದ್ದರೂ ತತ್ತ್ವದಲ್ಲಿ, ಸತ್ವದಲ್ಲಿ ಅಗಾಧವಾಗಿದೆ. ಹುಟ್ಟಿದ ಮಾನವರೆಲ್ಲ ಸಾರ್ಥಕದ ಬಾಳು ಬಾಳುವದಿಲ್ಲ; ಪಥ ಹಿಡಿದವರೆಲ್ಲ ಗುರಿಮುಟ್ಟುವರೆಂದು ಹೇಳಲಿಕ್ಕಾಗದು. ಜಗತ್ತಿನಲ್ಲಿ ಹುಟ್ಟಿದವರೆಲ್ಲರೂ ಮಾನವಾಕಾರದಲ್ಲೇ ಇದ್ದರೂ, ಸೃಷ್ಟಿಯ ಕಿರೀಟವೆಂದೆನಿಸಿಕೊಂಡಿರುವ ಮಾನವನ ಜೀವಿತಾರ್ಥವನ್ನು ಅವರು ಸಾರ್ಥಕ ಮಾಡಿಕೊಂಡಿದ್ದಾರೆಂದು ಹೇಳಲು ಸಾಧ್ಯವಾಗದು.

ಸಭೆ ಎಂದಾಗ ಸಹಸ್ರಾರು ಮಂದಿ ಸೇರುತ್ತಾರೆ. ಉದಾತ್ತವಾದ ಒಂದು ಧ್ಯೇಯಕ್ಕಾಗಿ ಮನವಿಯನ್ನು ಮುಂದಿಟ್ಟು, ದಾಸೋಹ ಧನಸಹಾಯಕ್ಕಾಗಿ ಕೇಳುತ್ತಿದ್ದಂತೆಯೇ ಒಬ್ಬರಿಲ್ಲದಂತೆ ಚದುರುತ್ತಾರೆ. ಇಲ್ಲವೇ, ಇಲ್ಲದ ತಾಪತ್ರಯಗಳನ್ನು ಮುಂದಿಡುತ್ತಾರೆ. ಒಂದು ನಗೆಬುಗ್ಗೆ ಈ ಬಗ್ಗೆಯೇ ಇದೆ. ಸಬ್‌ಇನ್ಸ್‌ಪೆಕ್ಟರುಗಳ

ಹುದ್ದೆಗಾಗಿ ಸಂದರ್ಶನ ನಡೆದಿತ್ತಂತೆ. ಸಂದರ್ಶಿಸುವ ಮೇಲಧಿಕಾರಿಗಳು ಕೇಳಿದರಂತೆ ಒಬ್ಬ ಅಭ್ಯರ್ಥಿಯನ್ನು—"ಅಯ್ಯಾ ಜನರು ಸೇರಿ ದೊಂಬಿ ಮಾಡುತ್ತಿದ್ದರೆ ಹೇಗೆ ಅಡಗಿಸುವೆ?" ಆ ಅಭ್ಯರ್ಥಿ ನುಡಿದನಂತೆ, "ಚಂದಾ ವಸೂಲಿಗಾಗಿ ತಟ್ಟೆ ಹಿಡಿಯುತ್ತೇನೆ, ತಾವೇ ಚದುರುತ್ತಾರೆ."

ಈ ಜಗತ್ತಿನಲ್ಲಿ ಸತ್ಕಾರ್ಯಗಳಿಗೆ ಸಹಾನುಭೂತಿ ತೋರುವವರೇ ಕಡಿಮೆ. ಸಹಾನುಭೂತಿ ತೋರಿದರೂ ಸಹಕಾರ ನೀಡುವವರು ಇನ್ನೂ ಕಡಿಮೆ. ಸಹಕಾರ ನೀಡಿದರೂ ಸಹಾಯ ಮಾಡುವವರು ಇನ್ನೂ ಕಡಿಮೆ. ಅಂಥ ಸಹಾಯದ ಮನೋಭಾವ ಉಳ್ಳವರು ಅತ್ಯಂತ ಉತ್ತಮರು. ಸಹಸ್ರಾರು ಮಂದಿಯ ಸಭೆಯಲ್ಲಿ ಅಂಥವರ ಸಂಖ್ಯೆ ತೀರಾ ಅಲ್ಪ. ಹಣವಿದ್ದವರ ಸಂಪತ್ತೆಲ್ಲ ಸಾರ್ಥಕವಾಗುವದೆಂದು ಹೇಳಲು ಸಾಧ್ಯವಿಲ್ಲ.

ಸಂಗ್ರಾಮಕ್ಕೆ ಹೋದವರೆಲ್ಲ ಶೂರರಲ್ಲ. ಹೋದವರೆಲ್ಲ ಕಾದುವದಿಲ್ಲ. ಹೊಟ್ಟೆಪಾಡಿಗಾಗಿ ಸೈನ್ಯವನ್ನು ಸೇರಿದವರೂ ಇರಬಹುದು. ಅನೇಕ ಜೀವಗಳ್ಳರೂ ಇರಬಹುದು. ರಾಷ್ಟ್ರಭಕ್ತಿಯಿಂದ ಉದ್ದೀಪಿತರಾಗಿಯೋ, ತಮ್ಮ ಬದುಕನ್ನು ಸಾರ್ಥೈಸಬೇಕೆಂದೋ ಸೈನ್ಯವನ್ನು ಸೇರಿ, ಪ್ರಸಂಗ ಬಂದಾಗ ಹೋರಾಡುವ ಶೂರರು ಬಹಳಷ್ಟು ಕಡಿಮೆ. ಉಳಿದವರೆಲ್ಲ ಲೆಕ್ಕಕ್ಕೆ, ಸಂಬಳ ತಿನ್ನಲಿಕ್ಕೇ ವಿನಾ ಕಾದಲಿಕ್ಕಲ್ಲ. ಇನ್ನು ಕಾದುವಾಗಲೂ ಅನೇಕ ಆಮಿಷ ಅವರಿಗೆ. ಶತ್ರುರಾಜರೊಡ್ಡುವ ಆಮಿಷಗಳಿಗೆ ಬಲಿಯಾಗುವ ಸಾಧ್ಯತೆಯೂ ಇಲ್ಲದಿಲ್ಲ. ಹೀಗಾಗಿ ದುರ್ಧರ್ಷ ಪ್ರಸಂಗಗಳಲ್ಲಿ ಸೋತು ಶರಣಾಗುವವರೇ ಬಹಳ; ಗೆಲುವಿನವರ ಕಡೆಗೆ ವಾಲುವವರೇ ಅಧಿಕ. ಪ್ರಾಣವನ್ನು ತೊರೆದಾದರೂ ಆತ್ಮಾಭಿಮಾನವನ್ನು ಕಾಪಿಟ್ಟುಕೊಂಡು ರಾಷ್ಟ್ರಕ್ಕಾಗಿ ಬಲಿಯಾಗುವವರು ಕಮ್ಮಿ.

ಹುಣಿಸೆಯ ಹೂವೆಲ್ಲ ಕಾಯಾಗಬಹುದೆ? ಗಿಡವು ಅಸಂಖ್ಯಾತ ಹೂವುಗಳನ್ನು ಅರಳಿಸುತ್ತದೆ. ಜೋರಾಗಿ ಬೀಸುವ ಗಾಳಿಯ ಹೊಡೆತದಿಂದ ನಲುಗಿ ಉದುರುವವು ಕೆಲವು; ರಪರಪನೆ ಬೀಳುವ ಆಲಿಕಲ್ಲು ಅಥವಾ ಮಳೆಯಿಂದ ಜರ್ಜರಿತವಾಗಿ ಉದುರುವವು ಇನ್ನು ಕೆಲವು. ಆಂತರಿಕ ಸತ್ವವಿಲ್ಲದೆ ಮುರುಟಿ ಹೋಗುವವು ಮತ್ತೆ ಹಲವು. ಎಲ್ಲೋ ಕೆಲವಷ್ಟು ಮಾತ್ರ ಹೀಚಾಗಿ, ಪೀಚಾಗಿ ಕಾಯಾಗಿ, ಹಣ್ಣಾಗುವವು.

ಈ ಹೋಲಿಕೆಯನ್ನು ಎರಡು ದೃಷ್ಟಿಯಿಂದ ಅನ್ವಯಮಾಡಬಹುದು.

(1) ಹುಣಿಸೆ ಹೂವೆಲ್ಲ ಕಾಯಾಗುವುದಿಲ್ಲ. ಅದೇ ರೀತಿ ಮಾನವ ಕುಲದಲ್ಲಿ ಅರಳಿದ ಮನುಜರೆಂಬ ಹೂವುಗಳೆಲ್ಲ ಸಾಧಕರೆಂಬ ಕಾಯಾಗವು, ಜೀವನ್ಮುಕ್ತರೆಂಬ ಹಣ್ಣಾಗವು.

(2) ವೃಕ್ಷದಲ್ಲಿ ಅರಳಿದ ಹೂವುಗಳೆಲ್ಲ ಕಾಯಗವು. ಅದೇ ರೀತಿ ಅಧ್ಯಾತ್ಮ ಪಥದಲ್ಲಿ ಕಾಲಿಟ್ಟವರೆಲ್ಲ ಗುರಿಯುಸಿದ್ಧಿಯನ್ನು ಪೂರೈಸುವರೆಂದು ಹೇಳಲಾಗದು. ಆವೇಶದ ತಾತ್ಕಾಲಿಕ ಉತ್ಸಾಹದಿಂದ ಕಾಲಿಟ್ಟು, ಕೆಲಕಾಲದಲ್ಲೇ ನಿರುತ್ಸಾಹಿತರಾಗಿ ಸೋಲುವವರು ಕೆಲವರು–ಸ್ವಭಾವತಃ ಆಂತರಿಕ ಸತ್ವವಿಲ್ಲದೆ ಉದುರುವ ಹೂವುಗಳಂತೆ. ಮಳೆಗಾಳಿಗಳ ತಾಡನ ಎದುರಿಸಲಾರದೆ ಉದುರುವ ಹೂವುಗಳಂತೆ ಬಹಿರಂಗ ಜಗತ್ತಿನ ಕಷ್ಟಕೋಟಲೆ, ಟೀಕೆ-ಟಿಪ್ಪಣಿ ಎದುರಿಸಲಾರದೆ ಪಥದಿಂದ ಹಿಮ್ಮೆಟ್ಟುವವರು ಮತ್ತೆ ಕೆಲವರು.

ಹೀಗೆ ಪಥದಲ್ಲಿ ಕಾಲಿಟ್ಟ ಬಳಿಕವೂ ಕಷ್ಟಸಹಿಷ್ಣುತೆಯಿಲ್ಲದೆಯೇ ಮಾನಸಿಕವಾಗಿ ಬಳಲಿ ಹಿಂದುಳಿಯುವವರು ಬಹಳ. ಅದನ್ನೇ ಜೇಡರ ದಾಸಿಮಯ್ಯನವರು ಮಾರ್ಮಿಕವಾಗಿ ಹೇಳಿದ್ದಾರೆ. ವಚನದ ಸಾರಾಂಶವನ್ನು ನಿರ್ಣಾಯಕ ಧಾಟಿಯಲ್ಲಿ ಎಲ್ಲಿಯೂ ಹೇಳಿಲ್ಲವಾದರೂ ನಾವು ಹೀಗೆ ಸಮಾರೋಪ ಮಾಡಬಹುದು. ಸಭೆ ಬೃಹತ್ತಿದ್ದರೂ ದಾನಮಾಡುವ ಶಕ್ತಿ ಇರಬೇಕು. ಅದಷ್ಟೇ ಇದ್ದರೆ ಸಾಲದು ದಾನಮಾಡುವ ಸಹೃದಯ ಮನಸ್ಸೂ ಬೇಕು. ಸಂಗ್ರಾಮಕ್ಕೆ ಹೋದವನಿಗೆ ಆತ್ಮಾಭಿಮಾನ, ಛಲ ಬೇಕು. ರಣದಕಣಕ್ಕೆ ಇಳಿದ ಮೇಲೆ ಹೋರಾಡುವ ಶೂರತನಬೇಕು. ಹೂವು ಕಾಯಾಗಬೇಕಾದರೆ ಸದೃಢಸಂಕಲ್ಪ ಸ್ಥೈರ್ಯಬೇಕು. ಅದೇ ರೀತಿ ಜೀವನದಲ್ಲಿ ಗುರಿಮುಟ್ಟಲು ಸಹೃದಯತೆ, ಮಾನವೀಯತೆ, ಆತ್ಮಾಭಿಮಾನ – ತತ್ತ್ವನಿಷ್ಠೆ, ಧೈರ್ಯ–ಸ್ಥೈರ್ಯ, ಸತ್ಸಂಕಲ್ಪ–ಈ ಎಲ್ಲವು ಇರಬೇಕು. ಇವು ಇಲ್ಲದ ಸಾಧಕ ಉದುರುವ ದುರ್ಬಲ ಹೂವು !

★★

★ ಗಂಡಾಂತರಗಳು ಅನಿರೀಕ್ಷಿತವಾಗಿ ಬರುವಂತೆಯೇ ಅತ್ಯಂತ ಅನಿರೀಕ್ಷಿತ ಸ್ಥಳಗಳಲ್ಲಿ ಗಂಡಾಂತರಗಳು ನಮಗಾಗಿ ಕಾದಿರುತ್ತವೆ ಎಂಬುದನ್ನು ತಿಳಿದುಕೊಂಡು ಹೆಜ್ಜೆ ಹೆಜ್ಜೆಯನ್ನೂ ಎಚ್ಚರದಿಂದ ಹಾಕಬೇಕು.

—ಗ್ಯೆಟ್ಸೆ

ಹೊಸ ಪ್ರಕಟಣೆಗಳು

ವಿಶ್ವಕಲ್ಯಾಣ ಮಿಷನ್ ಪ್ರಕಟಿಸಿರುವ ಫೋಟೋಗಳ ಮಾರಾಟ ಬೆಲೆಯ ವಿವರ

(1)	ಅತ್ಯಂತ ದೊಡ್ಡದು	....	100 ಪ್ರತಿಗಳಿಗೆ	300 ರೂ
		....	1 ಪ್ರತಿಗೆ 4 ರೂ	
(2)	ಡೆಮ್ಮಿ ಫೋಲಿಯೊ	....	100 ಪ್ರತಿಗಳಿಗೆ	150 ರೂ
	ಮಧ್ಯಮ ಗಾತ್ರ	...	1 ಪ್ರತಿಗೆ 2 ರೂ	
(3)	¼ ಡೆಮ್ಮಿ ಆಕಾರ	...	100 ಪ್ರತಿಗಳಿಗೆ	75 ರೂ
		....	1 ಪ್ರತಿಗೆ 1 ರೂ	
(4)	ಅಕ್ಕಮಹಾದೇವಿ	...	100 ಪ್ರತಿಗಳಿಗೆ	150 ರೂ
		...	1 ಪ್ರತಿಗೆ 2 ರೂ	
(5)	ಪೂಜ್ಯ ಲಿಂಗಾನಂದ ಸ್ವಾಮೀಜಿ		100 ಪ್ರತಿಗಳಿಗೆ	150 ರೂ
		..	1 ಪ್ರತಿಗೆ 2 ರೂ	
(6)	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ			
		...	100 ಪ್ರತಿಗಳಿಗೆ	150 ರೂ
		....	1 ಪ್ರತಿಗೆ 2 ರೂ	
(7)	ಮಹಾಯೋಗಿ ಶಿವ	....	100 ಪ್ರತಿಗಳಿಗೆ	75 ರೂ
		....	1 ಪ್ರತಿಗೆ 1 ರೂ	

ಪೋಸ್ಟ್‌ಕಾರ್ಡ್ ಸೈಜ್

(1)	ಬಸವಣ್ಣನವರು	...	1 ಪ್ರತಿ	0 35 ಪೈಸೆ
(2)	ಅಕ್ಕಮಹಾದೇವಿ	....	3 ಪ್ರತಿ	1 00 ರೂ
(3)	ಸ್ವಾಮೀಜಿ	...	100 ಪ್ರತಿ	25 00 ರೂ
(4)	ಮಾತಾಜಿ	....	100 ಪ್ರತಿ	25 00 ರೂ
(5)	ಬಸವೇಶ್ವರ ಕೊರಳ ಪದಕಗಳು		1 ಪ್ರತಿ	3 00 ರೂ
(6)	ಮ್ಯಾಗ್ನೆಟ್ ಭಾವಚಿತ್ರ	...	1 ಪ್ರತಿ	5 00 ರೂ

ವ್ಯವಹರಿಸುವ ವಿಳಾಸ :

ವಿಶ್ವಕಲ್ಯಾಣ ಮಿಷನ್,
ಬಸವ ಮಂಟಪ, 24, ಎರಡನೆ ಬ್ಲಾಕು,
ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು-560 010.

ಕಲ್ಯಾಣ ಕಿರಣದ ಮಾತೆಯ ಅನುಚಿತ ಲೇಖನಕ್ಕೆ ಉಚಿತ ಉತ್ತರ

ಡಾ॥ ಜ. ಚ. ನಿ.

(ಮಾಮಿಡಿ ಆಶ್ವಯುಜ ಸಂಚಿಕೆ)

[ಆಗಸ್ಟ್ ತಿಂಗಳ ಕಲ್ಯಾಣ ಕಿರಣದಲ್ಲಿ ಅನಾಮಧೇಯ ಲೇಖಕರ ಲೇಖನಕ್ಕೆ ಉತ್ತರ ಎಂಬ ಶೀರ್ಷಿಕೆಯಡಿಯಲ್ಲಿ, "ಮಾಮಿಡಿ" ಎಂಬ ತ್ರೈಮಾಸಿಕದಲ್ಲಿ ಪ್ರಕಟವಾದ ಒಂದೆರಡು ಲೇಖನಗಳಿಗೆ ನಾನು ಉತ್ತರಿಸಿದ್ದೆ. ಅದಕ್ಕೆ ಪ್ರತ್ಯುತ್ತರವನ್ನು ನೀಡಿ ಮಾಮಿಡಿಯ ಆಶ್ವೀಜ (ಅಕ್ಟೋಬರ್) ಸಂಚಿಕೆಯಲ್ಲಿ ಡಾ॥ ಜ. ಚ. ನಿಯವರು ಇನ್ನೊಂದು ಲೇಖನ ಪ್ರಕಟಿಸಿದ್ದಾರೆ. ಆದರೆ ನಾನು ಬರೆಯದಿರುವ ಮಾತುಗಳನ್ನೆಲ್ಲ ಅವರು ಉಲ್ಲೇಖಿಸಿರುವುದರಿಂದ ಓದುಗರಿಗೆ ವಾಸ್ತವ ಚಿತ್ರಣವನ್ನು ಕೊಡಲಿಕ್ಕಾಗಿ ಅವರ ಉತ್ತರವನ್ನು ಯಥಾರೀತಿ ಪ್ರಕಟಿಸಿ, ಇನ್ನೊಂದು ಲೇಖನದಲ್ಲಿ ನನ್ನ ಉತ್ತರ ನೀಡಬಯಸಿದ್ದೇನೆ. ಹೀಗಾಗಿ ಡಾ॥ ಜ. ಚ. ನಿಯವರ ಲೇಖನ ಇಲ್ಲಿ ಮುದ್ರಣಗೊಳ್ಳುತ್ತಿದೆ. ಅವರ ಪ್ರಕಟಣೆಯಲ್ಲಿ ಕೆಲವು ಮುದ್ರಣದೋಷಗಳಿವೆ. ಆದರೆ ಅದು ಮುದ್ರಣದೋಷವೋ ಅಥವಾ ಏನಾದರೂ ವಿಶೇಷ ಅರ್ಥವನ್ನಿಟ್ಟು ಶಬ್ದಗಳನ್ನು ಬಳಸಿದ್ದಾರೋ ಎಂಬ ಸಂದೇಹದಿಂದ ಯಥಾರೂಪದಲ್ಲಿ ಮೂಲಕ್ಕೆ ಕಿಂಚಿತ್ತೂ ವ್ಯತ್ಯಯ ಬರದಂತೆ ಪ್ರಕಟಿಸಲಾಗಿದೆ. ಓದುಗರಿಗೆ ಅಧ್ಯಯನಕ್ಕೆ ಅವಕಾಶವಾಗಲೆಂದು ಈ ರೀತಿ ಮಾಡಬೇಕಾಗಿದೆ. —ಸಂಪಾದಕರು, ಕಲ್ಯಾಣ ಕಿರಣ]

'ಅನಾಮಧೇಯ ಲೇಖನಕ್ಕೆ ಉತ್ತರ' ಎಂದು ಅರ್ಥವಿಲ್ಲದ ಅನುಚಿತ ತಲೆ ಬರಹದಿಂದ ಮೊದಲಾಗಿದೆ. ನಮ್ಮ ಬರೆಹಗಳು ಬಹಳಿದ್ದು ಹೆಸರುಗಳು ಬಹಳಾಗಬಾರದೆಂದು ಬಗೆದು ನಾಲ್ಕೈದು ಬರೆಹಗಳಿಗೆ ಕೊನೆಯಲ್ಲಿ ಒಮ್ಮೆ ಹೆಸರನ್ನು ಹಾಕುವುದುಂಟು. ಇದಕ್ಕನುಸರಿಸಿ ಈ ಸಲವೂ 'ಶಬ್ದ ಶಕ್ತಿ' ಮತ್ತು ವಾದದ ಇವರೆರಡು ಲೇಖನಗಳು, 'ವಿಜ್ಞಾನ ತಾಂತ್ರಿಕಜ್ಞಾನ' 'ಎಂಜಿನಿಯರಿಂಗ್ ಗೀತೆಗಳು' ಈ ಅಯ್ದಕ್ಕೂ ಕೊನೆಯಲ್ಲಿ ಹೆಸರನ್ನು ಹಾಕಲಾಗಿದೆ. ಇದನರಿದೂ ಅರಿಯದಂತೆ ನಟಿಸಿ 'ಅನಾಮಧೇಯ ಲೇಖನ' ಎಂದು ಕರೆವಲ್ಲಿದೆ ಇವರ ಅನುಚಿತತೆ ಮುನ್ನೊಮ್ಮದಲಿನಲ್ಲಿಯೆ!

ಎರಡನೆಯದಾಗಿ ನಮ್ಮ ಉತ್ತರ ಅವರ 'ಪ್ರಜಾವಾಣಿ' ಪ್ರಕಟಣೆಗೆಂದು ಕಳ್ಪಿಸಿರುವುದು; ಇದನ್ನು ನಾವು ನೋಡಿಯೆ ಇಲ್ಲ. ಈ ದಿಸೆಯ ಎರಡು ಪುಟ್ಟ ಪುಸ್ತಿಕೆಗಳನ್ನು ಅಂಚೆ ಮೂಲಕ ನಮ್ಮ ಹೆಸರಿಗೆ ಕಳಿಸಿದ್ದರು. ಅದನ್ನು ನೋಡಿ ಉತ್ತರಿಸಲಾಯಿತಲ್ಲದೆ ಇವರು ಹೇಳುವಂತೆ ಇವರ ಜಾಹೀರಾತಕ್ಕಲ್ಲ. ಬರೆದು ದಿನಗಳಾದರೂ ನಮ್ಮದು ತ್ರೈಮಾಸಿಕವಾದ್ದರಿಂದ ತಡವಾಗಿ ಬಂದಿದೆ. ಇಷ್ಟು ಮಾತ್ರಕ್ಕೆ ಇದರ ಮೇಲೆಯೂ ಇವರ ಕೀಳ್ಮಟ್ಟದ ಅಣಕದ ಅನುಚಿತತೆ ಅಭಿವ್ಯಕ್ತವಾಗಿದೆ. ಪುಸ್ತಿಕೆಗಳನ್ನು ಕಳಿಸಿಯೂ ಅದನ್ನು ಮುಚ್ಚಿಹಾಕಿ 'ಪ್ರಜಾವಾಣಿ' ಯನ್ನು ಮುಂದು ಮಾಡಿರುವುದು ನಿಮ್ಮ ಅಪ್ರಾಮಾಣಿಕತೆಗೆ ಕಾರಣವಿದೆಯಲ್ಲದೆ ನಮಗಿಲ್ಲ.

"ಮಹಾದೇವಿಯವರಿಗೆ ಈ ವಚನದ ಅರ್ಥವೂ ಆಗಿಲ್ಲ. ಅನುಭವ ಮೊದಲೇ ಆಗಿಲ್ಲ. ಅವರ ಅಧ್ಯಯನ ಅಧಿಕೃತವಲ್ಲ. ಅವರ ಸಂಸ್ಕಾರ ಅನು ಪೂರ್ವಿಯಲ್ಲ...." ಇತ್ಯಾದಿಯಾಗಿ ನಾವು ಔಚಿತ್ಯವಿರುವೆಡೆಗಳಲ್ಲಿ ಬರೆದದ್ದುಂಟು. ಆ ಪ್ರಸಂಗವನ್ನು ಪ್ರಸ್ತಾಪ ಮಾಡದೆ ಆ ಆ ವಚನಗಳನ್ನು ಉದ್ಧರಿಸದೆ, ಅವುಗಳಿಗೆ ತಾವು ಮಾಡಿದ ಅರ್ಥವೇನು? ನಾವು ಮಾಡಿದ ಅರ್ಥವೇನು? ಎಂಬುದನ್ನು ಎತ್ತಿ ತೋರದೆ; ತೋರಲು ಆಗದೆ, "ವೈಯಕ್ತಿಕ ಆಕ್ರೋಶ;" ಎಂದಿದ್ದಾರೆ. ವೈಯಕ್ತಿಕವಾಗಿ ಆಕ್ರೋಶ ಬರಲು ಕಾರಣವೇ ಇಲ್ಲ. ಸೋಲನ್ನೊಪ್ಪುವ ಮನಸ್ಸಿಲ್ಲದೆ ಮುಚ್ಚಿ ಮಾತಾಡುವ ಹಂಚಿಕೆ ಇದಾಗಿದೆ. 'ಕೆಲವು ಅನವಶ್ಯಕ ಛಂದೋಬದ್ಧ ಪದಗಳನ್ನು ಉಪಯೋಗಿಸಿ ಅಸ್ಪಷ್ಟವಾಗಿ ಬರೆವುದು ಕೆಲವರ ಜಾಯಮಾನ. ಅದಷ್ಟೇ ಇಲ್ಲಿ ಪ್ರಕಾಶಗೊಂಡಿದೆ.' ಎಂದು ಅರ್ಥವಿಲ್ಲದೆ ಅನುಚಿತವಾಗಿ ಬರೆದು ಈ ಮಾತುಗಳಿಗೆ ಉದಾಹರಣೆಗಳನ್ನು ಕೊಡದೆ ಟೀಕಿಸುವ ಚಟ ತೀರಿಸಿಕೊಂಡಿದ್ದಾರೆ.

ನೀವು ದೀಕ್ಷಾ ಗುರುಗಳು ಬಸವಣ್ಣನಿಗೆ ಯಾರೂ ಇಲ್ಲ ಎಂದು ಬರೆಯ ಹೊರಟು ಕೊಟ್ಟ ಆಧಾರಗಳನ್ನೆಲ್ಲ ನಮ್ಮ ಉತ್ತರದಲ್ಲಿ ಖಂಡಿಸಲಾಗಿದೆ. ಆ ಖಂಡನೆಗೆ ಸಮಾಧಾನ ಕೊಡಲಾಗದೆ ಬೇರೆ ಸೀಳ್ದಾರಿಗೆ ತಿರುಗಿ ತಪ್ಪು ಹೆಜ್ಜೆಗಳನ್ನಿಡಲು ವ್ಯರ್ಥ ಸಾಹಸ ಮಾಡಿದ್ದೀರಿ!

ಲಿಂಗವಂತಿಕೆಗೆ ಗುರು ಅವಶ್ಯವೆಂಬುದನ್ನು "ಆದಿಗುರು ಬಸವಣ್ಣ" ಮಾಡಿದನಂತೆ! ಇದು ಆತನೆ ಮಾಡಿದ ಕಟ್ಟು ಕಟ್ಟಳೆಯಂತೆ! ಈ ಅನುಚಿತೋಕ್ತಿಗೆ ಏಸನಬೇಕೋ ತಿಳಿಯದು. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ! ಇವರು ಹೇಳಿದ್ದೇ ಶಾಸನ. 'ಆದಿ ಗುರು' ಅಂದರೇನೋ? ಬಸವಣ್ಣನಿಗೆ ಹಿಂದೆ ಗುರುಗಳೇ ಇರಲಿಲ್ಲೆಂದು ಅದರರ್ಥವೆ? ಅಹುದೆಂದರೆ ಇದಕ್ಕೆ ಬೇರೆ ಮಾತೇ ಇಲ್ಲ. ಬಸವಣ್ಣ ಹುಟ್ಟಿ

ದಾಗ ಲಿಂಗ ಕಟ್ಟಿದ ಜಾತ ವೇದ ಮುನಿಗಳ ಗತಿಯೇನು? ೧೧ ನೆಯ ಶತಮಾನದ ಗುರುಗಳ ಗತಿಯೇನು?

ದೇವರನ್ನೇ ನೇರವಾಗಿ ಗುರುವಾಗಿ ಪಡೆದುದಕ್ಕೆ ಆಧಾರವೇನು? ಹಾಗಾಗಲು ಇಷ್ಟಲಿಂಗಧಾರಿಗಳಿಗೆ ಸಾಧ್ಯವೆ? ನೇರವಾಗಿ ದೇವರಿಂದಲೇ ಮಕ್ಕಳನ್ನು ಪಡೆಯಲಾಗುವುದೇ ಪತಿಗಳಿಲ್ಲದೆ? ಬುದ್ಧ ಏಸುಗಳ ಸಾಮ್ಯ ಬಸವಣ್ಣನಿಗೆ ಸರಿಯೆ? ಅವರಂತೆ ಇವನು ಇಷ್ಟಲಿಂಗ ರಹಿತನೆ?

ಬಸವಣ್ಣನಿಗೆ ಗುರುವಿರುವನೆಂಬುದು ತಾರ್ಕಿಕವಲ್ಲ; ಸಿದ್ಧ ವಿಷಯ. ಸಿಂಗಿರಾಜ ಸಾಕ್ಷಿ ಜಾತವೇದ ಮುನಿ ಸಾಕ್ಷಿ. ಗುರುವಿಲ್ಲ, ನಿರಾಕಾರ ದೇವನಿಂದ ಇಷ್ಟಲಿಂಗ ಬಂತೆಂದು ಹೇಳುವ ನಿಮ್ಮ ಬಾದ ತಾರ್ಕಿಕ; ಅನುಚಿತ ಕಲ್ಪನೆ. ಶಿವ ರುದ್ರರ ಆದಿತವ ಬಸವಣ್ಣನಿಗೆ ಬರಬಲ್ಲುದೆ? ಬಸವಣ್ಣನ ಕಾಲವನ್ನೆ ಅರಿಯದ ಇವರ ವಾದದಲ್ಲಿ ಹುರುಳಿಲ್ಲ. ಆದಿ ಪದದರ್ಥವೆ ಇವರಿಗಿಲ್ಲ.

ಬಸವಣ್ಣನಿಗೆ ಸಂಗ ಪತಿಯಂತೆ, ಅವನಿಂದ ಶಕ್ತಿ ಹರಿದು ಬಂತಂತೆ; ಇರಬಹುದು; (ವಾದಕ್ಕಾಗಿ ಒಪ್ಪೋಣ) ಆದರೆ ಸಂಗನಿಂದಲೆ ಇಷ್ಟಲಿಂಗ ಬಂದಿತೆ? ಅಂತಃಶಕ್ತಿ ನೇರವಾಗಿ ದೇವರಿಂದ ಬರುತ್ತದೆಯೆಂಬುದಕ್ಕೆ ನಮ್ಮ ವಾದವೇ ಇಲ್ಲ. ಇಷ್ಟಲಿಂಗ ಬರಬಲ್ಲುದೇ? ಎಂಬುದೇ ನಮ್ಮ ಪ್ರಶ್ನೆ! ಇದಕ್ಕೆ ನೇರ ಉತ್ತರಿಸದೆ ದ್ರಾವಿಡ ಪ್ರಾಣಾಯಾಮಕ್ಕೆಳಸುತ್ತಾರೆ. ಈ ಅನುಚಿತ ಲೇಖಕರು ಮರಳಿ ಮರಳಿ ಅನುಚಿತಕ್ಕೆ ಎಳಸುತ್ತಾರೆ. ಒಂದೆರಡು ಇದನ್ನ ಅನವಶ್ಯಕವಾಗಿ ಲಂಬಿಸಿದ್ದಾರೆ.

ಬುದ್ಧನಂತೆ, ಕ್ರಿಸ್ತನಂತೆ, ಬಸವಣ್ಣ ಧರ್ಮ ವಿಧಿ ವಿಧಾನಗಳಿಗೆ ಮೊದಲಿಗನಂತೆ! ಹಾಗಿದ್ದರೆ ಬೌದ್ಧಮತ, ಕ್ರೈಸ್ತಮತ, ಎಂಬಂತೆ 'ಬಾಸವ ಮತ' ಎಂದೇಕೆ ಬರಲಿಲ್ಲ? ಇದಕ್ಕೆ ಉತ್ತರವನ್ನೆ ಕೊಡರು ಅನುಚಿತ ಲೇಖಕರು. ಬಸವಣ್ಣ ಬಾಲಕನಿದ್ದಾಗ ಸಮಯಾಚಾರ ದೀಕ್ಷೆಯನ್ನು ತೆಗೆದುಕೊಂಡನೆಂದು ಒಪ್ಪಿಯೂ ಮತ್ತೆ ಒಪ್ಪದೆ ವಿತಂಡ ವಾದವನ್ನು ಮಾಡುತ್ತಾರೆ.

"ಅವರು ಅನನ್ಯವಾಗಿ ಆರಾಧಿಸುತ್ತಿದ್ದ ಶಿವನ ಆಕಾರದ ಸುಗುಣ ರೂಪದಲ್ಲಿ ಕಾಣಿಸಿಕೊಂಡು ಹಸ್ತ ಮಸ್ತಕ ಸಂಯೋಗ ಮಾಡಿತು." ಇದು ಮಾತೆಯವರ ಮಾತು. ಇದೂ ಒಂದು ಅನುಚಿತ ವಾಕ್ಯ. ಯಾವುದು ಮಾಡಿತೋ? ವಾಕ್ಯ ರಚನೆಯನ್ನೆ ಅರಿತಂತಿಲ್ಲ. ಇರಲಿ. ನಿರ್ಗುಣ ಸಗುಣವಾಗಿ ಬಂದು ಹಸ್ತ ಮಸ್ತಕ ಸಂಯೋಗ ಮಾಡಿತೆಂದಾದರೂ ಒಪ್ಪಿರುವರಲ್ಲ, ಸಾಕು; ಇದೇ ಬೇಕಾದುದು. ಆ ಸಗುಣ ರೂಪವೆ ಗುರು ಆ ಸಗುಣನೇ ಶ್ರೀ ಜಾತವೇದಿ ಶಿವಾಚಾರ್ಯನು. ಇವರಿಂದಲೇ ಕರಸ್ಥಲದ ಕುರುಹು ಬಂದಿದೆ.

ಅನುಚಿತ ಲೇಖನ ಬೆಳೆಸಲು ೧೦ ಶೈವ ವೀರಶೈವ ಧರ್ಮ ಕ್ರಮುಗಳನ್ನು ಕೊಟ್ಟಿದ್ದಾರೆ. ಇವು ಇವರಿಗೊಬ್ಬರಿಗೆ ತಿಳಿದಿರುವವುಗಳು. ಅಂತೆಯೇ ನಮುಗೂ ತಿಳಿಸ ಹೊರಟಿದ್ದಾರೆ. ಇವುಗಳ ಅಗತ್ಯವೇನೋ ? ಮೊದಲಿನದರಲ್ಲಿ "ಇದು (ಇಷ್ಟಲಿಂಗ) ಲಿಂಗಾಯತ ಧರ್ಮದ (ಬಸವಣ್ಣನವರಿಂದಲೇ ಕೊಡಲ್ಪಟ್ಟ ಧರ್ಮ ಎಂಬ ತಿಳುವಳಿಕೆಯಿಂದಲೇ ಈ ಶಬ್ದ ಬರೆದಿರುವುದು. ಲಿಂಗಾಯತ ಧರ್ಮ ಎಂದು ಬಳಸಿದಲ್ಲಿ ಬಸವ ಧರ್ಮ ಎಂದು ಸಹ ಓದುಗರು ಬಳಸಿಕೊಳ್ಳಬಹುದು) ಆರಾಧನಾ ವಸ್ತು. ಹಂಸ ಪಾದದಲ್ಲಿ ಬರೆದು ತಿಳಿಸುವ ಗತಿ ಬಂದಿದೆಯಲ್ಲಾ ಈ ಮಾತೆಯ ವಾದಕ್ಕೆ ! ಇದಕ್ಕಾಗಿ ತುಂಬಾ ನೋಯಬೇಕು. ಈ ದುರ್ಗತಿ ಯಾರಿಗೂ ಬೇಡ.

ಶೈವಮತ, ವೀರಶೈವ ಪಂಥ, ಲಿಂಗಾಯತ ಧರ್ಮ ಈ ಮೂರನ್ನು ಬೇರೆ ಬೇರೆ ಮಾಡಿ ಬಣ್ಣಿಸ ಹೊರಟು ಅನುಚಿತತೆಯನ್ನುಅತ್ಯಧಿಕಗೊಳಿಸಿಕೊಂಡಿದ್ದಾರೆ. ಶೈವ ಆದಿ, ಆದರ ಬಳಿವಿಡಿದು ವೀರಶೈವ; ವೀರಶೈವದ ಸಂಬಂಧವಿಲ್ಲದೆ ಲಿಂಗಾಯತ ಧರ್ಮ ಬಂದಿತೆಂದು ಹೇಳ ಹೊರಟಿದ್ದಾರೆ ಮಾತೆ ! ಇದಕ್ಕೆಲ್ಲ ಉತ್ತರವಾದಿಗಳಾಗುವುದು ನಮುಗಿಷ್ಟವಿಲ್ಲ. ಮೂಲವಾದ ಯಾವುದೋ ಅದು ಸಾಕೀಗ ! ವೀರಶೈವ ಪದದ ಬಳಕೆ ಉತ್ತರ ಕರ್ನಾಟಕದಲ್ಲಿ ಇಲ್ಲವಂತೆ! ವೀರಶೈವಕ್ಕೂ ಲಿಂಗಾಯತಕ್ಕೂ ಸಂಬಂಧವಿಲ್ಲವಂತೆ! ವೀರಶೈವರು ಲಿಂಗಗಳನ್ನು ಜಡೆಯಲ್ಲಿಟ್ಟುಕೊಂಡು ಒಯ್ಯುತ್ತಿದ್ದರಂತೆ! ಅವು ಸ್ಥಾವರ ಲಿಂಗಗಳಂತೆ! ಅವಕ್ಕೆ ಕಂಥೆಯಿಲ್ಲದ್ದರಿಂದ ಸ್ಥಾವರವಂತೆ ! ಲಿಂಗಾಯಿತರು ಧರಿಸುವವೆಲ್ಲ ಚರವಂತೆ ! ವೀರಶೈವಕ್ಕೆ ಹೊರತಾದ ಬಸವಣ್ಣ 'ವೀರಶೈವ ನಿರ್ಣಯ ಪರಮಾವತಾರ'ನಾದನಂತೆ! ಈ ಅನುಚಿತವಾದವನ್ನು ಓದುಗರೇ ವಿಚಾರಿಸಬೇಕು. ನಿರ್ಣಯ ಪದದರ್ಥವೇನೋ ಇವರೇ ಹೇಳಬೇಕು ಪರ್ಯಾಯವಾಗಿ ವೀರಶೈವ ಮೊದಲಿತ್ತು ಎಂದು ಒಪ್ಪಿದ್ದಾರೆ. ಇಷ್ಟು ಸಾಕು.

ವಾಸ್ತವವಾಗಿ ಲಿಂಗಾಯತ ಸಂಸ್ಕಾರವನ್ನಾಗಲಿ ಧರ್ಮವನ್ನಾಗಲಿ ಉತ್ಪಾದಿಸುವಾತನು ಗುರುದೇವನೆ ! ಬಸವಣ್ಣನಲ್ಲ. ಇದನ್ನರಿಯಬೇಕಾದರೆ ಈ ಮಾತೆಗೆ ಇನ್ನು ದಿನಗಳು ಬೇಕು.

ಮೂಲಭೂತವಾದ ನಮ್ಮ ಅನಿಸಿಕೆಗಳಿಗೆ ಪ್ರಶ್ನೆಗಳಿಗೆ ಇವರು ಉತ್ತರವನ್ನಿತ್ತಿಲ್ಲ. ಅವರು ಪುಟ್ಟ ಪುಸ್ತಿಕೆಗಳನ್ನು ನಮ್ಮ ಬರೆಹಗಳನ್ನು ತುಲನಮಾಡಿ ಸಹೃದಯ ಓದಿ ನೋಡಿಕೊಳ್ಳಲಿ. ಜಾರುವರಾರೆಂಬುದು ತೋರದಿರದು. "ಇಷ್ಟಲಿಂಗ ಎಂದಿನದು ?" ಎಂಬ ನಮ್ಮ ಬರೆಹಕ್ಕೆ ಉತ್ತರವಿಲ್ಲ; ಅಲ್ಲಷ್ಟು ಇಲ್ಲಷ್ಟು ನಿರಾಧಾರವಾಗಿ ಆಡಿದ ಮಾತು ಏತಕ್ಕೂ ಬಾರವು.

"ಇತಿಹಾಸೇಷು ವೇದೇಷು...."ಎಂಬೀ ಚನ್ನಬಸವಣ್ಣನವರ ವಚನವನ್ನು ಉದ್ಧರಿಸಲಾಗಿದೆ, ಮತ್ತು ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥುಃ...." ಎಂಬ ವಚನಕ್ಕೂ ಕೊನೆಯಲ್ಲಿ ಕೊಟ್ಟ. ಗುರೂತ್ತ ಮಂತ್ರಮಾರ್ಗೇಣ ಇಷ್ಟಲಿಂಗಂತು ಶಾಂಕರೀ" ಎಂದು ಬಸವಣ್ಣನವರು ಉದ್ಧರಿಸಿದ ಆಗಮ ವಚನಕ್ಕೂ ಇವರು ಉತ್ತರಿಸಿಲ್ಲ ಪ್ರಾಣಲಿಂಗವನ್ನು ನಿರೂಪಿಸಿದ "ನಿರೂಪವ ಕಾಣಬಾರದು..." ಎಂಬೀ ವಚನವನ್ನು ಇಷ್ಟಲಿಂಗಕ್ಕಾಗಿ ಅನುಚಿತ ಅರ್ಥ ಮಾಡಿದ್ದನ್ನು ಖಂಡಿಸಲಾಗಿದೆ. ಇದಕ್ಕೂ ಉತ್ತರವಿಲ್ಲ. "ಆದಿಯ ಲಿಂಗವ ತೋರಿದ..." ಎಂಬೀ ವಚನವನ್ನು ತಮ್ಮ ಅನುಚಿತವಾದಕ್ಕೆ ಕೈಕೋಲನ್ನು ಮಾಡಿಕೊಂಡು ಅಪಾರ್ಥ ಮಾಡಿದ್ದನ್ನು ಖಂಡಿಸಲಾಗಿದೆ. ಈ ಬಗೆಗೆ ಕಿಂಚಿತ್ತೂ ಪ್ರಸ್ತಾಪವಿಲ್ಲ. "ಉಂಟೆಂಬುದ ಬಸವಣ್ಣ ಕೊಂಡ...." "ಆರೂ ಹಿರಿಯರಲ್ಲ...." ಇವೆರಡಕ್ಕೂ ಇವರ ಉತ್ತರವಿಲ್ಲ. ಇವೆಲ್ಲ ಮೂಲಭೂತ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತತ್ತರಿಸಿದ ತಾಯಿಯೊಡನೆ ವಿವಾದಕ್ಕಿಳಿಯಲು ನಮುಗಿಷ್ಟವಿರಲಿಲ್ಲ. ಆದರೂ ವಾಸ್ತವತೆ ವಾಚಕರಿಗೆ ಆಗಲೆಂದು ಬರೆಯಲಾಯಿತು.

ದೀಕ್ಷಾ ಗುರುವಿನ ಹೆಸರನ್ನು ಹೇಳದಿರುವುದು ಯಾರಿಗೆ ಗೊತ್ತಿಲ್ಲ ? ಪತಿವ್ರತೆ ಗಂಡನ ಹೆಸರನ್ನು ಅನವಶ್ಯಕವಾಗಿ ಪದೇ ಪದೇ ಬಳಸಬಾರದೆಂಬುದು ಯಾರಿಗೆ ಗೊತ್ತಿಲ್ಲ? ಅಪರೂಪವಾಗಿ ಹೇಳಿದರೂ ಹೇಳಬಹುದಲ್ಲದೆ ಸಿಕ್ಕಾಬಟ್ಟೆ ಬಳಸಬಾರದು ಇದನ್ನು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ತಮ್ಮೊಂದು ವಚನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನೋಡಿಕೊಳ್ಳಲಿ.

ನಾವು ಗುರುನಾಮುವನ್ನು ಹೇಳಿದಂತೆ ತರಾಟೆಗೆ ತಕ್ಕೊಂಡಿದ್ದಾರೆ-ಅನುಚಿತವಾಗಿ! ಅವರು ಅಧಿಕಾರವಿತ್ತ ಗುರುಗಳಲ್ಲದೆ, ದೀಕ್ಷಾ ಗುರುಗಳಲ್ಲ ಎಂಬುದನ್ನೆ ಅರಿಯದೆ ಅಲ್ಲಸಲ್ಲದ ಸಲ್ಲಾಪ ಮಾಡಿದ್ದಾರೆ. ಒಡಪು ಹೇಳುವಂತೆ ಯಾರೋ ಎಲ್ಲಿಯೋ ಹೇಳಿದ್ದರೆ ತಪ್ಪೇನಿಲ್ಲ. ಆದರೆ ಅನವಶ್ಯಕವಾಗಿ ಎಲ್ಲೆಲ್ಲಿಯೂ ಹೇಳಿ ಬಳಸಬಾರದೆಂಬ ಗೌರವತೆಯನ್ನು ಹಿಂದಿನವರು ಕಾಯ್ದುಕೊಂಡು ಬಂದು ಸಂಗತಿ ಸುಪ್ರಸಿದ್ಧ ! ಗುರುವಿಲ್ಲದ ದೀಕ್ಷೆಯಿಲ್ಲದ ಬಸವಣ್ಣ ವೀರಶೈವನೆ? ಸಗುಣ ಶಿವದೀಕ್ಷೆ ಮಾಡಿದನೆಂದು ವಿಧಿಯಿಲ್ಲದೆ ಒಪ್ಪಿಕೊಂಡಿದ್ದಾರೆ. ಆ ಸಗುಣಶಿವ ಯಾರು ? ಇಷ್ಟಕ್ಕೆ ಬಂದರಲ್ಲಾ ! ಇಷ್ಟೇ ಸಾಕು.

'ಕಲ್ಯಾಣ ಕಿರಣ'ದಲ್ಲಿನ ಲೇಖಕಿಯ ಅರ್ಥವಿಲ್ಲದ ಅನುಚಿತ ಅಭಿಪ್ರಾಯಗಳಿವು.

೧) ಉತ್ತರಿಸಲು ತಮ್ಮ ಪುಸ್ತಿಕೆಗಳನ್ನು ನಮಗೆ ಕಳಿಸಿಯೂ ಕಳಿಸದಂತೆ ಮಾತಾಡಿ ಅಪ್ರಾಮಾಣಿಕತೆಯ ತೋರಿರುವಿಕೆ !

೨) ನಾವು ಅಸ್ಪಷ್ಟವಾಗಿ ಬರೆದುದನ್ನು ಸ್ಪಷ್ಟಗೊಳಿಸದಿರುವಿಕೆ; ತಮಗಿರುವ ಈ ದೋಷವನ್ನು ನಮ್ಮ ಮೇಲೆ ಹೊರಿಸಲೆಳಸಿರುವಿಕೆ !

೩) ಬಸವಣ್ಣನವರಿಗೆ ಪರಮಾತ್ಮನೆ ಗುರು, ದೀಕ್ಷಾಗುರು ಯಾರೂ ಇಲ್ಲ ಎಂದು ಒಮ್ಮೆ ಹೇಳುತ್ತಾರೆ. ಮತ್ತೊಮ್ಮೆ ಅವರಿಗೆ ಸಮಯಾಚಾರ ದೀಕ್ಷೆಯಾಗಿತ್ತು, ಸಗುಣ ಗುರುವಿದ್ದ. ವಿದ್ಯಾ ಗುರುಗಳು ಇದ್ದಿರಬಹುದು.

೪) ಗುರುವಿಲ್ಲದ ಬಸವಣ್ಣ, ದೀಕ್ಷೆಯಿಲ್ಲದ ಬಸವಣ್ಣ, ವೀರಶೈವನಲ್ಲದ ಬಸವಣ್ಣ ಇವು ಇವರು ಹೇಳುವ ಅನುಚಿತ ಅಭಿಪ್ರಾಯಗಳು.

೫) ಗುರುವಿಲ್ಲದ ಬಸವಣ್ಣ ಗುರು ಕಟ್ಟುಕಟ್ಟಳೆಗಳನ್ನು ಹಾಕಿದನಂತೆ! ತನಗೂ ಗುರುವಿದ್ದು ಹಸ್ತಮಸ್ತಕ ಸಂಯೋಗವಾದುದನ್ನು ಹೇಳಿಕೊಂಡಿದ್ದರೂ ಇದನ್ನು ಮುಚ್ಚಲು ಹೆಣಗಿದ್ದಾರೆ.

೬) 'ಹಿಂದು ಸಮಾಜ ಅಥವಾ ಅಂದು ಇದ್ದ ಸಮಾಜದಲ್ಲಿ ಸಮಾನವಾದ ಒಂದು ಮಿರ್ಥಾಕ(?)ಸಂಸ್ಕಾರವಿರಲಿಲ್ಲ. ಎಲ್ಲರನ್ನೂ ಒಂದು ಸಂಸ್ಕಾರದಿಂದ ಬೆಸೆಯಲು ಯಾವುದೇ ಸೂತ್ರವಿರಲಿಲ್ಲ. ಇದನ್ನರಿತು ಬಸವಣ್ಣನವರು ಗುರುಕಾರುಣ್ಯವನ್ನು ಸಂಸ್ಕಾರವನ್ನು ಅವಶ್ಯಕತೆ ಎಂದರಿತು ಕಡ್ಡಾಯಗೊಳಿಸಿದರು....' ಇಲ್ಲಿ ಅಂದಿದ್ದ ಸಮಾಜದ ಹೆಸರನ್ನು ಹೇಳಲು ಹಿಂಜರಿಕೆ ! ಇತ್ತೆಂದು ಪರ್ಯಾಯವಾಗಿ ಒಪ್ಪಿರುವಿಕೆ, ಸಿದ್ಧಾಂತ ಸಂಸ್ಕಾರವಿರಲಿಲ್ಲೆಂದು ಅರ್ಥವಿಲ್ಲದೆ ತೀರ್ಮಾನಿಸಿರುವಿಕೆ. ದೇ. ದಾಸಮಯ್ಯ ಮೊದಲಾದವರಿಗೆ ದೀಕ್ಷೆಯಿರಲಿಲ್ಲವೆ ?

೭) ...ಬಸವಣ್ಣನವರು ವ್ಯಕ್ತಿ ಗುರುವನ್ನು ಪಡೆಯದೆ ದೇವರನ್ನೇ ನೇರವಾಗಿ ಗುರುವನ್ನು ಪಡೆದವರು.

೮) ಬಸವಣ್ಣನ ಸಾಧನ ಆಕಾಶಯಾನ. ಆತ ಎಲ್ಲರಂತೆ ಸಾಧಕನಲ್ಲ. ವಿಶೇಷ ಪ್ರವಾದಿ. ಬುದ್ಧ ಏಸುಗಳಂತೆ ಕ್ರಿಯಾಲಿಂಗ ವಿರಹಿತ !

೯) ಸಿಂಗಿರಾಜನ ಸಾಕ್ಷಿ ಕೊಟ್ಟರೂ ಬಸವಣ್ಣನಿಗೆ ಗುರುವಿದ್ದನೆಂಬುದು ತಾರ್ಕಿಕವಂತೆ ! ಇವರು ಹೇಳುವುದು ತಾತ್ತ್ವಿಕವಂತೆ ! ಇವರಿಗೆ ತಾರ್ಕಿಕ ಶಬ್ದ ಗೊತ್ತಿದೆಯಲ್ಲದೆ ಅರ್ಥ ಗೊತ್ತಿಲ್ಲ.

೧೦) ವೀರಭದ್ರನಿಗಾದರೂ, ಶಿವನಿಗಾದರೂ ಗುರು ಇರಬೇಕಲ್ಲವೆ ? ಎಂದು ಕೇಳುವ ಇವರು ಬಸವಣ್ಣನಿಗೆ ಸಾಕಾರ ಗುರುವಿಲ್ಲೆನ್ನುತ್ತಾರೆ. ಮತ್ತೊಮ್ಮೆ ಉಂಟೆನ್ನುತ್ತಾರೆ.

೧೧) 'ಸಂಗನೇ ಪತಿಯಾಗಿ, ಬಸವನೇ ಸತಿಯಾಗಿ ಕಾರುಣ್ಯಮಂ ನೀಡಲು ಅವರಿಗೆ ಸಾಮರ್ಥ್ಯ ಕೂಡಿತು. ವಿದ್ಯುತ್ ಹರಿದಾಗ ಬೆಳಕು ಹೊಮ್ಮುವಂತೆ ದೈವೀ ಕರುಣೆ ಪ್ರವಹಿಸಲು, ಅಪಾರ ಶಕ್ತಿ ಅಭಿವ್ಯಕ್ತವಾಯಿತು. ಇವರ ಈ ಅನುಚಿತ ವಾಕ್ಯದಲ್ಲಿ ಸಂಗನೇ ಗುರು, ಸಂಗನೇ ಪತಿ. ದೈವೀಕರಣೆಯೇ ದೀಕ್ಷೆ. ಅದರಿಂದಲೇ ಕರದಿಷ್ಟ ಬರುವಿಕೆ. ಇವರು ಹೀಗೆ ಹೇಳಿದ್ದೆಲ್ಲ ಸರಿ.

೧೨) ಬುದ್ಧನ ಅಂತಶ್ಚಿಂತನೆಗೂ ಬಸವಣ್ಣನ ಅಂತಶ್ಚಿಂತನೆಗೂ ಅಂತರವಿದೆಯೆಂದಾಶಯದಲ್ಲಿ ನಾವು ಹೇಳಿದ್ದರೆ, ಇದರ ಮೇಲೆ ಅರ್ಥವಿಲ್ಲದ ಅನುಚಿತ ಟೀಕೆಯನ್ನು ಬೆಳಸಿದ್ದಾರೆ. ಬಸವಣ್ಣನದು ಲೌಕಿಕವಿಡಿದ, ಸಮಾಜವಿಡಿದ ಚಿಂತನೆ, ಮತ್ತು ಕ್ರಿಯಾಶಕ್ತಿ ಅಥವಾ ಚೈತನ್ಯವಿಡಿದ ಚಿಂತನೆ ಎಂಬುದೇ ನಮ್ಮ ಆಶಯ. ಈ ಅರ್ಥವಾಗದೆ ವ್ಯರ್ಥಲಾಪಕ್ಕೆ ಇಳಿದಿದ್ದಾರೆ. ಸಾಲದ್ದಕ್ಕೆ ಇವರಿಗೆ ಇಂಗ್ಲೀಷಿನ ಹೆಮ್ಮೆ. ನಮಗೆ ಇಂಗ್ಲೀಷ ಬರುವುದಿಲ್ಲ. ಕ್ರಿಯೆಯಿಲ್ಲದೆ ಅನುಭವ ಶಕ್ತಿ ಬರಬಲ್ಲುದೆ ?

೧೩) ಬಸವಣ್ಣನವರು ನವಧರ್ಮ ದ್ರಷ್ಟಾರರಂತೆ ! ಹಾಗಿದ್ದರೆ ವೀರಶೈವದ ಬೆಳವಿಗೆಗೆ ಬಂದರೆಂದು ಏಕೆ ಎಲ್ಲ ಶರಣರು ಹೇಳಿದರು ?

೧೪) ಬಸವಣ್ಣ ವ್ಯವಹಾರದಲ್ಲಿ ಬೇಸತ್ತು ಅಂತಶ್ಚಿಂತನೆಯ ಅಭಿಲಾಷೆಯನ್ನು ಯಾವಾಗ ತೋರಿರುವನೆಂಬ ಪ್ರಜ್ಞೆಯಿಲ್ಲದೆ ಅರ್ಥವಿಲ್ಲದೆ ಅತಿಯಾಗಿ ಅನುಚಿತವಾಗಿ ವಾದ ಬೆಳಸಿದ್ದಾರೆ. ವ್ಯವಹಾರದಲ್ಲಿದ್ದು ಕ್ರಿಯಾದೀಕ್ಷೆ ಪಡೆದು ಮಂತ್ರದೀಕ್ಷೆ ಪಡೆದು ಹಸ್ತ ಮಸ್ತಕ ಸಂಯೋಗವಾಗಿ ಸದಾ ಅಂತಶ್ಚಿಂತನದಲ್ಲಿದ್ದನೆಂದು ನಾವು ಹೇಳಿದರೆ ಇದಲ್ಲ, ಬುದ್ಧನಂತೆ ಗಿಡದ ಅಥವಾ ಅರಣ್ಯದ ಅಡಿಯಲ್ಲಿದ್ದು ಮಾಡಿದ ಎಂಬರ್ಥದಲ್ಲಿ ಹೇಳಲು ಹೆಣಗಿದ್ದಾರೆ.

೧೫) ಗುರು, ಗುರುತತ್ತ್ವ ಈ ಪ್ರಜ್ಞೆಯಿಲ್ಲದೆ 'ಗುರುತತ್ತ್ವವು ಬೇಕೇ ಬೇಕು." ಎಂಬ ನಮ್ಮ ಹೇಳಿಕೆಯನ್ನು ಅನುಚಿತ ನುಡಿಗಳಿಂದ ಖಂಡಿಸಲು ಅರ್ಥವಿಲ್ಲದ ಆಲಾಪಗಳನ್ನು ಮಾಡಿದ್ದಾರೆ. ಗುರುತತ್ತ್ವ ಬೇಕೆಂಬುದು ಹಾಸ್ಯಾಸ್ಪದವಲ್ಲ; ಗುರುತತ್ತ್ವ

ಬೇಡೆಂಬ ನಿಮ್ಮ ದುರ್ವಾದ ದಿಟಕ್ಕೂ ಹಾಸ್ಯಾಸ್ಪದ. ಎಂತವರಿಗೂ ಗುರುತತ್ತ್ವ ಬೇಕು.

೧೬) ಬುದ್ಧ ಏಸುಗಳಿಗೆ ಯಾರಿಂದ ದೀಕ್ಷೆಯಿಲ್ಲ ಎಂದು ಹಿಂದೆ ಹೇಳಿ ಮುಂದೆ ಆಗಿರಬಹುದೆಂದು ಅರ್ಧಾಂಗೀಕಾರ ಮಾಡಿದ್ದಾರೆ. ಬುದ್ಧ ಬೌದ್ಧ ಧರ್ಮಸ್ಥಾಪಕ, ಕ್ರಿಸ್ತ ಕ್ರೈಸ್ತ ಮತಸ್ಥಾಪಕ, ಎನ್ನುವ ಇವರು ಬಸವಣ್ಣ ಬಸವ ಧರ್ಮವನ್ನೇಕೆ ಸ್ಥಾಪಿಸಲಿಲ್ಲ? ಎಂಬುದಕ್ಕೆ ಏನೂ ಹೇಳುವುದಿಲ್ಲ. ಲಿಂಗಾಯತ ಧರ್ಮಕ್ಕೆ ಬಸವ ಧರ್ಮ ಎಂದು ಅನ್ನಿರಿ ಎಂದು ಈಗ ಹೇಳುತ್ತಿದ್ದಾರೆ. ಈ ಅವಸ್ಥೆ ಏಕೆ ಬಂತೋ ಇವರಿಗೆ?

೧೭) ಬಸವಣ್ಣ ಮುಂಜಿಯನ್ನು ಮಾಡಿಕೊಂಡು ಜನಿವಾರ ಹಾಕಿಕೊಂಡುದನ್ನು ಒಪ್ಪಿಕೊಳ್ಳುವ ಇವರು ವೀರಶೈವ ಲಿಂಗಧಾರಣವಾದುದನ್ನು ಒಪ್ಪರು. ಮೊದಲು ಹುಟ್ಟಿದಾಗ ಶ್ರೀ ಜಾತವೇದ ಮುನಿ ಶಿವಾಚಾರ್ಯರಿಂದಾದ ಲಿಂಗಧಾರಣವನ್ನು ಅಲ್ಲಗಳೆಯಲು ಹೊರಟ ಇವರ ಸಾಹಸ ಅನುಚಿತ, ಅಸಮರ್ಥನೀಯ.

೧೮) ಸಮಾಯಾಚಾರ ವೀರಶೈವ ದೀಕ್ಷೆಯಲ್ಲೆನ್ನುತ್ತಾರೆ. ಇದಿಲ್ಲದೆ ಲಿಂಗಾಯತತ್ತ್ವವೇ ಬಾರದು. ಇದನರಿಯದ ಇವರು ದಿಟಕ್ಕೂ ಲಿಂಗಾಯತರೆ?

೧೯) ಶೈವಮುನಿಗಳು ಬಸವಣ್ಣನಿಗೆ ಸಮಯಾಚಾರ ದೀಕ್ಷೆಯನ್ನಿತ್ತರಂತೆ! ಅಂತೂ ದೀಕ್ಷೆಯನ್ನೊಪ್ಪಿದ್ದಾರೆ. ಶೈವ ಗುರುಗಳನ್ನೊಪ್ಪಿದ್ದಾರೆ; ವೀರಶೈವ ಗುರುವನ್ನೊಪ್ಪುವುದಿಲ್ಲ ಇವರು. ಸಮಯಾಚಾರ ದೀಕ್ಷೆಯನ್ನಿತ್ತವರು ಶೈವರೆಂಬುದು ಹೇಗೋ? ಇದು ಇವರ ಹೊಸ ವಿವಾದ. ಆ ಶೈವ ಮುನಿ ಯಾರೊ?

೨೦) ಬಸವ ಪ್ರಣೀತ ಲಿಂಗದೀಕ್ಷೆ ಯಾವುದೊ? ಇದು ಕಡ್ಡಾಯ ದೀಕ್ಷೆಯಂತೆ! ಮತ್ತೇಕೆ ಬಸವ ಧರ್ಮೀಯರೆನ್ನುವವರು ದೀಕ್ಷೆಯಾಗುವುದಿಲ್ಲ? ಅಲ್ಲದೆ ಆತನ ಸೋದರಳಿಯ ಬಸವ ಪ್ರಣೀತ ಲಿಂಗದೀಕ್ಷೆಯನ್ನೇಕೆ ಹೇಳದೆ, ಆಗಮ ದೀಕ್ಷೆಗಳನ್ನು ನಿರೂಪಿಸಿದ?

೨೧) "ಇಷ್ಟಲಿಂಗ ಲಾಂಛನವು ಬಸವಣ್ಣನವರ ಸ್ವತಂತ್ರ ಕೊಡುಗೆ" ಎಂದು ಶೋಧ ಮಾಡಿದ ಇವರು ಬಸವಣ್ಣನವರೇ ಬಳಸಿಕೊಂಡ ಇಷ್ಟಲಿಂಗ ಪ್ರತಿಪಾದಕ ಆಗಮ ಶ್ಲೋಕಕ್ಕೆ ಏನನ್ನೂ ಉತ್ತರ ಹೇಳದೆ ಮೌನವಾಗಿದ್ದಾರೆ.

೨೨) "ಬಸವಣ್ಣನವರು ಅನನ್ಯವಾಗಿ ಆರಾಧಿಸುತ್ತಿದ್ದ ಶಿವನ ಆಕಾರದ ಸುಗುಣ ರೂಪದಲ್ಲಿ ಕಾಣಿಸಿಕೊಂಡು ಹಸ್ತ ಮಸ್ತಕ ಸಂಯೋಗ ಮಾಡಿತು." ಇದು ಇವರ ಮುತ್ತಿನಂತಹ ವಾಕ್ಯ ಶೈಲಿ. ಇನ್ನೊಬ್ಬರ ಬರವಣಿಗೆಯನ್ನು ಅಸಹನೆಯಿಂದ ಅನುಚಿತವಾಗಿ ಟೀಕಿಸುವ ಇವರ ವಾಕ್ಯ ಸರಣಿಯಿದು. ವಾಕ್ಯವೇ ಸರಿಯಿಲ್ಲದ ಬಳಿಕ ಇವರ ಅರ್ಥ ಭಾವಗಳ ಮಾತು ಸರಿಯೆಂದು ಯಾರೂ ಒಪ್ಪರು! ಶಿವನ ಆಕಾರದ ಸಗುಣ ರೂಪದಲ್ಲಿ ಕಾಣಿಸಿಕೊಂಡವರಾರೊ? ಹೇಗೆ ಕಾಣಿಸಿಕೊಂಡರೊ? ಇವರ ಈ ಸಾಂಪ್ರದಾಯಿಕ ವಾದಕ್ಕೆ ಇವರೇ ಹೊಸ ವಿಮರ್ಶೆಯೆಂದು ಹೊಸ ಶೋಧವೆಂದು, ಐತಿಹಾಸಿಕವೆಂದು ಹೊಗಳಿಕೊಂಡಿದ್ದಾರೆ.

೨೩) ಕಂತೆಯ ಲಿಂಗಗಳೇ ಲಿಂಗಾಯತರ ಲಿಂಗಗಳಂತೆ; ಹೊಸ ಲಿಂಗಗಳಂತೆ! ಪೀಠಿಕೆಯ ಲಿಂಗಗಳು ಅಲ್ಲಂತೆ; ಪುರಾತನವಂತೆ, ಈ ಇವರ ಪುರಾತನತೆಯ ವಾದವು ನಮ್ಮದೆ ಆಗಿದೆ. ಪೀಠಿಕೆ ಸ್ಥಾವರವಂತೆ; ಕಂಥೆ ಚರವಂತೆ!

೨೪) ವೀರಶೈವಕ್ಕೆ ಇವರು ಹೇಳುವ ಲಿಂಗಾಯತಕ್ಕೆ ರುದ್ರ ಪಶುಪತಿ ಆರಾಧನವೇ ಮೂಲವೆಂಬುದನ್ನು ಇವರು ಇನ್ನೂ ಅರಿಯಬೇಕಾಗಿದೆ. ಲಿಂಗಶಬ್ದ ಮಾತ್ರ ಪೂರ್ವದಲ್ಲಿ ಬಳಕೆಯಿದ್ದಿತಂತೆ; ಲಿಂಗ ಪೂಜೆಯಿರಲಿಲ್ಲವಂತೆ! ಇಷ್ಟಲಿಂಗ ಪೂಜೆ ಇತ್ತೀಚಿನದೆಂಬುದು ಇವರ ಹೊಸ ಶೋಧನ. ಇದಕ್ಕೆ ಗಾಂಧಿ ಶಬ್ದದ ಉದಾಹರಣೆ; ಇದನ್ನು ಉಪಹರಿಸಿದರೇಕೊ? ಇದರಲ್ಲಿ ಮೂಲ ಪ್ರಾಚೀನ ಅರ್ವಾಚೀನ ಪ್ರತಿಪಾದನ ಗುರಿ ಸಾಧಿಸಿಲ್ಲ. ಸ್ಥಾವರ ಲಿಂಗ, ಇಷ್ಟಲಿಂಗಗಳ ವ್ಯತ್ಯಾಸ ಮಠಾಧೀಶರಿಗೆ ಆಗಿಲ್ಲವಂತೆ! ಈ ಘಟಾಧೀಶರಿಗಾಗಿದೆ. ಆದರಿಂದಾಗಿ ಒಂದು ಹತ್ತಂಕಿಯ ಪಟ್ಟಿಯೊಂದನ್ನು ಪ್ರಕಟಿಸಿ ಪುಟ ತುಂಬಿದ್ದಾರೆ. ಬಳಿಕ ಶೈವ–ವೀರಶೈವ–ಲಿಂಗಾಯತ ಪದಗಳ ಬಗೆಗೆ ಅರ್ಥವಿಲ್ಲದ ಜೊಳ್ಳುವಾದ ಹೂಡಿದ್ದಾರೆ. ೪-೬ ಪುಟ ಬೆಳೆಸಿದ್ದಾರೆ. ಇದರಿಂದ ಇವರ ಮೂಲ ಗುರಿ–ನಿರಿ ಸಾಧಿತವಾಗಿಲ್ಲ.

೨೫) ಸಿದ್ಧರಾಮನ ಗುರು ರೇವಣ್ಣಸಿದ್ಧ ಎಂಬುದನ್ನು ಇವರು ನಿರಾಕರಿಸಲು ಹೆಣಗಿದ್ದಾರೆ. ಆಧಾರವಿಲ್ಲೆನ್ನುತ್ತಾರೆ. ಸಿದ್ಧರಾಮ ಕಲ್ಯಾಣಕ್ಕೆ ಬಾರದ ಮುನ್ನವೆ ವೀರಶೈವನಾಗಿದ್ದನೆಂಬುದಕ್ಕೆ ಶೂನ್ಯ ಸಂಪಾದನವೆ ಸತ್ಯ ಸಾಕ್ಷಿ. ಪ್ರಭು ಸೊನ್ನಲಿಗೆಯಲ್ಲಿ ಸಿದ್ಧರಾಮನನ್ನು 'ಶಿವಯೋಗಾಮೃತ ಸೇವ್ಯ ಸಂತುಷ್ಟಯೋಗಿ' 'ಸಕಲ ನಿಷ್ಕಲ ತತ್ತ್ವಶಿರೋರತ್ನಯೋಗಿ' ಎಂದು ಕೊಂಡಾಡಿರುವುದಲ್ಲದೆ, ಸಿದ್ಧರಾಮನು ಅಂತ ರಂಗದ ಸುದ್ದಿಯ ತಿಳುಹಲು ಕೇಳಿದರೆ,

"ಆದಿಯಲ್ಲಿ ಗುರುಬೀಜವಾದ ಪಿಂಡಕ್ಕೆ ಅನಾದಿ ಎಂಬುದನೊಬ್ಬರು ತಿಳುಹ ಲುಂಟೆ? ಆದಿಕಾಯ, ಅನಾದಿಪ್ರಾಣ...." ಎಂದು ಸಿದ್ಧರಾಮನ ಸಂಸ್ಕಾರ ಸುದ್ದಿಯನ್ನು ಎತ್ತಿ ಹೇಳಿದ್ದಾನೆ. ಕಾಯದಲ್ಲಿಯೂ ಗುರುಬೀಜವಾಗಿತ್ತು, ಪ್ರಾಣದಲ್ಲಿಯೂ ಗುರುಬೀಜವಾಗಿತ್ತು ಸಿದ್ಧರಾಮ ಶಿವಯೋಗಿಗೆ ? ಆ ಗುರುಬೀಜ ಯಾರಿಂದ ?

ಶೂನ್ಯ ಸಂಪಾದನೆಯಲ್ಲಿ ಬರುವ ಗುರುಕರುಣ ಹೆಸರಿನ ೧೦ನೆಯ ಉಪದೇಶ ಮೂಲದಲ್ಲಿಲ್ಲ. ಮಧ್ಯದಲ್ಲಿ ಸೇರ್ಪಡೆಯಾಗಿದೆ ಕೃತಕವಾಗಿ ! ಇದನ್ನು ನಮ್ಮ 'ಸಂಪಾದನೆಯ ಸೊಂಪಿ'ನಲ್ಲಿ ಖಂಡಿಸಲಾಗಿದೆ. ನೋಡಿಕೊಳ್ಳಲಿ !

೨೬) ಬಸವಣ್ಣ 'ಓರ್ವ ಶೈವ ಗುರುವಿನ ಕೈಯಿಂದ ಸಮಯಾಚಾರ ಹೊಂದಿದ್ದಾರೆ.' ಎಂದು ಹೇಳಿ, ಇವರು ಬಸವಣ್ಣನನ್ನು ಶೈವನನ್ನಾಗಿಸಿದ್ದಾರೆ. ಓರ್ವ ಶೈವ ಯಾರೆಂಬುದನ್ನು ಹೇಳಿಲ್ಲ. ಇಂತಹ ಅನುಚಿತ ಬರೆಹಕ್ಕೆ ಲೆಕ್ಕವಿಲ್ಲ.

೨೭) ಗುರು ಕಾರುಣ್ಯವೆ ಬಸವಣ್ಣನಿಗಾಗಿಲ್ಲವೆಂದು ಹೇಳುವ ಇವರು, "ಸ್ವಾತಿಯ ಬಿಂದುವ ಬಯಸುವ ಚಿಪ್ಪಿನಂತೆ ಗುರು ಕಾರುಣ್ಯವ ಬಯಸುತ್ತಿದ್ದೆ, ಕೂಡಲ ಸಂಗಮದೇವಾ." ಎಂಬಿವೇ ಮೊದಲಾದ ನುಡಿಗಳನ್ನು ತಮ್ಮ ವಾದಕ್ಕೆ ಪೋಷಕವಾಗಿ ಎತ್ತಿ ಉದ್ಧರಿಸಿದ್ದಾರೆ.

೨೮) ಸದ್ಗುರು, ಶ್ರೀಗುರು ಇವು ನಿರಾಕಾರ ಪರಮಾತ್ಮ ವಾಚಕಗಳಂತೆ ! 'ಸದ್ಗುರು ಎಂಬಲ್ಲಿ ಪರಮಾತ್ಮ ಎಂಬುದನ್ನು ಬಳಸಿಕೊಂಡರೆ ತೀರಾ ಸೂಕ್ತ'ವಂತೆ ! ಬಸವಣ್ಣನಿಗೆ ಗುರುವಿದ್ದಿದ್ದರೆ ಸದ್ಗುರು, ಶ್ರೀಗುರು ಎಂದು ಏಕೆ ಹೇಳುತ್ತಿದ್ದನು ? ಇದು ಇವರ ಅನುಚಿತ ಪ್ರಶ್ನೆ ? ಅನುಚಿತವಾದ ? ಇವರು ಹೇಳುವುದೇ ಪ್ರಮಾಣ. 'ವಾಙ್ಮನಕ್ಕಗೋಚರವಾದ ಅಖಂಡಿತ ಲಿಂಗವ ತಂದು ಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ !" ಪರಮಾತ್ಮ ಪರಮಾತ್ಮನನ್ನು ತಂದುಕೊಡಲು ಸಾಧ್ಯವೆ? 'ತಂದು'ಈ ಪದದರ್ಥ ಇವರಿಗಿದೆಯೆ ? ಸದ್ಗುರು-ಶ್ರೀಗುರು ಎಂಬವಕ್ಕೆ ಪರಮಾತ್ಮ ಎಂದು ಬಳಸಿಕೊಳ್ಳಿರಿ ಎಂದು ಹೇಳಲು ಬಸವಣ್ಣ ಇವರನ್ನು ಕಳಿಸಿದ್ದಾನೆ. ಆತನಿಗೆ ಪರಮಾತ್ಮ ಎಂಬ ಪದ ಗೊತ್ತಿರಲಿಲ್ಲವೇನೊ? ಅದನ್ನು ಬಿಟ್ಟು ಈ ಪದಗಳನ್ನು ಏಕೆ ಬಳಸಿದನೊ? ಈ ವಿತಂಡ ವಾದಕ್ಕೆ ಉತ್ತರಿಸಲು ಆಗದ ಮಾತು. ಮಲಗಿದವರನ್ನು ಎಬ್ಬಿಸಬಹುದು. ಏಳಬಾರದೆಂದು ಮಲಗಿದ ಮೋಸಗಾರರನ್ನು ಎಬ್ಬಿಸಲಾಗದು.

"ವೇದ ವೇದಾಂತಗಳಿಗೆ..." "ಶ್ರೀಗುರು ಕರುಣಿಸಿ ಹಸ್ತಮಸ್ತಕ..." ಇವು ಬಸವಣ್ಣನ ದೀಕ್ಷಾಗುರುವನ್ನು ಬೋಧಿಸುವ ವಚನಗಳೇ ಹೊರತು, ಪರಮಾತ್ಮನನ್ನು ಬೋಧಿಸುವ ವಚನಗಳಲ್ಲ. ಆತ ಹೃದಯಕ್ಕೆ ಬರ ಬಲ್ಲನಲ್ಲದೆ ಕರಸ್ಥಲಕ್ಕೆ ನೇರವಾಗಿ ತಾನೇ ಬಾರ ! ಮಂತ್ರೋಪದೇಶವನ್ನು ಮಾಡ ! ಹಸ್ತಮಸ್ತಕ ಸಂಯೋಗ ಮಾಡ ! ಹಸ್ತವಿರದು ; ಶಬ್ದವಿರದು. 'ಜ್ಞಾನಗುರು' ಅಂದರೆ ಪರಮಾತ್ಮನಂತೆ ! ಕೈಗೆ ಕುರುಹಾಗಿ ಬಂದರೇನೆ ಪರಮಾತ್ಮನ ಸಾಕ್ಷಾತ್ಕಾರವೇನು ? ಒಲಿದ ಸಾಕ್ಷಾತ್ ಪರಮಾತ್ಮ ಕೈಯ ಕುರುಹಾಗಿ ಬರುವ ಇರುವ ಕಾರಣವೇನು ?

'ಸಂಗಮನಾಥ' ಎಂಬುದು ಪರಮಾತ್ಮ ವಾಚಕ ಪದವಂತೆ ! ಪರಮಾತ್ಮ ಕೂಡಲ ಎಂಬ ಹೆಸರುಳ್ಳ ಊರಿನಲ್ಲಿ ಮಾತ್ರವೇ ಇರುವನೇನು ? ಆತನ ಸಂಗಮಕ್ಕೆ ಮಾತ್ರ ನಾಥನೇನು ? 'ಕೂಡಲ ಸಂಗಮ ನಾಥ' ಈ ಶಬ್ದಗಳ ಅರ್ಥವಾಗದವರೊಡನೆ ವಾದಕ್ಕಿಳಿವುದು ಲೇಸಿನದಲ್ಲ.

'ಓಂ ನಮಶ್ಶಿವಾಯ' ಇದಕ್ಕೆ ಬಸವಣ್ಣ ವಿಶೇಷಾರ್ಥ ಮಾಡಿರುವನಂತೆ ! ಹೇಗೋ ಎಲ್ಲಿಯೋ ? ನೀವು ಅನುಚಿತವಾಗಿ ಹೇಳಿದ್ದೇ ಅರ್ಥ. ಇತರರು ಉಚಿತವಾಗಿ ಹೇಳಿದ್ದೆಲ್ಲ ನಿಮ್ಮೊಬ್ಬರಿಗೆ ಅನರ್ಥ.

೨೯) ನಮ್ಮದು ವೈಯಕ್ತಿಕ ಟೀಕೆಯಲ್ಲ. ನಿಮ್ಮ ಅಪಕ್ವ ವಾದದಲ್ಲಿ ಕಂಡು ಬಂದ ಅನನುಭವತೆಯನ್ನು ಮಾತ್ರ ಎತ್ತಿ ತೋರಿದ್ದೇವೆ. ನೀವು ನೇರವಾಗಿ ವ್ಯಕ್ತಿ ಟೀಕೆ ಮಾಡಿದ್ದೀರಿ. ಲಘುವಾಗಿ ಕಾಣಲು ಹೆಣಗಿದ್ದೀರಿ. ಇದು ನಿಮ್ಮ ಲಘುತನದ ಕೀಳರಿಮೆ ! ಸ್ಪಷ್ಟತೆಯನ್ನು ಮುಚ್ಚುವವರು ನಾವಲ್ಲ, ನೀವು. ಲೈಸನ್ಸ್ ಬೇಡೆನ್ನುವ ನೀವು ಕ. ವಿ. ವಿದ್ಯಾಲಯದ ಲೈಸನ್ಸ್ ಪಡೆದಿರುವಿರಿ. ಲೈಸನ್ಸ್ ಇಲ್ಲದೆ ವಿಚ್ಛ್ರಂಖಲೆಯಿಂದ ವರ್ತಿಸುವ ಅಭಿಲಾಷೆ ನಿಮ್ಮದು. ಮರದ ಹಣ್ಣು ಅನುಪೂರ್ವಿ ! ಮಾನವ ಕೃತಕವಾಗಿ ಮಾಡಿ ಬಣ್ಣ ತುಂಬಿದ ಕಟ್ಟಿಗೆಯ ಕೃತಕ ಹಣ್ಣು ಅನುಪೂರ್ವಿಯಲ್ಲ ತಾನೆ? ಜಾತಿ ಪದದರ್ಥವನ್ನು ತಿಳಿಯದವರು ಜಾತಿ ಎಂಬುದನ್ನು ಕುಲ ಪಂಥಗಳ ಅರ್ಥದಲ್ಲಿ ಬಳಸುವಂತೆ ಬಳಸುವ ನಿಮಗೆ ಜಾತಿ ಪದದರ್ಥ ನಿಜಕ್ಕೂ ಇಲ್ಲ. ಜಾತಿ ಬೇಡ ಎನ್ನುವಿರಿ. ಮಾನವ ಜಾತಿ ಬಿಡಲಾಗುವುದೆ? ನೀವು ಮೂಢ ನಂಬಿಕೆಯಲ್ಲಿದ್ದು ಉಳಿದವರಿಗೆ ಮೂಢನಂಬಿಕೆ ಬೇಡ ಎನ್ನುವಿರಿ. ನೀವು ಮೊದಲುಬಿಡಿ. ನಿಮ್ಮಷ್ಟು ಶೋಷಣೆ ಇನ್ನಾರೂ ಮಾಡಿಲ್ಲ. ಮಾಡುತ್ತಿಲ್ಲ. ಬಸವಣ್ಣನವರ ಗುರುವನ್ನೆ ಸಮಾನನಾಗಿ ನೋಡದವರು 'ಎಲ್ಲರೂ ದೇವ ಸೃಷ್ಟಿಯಲ್ಲಿ ಸಮಾನರು.' ಎಂದು ಹೇಳಲು ಹಕ್ಕಿಲ್ಲ. ಬಸವಣ್ಣ ನಿಮಗೊಬ್ಬರಿಗೆ ಮೀಸಲಿಲ್ಲ. ಬಸವ ಪೂರ್ವದ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲಗಳೆ ನಮ್ಮ ಆಚರಣೆಯಲ್ಲಿವೆ. ಮರಳಿ ನೀವೇನು ಹೇಳುವುದು ?

ಮಾವಿಡಿಯ ಆಶ್ವಯುಜ ಸಂಚಿಕೆಯಲ್ಲಿ ಪ್ರಕಟವಾಗಿರುವ

ಡಾ|| ಜ. ಚ. ನಿ. ಯವರ ಕೆಲ ಸಂದೇಹಗಳಿಗೆ

ಸ ಮಾ ಧಾ ನ

— ಜಗದ್ಗುರು ಮಾತೆ ಮಹಾದೇವಿ

"ಕೆಲವು ವಿಚಾರಗಳಲ್ಲಿ ವಾದ-ವಿವಾದ ಸಲ್ಲದು. ನಿಡುಮಾಮಿಡಿ ಶ್ರೀಗಳು ಮತ್ತು ಮಾತಾಜಿಯವರಂತಹವರು ಪರಸ್ಪರ ವಾದಗಳಲ್ಲಿ ತೊಡಗುವುದೆಂದರೇನು?" ಎಂದು ಕೆಲವರು ಮುಜುಗರ ಪಡುವುದುಂಟು. ಈ ಮುಜುಗರದ ಅವಶ್ಯಕತೆ ಏನಿಲ್ಲ. ಏಕೆಂದರೆ ವಾದ-ವಿವಾದ, ಚರ್ಚೆಗಳಿಂದಾಗಿ ಅನೇಕ ವಿಷಯಗಳ ಮೇಲೆ ಬೆಳಕು ಬಿದ್ದು, ಜನಸಾಮಾನ್ಯರ ಮನದಲ್ಲಿ ತುಂಬಿರುವ ಭ್ರಾಂತ್ಯಾತ್ಮಕ ನಂಬಿಕೆಗಳು ತೊಲಗುವುದುಂಟು. ಇದೇನು ವೈಯಕ್ತಿಕ ಜಗಳವಲ್ಲ, ಟೀಕೆಯಲ್ಲ, ದೋಷಾರೋಪಣೆಯಲ್ಲ, ಕೋರ್ಟ್ ಕಛೇರಿಯ ಬಡಿದಾಟವಲ್ಲ; ಬೌದ್ಧಿಕ ಚಿಂತನ. "ಅಜ್ಞಾನಿಗಳೊಡನೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳೊಡನೆ ಜಗಳವೇ ಲೇಸು?" ಎಂದಿಲ್ಲವೇ ದಾಸರು. ಅನೇಕ ಸಂದೇಹಾತ್ಮಕ ವಿಚಾರಗಳು ಹೀಗೆ ಚರ್ಚಾರಂಗಕ್ಕೆ ಬಂದು, ಮಥನಗೊಳ್ಳಬೇಕು. ಆಶ್ವೀಜ ಸಂಚಿಕೆ ಮಾವಿಡಿಯ 95ನೆಯ ಪುಟದಲ್ಲಿ ಶ್ರೀ ಮಾಲೂರು ಸೊಣ್ಣಪ್ಪ ಎಂಬುವವರು ಓದುಗರ ಓಲೆ ವಿಭಾಗದಲ್ಲಿ ಒಂದು ಪತ್ರ ಬರೆದಿದ್ದು, "ದಯಮಾಡಿ ಒಂದು ಸಮ್ಮೇಳನ ನಡೆಯಬೇಕು. ಎಲ್ಲಾ ಗುರುಪೀಠದವರು ಸೇರಬೇಕು. ಶ್ರೀ ಮಾತೆ ಮಹಾದೇವಿಯವರನ್ನು ವಿಚಾರವೇದಿಕೆಯಲ್ಲಿ ನಿಲ್ಲಿಸಿ ವಿಚಾರ ಮಾಡಬೇಕು. ಅಖಂಡ ಕರ್ನಾಟಕಕ್ಕೆ ಮೂಲಭೂತ ನಿರ್ಣಯಗಳು ಸರ್ವರಿಗೂ ಮುಟ್ಟಬೇಕು." ಎಂದಿದ್ದಾರೆ. ಇದನ್ನು ಓದಿ ನಮಗೆ ತುಂಬಾ ಹರ್ಷವಾಯಿತು. ಏಕೆಂದರೆ ಅನೇಕ ಆಚಾರ, ವಿಚಾರ, ನಂಬುಗೆಗಳು ಚರ್ಚಿಸಲ್ಪಡಲೇಬೇಕು. The religion that is afraid of science dishonors God and commits suicide (ವಿಜ್ಞಾನಕ್ಕೆ ಹೆದರುವ ಧರ್ಮ ದೇವರನ್ನು ಅಗೌರವಿಸಿದಂತಾಗುತ್ತದೆ ಮತ್ತು ತನ್ನ ಆತ್ಮಹತ್ಯೆ ತಾನೇ ಮಾಡಿಕೊಳ್ಳುತ್ತದೆ) ಎಂದು ಎಮರ್ಸನ್ ಮಹಾಶಯ ಹೇಳುವಂತೆ ಚರ್ಚೆ, ಚಿಂತನೆಗಳಿಗೆ ಹೆದರುವ ಧರ್ಮ (ಅಥವಾ ವಿಚಾರ) ಸಹ ಬಹಳ ಕಾಲ ನಿಲ್ಲದು. ಈ ಉದ್ದೇಶದಿಂದಲೇ 1977ನೇ ಇಸವಿಯಲ್ಲಿ ಒಂದು ವಿಚಾರಗೋಷ್ಠಿ ಕರೆದು ಇಂಥವೇ ಅನೇಕ ಸಮಸ್ಯೆಗಳನ್ನು ಚರ್ಚಿಸಲು ವಿಶ್ವಕಲ್ಯಾಣ ಮಿಷನ್ ಏರ್ಪಾಡು ಮಾಡಿತು. ಕಳೆದ ವರ್ಷ ಅಕ್ಟೋಬರಿನಲ್ಲಿಯೂ ಮುಕ್ತ ಚರ್ಚೆಗೆ ಒಂದು ವೇದಿಕೆ ಕಲ್ಪಿಸಲಾಗಿತ್ತು. ನಂಬಿದು

ದನ್ನು ಸತ್ಯವೆಂದು ಸಾಧಿಸುವ ದುರಾಗ್ರಹ ನಮ್ಮಲ್ಲಿಲ್ಲ; ನಿಜಸಂಗತಿ ಬೆಳಕಿಗೆ ಬರಬೇಕೆಂಬ ಪ್ರಾಮಾಣಿಕ ಪ್ರಯತ್ನವಿದೆ. ಆದ್ದರಿಂದ ಅಂಥದೊಂದು ವಿಚಾರವೇದಿಕೆಯನ್ನು ಶ್ರೀ ಜ. ಚ. ನಿ. ಯವರೇ ಆಗಲೀ, ವಿಶ್ವವಿದ್ಯಾಲಯಗಳವರೇ ಆಗಲಿ, ವೀರಶೈವ ಮಹಾಸಭಾದವರೇ ಆಗಲಿ, ಏರ್ಪಡಿಸಿದರೆ ನಾವೂ ಸೇರಿ ಇನ್ನೂ ಅನೇಕ ಸಂಶೋಧಕರು, ವಿದ್ವಾಂಸರು ತಮ್ಮ ತಮ್ಮ ನೂತನ ಅಥವಾ ಪುರಾತನ ವಿಚಾರಗಳನ್ನು ಮಂಡಿಸಲು ಸದವಕಾಶ ಸಿಕ್ಕುವುದು. ಅಂಥದೊಂದು ಅವಕಾಶ ಸಿಕ್ಕುವುದೆಂದು ಆಶಿಸೋಣ, ಸಿಗಲೆಂದು ಹಾರೈಸೋಣ.

ಆಶ್ವಯುಜ ಸಂಚಿಕೆಯಲ್ಲಿ ಪ್ರಕಟವಾದ ಸಂದೇಹಗಳ ಪರಿಶೀಲನೆ

1. ಅನಾಮಧೇಯ ಲೇಖನ ಎಂದು ಕರೆವಲ್ಲಿದೆ ಇವರ ಅನುಚಿತತೆ ಮುನ್ನೊಂದಲಿನಲ್ಲಿಯೆ!

ಡಾ|| ಜ. ಚ. ನಿಯವರ ಬರಹ ಬಹಳಷ್ಟಿದ್ದು ಎಲ್ಲೆಡೆಯಲ್ಲೂ ಕಾಣಿಸಬಾರದೆಂದು ಅವರು ಒಂದೆಡೆಯಲ್ಲಿ ಹೆಸರು ಕಾಣಿಸಿದುದು ವಿದಿತವಾಯಿತು. ಆದರೆ ಲೇಖನದ ಮೊದಲಿಗೆ ಅಥವಾ ಕಡೆಗೆ ಕೊಡಬೇಕಾದುದು ಅತ್ಯಾವಶ್ಯಕ. ಹಾಗೆ ಕೊಡದಿದ್ದರೆ ಯಾರು ಬರೆದವರೆಂಬುದನ್ನು ಊಹಿಸುವುದೆಂತು ಸಾಧ್ಯ? ಒಂದು ಎರಡಲ್ಲ ಎಷ್ಟೇ ಲೇಖನಗಳಿದ್ದರೂ ಲೇಖನಗಳ ಜೊತೆಗೆ ಲೇಖಕರ ಹೆಸರು ಮುದ್ರಿತವಾದರೆ ಯಾವುದೇ ಗೊಂದಲ ತಪ್ಪುತ್ತದೆ. ಅಂತಹ ಸತ್ಸಂಪ್ರದಾಯವನ್ನು ಶ್ರೀಗಳು ಮುಂದಾದರೂ ರೂಢಿಸಿಕೊಳ್ಳುವರಾಗಿ ನಂಬುವಾ.

2. ಪುಸ್ತಿಕೆಗಳನ್ನು ಕಳಿಸಿಯೂ ಮುಚ್ಚಿಹಾಕಿರುವ ಅಪ್ರಮಾಣಿಕತೆ

ಪುಸ್ತಿಕೆಗಳನ್ನು ಕಳಿಸಿಲ್ಲವಾಗಿ, ಅಥವಾ ಕಳಿಸಿರುವುದಾಗಿ ನಾನೆಲ್ಲಿಯೂ ಬರೆದಿಲ್ಲ. "ಇಷ್ಟಲಿಂಗಜನಕ ಬಸವಣ್ಣ" ಮತ್ತು "ಬಸವಣ್ಣನವರ ದೀಕ್ಷಾಗುರು ಯಾರು?" ಎಂಬ ಹೊತ್ತಿಗೆಗಳನ್ನು ಕರ್ನಾಟಕದ ಸುಮಾರು 500ಜನ ಮಠಾಧೀಶರಿಗೆ ನಾವು ಕಳುಹಿಸಿದ್ದೆವು.

ಶ್ರೀ ಜ. ಚ. ನಿಯವರಿಗೆ ಕಳಿಸಿರುವುದೂ ಗೊತ್ತು. ಆ ಹೊತ್ತಿಗೆಗಳಲ್ಲಿ ಪ್ರಕಾಶಕರ, ಲೇಖಕರ ಹೆಸರುಗಳೂ ಇವೆ. ಇವೇನು ಅನಾಮಧೇಯ ಕೃತಿಗಳಲ್ಲ. ಪ್ರಜಾವಾಣಿಯ ಜಾಹಿಕಾತು ಲೇಖನವನ್ನು ನಾನು ಉಲ್ಲೇಖಿಸಿದ ಉದ್ದೇಶ

ವಿಷ್ಟೇ, ಆ ಜಾಹಿರಾತು ಕೊಟ್ಟನಂತರ ಅದರಲ್ಲಿ ಸೂತ್ರರೂಪವಾಗಿ ಬಂದಿದ್ದ ಕೆಲವು ವಿಚಾರಗಳ ಮೇಲೆ ಅನೇಕ ಸಂದೇಹವೆತ್ತಿ ಅನೇಕರು ಲೇಖನಗಳನ್ನು ಬರೆದರು. ಅದೇ ರೀತಿ ಜ. ಚ. ನಿಯವರು ಇದೀಗ ಕೆಲವು ಸಂದೇಹಗಳನ್ನು ಎತ್ತಿದ್ದಾರೆ ಎಂಬುದನ್ನು ಬರೆಯುವುದಾಗಿದ್ದಿತು. ಇವರು ಆಕ್ಷೇಪಗಳನ್ನು ಅಥವಾ ಸಂದೇಹಗಳನ್ನು ಮುಂದುಮಾಡಲು ಜಾಹಿರಾತೇನು? ಪುಸ್ತಕಗಳೇನು? ಯಾವುದರಿಂದ ಆಯ್ದುಕೊಂಡರೂ ಅಷ್ಟೇ! ನಮ್ಮ ನಿರ್ದಿಷ್ಟವಾದ ವಿಚಾರಗಳು—ಆ ಕೃತಿಗಳಲ್ಲಿ ಉಕ್ತವಾಗಿವೆ.

3. **"ಬಸವಣ್ಣನವರಿಗೆ ದೀಕ್ಷಾಗುರುಗಳು ಯಾರೂ ಇಲ್ಲ"** ಎಂಬ ನಮ್ಮ ವಿಚಾರಗಳನ್ನು ಜ. ಚ. ನಿಯವರು ಯಾವುಗೇ ಆಧಾರ ನೀಡದೆ ನಿರಾಕರಿಸಿರುವುದೇ ಅಲ್ಲದೆ, ಯಾವ ವಚನಗಳಲ್ಲಿಯೂ ಉಲ್ಲೇಖವಾಗದ ಜಾತವೇದ ಮುನಿಗಳನ್ನು ಅನಾವಶ್ಯಕವಾಗಿ ಲಿಂಗಕಟ್ಟಲು ಕರೆತಂದಿದ್ದಾರೆ.

(ಅ) ಬಸವಣ್ಣನವರ ಆತ್ಮಕಥೆಯಂತಿಹ ವಚನಗಳಲ್ಲಿ ಜಾತವೇದ ಮುನಿಗಳ ಹೆಸರಿನ ಉಲ್ಲೇಖವಿಲ್ಲ.

(ಆ) ಬಸವಣ್ಣನವರನ್ನು ಕುರಿತು ಇನ್ನಿತರ ಶರಣರು ಹೇಳಿದ ಯಾವ ವಚನದಲ್ಲೂ ಆ ಹೆಸರಿನ ಉಲ್ಲೇಖವಿಲ್ಲ.

ನಿನಗೆ ನೀನೇ ಕರ್ತನು ಬಸವ
ಎನಗೆ ನೀನೇ ಕರ್ತನು ಬಸವ
ನಾ ಮಾಡುವ ಭಕ್ತಿಗೆ ನೀನೇ ಕರ್ತನು ಬಸವಾ
ಕರುಣಿ ಕಪಿಲಸಿದ್ಧ ಮಲ್ಲಿನಾಥಯ್ಯ.

— ಸಿದ್ಧರಾಮೇಶ್ವರರು

ಬಿತ್ತದ ಬೀಜದ ಫಲವು ವಿಪರೀತ ಚಾರಿತ್ರ್ಯ ನೋಡಾ!
ತನ್ನಲ್ಲಿ ತಾನೆಯಾಗಿ ಆಗಮವನೇರಿದಾತನೆ
ಸ್ವಯಂಕೃತ ಸಹಜ
ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನು.

— ಚನ್ನಬಸವಣ್ಣನವರು

"ನಿನಗೆ ನೀನೇ ಕರ್ತನು ಬಸವಾ." "ಬಿತ್ತದ ಬೀಜದ ಫಲವು ವಿಪರೀತ ಚಾರಿತ್ರ್ಯ ನೋಡಾ, ಸ್ವಯಂಕೃತ (self-made) ಸಹಜ" ಎಂಬ ಈ ಮಾತುಗಳು ವಿಶೇಷ ವಿವರವೊಂದನ್ನು ನೀಡುತ್ತವೆ.

(ಇ) ಬಸವಣ್ಣನವರು ಮತ್ತು ಅವರ ಸಮಕಾಲೀನರ ನಂತರದ ಅಧಿಕೃತ ವ್ಯಕ್ತಿಯೆಂದರೆ ಹರಿಹರ ಮಹಾಕವಿ. ಅವನು ಸಹ ಯಾವುದೇ ವ್ಯಕ್ತಿಯಿಂದ ಬಸವಣ್ಣನವರಿಗೆ ಅನುಗ್ರಹವಾಯಿತೆಂಬ ಬಗ್ಗೆ ಹೇಳಿಲ್ಲ. ಹುಟ್ಟಿದ ಮಗುವಿಗೆ ಲಿಂಗಧಾರಣೆಯಾಗಿಲ್ಲ. ನಂತರ ವಿಶೇಷ ಅನುಗ್ರಹವಾಯಿತು, ಅದು ಸಂಗಮನಾಥನಿಂದಲೇ, ನೇರವಾಗಿ!

(ಈ) ಸಿಂಗಿರಾಜನ ಬಸವ ಪುರಾಣದಲ್ಲಿ ಮಗುವನ್ನು ಅನುಗ್ರಹಿಸಲು ಬಂದ ವ್ಯಕ್ತಿಗೇ ಲಿಂಗವಿಲ್ಲ. "ಅವನ ಅಭಿಮತದಂತೆ ಜಾತವೇದಿಗಳೊಬ್ಬ ಮಹಾಯೋಗಿಗಳು ಮಗುವನ್ನು ತೋರಲು ಅವರು ಓಂ ನಮಃ ಶಿವಾಯ ಎನುತ ಶ್ರೀ ಮದಣಿಮಾದಿಗಳ ಸಿದ್ಧಿ ತ್ರಿಪುಂಡ್ರವನ್ನಿಡುವರು. ಜಡೆ, ರುದ್ರಾಕ್ಷಿ, ಭಸಿತ, ಯೋಗವಟ್ಟೆ, ಅಕ್ಷಮಾಲೆಗಳನ್ನು ಹೇಳಿದ ಕವಿ ಆತನಿಗೆ ಇಷ್ಟಲಿಂಗವಿದ್ದುದನ್ನು ಸೂಚಿಸಿದಂತಿಲ್ಲ." (ಡಾ. ಆರ್. ಸಿ. ಹಿರೇಮಠ, ಪುಟ 68. ಬಸವಪುರಾಣ).

ಸಿಂಗಿರಾಜನ ಜಾತವೇದ ಮುನಿ ಮಾದಲಾಂಬಿಕೆಗೆ ಹೇಳುವನು :

"ಇಷ್ಟಕೃತಾರ್ಥ ಬಂದೊಲಿದಿತ್ತೆವಾಗಿ ತ
ನ್ನಿಷ್ಟಲಿಂಗಮದಕ್ಕು ಈ ಲಿಂಗಮಂ ಸಿಂಹ
ವಿಷ್ಟರದೊಳಿಟ್ಟರ್ಚಿಸರ್ಘ್ಯ ಪಾದ್ಯಾಚಮನ ಜಲಕ್ರಮವಲ್ಲದುದನು.

ಅದೇ ಸಿಂಗಿರಾಜನ ಕಾವ್ಯದಲ್ಲಿ ಮತ್ತೊಂದು ಪ್ರಸಂಗ ಬರುತ್ತದೆ. ಬಾಲಕ ಬಸವಣ್ಣ ತೀರಾ ವಿಚಾರವಾದಿಯಾಗಿ ಸಂಪ್ರದಾಯವನ್ನು ಪ್ರಶ್ನಿಸುತ್ತಿದ್ದುದರಿಂದ ಅನೇಕರು ಅಸಹನೆ ತಾಳಿದ್ದರು. ಒಮ್ಮೆ ಬಾಲಕರೆಲ್ಲ ಈಜಾಡುವಾಗ ಓರ್ವನು ಜಿಗಿಯುವಾಗ ಏಟು ಬಿದ್ದು ಸಾಯುವನು. ಆಗ ಬಸವಣ್ಣನ ಮೇಲೆ ಸಹಪಾಠಿಯನ್ನು ಕೊಂದ ಆರೋಪ ಬಂದಾಗ, ತೀವ್ರವಾಗಿ ನೊಂದುಕೊಂಡ ಅವನು, ಸರಸರನೆ ಮನೆಗೆ ಬಂದು, **"ತನ್ನಯ ಲಿಂಗಮಂ ಕೊಂಡು,"** ತಾಯಿತಂದೆಗಳಿಗೆ ಹೇಳಿ, ಮನೆ ಬಿಡುವನು. (ಸಿಂಗಿರಾಜ ಪುರಾಣ ಸಂ. 5, ಪದ್ಯ 94) ಲಿಂಗವನ್ನು ತರಲು ಮನೆಗೆ ಹೋದನೆಂಬುದು, "ಸಿಂಹವಿಷ್ಟರದೊಳಿಟ್ಟು ಅರ್ಚಿಸುತ್ತಿದ್ದ ಸ್ಥಾವರಲಿಂಗವನ್ನು" ಎಂಬುದನ್ನು ಸ್ಪಷ್ಟವಾಗಿ ಹೇಳುವುದಲ್ಲದೆ, ಬಸವಣ್ಣನು ಅಂಗದ ಮೇಲೆ ಲಿಂಗವನ್ನು ಧರಿಸಿರಲಿಲ್ಲ ಎಂಬುದನ್ನು ನಿರ್ವಿವಾದವಾಗಿ ಹೇಳುವುದು. ಸಿಂಹಾಸನದಲ್ಲಿ ತನ್ನಿಂದ ದೂರ ವಿಟ್ಟು ಪೂಜಿಸುವ ಸ್ಥಾವರ (ಶಿವ) ಲಿಂಗಪೂಜೆ ಬಹಳ ಹಿಂದಿನಿಂದಲೂ ಬಳಕೆಯಲ್ಲಿತ್ತು. ಹೀಗೆ ಜಾತವೇದ ಮುನಿಯನ್ನು ಪ್ರಸ್ತಾಪಿಸುವ ಅಧಿಕೃತ ಕಾವ್ಯ

ಸಿಂಗಿರಾಜ ಪುರಾಣವೇ ಸ್ಥಾವರಲಿಂಗವನ್ನು ಕುರಿತು ಹೇಳಿದಾಗ ಇನ್ನು ಬಸವಣ್ಣನವರ ಇಷ್ಟಲಿಂಗಧಾರಣೆಯನ್ನು ಸಮರ್ಥಿಸಲು ಏನು ಉಳಿಯುವುದು? ಸಿಂಹವಿಷ್ಟರದೊಳಿಟ್ಟು (ಬೇರೊಂದು ಪೀಠ, ಸಿಂಹಾಸನ) ಅರ್ಚಿಸುವ ಲಿಂಗ ಸ್ಥಾವರಲಿಂಗವೇ ವಿನಾ ಬಸವೋಕ್ತ ಇಷ್ಟಲಿಂಗವಲ್ಲ. ಇಂದಿಗೂ ಶೈವ ಗುರುಗಳು ತಮ್ಮಿಂದ ಭಿನ್ನವಾಗಿ ಇದಿರಿಟ್ಟು ಸ್ಥಾವರಲಿಂಗಗಳನ್ನು ಪೂಜಿಸುವುದನ್ನು ಕಾಣುತ್ತೇವೆ.

(ಉ) ಭೀಮಕವಿಯ ವರ್ಣನೆಯಂತೂ ವಿಲಕ್ಷಣವಿದ್ದು, ಪವಾಡದೋಪಾದಿಯಲ್ಲಿದೆ.

> ಪ್ರೀತಿಯಲಿ ಪುತ್ರನು ಕರಾಂಭೋ
> ಜಾತ ಮುಕುಳಿತನಾಗಿ ಮೆಲ್ಲನೆ
> ಮಾತೆಯುದರದೊಳುದಯಿಸಲು ಅರ್ಥೋದಯದೊಳಾಗ
> ಆ ತನಯನೊಳಗಿಹ ಶಿವಂ ವಿ
> ಖ್ಯಾತಗುರ್ವಾಕಾರಮಂ ತಾ
> ಳ್ದಾತನಂಗದ ಮೇಲೆ ಲಿಂಗಾಸಂಗಮಂ ಮಾಡಿ.

ಅರ್ಥೋದಯದಲ್ಲಿ ಮಗು ಹುಟ್ಟುತ್ತದೆ. ಆ **ಮಗುವಿನೊಳಗೇ ಇದ್ದ ಶಿವನು** ಗುರುವಿನಾಕಾರಮಂ ತಾಳ್ದು ಆತನ ಅಂಗದ ಮೇಲೆ ಲಿಂಗವನ್ನು ಧರಿಸುತ್ತಾನೆ. ಈ ತಾಪಸಿ ಎಲ್ಲಿಂದ ಬಂದ ಎಂದು ಆಶ್ಚರ್ಯಪಡುತ್ತಾರೆಲ್ಲರು. ಅವನು ಇದ್ದುದು ಹೇಗೆ?

> ಜಡೆ ಮುಡಿಯುನಳವಡಿಸಿ ತೋರುವ
> ಮೃಡನ ಸೆಜ್ಜೆ ಸಿತಾಂಬರದ ಚೆಲು
> ವುಡಿಗೆ ಹೊದಿದಿಹ ರತ್ನಗಂಬಳಿ ತಾಮ್ರಕುಂಡಲವು
> ತೊಡಿಗೆ ರುದ್ರಾಕ್ಷಿಗಳ ಬೆಳುಗೊಡೆ
> ಹಿಡಿದ ದಂಡಂ ಭಸಿತಲೇಪನ
> ದೊಡಲು ನಡುನೊಸಲೊಳು ತ್ರಿಪುಂಡ್ರದ ರೇಖೆಗಳು ಮೆರೆಯೆ।

ಜಡೆ, ಮುಡಿಯಿದೆ. ಮೃಡನ ಸೆಜ್ಜೆಯೋಪಾದಿಯಲ್ಲಿ ಅವನು ಮೆರೆಯುತ್ತಿದ್ದಾನೆ. ರತ್ನಗಂಬಳಿ, ತಾಮ್ರಕುಂಡಲ, ರುದ್ರಾಕ್ಷಿ ಇವೆ. ಆದರೆ ಅವನ ಮೈಮೇಲೆ ಲಿಂಗಾಯತ ಧರ್ಮದ ಮುಖ್ಯ ಲಾಂಛನವಾದ ಇಷ್ಟಲಿಂಗವೇ ಇಲ್ಲ.

ಭೀಮಕವಿ ತುಂಬಾ ಕಷ್ಟಪಟ್ಟು ಮಗುವಿಗೆ ಲಿಂಗಧಾರಣೆ ಮಾಡಿಸುತ್ತಾನೆ. ಏಕೆ? ಬಸವಣ್ಣನವರು ಲಿಂಗಾಯತ ಧರ್ಮವನ್ನು ಸಂಸ್ಥಾಪಿಸಿ, ಇಷ್ಟಲಿಂಗ

ಲಾಂಛನವನ್ನು ಹೊಸದಾಗಿ ಕೊಟ್ಟು, ವೈದಿಕ ಧರ್ಮವು ವಿಧಿಸಿದ್ದ ಜನನ ಸೂತಕ ತೊಡೆಯಲೋಸುಗ ಮಗುವಿಗೆ ಲಿಂಗಧಾರಣೆ ಮಾಡುವ ಸಂಪ್ರದಾಯವನ್ನು ಬಳಕೆಗೆ ತಂದರು. ಇದು ಪಾಲ್ಕುರಿಕೆ ಸೋಮನಾಥ ಮತ್ತು ಭೀಮಕವಿಗಳ ಕಾಲಕ್ಕೆ ಬಸವ ಧರ್ಮಾನುಯಾಯಿಗಳಲ್ಲಿ ಪಾಲನೆಯಲ್ಲಿತ್ತು. ಅಂಥ ಆಚರಣೆಯನ್ನು ಕಂಡ ಕವಿದ್ವಯರು ಆ ಆಚರಣೆಯನ್ನು, ಬಸವಣ್ಣನು ಕೂಸಾಗಿದ್ದಾಗಲೇ ಪ್ರಚಲಿತವಿದ್ದುದಾಗಿ ಬರೆದಿದ್ದಾರೆ. ಇತ್ತೀಚೆಗೆ ಐ. ಬಿ. ಎಚ್‌ನವರು ಪ್ರಕಟಿಸಿರುವ ಬಸವಣ್ಣನವರ ಚಿತ್ರ ಕಥೆಯಲ್ಲಿ ಮಾದಲಾಂಬಿಕೆ, ನಾಗಲಾಂಬಿಕೆಯರು ದೇವಸ್ಥಾನಕ್ಕೆ ಹೋಗುವ ಚಿತ್ರ ಇದೆ. ಅವರು ಉಭಯತರೂ ಹಣೆಯ ಮೇಲೆ ಭಸ್ಮ ಧರಿಸಿದ್ದಾರೆ. ಚಿತ್ರ ಬರೆಯುವ ಕಲಾವಿದನಿಗಾಗಲೀ, ಅದನ್ನು ಪ್ರಕಟಿಸಿದವರಿಗಾಗಲೀ ಬ್ರಾಹ್ಮಣ ಸ್ತ್ರೀಯರು ವಿಭೂತಿ (ಮೂರು ಎಳೆ) ಧರಿಸರು ಎಂಬುದು ತಿಳಿದಿಲ್ಲ. ಲಿಂಗಾಯತ ಸ್ತ್ರೀಯರು ಮತ್ತು ಒಕ್ಕಲಿಗ, ಕುರುಬ, ಹರಿಜನ–ಈ ಎಲ್ಲ ಸ್ತ್ರೀಯರೂ ವಿಭೂತಿ ಧರಿಸುತ್ತಾರೆ. ಇದನ್ನು ಕಂಡಿರುವ ಆಧುನಿಕ ಲೇಖಕರು, ಕಲಾವಿದರು ಹನ್ನೆರಡನೆ ಶತಮಾನದ ಬ್ರಾಹ್ಮಣ ಸ್ತ್ರೀಯರು ಧರಿಸುತ್ತಾರೆಂದು ತಿಳಿದರೆ, ಅದು ಅಸಂಬದ್ಧ. ಅದೇ ರೀತಿ ಭೀಮಕವಿ, ಸೋಮನಾಥರೂ ಕಷ್ಟಪಟ್ಟು, '**ಆ ಮಗುವಿನೊಳಗೇ ಇದ್ದ ಶಿವನು ಆಕಾರತಾಳಿ ಲಿಂಗಾಸಂಗಮಂ ಮಾಡಿದ**' ಎನ್ನುತ್ತಾರೆ. ಆ ಮುನಿಯನ್ನು ಅವರು ಜಾತವೇದ ಮುನಿಗಳೆಂದು ಉಲ್ಲೇಖಿಸಿಲ್ಲ.

> ಹಿಂಗದನುದಿನವಿಹೆನು ಕಪ್ಪಡಿ
> ಸಂಗಮೇಶ್ವರದಲ್ಲಿ ಕೂಡಲ
> **ಸಂಗಮೇಶನ ಪೆಸರು ನಾವೆಮಗಲ್ಲಿ ತಾನಿರವು**
> ತಂಗಿ ಕೇಳಿವನೆನ್ನ ಮಗನೊಂ
> ದಂಗದಿಂ ಮಾನುಷದಭವ ವೀ
> ತಂಗೆ ನಿನ್ನೊಳು ಜನಿಸಲಾಯಿತು ಲೋಕಹಿತಕಾಗಿ. ||28||

"ಯಾವಾಗಲೂ ನಾನು ಕಪ್ಪಡಿ ಸಂಗಮದಲ್ಲಿರುವೆ. ಕೂಡಲಸಂಗಮೇಶನು ಎಂಬ ಹೆಸರು ನನಗೆ, ನಾವೆಲ್ಲಿ ಇರುವೆವೋ ಅಲ್ಲಿಯೇ ನಮ್ಮ ಠಾವು. ತಂಗಿ, ಕೇಳು ಇವನು ಎನ್ನ ಮಗ. ಇನ್ನೊಂದು ದೃಷ್ಟಿಯಿಂದ ಮನುಷ್ಯ ದೇಹದಲ್ಲಿರುವ ಅಭವ. ಲೋಕದ ಕಲ್ಯಾಣಕ್ಕಾಗಿ ನಿಮಿತ್ತ ಮಾತ್ರವಾಗಿ ನಿನ್ನಲ್ಲಿ ಹುಟ್ಟಿಸಲಾಗಿದೆ." ಇಷ್ಟು ಹೇಳಿ ಆ ವ್ಯಕ್ತಿಯು ಅದೃಶ್ಯನಾದನಂತೆ! ಭೀಮಕವಿಯ ಪ್ರಕಾರ ಈ ಮುನಿ ಜಾತವೇದಿಯಲ್ಲ. ಸಾಕ್ಷಾತ್ ದೇವನು. 'ನಾವೆಲ್ಲಿರುವೆವೋ ಅದೇ ನಮ್ಮ ಠಾವು' ಎಂಬ ಮಾತು ಸರ್ವವ್ಯಾಪಕ ದೇವ ಚೇತನವನ್ನು ಕುರಿತು ಹೇಳುತ್ತದೆ. ಭೀಮಕವಿಯ

ವಿವರಣೆಯು ಸಹ, 'ಆ ತನಯನೊಳಗಿದ್ದ ಶಿವನೇ ಗುರುವಿನ ಆಕಾರವಂ ತಾಳ್ದು, ಲಿಂಗಾಸಂಗಮಂ ಮಾಡಿದ' ಎಂಬುದು ಸಹ ಇಷ್ಟಲಿಂಗವನ್ನು ಕೊಟ್ಟವ' ಅದನ್ನು ಧರಿಸುವ ಪದ್ಧತಿ ಕಲಿಸಿದವ ಬಸವಣ್ಣ ಎಂಬುದನ್ನು ಸೂಚಿಸುತ್ತದೆ.

ಹೀಗೆ ಸಿಂಗಿರಾಜನ ಜಾತವೇದ ಮುನಿ ಸಿಂಹವಿಷ್ಟರದೊಳಿಟ್ಟು ಅರ್ಚಿಸುವದನ್ನು ಮಾದಲಾಂಬಿಕೆಗೆ ಹೇಳಿದರೆ (ಅವನಿಗೆ ಸ್ವತಃ ಲಿಂಗಧಾರಣೆ ಇದ್ದಿಲ್ಲ), ಭೀಮ ಕವಿಯ ಸಂಗಮೇಶ್ವರನು 'ಬಸವಣ್ಣನೊಳಗೇ ಇದ್ದ ಶಿವಕಳೆ !'ಯಲ್ಲದೆ ಬೇರಲ್ಲ.

ಒಂದು ವೇಳೆ ಮಾದರಸನು ತನ್ನ ಮಗುವಿಗೆ ಲಿಂಗಧಾರಣೆ ಮಾಡಿಸಿದ್ದೇ ಆದರೆ ಮತ್ತೊಮ್ಮೆ ಉಪನಯನ ಮಾಡಲು ಏಕೆ ಒತ್ತಾಯಿಸುತ್ತಿದ್ದ ? ಅಂದಾಗ ಬಸವಣ್ಣನವರು ಜನ್ನಿವಾರ ಹಾಕಲು ನಿರಾಕರಿಸುವ ಅಥವಾ ಹಾಕಿದ್ದರೆ ತೆಗೆಯುವ ಪ್ರಸಂಗ ಏಕೆ ಬರುತ್ತಿತ್ತು ? ಈ ಹೊತ್ತು ಯಾರಾದರೂ ಲಿಂಗಾಯತರು ಕೂಸಿಗೆ ಲಿಂಗಧಾರಣೆ ಮಾಡಿಸಿ, ನಂತರ ಜನ್ನಿವಾರ ಹಾಕುವುದುಂಟೆ ? ಆರಾಧ್ಯ ಬ್ರಾಹ್ಮಣರಲ್ಲಿ ಜನ್ನಿವಾರ ಮತ್ತು ಲಿಂಗಗಳನ್ನು ಕಟ್ಟುವ ಸಂಪ್ರದಾಯವಿದೆ. ಆ ಸಂಪ್ರದಾಯದ ಪ್ರಕಾರ ಮೊದಲು ಜನ್ನಿವಾರ ಕಟ್ಟಿ, ಅದರ ತುದಿಗೆ ಒಂದು ಸ್ಥಾವರಲಿಂಗವನ್ನು ಬಟ್ಟೆಯಲ್ಲಿ ಧರಿಸುವ ಪದ್ಧತಿ ಇದೆ. ಈ ಎರಡೂ ಸಂಸ್ಕಾರಗಳಲ್ಲಿ ಜನ್ನಿವಾರಧಾರಣೆ ಮೊದಲಿಗೆ, ಲಿಂಗಧಾರಣೆ ನಂತರ. ಈ ದೃಷ್ಟಿಯಿಂದಲೂ ಬಸವ ಶಿಶುವಿಗೆ ಲಿಂಗಧಾರಣೆಯಾಗಿರುವ ಸಾಧ್ಯತೆ ಇಲ್ಲವೇ ಇಲ್ಲ. ಆಗಿದ್ದಿದ್ದರೆ ಉಪನಯನಕ್ಕೆ ಮಾದರಸ ಒತ್ತಾಯಿಸುತ್ತಿರಲಿಲ್ಲ. ತನ್ನ ಮತಾಚಾರದ ಪ್ರಕಾರ ಮಗುವಿಗೆ ಲಿಂಗಧಾರಣೆ ಮಾಡಿಸುವ ಸಂಪ್ರದಾಯವಿರದಿದ್ದರೆ, ಅಷ್ಟು ಸುಲಭವಾಗಿ ಯಾವುದೇ ಮುನಿ ಬಂದು ಮಾಡಹೋದರೆ ಸಂಪ್ರದಾಯಸ್ಥ ವೈದಿಕನಾದ ಮಾದರಸನು ಒಪ್ಪುತ್ತಿದ್ದನೇ ? ಹೀಗಾಗಿ ಬಸವಣ್ಣನು ನವಜಾತ ಶಿಶುವಿದ್ದಾಗ ಯಾರಿಂದಲೂ ಲಿಂಗಧಾರಣೆಯಾಗಿಲ್ಲ. ಹುಟ್ಟಿದ ಮಗು ಕಣ್ತೆರೆಯದೆ, ಬಾಯ್ದೆರೆಯದೆ ಇದ್ದಾಗ ಓರ್ವ ಯೋಗಿ ಬಂದು ಭಸ್ಮವನ್ನು ಧರಿಸಿ, ಮಂತ್ರವನ್ನು ಉಚ್ಚರಿಸಿ ಆಶೀರ್ವದಿಸಿದುದು ಮಾತ್ರ ದಿಟ.

ಹಾಗಾದರೆ ನಂತರದಲ್ಲಿಯಾದರೂ ವ್ಯಕ್ತಿ ಗುರುವಿನಿಂದ ಆಗಿದೆಯೆ ?

ಮಗುವಿಗೆ ಜನ್ಮಿಸಿದಾಗ ಆಗುವ "ಲಿಂಗಧಾರಣೆ"ಯ ವಿಷಯದಲ್ಲಿ ದೀರ್ಘ ಮತ್ತು ಸ್ಪಷ್ಟ ಚರ್ಚೆಯಾಯಿತು. ಆಗಲಂತೂ ಬಸವಣ್ಣನಿಗೆ ಆಗಲಿಲ್ಲ. ಬಾಲಕ ಬಾಲಕಿಯರಿಗೆ ಮಾಡುವ, ಇಂದು ಪ್ರಚಲಿತವಿರುವ, ದೀಕ್ಷೆಯಾದರೂ ವ್ಯಕ್ತಿ ಗುರುವಿನಿಂದ ಬಸವಣ್ಣನಿಗೆ ಆಯಿತೆ ?

1. ಸಿಂಗಿರಾಜ ಆ ವಿಷಯವನ್ನು ಪ್ರಸ್ತಾಪಿಸಿಯೇ ಇಲ್ಲ.

2. ಹರಿಹರನ ಪ್ರಕಾರವಂತೂ ಸಂಗಮನಾಥನೇ (ಸಾಕ್ಷಾತ್ ಪರಮಾತ್ಮನೇ !) ಬಸವಣ್ಣನ ದೀಕ್ಷಾಗುರು. "ಸಂಗಂ ಪತಿಯಾಗಿ ಬಸವಂ ಸತಿಯಾಗಿ" ನೇರವಾದ ಅನುಗ್ರಹವಾಗಿದೆ.

"ಇಷ್ಟಲಿಂಗವು ಬಸವಣ್ಣನ ಹೃತ್ಕಮಳದೊಳು ಬೆಳೆದ ಲಿಂಗ", "ಧ್ಯಾನಂ ಬಲಿದು ಶಿವಲಿಂಗಂ ಮೂರ್ತಿಗೊಂಡಿದೆ." "ಹೃದಯ ಕಮಳಮನೊತ್ತರಿಸಿ ಪೊರಮಟ್ಟು ಬಂದ ಲಿಂಗವದು."

ಶ್ರೀ ಜ. ಚ. ನಿಯವರ ಲೇಖನಕ್ಕೆ ಉತ್ತರಿಸುವ ಪ್ರಯತ್ನ ಮಾಡುತ್ತ ಭೀಮ ಕವಿ ಏನು ಹೇಳಿದ್ದಾನೆಂದು ನೋಡಿದರೆ ನಮಗೇ ಆಶ್ಚರ್ಯವನ್ನುಂಟು ಮಾಡುವ, ಹರಿಹರನ ಸಗುಣ ಸಾಕ್ಷಾತ್ಕಾರವನ್ನು ಪುಷ್ಟೀಕರಿಸುವ ಪದ್ಯ ಸಿಕ್ಕಬೇಕೆ ?

ಉಪನಯನಕ್ಕೆ ಬಂದಿದ್ದ ಬಂಧು ಬಳಗದವರಲ್ಲಿದ್ದ ಸೋದರಮಾವ ಗಂಗಾಂಬೆಯನ್ನು ಕೊಟ್ಟು ಮದುವೆ ಮಾಡಲು ಇಚ್ಛಿಸಿದಾಗ, ಗುರುವಿನ ಆಶೀರ್ವಾದ ಪಡೆಯಲು ಸಂಗಮಕ್ಕೆ ಬಸವಣ್ಣ ಬರುವನು. ದೇವಾಲಯಕ್ಕೆ ಹೋಗುವನು. ಆಗ ಸಂಗಮೇಶ್ವರನೇ ತಪಸ್ವಿಯ ವೇಷದಲ್ಲಿ ಬಂದು ಬಸವೇಶ್ವರನಿಗೆ ಉಪದೇಶ ಮಾಡುವನು.

> "ಆಗ ಮುನ್ನಿನ ವೇಷವೊಪ್ಪಿರ
> ಲಾಗಿ ಸಂಗಮದೇವ ದೇವನು
> ದೇಗುಲದ ಬಾಗಿಲ ಹೊರಗೆ ತಲೆದೋರಿದನು ಬಂದು." (ಪದ್ಯ 57)

ಮುನಿಯ ವೇಷದಲ್ಲಿ ಸಂಗಮನಾಥನು ಅನುಗ್ರಹಿಸಿ, ಬಸವಣ್ಣನನ್ನು ಆಲಂಗಿಸಿಕೊಂಡು ಮೈದಡವಿ ಮತ್ತೆ ಗರ್ಭಗುಡಿಯಲ್ಲೇ ಅದೃಶ್ಯನಾಗುವನು.

> ಎಂದು ಮೃದುಮಧುರಾಂಚಿತೋಕ್ತಿಗ
> ಳಿಂದ ಬೋಧಿಸಿ ತಕ್ಕವಿಸಿ ತಾಂ
> ಕಂದನಂ ಹೊಡವಡಿಸಿಕೊಂಡು ಮಹಾತ್ಮನಾಕ್ಷಣದೆ
> ಎಂದಿನಾಕೃತಿಯಂ ಧರಿಸಿ ನಿಜ
> ಮಂದಿರದೊಳಿಪ್ಪೆಡೆಯೊಳಚ್ಚರಿ
> ವೊಂದಿ ಪುರಜನವೆಲ್ಲರುಂ ತಮತಮಗೆ ಬೆರಗಾಗಿ ॥ ಪದ್ಯ 68

ಈ ಯೋಗಿ ಯಾರು ? ಇವನನ್ನು ಈವರೆಗೂ ಕಂಡಿರಲಿಲ್ಲವಲ್ಲಾ ? ಸಂಗಮದೇವನೇ

ಮನವೊಸದು ತಾಪಸರೂಪವಂ ಧರಿಸಿ ಬಂದು ಹೋದನೆ? ಎಂಗು ಭಕ್ತರೆಲ್ಲ ಬೆರಗಾಗಿ ನೋಡುವರು. (69)

ಹೀಗೆ ಭೀಮಕವಿ (ಪಾಲ್ಕುರಿಕೆ ಸೋಮನಾಥಾರಾಧ್ಯನೂ ಸಹ)ಯು ಸಂಗಮನಾಥನನ್ನು ನೇರವಾಗಿ ಅನುಗ್ರಹಿಸಲು ತಂದಿರುವನಲ್ಲದೆ ಅವನ ಕಾವ್ಯದಲ್ಲಿ ಜಾತವೇದ ಮುನಿಗಳ ಹೆಸರನ್ನು ಸಹ ಪ್ರಸ್ತಾಪಿಸಿಲ್ಲ. ಬಸವಣ್ಣನ ಅನುಗ್ರಹದ ನಂತರ ಆ ತಾಪಸಿ ಗರ್ಭಗುಡಿಯಲ್ಲಿ ಅದೃಶ್ಯನಾಗಿಬಿಡುವನು ! ಹರಿಹರ-ಭೀಮಕವಿ-ಪಾಲ್ಕುರಿಕೆ ಈ ಮೂವರಲ್ಲೂ ನಿರೂಪಣೆ ಒಂದೇ ಬಗೆಯದಾಗಿದೆ.

ಆದ ಘಟನೆ ಏನು ?

"ದೇವರನ್ನೇ ನೇರವಾಗಿ ಗುರುವಾಗಿ ಪಡೆದುದಕ್ಕೆ ಆಧಾರವೇನು ? ಹಾಗಾಗಲು ಇಷ್ಟಲಿಂಗಧಾರಿಗಳಿಗೆ ಸಾಧ್ಯವೇ ? ಇಷ್ಟಲಿಂಗ ಬರಬಲ್ಲದೆ ? ಎಂಬುದೇ ನಮ್ಮ ಪ್ರಶ್ನೆ." ಇದು ಜ.ಚ.ನಿಯವರನ್ನು ಕಾಡುತ್ತಿರುವ ಮಹಾಸಮಸ್ಯೆ. ದೇವರನ್ನೇ ನೇರವಾಗಿ, ಗುರುವಾಗಿ ಪಡೆದನೆಂಬುದಕ್ಕೆ ಆಧಾರವಾಗಿ ಹರಿಹರ, ಭೀಮಕವಿಯ ಪದ್ಯಗಳನ್ನು ಈಗಾಗಲೇ ಕೊಟ್ಟಿರುವೆ. ಈ ಬಗ್ಗೆ ಚಾಮರಸಕವಿಯ ಹೇಳಿಕೆ ನೋಡಿರಿ:

ಪರಮ ನೀನಹೆ ಎಂದು ನೊಸಲಲಿ
ಬರೆವನಂತಿರಲಿಟ್ಟ ಭೂತಿಯ
ನಿರುತ ನಿನ್ನುವನಗಲಿ ನಾನಿರೆನೆಂದು ಕುರುಹಾಗಿ
ನೆರಹುವಂತಿರೆ ದಿವ್ಯಲಿಂಗದ
ಕೊರಳಿನಲಿಯವಧರಿಸಿ ಕರುಣಾ
ಕರ ಸದಾಶಿವನಾ ಮಹಾತ್ಮಗೆ ತಾನೆ ಗುರುವಾದ ||

ಇನ್ನು ಬಸವಣ್ಣನ ಸ್ವಂತ ವಚನಗಳೆರಡನ್ನು ನೋಡಿರಿ.

೧. ಧ್ಯಾನಕ್ಕೆ ನಿಮ್ಮ ಶ್ರೀ ಮೂರ್ತಿಯೆ ಮುಖ್ಯವಯ್ಯಾ
....
ಮುಕ್ತಿಗೆ ನಿಮ್ಮ ಘನಕೃಪೆಯೇ ಮುಖ್ಯವಯ್ಯಾ
ನಿಮ್ಮಿಂದಧಿಕರಾರನೂ ಕಾಣೆನಯ್ಯಾ
ಕೂಡಲ ಸಂಗಮದೇವಾ,
ನೀವು ಜ್ಞಾನಗುರುವಾದ ಕಾರಣ.

೨. ಎನ್ನ ಗತಿಮತಿ ನೀನೇ ಕಂಡಯ್ಯಾ
ಎನ್ನ ಗುರು ಪರಮಗುರು ನೀನೆ ಕಂಡಯ್ಯಾ
ಎನ್ನ ಅಂತರಂಗದ ಜ್ಯೋತಿ ನೀನೆ ಕಂಡಯ್ಯಾ,
ಕೂಡಲ ಸಂಗಮದೇವಾ,
ನೀನೇ ಎನಗೆ ಗುರು, ನಾನೇ ನಿಮ್ಮ ಶಿಷ್ಯನೆಂಬುದ
ನಿಮ್ಮ ಶರಣ ಸಿದ್ಧರಾಮಯ್ಯದೇವರು ಬಲ್ಲರು !

ಬಸವಣ್ಣನ ಅಸಾಮಾನ್ಯ ಸಾಧನೆಯನ್ನರಿಯದ ಮೂಢ ಮತಿಗಳು, "ನಿನಗೇ ಗುರು ಕರುಣೆ ಆಗಿಲ್ಲವಲ್ಲಾ ? ಎಂದು ಪ್ರಶ್ನಿಸಿರಬಹುದು. ಆಗ ಬಸವಣ್ಣ ಹೇಳಿದ ಉತ್ತರ ಪೂರ್ವಕ ವಚನ.

ಗುರುಕಳೆ ಇಲ್ಲದೆ ವಾದಿಪೆನೆ ಸಿಂಹ ಶರಣನೊಂದಿಗೆ
ಗುರುಕಳೆ ಬಸವನೆಂಬ ಗಜದಲ್ಲಿ ಸೇರಿದ ಕಾರಣ
ಕೂಡಲ ಸಂಗಯ್ಯನೆಂಬ ಸಿಂಹದೊಂದಿಗೆ ವಾದದ ಭರವು ಕೇಳಾ.

ಮೆಡಿಕಲ್ ಡಿಗ್ರಿ ಪಡೆದವರು ಮಾತ್ರವೇ ಡಾಕ್ಟರ್ ಆಗಬಹುದು ಎಂಬುದು ನಿಯಮ. ಆದರೆ ಮೆಡಿಕಲ್ ಸೈನ್ಸ್ ಪಿತಾಮಹ, ಆದಿ ಪುರುಷನಾದ ಗ್ರೀಕ್ ವಿಜ್ಞಾನಿ ಹಿಪೊಕ್ರೇಟಸ್‌ನಿಗೆ ಎಂ. ಬಿ. ಬಿ. ಎಸ್. ಡಿಗ್ರಿ ಇಲ್ಲ ಎಂದು ವಾದಿಸಿದರೆ ಎಷ್ಟು ಹಾಸ್ಯಾಸ್ಪದ. ಅವನು ತಾನೇ ಆ ಶಾಸ್ತ್ರದ ಜನಕ ? ಹಾಗೆಯೇ ಇಷ್ಟಲಿಂಗದಾತ ಬಸವಣ್ಣನೂ ಈ ಧರ್ಮ ಜನಕ. ತಾನು ಎಲ್ಲರಿಗೆ ತನ್ನ ಕೊಡುಗೆಯನ್ನು ನೀಡಿದ.

ದೇವರಿಂದ ಇಷ್ಟಲಿಂಗ ನೇರವಾಗಿ ಬರಬಲ್ಲುದೆ ?

ಇಂಥ ಪವಾಡಗಳಲ್ಲಿ ನಮಗೆ ನಂಬಿಕೆ ಇಲ್ಲ. ದೇವರಿಂದ ನೇರವಾಗಿ ಬಂದಿಲ್ಲ, ಬರುವುದೂ ಸಾಧ್ಯವಿಲ್ಲ. ಬಸವಣ್ಣನವರಿಗೆ ಒಂದು ವಿಶೇಷ ಅನುಭವ (Mystic Experience)ವಾಯಿತು. ಇದಕ್ಕೆ ದರ್ಶನ (Revelation) ಎನ್ನುವರು. ಆ ಅನುಭವವಾದಾಗ ಇಷ್ಟಲಿಂಗದ ಕಲ್ಪನೆ ಅಥವಾ Idea ತಟ್ಟನೆ ಹೊಳೆಯಿತು.

ಬಸವಣ್ಣನವರಿಗಿಂತಲೂ ಪೂರ್ವದಲ್ಲಿ ಸ್ಥಾವರ ಲಿಂಗವು ಶಿವನ ಪ್ರತೀಕವಾಗಿ ಪೂಜಿಸಲ್ಪಡುತ್ತಿತ್ತು. ಅದನ್ನು ಪ್ರಾಣಲಿಂಗ, ಆತ್ಮಲಿಂಗವೆಂದೂ ಕರೆಯುತ್ತಿದ್ದರು. ರಾವಣೇಶ್ವರನು ಅಂತಹ ಆತ್ಮಲಿಂಗವನ್ನು ಪಡೆಯಲು ಹೋದುದನ್ನು ನಾವು, ಇತಿಹಾಸದಲ್ಲಿ ಕಾಣುತ್ತೇವೆ. ಇಂಥ ಸ್ಥಾವರ ಲಿಂಗವನ್ನು ಚುಳುಕಾಗಿ ಮಾಡಿ ಜೀವಾತ್ಮನು ದೇಹದಾಕಾರದಲ್ಲಿ ಯೋಗಮುದ್ರೆಯಲ್ಲಿ ಸಾಕಾರಗೊಳ್ಳುವಂತೆ ಗೈದು,

ಅದಕ್ಕೊಂದು ವಿಶ್ವದ ಪ್ರತೀಕವಾಗಿ ಗೋಲಾಕಾರದ ಕಂಥೆಯನ್ನು ಹೊದ್ದಿಸಿ, ವಿಶೇಷ ಕುರುಹೊಂದನ್ನು ಲೋಕಕ್ಕೆ ಕಾಣ್ಕೆಯಾಗಿ ಇತ್ತ ಯೋಗವಿಜ್ಞಾನಿ ಬಸವಣ್ಣನವರು. ಬಸವಣ್ಣನವರು ಹಲವಾರು ವರ್ಷಗಳಿಂದ ಒಂದು ತಾತ್ತ್ವಿಕ, ಯೌಗಿಕ ಅರ್ಥವನ್ನುಳ್ಳ ಲಾಂಛನವನ್ನು ರೂಪಿಸಲು ತಪಿಸುತ್ತಿದ್ದು, ವಿಶೇಷ ದರ್ಶನದ ಅನುಭೂತಿ ಪಡೆಯುವಾಗ ಅವರಿಗೆ ಸಮರ್ಪಕ ವಿಚಾರ ಹೊಳೆಯಿತು. "ವಿಶ್ವವು ವಿಶ್ವಾತ್ಮನ ಮಹಾನ್ ಕೃತಿ; ಪರಮಾತ್ಮನ ನಿಜ ನಿವಾಸ. ಆ ಆಕಾರದಲ್ಲಿಯೇ ದೇವನ ಭೂಮಸ್ವರೂಪದ ಕಲ್ಪನೆ ಮಾಡುವೆ. ಮತ್ತು ಜೀವಾತ್ಮನ ಕಾರ್ಯರಂಗವಾದ ದೇಹದ ಯೋಗಮುದ್ರಾಕಾರದಲ್ಲಿ ಆತ್ಮನ ಕಲ್ಪನೆ ಮಾಡುವೆ. ಬ್ರಹ್ಮ-ಜೀವರು ಒಬ್ಬರಲ್ಲೊಬ್ಬರು ಇದ್ದಾರೆಂಬುದನ್ನು ಎರಡನ್ನೂ ಬಂಧಿಸುವುದರ ಮೂಲಕ ತೋರುವೆ." ಬಸವಣ್ಣನವರು ಈ ಮಹಾನ್ ಕಲ್ಪನೆಯನ್ನು ಸಾಕಾರಗೊಳಿಸಿದಾಗ ಅಪೂರ್ವ ಆನಂದವಾಗಿ ಉದ್ಗರಿಸಿದರು :

"ಜಗದಗಲ ಮುಗಿಲಗಲ.... ಕೂ.ಸಂ. ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ. "ಆರಾಧಿಸುವ ವಸ್ತುವು ಕೇವಲ ಭಕ್ತಿಯೋಗಕ್ಕೆ ಸಹಾಯಕವಾದರೆ ಸಾಲದು. ತ್ರಾಟಕ ಯೋಗಕ್ಕೂ ಸಹಾಯಕ ಸಾಧನವಾಗಬೇಕು. ಹಾಗಾಗಬೇಕಾದರೆ ಅದು ಹೊಳಪುಳ್ಳ ಆವರಣವನ್ನು ಹೊಂದಬೇಕು."[2] ಎಂಬ ವಿಚಾರವೂ ಆಗಲೇ ಸ್ಫುರಣಗೊಂಡಿತು. ಈ ವಿಚಾರವನ್ನು ಸ್ವತಃ ಕಾರ್ಯಗತಗೊಳಿಸಿ ಬಸವಣ್ಣನವರು ಗೋಲಾಕಾರದ ಕಂಥೆಯುಳ್ಳ ಲಿಂಗವನ್ನು ರೂಪಿಸಿದರು ; ತಾವೇ ಧರಿಸಿ ಅದನ್ನು ಅರ್ಚನೆಗೆ ತಂದರು. ಗುರು ಮುಖೇನ ಪಡೆಯಬೇಕು. ಮಾತ್ರವಲ್ಲ ಧರ್ಮ ಸಂಸ್ಕಾರ ಕಡ್ಡಾಯವಾಗಬೇಕು' ಎಂಬ ಕಟ್ಟಳೆ ವಿಧಿಸಿದರು. ಈ ಮಾತೆಲ್ಲ ನಮ್ಮ ಕಟ್ಟುಕಥೆಯೆ ? ಒಂದೊಂದೇ ಆಧಾರದ ಮಾತುಗಳನ್ನು ಉಲ್ಲೇಖಿಸುವೆ. ಸಾವಧಾನದಿಂದ ಓದಿರಿ.

ನಮಗೆ ಕಲ್ಪನೆ ಎಂದರೇನು ಗೊತ್ತಿಲ್ಲವೆಂಬುದಾಗಿ ಜ.ಚ.ನಿ.ಯವರ ಟೀಕೆ ; ನಿಜ. ಶಿವಯೋಗಿ ಸಿದ್ಧರಾಮೇಶ್ವರರಿಗೂ ಈ ಶಬ್ದದ ಅರ್ಥ ಗೊತ್ತಿರಲಿಲ್ಲ. ಅದಕ್ಕೇ ಹೀಗೆ ಬಳಸಿದ್ದಾರೆ :

1) ಅಜನ ಕಲ್ಪಿತವಲ್ಲದ ಭಕ್ತಿ, ವಿಷ್ಣು ಕಲ್ಪಿತವಲ್ಲದ ಭಕ್ತಿ
ರುದ್ರನ ಕಲ್ಪಿತವಲ್ಲದಭಕ್ತಿ, ನಿನ್ನ ಕಲ್ಪಿತವಾಯಿತಯ್ಯಾ, ಬಸವಾ
.... ಈ ಬೇಟದ ಭಕ್ತಿಯ ನಿಮ್ಮಿಂದ ಕಂಡೆನಯ್ಯಾ, ಬಸವ ಗುರುವೆ.
ಸಿದ್ಧರಾಮೇಶ್ವರ ವಚನ 933

2) ನೋಟದ ಭಕ್ತಿ ಬಸವನಿಂದಾಯಿತ್ತು
ಕೂಟದ ಜ್ಞಾನ ಬಸವನಿಂದಾಯಿತ್ತು ಕಾಣಾ. ಸಿ. ವ. 937

3) ಪ್ರಾಣಲಿಂಗದ ಪೂರ್ವಾಶ್ರಯವ ಕಳೆಯಲೆಂದು ಲಿಂಗಪ್ರಾಣಿಯಾದ
ಇಂತೀ ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು
ಬಸವಣ್ಣನು ಮರ್ತ್ಯಕ್ಕೆ ಬಂದನು ಕಾಣಾ ಗುಹೇಶ್ವರ. (ಅಪ್ರವ. 928)

4) ಇದು ಕೃತಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ.
ಇದು ದ್ವಾಪರದಲ್ಲಿ ಮೂರ್ತಿಯಾದ ಕರಸ್ಥಲವಲ್ಲ.
ಇದು ಕಲಿಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ...
ಸಂಗನ ಬಸವಣ್ಣನ ಕರಸ್ಥಲದೊಳಗೆ
ಗುಹೇಶ್ವರನೆಂಬ ಲಿಂಗವು ತೊಳಗಿ ಬೆಳಗುತ್ತಿದ್ದುದ ಕಂಡು
ನಮೋ ನಮೋ ಎನುತ್ತಿದ್ದೆನು ! —ಅಲ್ಲಮ ಪ್ರಭು.

5) ಅರಿಯುದಕೆ ಕುರುಹೆಂದು ಕರಲಿಂಗ ನೀಕೊಟ್ಟೆ —ಜನಪದಗೀತೆ

ಉತ್ತರವನ್ನು ಸಮಗ್ರವಾಗಿ ಕೊಡುತ್ತಾ ಹೋದರೆ ಲೇಖನ ಲಂಬಿತವಾಗುತ್ತದೆ ಎಂಬ ಸಂಕೋಚ ನಮಗೆ. ಯಾವುದೇ ಸಂದೇಹ ಎತ್ತಿಕೊಂಡಾಗ ಅಲ್ಲಿಷ್ಟು ಇಲ್ಲಿಷ್ಟು ಚುಟುಕ ಚುಟುಕ ಹೇಳಿಕೆ ನೀಡಿ, ಅರ್ಥಂಬರ್ಥ ಉತ್ತರ ಕೊಡಲು ಮನಸ್ಸು ಒಪ್ಪದು. ಆದ್ದರಿಂದ ಇನ್ನು ಮುಂದೆ ಒಂದೊಂದು ಟೀಕೆಯನ್ನು ತೆಗೆದುಕೊಂಡು ಅದಕ್ಕೆ ಬೇರಿತರ ಶರಣರು, ಕವಿಗಳು, ಆಧುನಿಕ ವಿದ್ವಾಂಸರು ಹೇಳಿದ ಹೇಳಿಕೆಗಳನ್ನು ಉದಾಹರಿಸುತ್ತಾ ಹೋಗುತ್ತೇನೆ.

"ಆದಿಗುರು ಅಂದರೇನೋ? ಬಸವಣ್ಣನವರಿಗೆ ಹಿಂದೆ ಗುರುಗಳೇ ಇರಲಿಲ್ಲೆಂದು ಅದರರ್ಥವೆ? (ಪುಟ. 41 ಸಾಲು 10) ಶಿವರುದ್ರರ ಆದಿತವ ಬಸವಣ್ಣಸಿಗೆ ಬರಬಲ್ಲುದೆ? ಬಸವಣ್ಣನ ಕಾಲವನ್ನೇ ಅರಿಯದ ಇವರ ವಾದದಲ್ಲಿ ಹುರುಳಿಲ್ಲ. ಆದಿ ಪದದರ್ಥವೆ ಇವರಿಗಿಲ್ಲ." (ಪುಟ 41, ಸಾಲು 19-21)

'ಆದಿ' ಶಬ್ದದ ಅರ್ಥ ನಮಗೆ ಗೊತ್ತಿಲ್ಲವೆಂದು ಡಾ|| ಜ. ಚ. ನಿಯವರು ಟೀಕಿಸಿರುವರು. 'ಆದಿಗುರು ಬಸವಣ್ಣ' ಎಂಬ ಪದಪ್ರಯೋಗ ಮಾಡಿದ ದಡ್ಡಳು ನಾನೊಬ್ಬಳೇ ಅಲ್ಲ. ನನಗಿಂತಲೂ ಹಿಂದೆ ಅನೇಕ ದಡ್ಡರು ಹೇಳಿರುವದರಿಂದ, ಅಂತಹ ದಡ್ಡ ಶರಣರ (ಶರಣರಲ್ಲಿ ಕ್ಷಮೆ ಕೇಳಿ) ಸಾಲಿನಲ್ಲಿ ನಿಲ್ಲಲು ನಾನು ಹೆಮ್ಮೆ ಪಡುತ್ತೇನೆ. ಆ ದಡ್ಡರ ಮಾತುಗಳನ್ನಿಷ್ಟು ಗಮನಿಸೋಣ.

1. ಸಿದ್ಧರಾಮೇಶ್ವರ

ಆದಿಗುರು ಬಸವಣ್ಣನನಾದಿಗುರು ಬಸವಣ್ಣಾ
ಭೇದಕ್ಕಭೇದ್ಯನು ಬಸವಣ್ಣನು
ಇಂತಪ್ಪ ಬಸವನನಂತ ಶ್ರೀಪಾದಕ್ಕೆ
ಇಂತೆರಗಿ ಸುಖಿಯಪ್ಪೆ ಯೋಗಿನಾಥ. (ಪ. 9 ಪುಟ 460).

2. ಸರ್ವಜ್ಞ

ಆದಿಗುರುರಾಯನು ಭೇದಿಸಿ ಲಿಂಗವಕೊಟ್ಟ
ಮೂದೇವರೊಡೆಯ ಮೂಜಗದ ಕರ್ತನೆ
ಆದಿಗುರು ಬಸವಾ ಸರ್ವಜ್ಞ

3. ಅ) ಜಗದಾರಾಧ್ಯ ಬಸವಣ್ಣ; **ಪ್ರಥಮಗುರು** ಬಸವಣ್ಣ (ಚ.ಬ.ವ. 345)

ಆ) **ಪ್ರಥಮಾಚಾರ್ಯ ನೀನೇ**; ಲಿಂಗಾಚಾರ್ಯ ನೀನೆ (ಚ.ಬ.ವ. 28)

4. ಅ) ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಗುರು
ಸಂಗನ ಬಸವಣ್ಣನ ಮಹಿಮೆಯ ನೋಡಾ, ಸಿದ್ಧರಾಮಯ್ಯ
(ಅ.ಪ್ರ.ವ. 823)

ಆ) ಗುಹೇಶ್ವರ ಲಿಂಗದಲ್ಲಿ **ಪೂರ್ವಾಚಾರಿ ಸಂಗನ ಬಸವಣ್ಣನ**
ಶ್ರೀಪಾದಕ್ಕೆ ನಮೋ ನಮೋ ಎಂಬೆ
(ಅ.ಪ್ರ.ವ. 881)

ಇ) ಮಹಾಮಹಿಮ ಸಂಗನ ಬಸವಣ್ಣ
ಎನಗೆಯೂ ಗುರು, ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣ ಗುಹೇಶ್ವರಾ ! (ಅ. ಪ್ರ. ವ. 754)

ಶ್ರೀ ಜ. ಚ. ನಿಯವರ ಅಚ್ಚುಮೆಚ್ಚಿನ ಲೇಖಕನು, ದಾರ್ಶನಿಕನೂ ಆದ ಗುರುಸ್ಥಲ ಮಠಾಧಿಕಾರಿಯಾದ ಮೊಗ್ಗೆಯ ಮಾಯಿದೇವರೂ ಸಹ "ಆದಿ" ಪದದ ಅರ್ಥವರಿಯದ ದಡ್ಡರು ಎನ್ನಲು ತುಂಬಾ ಸಂತೋಷವೆನಿಸುತ್ತದೆ.

ಜಯ ಬಸವೇಶ ಭಕ್ತಜನ ಭಾಗ್ಯ ಶುಭೋದಯ ವೀರಶೈವ ನಿ
ರ್ಣಯ ಪರಮಾವತಾರ ಶರಣಾಗತ ರಕ್ಷಕ ಚಿದ್ಘನ ಪ್ರಭಾ
ಮಯ **ಜಗದಾದಿದೇಶಿಕ** ಪುರಾತನ ಪುಂಗವ ಶಾಂಭವೈಪುರಾ
ಶ್ರಯ ಜಯಸೋಮನಾಥ ಜಯದೇವ ಜಯಾವಿರತಂ ಶಿವಾಧವಾ ॥

"ಜಗದ ಆದಿ ದೇಶಿಕ" ಎಂದು ಮಗ್ಗೆಯ ಮಾಯಿದೇವರು **ಶಬ್ದದ ಅರ್ಥವನ್ನರಿಯದೆ** ಪ್ರಯೋಗಿಸಿಬಿಟ್ಟದ್ದಾರೆ. ಆ ಶಬ್ದದ ಅರ್ಥವನ್ನು ಚೆನ್ನಾಗಿ ತಿಳಿದುಕೊಂಡ

ಡಾ॥ ಜ. ಚ. ನಿಯವರು ಶತಕತ್ರಯ ಪ್ರವಚನದಲ್ಲಿ ಮುಖ್ಯವಾದ ಐದು ಪದ್ಯಗಳಿಗೆ ಅರ್ಥವನ್ನೇ ಬರೆಯದೆ, ಹಾರಿಸಿ ತಮ್ಮ ಬೌದ್ಧಿಕ ಪ್ರಾಮಾಣಿಕತೆಯನ್ನು ಚೆನ್ನಾಗಿ ಮನಗಾಣಿಸಿಕೊಟ್ಟದ್ದಾರೆ. ಆದರೆ ಸುದೈವಕ್ಕೆ ಅವರು ಜೇಬಿನ ಆವೃತ್ತಿಯಾದ ಶತಕ ತ್ರಯದಲ್ಲಿ ಹೀಗೆ ಸರಳಾರ್ಥ ಬರೆದಿದ್ದಾರೆ "ಭಕ್ತಜನಕ್ಕೆ ಭಾಗ್ಯನು, ಒಳಿತಾದ ಏಳ್ಗೆಯುಳ್ಳವನು, ವೀರಶೈವಾಚಾರಗಳನ್ನು ಗಟ್ಟಿಗೊಳಿಸಲು ಇಳೆಗೈತಂದವನು, ಮೊರೆ ಹೊಕ್ಕವರನ್ನು ಕಾಪಿಡುವವನು, ಘನವಾದ ಚಿತ್ಪ್ರಕಾಶ ಸ್ವರೂಪನು, **ಜಗಗಾದಿದೇಶಿಕನು**, ಪುರಾತನರಲ್ಲಿ ಪ್ರಮುಖನು" ಈ ಮುಂತಾಗಿ ಅರ್ಥ ಬರೆದಿದ್ದಾರೆ. ಆದಿಶಬ್ದದ ಅರ್ಥವರಿಯದ ನಮಗೆ ಮತ್ತು ಇನ್ನಿತರರಿಗೆ ದಯವಿಟ್ಟು "ಜಗದ+ಆದಿ+ದೇಶಿಕ" ಎಂಬ ಪದಪ್ರಯೋಗದ ಅರ್ಥವನ್ನು ಬರೆದು ತಿಳಿಸಬೇಕೆಂದು ವಿನಂತಿಸುತ್ತೇವೆ.

ಈ ದಡ್ಡರ ಸಾಲಿಗೆ ಸೇರುವ ಇನ್ನೋರ್ವ ಮಹಾಕವಿ ಚಾಮರಸ :

..........ಸಮಸ್ತ ಭಕ್ತ ನಿ
ಕಾಯವನು ಪಾವನವ ಮಾಡಿದ
ರಾಯ **ಪೂರ್ವಾಚಾರ್ಯ** ಸಂಗನ ಬಸವ ಶರಣಾರ್ಥಿ ॥

ಬಸವಣ್ಣನವರಿಗಿಂತಲೂ ಪೂರ್ವದಲ್ಲಿ ಅನೇಕ ಮಹಾಮಹಿಮರು ಆಗಿದ್ದಾರೆ. ಜಗತ್ತಿನ ಪ್ರಪ್ರಥಮ ಯೋಗಿ ಶಿವನು. ಬುದ್ಧ-ಮಹಾವೀರರು, ಏಸು-ಮೊಹಮ್ಮದರು, ಶಂಕರಾಚಾರ್ಯ-ರಾಮಾನುಜರು, ಇವರೆಲ್ಲರೂ ಹಿಂದಿನ ಸಂತರೆ. ಅವರೆಲ್ಲರೂ ಗೌರವಾರ್ಹರೇ ! ಆದರೆ ಲಿಂಗಾಯತಧರ್ಮ, ಶರಣಧರ್ಮ, ವಚನಧರ್ಮದ ಆದ್ಯ ಬಸವಣ್ಣ. ಅಂತೆಯೇ ಬಸವ+ಆದಿ ಪ್ರಮಥರು = ಬಸವಾದಿ ಪ್ರಮಥರು ಎಂಬ ಪದಪ್ರಯೋಗ ಬಳಕೆಗೆ ಬಂದಿತು. ಬೆಂಗಳೂರಿನ ಮಂಡಿಪೇಟೆಯಲ್ಲಿ ಓರ್ವ ವ್ಯಾಪಾರಿ ರಾಜಶೇಖರಪ್ಪ ಎಂಬುವವನು ರಾಜಶೇಖರಪ್ಪ ಆಂಡ್ ಸನ್ಸ್ ಎಂದು ಒಂದು ಅಂಗಡಿ ರಿಜಿಸ್ಟರ್ ಮಾಡಿ, ವ್ಯಾಪಾರ ಆರಂಭಿಸಿ ಏಳ್ಗೆ ಹೊಂದುವನು. ಅವನ ಕಾಲದಲ್ಲಿ, ಅವನಿಂದ ಆ ಅಂಗಡಿ ರಿಜಿಸ್ಟರ್ ಆಯಿತೆಂದು ಅವನ ಮಕ್ಕಳು ಹೇಳುವರೇ ವಿನಾ, ಮೊದಲೇ ಇದ್ದ ಮಿ॥ ಜಾನ್ಸನ್ನ ಅಂಗಡಿಯನ್ನಾಗಲಿ, ಮಿ॥ ಅಬ್ದುಲ್ಲಾನ ಅಂಗಡಿಯನ್ನಾಗಲೀ, ಮಿ॥ ಶಿವೋತ್ತಮರಾವ, ಮಿ॥ ಸಂಪತ್ತೈಯ್ಯಂಗಾರರ ಅಂಗಡಿಯನ್ನಲ್ಲ; ಹಿಂದೂ ಪರಂಪರೆಯಲ್ಲಿ ಬರುವ ಶಿವನೇ ಆದಿಯಾಗಿ ಎಲ್ಲ ಸಂತರನ್ನು ಜ್ಞಾನಗುರುಗಳೆಂದು, ಗೌರವಾರ್ಹರೆಂದು ಪರಿಗಣಿಸಬೇಕಾದ್ದು ಪ್ರತಿಯೋರ್ವ ಹಿಂದುವಿನ ಕರ್ತವ್ಯ. ಆದರೆ ಲಿಂಗಾಯತಧರ್ಮ ಆರಂಭಗೊಂಡಿದ್ದು ಮಾತ್ರ ಆದಿಗುರು ಬಸವಣ್ಣನಿಂದ ಎಂಬುದನ್ನು ಮರೆಯಲಾಗದು. ಬಸವಣ್ಣನು ಅಪ್ಪನಾದರೆ,

ಶಂಕರಾಚಾರ್ಯರು ನಮ್ಮ ದೊಡ್ಡಪ್ಪ, ಶಿವನು ಮುತ್ತಜ್ಜ. ಆದರೆ ಮಗನು ತನ್ನ ಹೆಸರಿನ ಜೊತೆಗೆ ಅಪ್ಪನ ಹೆಸರನ್ನು ಹಚ್ಚಿಕೊಳ್ಳುವನೇ ವಿನಾ ಅಜ್ಜ, ಮುತ್ತಜ್ಜನ ಹೆಸರನ್ನಲ್ಲ. ಬಸವಣ್ಣನ ಮಾತು ಮಾನ್ಯ, ನಡೆದ ಬಟ್ಟೆ ಅಧಿಕೃತ. ಅವನು ಸಂವಿಧಾನ ಕರ್ತ.

ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ —ಮರುಳಶಂಕರದೇವರು.
ಬಸವ ಪುರಾತನರಾಚರಿಸಿ ತೋರಿದ ಷಟ್‌ಸ್ಥಲ ಮಾರ್ಗದೊಳ್
ಪ್ರವರ್ತಿಸುತ ಅನೂನ ಭಕ್ತಿರತಿಯಿಂ ತನುವಿತ್ತ ಮನಂಗಳಂ......
— ಮಗ್ಗೆಯ ಮಾಯಿದೇವರು

"ಬುದ್ಧನಂತೆ ಕ್ರಿಸ್ತನಂತೆ ಬಸವಣ್ಣ ಧರ್ಮ ವಿಧಿ-ವಿಧಾನಗಳಿಗೆ ಮೊದಲಿಗನಂತೆ! ಹಾಗಿದ್ದರೆ ಬೌದ್ಧಮತ, ಕ್ರೈಸ್ತಮತ ಎಂಬಂತೆ 'ಬಾಸವ ಮತ' (ಬಸವ ಮತ ಎಂದಿರಬಹುದು. 'ಬಾ' ಎಂದು ಮುದ್ರಣದೋಷವಾಗಿರಬಹುದು. ಆದರೂ ಏನಾದರೂ ವಿಶೇಷ ಅರ್ಥದಿಂದ ಜ. ಚ. ನಿಯವರು ಬಳಸಿರಬಹುದೇನೋ ಎಂದು ಮೂಲದಲ್ಲಿರುವಂತೆಯೇ ಕೊಡಲಾಗಿದೆ) ಎಂದೇಕೆ ಬರಲಿಲ್ಲ?" ಬಸವಣ್ಣನವರಿಗೆ ವ್ಯಕ್ತಿಪ್ರಚಾರ ಬೇಕಾಗಿರಲಿಲ್ಲ – ಅದನ್ನು ಅವರು ಇಚ್ಛಿಸಲಿಲ್ಲ. ಆದರೆ ಕೆಲವು ಶರಣರು ಬಸವಣ್ಣನ ಧರ್ಮ, ಬಸವಣ್ಣನಯೋಗ ಎಂದು ಬಳಸಿಯೇ ಬಿಟ್ಟಿದ್ದಾರೆ.

1. ಬಸವನ ಯೋಗದಿಂ ಹಸನಾಯಿತ್ತೈಲೋಕ
ಚಂದದಿ ಬಸವಗತಿ ಎನಲು ಭವವು
ಹಿಂಗುವುದು ಬಸವಯ್ಯ ಬಸವಣ್ಣ ಶರಣಾರ್ಥಿ
ಎಂದು ಬದುಕಿದೆನಯ್ಯಾ ಯೋಗಿನಾಥ. (ಪುಟ 484, ಪದ್ಯ 2)
— ಸಿದ್ಧರಾಮೇಶ್ವರರು

2. ಆವುದಾನೊಂದು ಭಕ್ತಿ ಬಸವಣ್ಣನದಯ್ಯಾ
ಆವುದಾನೊಂದು ಯುಕ್ತಿ ಬಸವಣ್ಣನದಯ್ಯಾ
ಆವುದಾನೊಂದು ಯೋಗ ಬಸವಣ್ಣನದಯ್ಯಾ
ಕಪಿಲಸಿದ್ಧ ಮಲ್ಲಿನಾಥಯ್ಯ. (ಸಿ.ವ. 935)

3. ಮಹಾಜ್ಞಾನ, ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯಾ.
(ಸಿ.ವ. 937)

4. ಕರುಣಿ ಕಪಿಲಸಿದ್ಧ ಮಲ್ಲಿನಾಥಯ್ಯ,
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ (ಸಿ ವ. 953)

ಸಿದ್ಧರಾಮೇಶ್ವರರು ಮಾಡಿದ ಬಸವ ಗುಣಗಾನ :

1. ಸೀಮೆ ಸಂಬಂಧಗಳ ಮೀರಿಪ್ಪ ಮಂತ್ರಕ್ಕೆ
ರಾಜಮಂತ್ರವು ತಾನು ಪಂಚಾಕ್ಷರಿ.........
ಆನಂದ ತ್ರೈಲಿಂಗ ಮೂಲಮಂತ್ರಕ್ಕೀಗ
ಬಸವಾಕ್ಷರ ತ್ರಯವು ಮಾತೆಯಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ (ಸಿ.ವ. 249)

2. ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ನೀನನಾದಿ ಮೂಲದೊಡೆಯನೆಂದೆಂಬೆ
ನಿಮ್ಮ ಬಲ್ಲಾತ ಬಸವಣ್ಣ;
ಗುರುಲಿಂಗ ಜಂಗಮತ್ರಯವು ಬಸವಣ್ಣನಂಶಿಕವು (ಸಿ.ವ. 903)

3. ನಿಮ್ಮ ಶರಣ ಎಲ್ಲರಿಗೆ ಗುರುವಾದನಯ್ಯಾ ಬಸವಣ್ಣನು (ಸಿ.ವ. 906)

4. ಬಸವಣ್ಣನ ಪ್ರಸಾದವ ಕೊಂಡು ಭವಂ ನಾಸ್ತಿಯಾಗಿ ಬದುಕಿದೆನು
(ಸಿ.ವ. 908)

5. ಬಸವಣ್ಣನೆನ್ನ ಪರಮಾರಾಧ್ಯರು (ಸಿ.ವ. 913)

6. ಪಾವನನಾದೆನು ಬಸವಣ್ಣಾ, ನಿಮ್ಮ ಪಾವನಮೂರ್ತಿಯ ಕಂಡು
.........ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿದೆ,
ಬಸವಣ್ಣಾ ಬಸವಣ್ಣಾ, ನೀನು ಗುರುವಾದೆಯಾಗಿ. (ಸಿ.ವ. 917)

7. ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ನೀ ಸಾಕ್ಷಿಯಾಗಿ ಬಸವಣ್ಣನ ನೆನೆವವರು ನೀನಹರು. (ಸಿ.ವ. 921)

8. **ಶಿವಲಿಂಗಭಕ್ತರಿಗೆ ಚರಲಿಂಗಧಾರಣೆಯ ಪರಿಯಾಯವಿದೆಂದು ತೋರಿದಾತ ಗುರು ಬಸವಣ್ಣನಯ್ಯಾ.** (ಸಿ.ವ. 925)

[ಸ್ಥಾವರಲಿಂಗ – ಶಿವಲಿಂಗಗಳು ಶಿವನ ಪ್ರತೀಕವಾಗಿ ಪೂಜಿಸಲ್ಪಡುತ್ತಿದ್ದವು. ಇದಕ್ಕೆ ಪರ್ಯಾಯವಾಗಿ (Substitute) ಚರಲಿಂಗಧಾರಣೆಯನ್ನು ಕಲಿಸಿದಾತ ಬಸವಣ್ಣ].

9. ಬಸವನ ನೆನೆದು ಮಾಡುವ ಭಕ್ತಿ ನಡೆವುದಯ್ಯಾ;
ಬಸವನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯಾ (ಸಿ.ವ. 932)

10. ಅಜನ ಕಲ್ಪಿತವಲ್ಲದ ಭಕ್ತಿ, ವಿಷ್ಣು ಕಲ್ಪಿತವಲ್ಲದ ಭಕ್ತಿ
ರುದ್ರನ ಕಲ್ಪಿತವಲ್ಲದ ಭಕ್ತಿ, ನಿನ್ನ ಕಲ್ಪಿತವಾಯಿತ್ತಯ್ಯಾ, ಬಸವಾ
...........ಈ ಬೇಟದ ಭಕ್ತಿಯ ನಿಮ್ಮಿಂದ ಕಂಡೆನಯ್ಯಾ, ಬಸವ ಗುರುವೆ.
(ಸಿ.ವ. 933)

11. ಕರುಣಿ ಕಪಿಲಸಿದ್ಧ ಮಲ್ಲಿನಾಥಯ್ಯಾ,
ನಿಮಗೂ ಎನಗೂ ಬಸವಣ್ಣನೆ ಶಿವಪಥಿಕನಯ್ಯಾ (ಸಿ.ವ. 934)

ಸಿದ್ಧರಾಮನ ಗುರು ಯಾರು ?

"ಸಿದ್ಧರಾಮನ ಗುರು ರೇವಣಸಿದ್ಧ ಎಂಬುದನ್ನು ಇವರು ನಿರಾಕರಿಸಲು ಹೆಣಗಿದ್ದಾರೆ, ಆಧಾರವಿಲ್ಲೆನ್ನುತ್ತಾರೆ. ಸಿದ್ಧರಾಮ ಕಲ್ಯಾಣಕ್ಕೆ ಬಾರದ ಮುನ್ನವೆ ವೀರಶೈವನಾಗಿದ್ದನೆಂಬುದಕ್ಕೆ ಶೂನ್ಯಸಂಪಾದನವೆ ಸತ್ಯಸಾಕ್ಷಿ" ಇದು ಜ.ಚ. ನಿಯವರ ಉಕ್ತಿ.

ಸಿದ್ಧರಾಮನ ಗುರು ರೇವಣಸಿದ್ಧ ಎಂಬುದನ್ನು ಚರ್ಚಿಸಲು ನಾವಂತೂ ಎಲ್ಲಿಯೂ ಹೆಣಗಿಲ್ಲ. ಅದನ್ನು ಸಮರ್ಥಿಸಲು ಜ. ಚ. ನಿಯವರೇ ತೀರಾ ಕಷ್ಟ ಪಟ್ಟಂತೆ ಕಾಣುತ್ತದೆ. ಏಕೆಂದರೆ ವಿಶ್ವವಿದ್ಯಾಲಯದ ಎಲ್ಲ ವಿದ್ವಾಂಸರ, ಸಂಶೋಧಕರ ವಿಚಾರಗಳನ್ನು ಕಡೆಗಣಿಸಿ ಕಾಲ್ಪನಿಕ ಕಥೆಗಳನ್ನು ಹೆಣೆಯುವುದಕ್ಕೆ ಜ.ಚ.ನಿಯವರು ತೀರಾ ಶ್ರಮ ವಹಿಸುತ್ತಾರೆ.

1. ಹರಿಹರ ಕವಿಯು ವರ್ಣಿಸಿದ ರೇವಣಸಿದ್ಧನು "ಲಾಕುಳದ ಲಾಕ್ಷಣಿಕ"ನಾಗಿರುವುದರಿಂದ ಅವನೂ ಲಾಕುಲೀಶ ಪಂಥದವನಿರಬೇಕು."
ಡಾ|| ಬಿ. ಸಿ. ಜವಳಿ (ಪುಟ 92, ಲಿಂ. ಸ್ಥಾಪಕರಾರು ?)

2. ವಚನಕಾರ ಸಿದ್ಧರಾಮನು ಆರಂಭದಲ್ಲಾದರೂ 'ಶೈವ'ನಾಗಿದ್ದ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಮುಂದೆ ಅವನು ಚನ್ನಬಸವಣ್ಣನವರಿಂದ "ದೀಕ್ಷೆ"ಯನ್ನು ಪಡೆದು ವೀರಶೈವನಾಗುತ್ತಾನೆ.
ಡಾ|| ಎಂ. ಚಿದಾನಂದಮೂರ್ತಿ (ಪುಟ 157-158)

3. ಶ್ರೀ ಸಿದ್ಧರಾಮೇಶ್ವರನು ಪ್ರಭುದೇವರೊಡನೆ ಪ್ರಥಮಸಲ ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ಕೆಲವು ತ್ರಿವಿಧಿಗಳನ್ನು ರಚಿಸಿರಬಹುದು. ಆದರೆ ಈ "ಬಸವ

ಸ್ತೋತ್ರ ತ್ರಿವಿಧಿ", "ಮಿಶ್ರಸ್ತೋತ್ರ ತ್ರಿವಿಧಿ", "ಅಷ್ಟಾವರಣ ತ್ರಿವಿಧಿ"ಗಳನ್ನು ಅವನು ಕಲ್ಯಾಣಕ್ಕೆ ಬಂದು ಬಸವ, ಚನ್ನಬಸವ ಮೊದಲಾದ ಪ್ರಮುಖ ಶಿವಶರಣರ ಸಂಪರ್ಕದಲ್ಲಿ ಬಂದ ಮೇಲೆಯೇ, ಇಷ್ಟೇ ಏಕೆ ಶ್ರೀ ಚನ್ನಬಸವಣ್ಣನವರನ್ನು ಗುರುವಾಗಿ ಸ್ವೀಕರಿಸಿ, ಇಷ್ಟಲಿಂಗಧಾರಣೆಯನ್ನು "ಮಂತ್ರಗೌಪ್ಯ"ದ ಮೂಲಕ ಹೊಂದಿದ ಮೇಲೆಯೇ ಬರೆದಿರುವನು.
ಡಾ|| ಆರ್. ಸಿ. ಹಿರೇಮಠ, (ಪುಟ 20)

4. ಇಷ್ಟಲಿಂಗಧಾರಣೆಯ ವಿಷಯದಲ್ಲಿ ಶ್ರೀ ಸಿದ್ಧರಾಮೇಶ್ವರನಿಗೆ ಮೊದಲು ವಿಶ್ವಾಸವಿರಲಿಲ್ಲ. "ಗಟ್ಟಿ ಹಿಡಿದು ಗೊತ್ತ ಮುಟ್ಟಬಾರದಯ್ಯಾ', 'ನೀರಲ್ಲಿಯ ಕ್ರೀಡೆ ಕುಂಬಳಕಾಯಿಗಲ್ಲದೆ ದೊಡ್ಡ ಬಂಡೆಗುಂಟೇನಯ್ಯಾ,' 'ಜಡದೇಹಕ್ಕೆ ಜಡ ಲಿಂಗವ ಬಂಧಿಸಿ ನಿರ್ಜಡನಾದೆನೆಂಬುದು ಮಳಲಲಿಪಿ' ಎಂದೆಲ್ಲ ಸಂದೇಹ ವ್ಯಕ್ತಪಡಿಸಿದವನು ಇಷ್ಟಲಿಂಗವಿಜ್ಞಾನ, ಶರಣರ ಅನುಪಮ ಸಾಧನೆಯಿಂದ ಪ್ರಭಾವಿತನಾಗಿ ಇಷ್ಟಲಿಂಗಧಾರಿಯಾಗಿ ಚನ್ನಬಸವಣ್ಣನನ್ನು ಲಿಂಗಧಾರಣಗೈದ ದೀಕ್ಷಾಗುರುವೆಂದು ಹೊಗಳಿ, ಶರಣರನ್ನು ಸ್ತುತಿಸಲೆಂದೇ ಮಿಶ್ರಸ್ತೋತ್ರ ತ್ರಿವಿಧಿಯನ್ನು ಬರೆದಿದ್ದಾನೆ.

5. ಈ ಯೋಗಿನಾಥಾ ಎಂಬುದು ತನ್ನ ಇಷ್ಟದೇವತೆಯಾದ ಕಪಿಲಸಿದ್ಧ ಮಲ್ಲಿಕಾರ್ಜುನನನ್ನು ಕುರಿತಲ್ಲದೆ ದೀಕ್ಷಾಗುರುವಾದ ಶಿವಯೋಗಿಯಾದ ಚನ್ನಬಸವಣ್ಣನನ್ನು ಕುರಿತೂ ಇರಬೇಕೆಂದು ತೋರುತ್ತದೆ.
ಡಾ|| ಆರ್. ಸಿ. ಹಿರೇಮಠ, (ಪುಟ 21)

ಇನ್ನು ಸಿದ್ಧರಾಮೇಶ್ವರರೇ ಬರೆದ ನೂರಾರು ವಚನಗಳಲ್ಲಿ ತನ್ನ ಗುರು ಚನ್ನಬಸವಣ್ಣನವರನ್ನು, ಧರ್ಮದ ಆದ್ಯ ಬಸವಣ್ಣನವರನ್ನು ಹೊಗಳಿರುವುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ "ಶ್ರೀ ಸಿದ್ಧರಾಮೇಶ್ವರರ ವಚನಗಳು" ನೋಡಿರಿ.

1. ಅದರಂತೆ ಒಂದೆ ಸ್ಥಲದಲ್ಲಿ ನಿಂತು ನೋಡಲೊಲ್ಲದೆ ಅನೇಕ ಸ್ಥಾನಗಳ ಧರಿಸಿ ಹೋಗುವದದು ಉಚಿತವಲ್ಲ ಎಲೆ ಜೀವನೆ ಎಂದು ಬೋಧಿಸಿದ **ಸದ್ಗುರು ಚನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯಾ**
(ಸಿ.ವ. 171)

2. ಬಸವಣ್ಣ-ಚನ್ನಬಸವಣ್ಣನೆಂಬ ಮಹಾಸಮುದ್ರದೊಳಗೆ ಹರುಷಿತನಾದೆನಯ್ಯಾ

3. ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ತಂದು
ಕರತಳಾಮಳಕದಂತೆ ಮಾಡಿ ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟ
ಶ್ರೀ ಗುರು ಚೆನ್ನಬಸವಣ್ಣ ಹೆಸರಿಟ್ಟ ಲಿಂಗದ ಹೆಸರ ಹೇಳುವೆ ಕೇಳಯ್ಯಾ
(ಸಿ.ವ. 196)

4. ಆದಿ ಆಧಾರವಿಲ್ಲದಂದಿನ......ಅನಾದಿ ಸಂಸಿದ್ಧನ
ಆಗು ಮಾಡಿ ಹೆಸರಿಟ್ಟು ಕರಸ್ಥಳಕ್ಕೆ
ತಂದುಕೊಟ್ಟ ಗುರು ಚೆನ್ನಬಸವಣ್ಣನಯ್ಯಾ (ಸಿ.ವ. 197)

ಸಿದ್ಧರಾಮೇಶ್ವರರು ಮನ ತುಂಬಿ ಹೃದಯ ತುಂಬಿ, ತನಗೆ ಗುರುಕರುಣೆಯಾದುದನ್ನು ನೂರಾರು ವಚನಗಳಲ್ಲಿ ಹೇಳಿದುದನ್ನು ಪ್ರಕ್ಷಿಪ್ತವೆಂದು ಕರೆದಿರುವ ಜ. ಚ. ನಿಯವರ ಸಾಹಸ ನೋಡಿದರೆ ಅವರ ಧಾರ್ಷ್ಟ್ಯಕ್ಕೆ ಎಂಥವರೂ ಸೋಜಿಗಪಡಬೇಕು. ಅಂತೂ ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ಪ್ರಕಾಶಗೊಂಡಿರುವ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕೃತ ಪ್ರಕಟಣೆಗಳು; ಡಾಕ್ಟರೇಟ್‌ಗಳನ್ನು ಈ ವಿಷಯಗಳಲ್ಲಿ ಪಡೆದು ಖ್ಯಾತರಾಗಿರುವ ಡಾ॥ ಆರ್. ಸಿ. ಹಿರೇಮಠರು ಡಾ॥ ಬಾಡಾಲ ರಾಮಯ್ಯನವರು, ಡಾ॥ ಚಿದಾನಂದಮೂರ್ತಿಗಳು ಎಲ್ಲರ ಸಂಶೋಧನೆ ನಿರರ್ಥಕವಿರಬಹುದು ಜ.ಚ. ನಿಯವರ ದೃಷ್ಟಿಯಲ್ಲಿ! ಏಕೆಂದರೆ ಇವರೆಲ್ಲ ಪ್ರಯತ್ನ ಪಟ್ಟಿರುವುದು ಪ್ರಕ್ಷಿಪ್ತ ವಚನಗಳನ್ನು ಮುದ್ರಿಸಲು!! "ಸಂಪಾದನೆಯ ಸೊಂಪು" ಈ ಕೃತಿಯಲ್ಲಿ ಜ. ಚ. ನಿಯವರು ಆಯ್ದುಕೊಂಡಿರುವ ಕೆಲವು ವಚನಗಳನ್ನು ಯಾವ ವ್ಯಾಖ್ಯಾನದ ಸಹಾಯವೂ ಇಲ್ಲದೆ ಓದುಗರೇ ಓದಿಕೊಳ್ಳಲಿ. "ಇಂತು ಚನ್ನಬಸವರಾಜದೇವರು ಕಾಯ ಪ್ರಾಣ ಮನವೆಂಬ ತ್ರಿವಿಧದಲ್ಲಿ ಇಪ್ಪತ್ತೊಂದು ದೀಕ್ಷೆಯಂ ಮಾಡಿ ತ್ರಿವಿಧಲಿಂಗ ಧಾರಣಮಂ ಸಂಬಂಧಿಸಲು, ಇದಕ್ಕೆ ಸಿದ್ಧರಾಮಯ್ಯ ದೇವರು ಪರಮಾನಂದ ಹರುಷವನೆಯ್ದಿ ಬಿನ್ನವಿಸಿದ ವಚನ."

1. ಅಧ್ಯಾತ್ಮ ಅಧ್ಯಾತ್ಮವೆಂಬಿರಿ; ಅಧ್ಯಾತ್ಮವಾರಿಗೆ?
ಶ್ರೀ ಗುರುಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ.
ಕರಸ್ಥಲದಲ್ಲಿ ಕೊಟ್ಟಬಳಿಕ ಬೇರೆ ಯೋಗ ಉಂಟೆ?
....................ಶಿವಯೋಗವಲ್ಲದೆ?
ಇಂತಪ್ಪ ಅವನತಿಯ ಕಳೆದು ಶುದ್ಧ ಶಿವಯೋಗಿಯ ಮಾಡಿದಾತ
ಚನ್ನಬಸವಣ್ಣ.
..........**ಎನ್ನ ತನ್ನಂತೆ ಮಾಡಿದ ಗುರು ಚೆನ್ನಬಸವಣ್ಣ.**

ಆನು ಚೆನ್ನಬಸವಣ್ಣನ ಕರುಣದಿಂದ ಅಭ್ಯಾಸ ಯೋಗವನತಿಗಳೆದು
............ಷಡುಸ್ಥಲಕ್ಕಧಿಕಾರಿಯಾದೆ.
(ಸಂಪಾದನೆಯ ಸೊಂಪು ಪುಟ. 483)

2. **ಮತ್ತಂ,** ಹೆಸರಿಡಬಾರದ ಲಿಂಗವ ಹೆಸರಿಟ್ಟು
ಎನ್ನ ಕರಸ್ಥಲಕ್ಕೆ ತಂದು ಕರತಲಾಮಲಕದಂತೆ ಮಾಡಿ
ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವಕೊಟ್ಟ ಶ್ರೀ ಗುರು ಚೆನ್ನ
ಬಸವಣ್ಣ
.........ಆ ಶರಣರ ಅನುಮತದರುವಿನ ಉಪದೇಶವ ಕೇಳಿ
ಎನಗಿನ್ನಾವುದು ಹದನಯ್ಯಾ ಎಂಬ ಚಿಂತೆಯ ಬಿಟ್ಟು
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೈಯಲ್ಲಿ ಪಿಡಿದೆನು.
(ಪುಟ ಸಂ. ಸೊಂ 487)

3. ಹೆಸರಿಟ್ಟು ಕರಸ್ಥಲಕ್ಕೆ ತಂದುಕೊಟ್ಟ ಗುರು
ಚೆನ್ನಬಸವಣ್ಣನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.
(ಪುಟ ಸಂ. ಸೊಂ. 487)

4. ಶುದ್ಧವನರಿದೆ ಚನ್ನಬಸವಣ್ಣಾ, ನಿಮ್ಮಿಂದ!
ಸಿದ್ಧವನರಿದೆ ಚನ್ನಬಸವಣ್ಣ–ನಿಮ್ಮಿಂದ
..........ಚೆನ್ನಬಸವಣ್ಣ ಗುರುವಾಗಿ ಬಂದು
ಎನ್ನ ಜನ್ಮಕರ್ಮವ ನಿವೃತ್ತಿಯ ಮಾಡಿದನಯ್ಯಾ!
(ಪುಟ. ಸಂ. ಸೊಂ. 490)

5. ಅಂತಪ್ಪಾ ಪರಶಿವನೆನ್ನ ಸುಜ್ಞಾನ ಕಾಯದ ಮಸ್ತಕದ ಮೇಲೆ
ಹಸ್ತವನಿರಿಸಿ
ಮನಭಾವ ಕರಣೇಂದ್ರಿಯಂಗಳಿಂದೆ ಸ್ವರೂಪೀಕರಿಸಿ
ದೃಷ್ಟಿಗೆ ತೋರಿ, ಕೈಯಲ್ಲಿ ಲಿಂಗವ ಕೊಟ್ಟ ಚನ್ನಬಸವಣ್ಣನ
ಶ್ರೀ ಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯಾ ಪ್ರಭುವೇ
ಕಪಿಲಸಿದ್ಧಮಲ್ಲಿಕಾರ್ಜುನಾ! (ಪುಟ. ಸಂ. ಸೊಂ. 493)

ಇಷ್ಟೆಲ್ಲ ವಚನಗಳನ್ನು ಉಲ್ಲೇಖಿಸಿ, ವ್ಯಾಖ್ಯಾನಿಸಿ ಅಮೃತಾನ್ನವುಣ್ಣಿಸಿ ಹರಳೆಣ್ಣೆ ಕುಡಿಸಿದಂತೆ, ಜ. ಚ. ನಿಯವರು ಈ ವಚನಗಳನ್ನು ಪ್ರಕ್ಷಿಪ್ತವೆಂದು ನಿರ್ಣಯಿಸಿ

ನುಡಿದಿದ್ದಾರೆ. "ನಿಶ್ಚಿಂತದಿಂದ ಕರುಣಿಸಿದ ಕುರುಹನ್ನು ಕರಸ್ಥಲದಲ್ಲಿ ಧರಿಸಿರುವೆನು ಎಂದು ಸಿದ್ಧರಾಮಯ್ಯನ ಹೇಳಿಕೆ. ಈ ವಚನ ಈತನದೆಂದು ಹೇಳಲು ಆಗದು. ಇದರ ಶೈಲಿ ಸಿಥಿಲ, ನಿರೂಪಣೆ ಅವಾಸ್ತವ, 'ಎನ್ನ ಕರಸ್ಥಲಕ್ಕೆ' ಎಂಬ ದ್ವಿರುಕ್ತಿ ಶೈಲಿ ಸೈಥಿಲ್ಯಕ್ಕೆ (ಶೈಥಿಲ್ಯ ?) ಸಾಕ್ಷಿ. ಎತ್ತಾನುಕೊಬ್ಬರು ಈ ಪ್ರಯೋಗ ಅಂದಿನ ವಚನ ಕಾರರದಲ್ಲ. 'ಬಸವಣ್ಣ ಮೊದಲಾದ ಪುರಾತನರು' ಎಂಬೀ ವಾಕ್ಯ ಸ್ಪಷ್ಟವಾಗಿ ಈ ವಚನ 16 ನೆಯ ಶತಮಾನದ ರಚನೆಯೆಂದು ಗೊತ್ತಾಗುತ್ತದೆ. 'ಕೈಯಲ್ಲಿ ಪಿಡಿದೆನು' ಎಂಬುದು ಸಹ ಇದನ್ನೇ ಎತ್ತಿ ಹಿಡಿದಿದೆ. ಇದೊಂದೇ ಅಲ್ಲ 50 ರಿಂದ 56 ರ ವರೆಗಿನ ಆರು ವಚನಗಳೂ ಪ್ರಕ್ಷಿಪ್ತ ವಚನಗಳೆಂದೇ ಹೇಳಬಹುದಾಗಿದೆ." ಸಂಪಾದನೆಯ ಸೊಂಪು, ಪುಟ 488. ತಮಗೆ ಬೇಡಾದ ವಚನಗಳನ್ನು ಪ್ರಕ್ಷಿಪ್ತವೆಂದು ಕರೆಯುವ ಜ. ಚ. ನಿಯವರು ಪಾಪ! ಪ್ರಕ್ಷಿಪ್ತ ವಚನಗಳ ಮೇಲೆ ಹತ್ತಾರು ಪುಟಗಳಷ್ಟು ವ್ಯಾಖ್ಯಾನ ಬರೆದು ಬಂಜೆಯ ಮಗನ ಸೌಂದರ್ಯವನ್ನು ವರ್ಣಿಸುವ ಅಖಂಡ ಸಾಹಸ ಮಾಡಿದ್ದಾರೆ. ಪ್ರಕ್ಷಿಪ್ತ ವಚನಗಳೆಂದೇ ಅವರ ಭಾವವಿದ್ದರೆ ಅವನ್ನು ಅರ್ಥೈಸುವ ಪ್ರಯತ್ನವನ್ನಾದರೂ ಏಕೆ ಮಾಡಬೇಕಿತ್ತೋ? ! ಈ ಆರು ವಚನಗಳನ್ನು ಪ್ರಕ್ಷಿಪ್ತವೆಂದೇನೋ ಹೇಳಬಹುದು. ಆದರೆ ಸಿದ್ಧರಾಮನ ಇನ್ನೂ ನೂರಾರು ವಚನಗಳನ್ನು, ಬಸವ ಸ್ತೋತ್ರ ತ್ರಿವಿಧಿ, ಅಷ್ಟಾವರಣ ತ್ರಿವಿಧಿ ಅವುಗಳನ್ನು ಏನು ಮಾಡುವರೋ ? ಹೀಗೆ ತನ್ನ ದಿವ್ಯಾನುಭವಯುಕ್ತ ಗುರುಕಾರುಣ್ಯವನ್ನು ಬಣ್ಣಿಸಿರುವ ಶಿವಯೋಗ ಸಾಮ್ರಾಟ, ಪರಮ ಗುರು ಸಿದ್ಧರಾಮೇಶ್ವರರ ದೀಕ್ಷಾ ಪ್ರಸಂಗವು ಚನ್ನಬಸವಣ್ಣನವರಿಂದ ಆಗಿಲ್ಲ ಎಂದು ಹೇಳುವುದೊಂದೆಡೆ ; ಬಸವಣ್ಣನವರ ವಚನದಲ್ಲಿ ಎಲ್ಲೆಲ್ಲಿಯೂ ಸುಳಿಯದ ಜಾತವೇದ ಮುನಿಗಳನ್ನು ಕಷ್ಟದಿಂದ ತಂದು ತೂರಿಸುವುದು ಮತ್ತೊಂದೆಡೆ. ಎಷ್ಟು ವಿಲಕ್ಷಣ ಮತ್ತು ವಿಚಿತ್ರ ಎನ್ನಿಸದಿರದು !

ಬಸವ ಪೂರ್ವದ ಶೈವ ಪರಂಪರೆ

"ಬಸವಣ್ಣನಿಗಿಂತಲೂ ಪೂರ್ವದಲ್ಲಿ ವೀರಶೈವವಿತ್ತು ಅಂತ ಒಪ್ಪಿಕೊಂಡಿದ್ದಾರಲ್ಲಾ ಅಷ್ಟೇ ಸಾಕು." ಎಂದು ಸಮಾಧಾನದ ಉಸಿರು ಬಿಟ್ಟಿದ್ದಾರೆ ಡಾ॥ ಜ. ಚ. ನಿಯವರು. ನಾನು ಸಾಧಾರಪೂರ್ವಕವಾಗಿ ವಿಂಗಡಿಸಿದ ಶೈವ, ವೀರಶೈವ, ಲಿಂಗಾಯತ ಈ ಮೂರರ ವಿಶ್ಲೇಷಣೆಗೆ ಒಂದೂ ಉತ್ತರ ಕೊಡದೆ, ಒಂದೇ ಒಂದು ಮಾತನ್ನು ಆರಿಸಿಕೊಂಡಿರುವುದು ಸೂಕ್ತವಲ್ಲ. ಒಂದು ಕುಟುಂಬದಲ್ಲಿ ವಯಸ್ಸಾದ ಅತ್ತೆ ಇದ್ದಳು ; ಸೊಸೆ ಬಹಳಷ್ಟು ಉದಾಸೀನತೆಯಿಂದ ಆಕೆಯನ್ನು ಕಾಣುತ್ತಿದ್ದಳು ಆದರೆ ಗಂಡನ ಸಮಾಧಾನಕ್ಕಾಗಿ ಆಕೆ ಅತ್ತೆಯನ್ನು ಬಾಯಿ ಮಾತಿನಿಂದ ಉಪಚರಿಸುವಳು. "ಅತ್ತೆ, ಗರಿಗರಿಯಾದ ಕೋಡುಬಳೆ ಮಾಡಿ ಕೊಡಲೇ "? ಎನ್ನುವಳು.

ಹಲ್ಲಿಲ್ಲದ ಮುದುಕಿ "ಬೇಡಮ್ಮಾ" ಎಂದರೆ, "ಏನ್ರಿ ಕೇಳಿಸಿಕೊಂಡಿರಾ ? ಅತ್ತೆಗೆ ಉಪ್ಪಿಟ್ಟು ಬೇಡವಂತೆ" ಎಂದು ಪುನರ್ ವ್ಯಾಖ್ಯಾನ ಮಾಡುತ್ತಿದ್ದಳು. ಹಾಗೆ, ನಾನು ಬಸವಪೂರ್ವದ ವೀರಶೈವದ ಬಗ್ಗೆ ಸಮಗ್ರವಾಗಿ, ಸಾಧಾರಪೂರ್ವಕವಾಗಿ ಬರೆದುದನ್ನು ಎಳ್ಳಷ್ಟೂ ವಿಮರ್ಶಿಸದೆ 'ಸದ್ಯ ಒಪ್ಪಿಕೊಂಡಿದ್ದಾರಲ್ಲಾ, ಅಷ್ಟೇ ಸಾಕು' ಎಂದರೆ ಅದು ಉಚಿತ ಉತ್ತರವಾಗಬಲ್ಲುದೆ ?

ಬಸವಣ್ಣನವರಿಗೂ ಪೂರ್ವದಲ್ಲಿ ಬಸವೋತ್ತರದ ಲಿಂಗಾಯತ ಧರ್ಮಕ್ಕಿಂತಲೂ ಭಿನ್ನವಾದ 'ವೀರಶೈವ' ಪಂಥವಿದ್ದಿತಾದರೂ, ಅದು ತಮಿಳುನಾಡಿನಲ್ಲಿ ಇದ್ದಿತೇ ವಿನಾ ಕರ್ನಾಟಕದಲ್ಲಿ ಅಲ್ಲ. ಮಾಣಿಕ್ಯವಾಚಕರ್, ನಕ್ಕಿರಾರ್, ತಿರುಜ್ಞಾನ ಸಂಬಂಧರ್–ಇವರುಗಳು ಆ ಪಂಥಕ್ಕೆ ಸೇರಿದವರು. ಕರ್ನಾಟಕದಲ್ಲಿ ಲಿಂಗಾಯತ ಧರ್ಮವಾಗಲೀ, ತಮಿಳುನಾಡಿನ ವೀರಶೈವ ಪಂಥವಾಗಲೀ ಬಸವಣ್ಣನವರಿಗೂ ಪೂರ್ವದಲ್ಲಿ ಇದ್ದಿರಲೇ ಇಲ್ಲ. ಇಲ್ಲಿ ಇದ್ದುದು ಕೇವಲ ಶೈವಧರ್ಮ ಮಾತ್ರ. ಈ ಬಗ್ಗೆ ಡಾ॥ ಚಿದಾನಂದ ಮೂರ್ತಿಯವರ ಅಧಿಕೃತ ಅಭಿಪ್ರಾಯ ಉಲ್ಲೇಖಿಸುವೆ.

ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಇದರಿಂದ ಆಯ್ದ ವಾಕ್ಯಗಳು.

1. ವೀರಶೈವ ಧರ್ಮದ ಉದಯಕ್ಕೆ ಮುನ್ನ ಕನ್ನಡ ನಾಡಿನಲ್ಲಿ ಜೈನರನ್ನು ಬಿಟ್ಟರೆ ಈ ಶೈವರೆ ಅತ್ಯಂತ ಪ್ರಬಲವಾಗಿದ್ದವರು. ಇವರು ಅನೇಕ ರಾಜರಿಂದ ಪೂಜಿತರಾದವರು. (ಪುಟ 129)

2. ಶ್ರೀಶೈಲವು ಒಂದು ಸುಪ್ರಸಿದ್ಧ ಕಾಳಾಮುಖ ಕೇಂದ್ರವಾಗಿದ್ದಿತು. (ಪುಟ 131)

3. ಲಾಕುಳ, ಪಾಶುಪತ-ಕಾಳಾಮುಖ ಧರ್ಮವನ್ನು ಶಾಸನಗಳಲ್ಲಿ ಶಿವಸಮಯ, ಶಿವಧರ್ಮ ಎಂದು ಮುಂತಾಗಿ ಕರೆದಿದೆ. ಬ್ರಹ್ಮಶಿವನು ಮಹೇಶ್ವರ ಧರ್ಮವನ್ನಪ್ಪಿ, ಅದರಲ್ಲಿ ತಿರುಳನ್ನು ಕಾಣದೆ ಮತ್ತೆ ಜೈನಧರ್ಮ ಸೇರಿದ್ದಾನೆ. ಬಹುಶಃ ಈ ಮಹೇಶ್ವರ ಧರ್ಮ ಎಂಬುದು ಹನ್ನೆರಡನೆಯ ಶತಮಾನದಲ್ಲಿ ಬಂದ ವೀರಶೈವ ಧರ್ಮವಲ್ಲ. ಅದಕ್ಕಿಂತಲೂ ಮುನ್ನವೇ ಕನ್ನಡನಾಡಿನಲ್ಲಿ ಪ್ರಬಲವಾಗಿದ್ದ ಲಕುಲೀಶ–ಪಾಶುಪತವನ್ನು ಸೂಚಿಸುತ್ತದೆ. (136)

4. "ಕಾಳಾಮುಖ ಸಮಯ ಸರೋವರ ರಾಜಹಂಸರ್ ಲಾಕುಳ ಸಿದ್ಧಾಂತ ನೈಯಾಯಿಕ ನಳಿನೀ ದಿವಾಕರರ್...ಶ್ರೀಶೈಳ ಪಶ್ಚಿಮದ್ವಾರ ತೋರಣರ್ ಮಲ್ಲಿಕಾರ್ಜುನ ದೇವದರ್ಶನ ಕಾರಣಪುರುಷರ್" ಎಂದು ಸುರೇಶ್ವರ ಪಂಡಿತ

ದೇವ ಎಂಬ ಯತಿಯನ್ನು ಶಾಸನವೊಂದು ಹೊಗಳಿದೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ವ್ಯವಹಾರವನ್ನು ಲಾಕುಳ ಶೈವರು ನಡೆಯಿಸುತ್ತಿದ್ದರೆಂಬುದಕ್ಕೆ ಇದು ಒಂದು ಸಾಕ್ಷಿ (ಪುಟ 137)

5. ಬಳ್ಳಿಗಾವೆಯ ಕೋಡಿಯ ಮಠ (ಪ್ರಭುದೇವರು ಶಿಕ್ಷಣ ಪಡೆದ ಕೇಂದ್ರ) ಲಾಕುಳ ಶೈವರ ಪ್ರಸಿದ್ಧಕೇಂದ್ರವಾಗಿ ದಕ್ಷಿಣದ ಕೇದಾರವೆಂದು ಖ್ಯಾತಿ ಹೊಂದಿತ್ತು. (ಪುಟ 150)

6. ಬಸವ, ಚನ್ನಬಸವ, ಅಲ್ಲಮರಿಂದ ಉತ್ಕರ್ಷವನ್ನು ಪಡೆದ ವೀರಶೈವ ಧರ್ಮದ ಮುಂದೆ ಕಾಳಾಮುಖಧರ್ಮವು ಹೋರಾಡಿ, ಎದುರಿಸಲಸಮರ್ಥವಾಗಿ ಕೊನೆಗೆ ಅದರಲ್ಲೇ ವಿಲೀನಗೊಂಡಂತೆ ತೋರುತ್ತದೆ. ಅದಕ್ಕೆ ಉತ್ತಮ ನಿದರ್ಶನವೆಂದರೆ ಬೆಳಗಾವಿ ಜಿಲ್ಲೆಯ ಪೂವಲ್ಲಿ (ಈಗಿನ ಹೂಲಿ) ಮಠ. ರಾಜಮಹಾರಾಜರಿಂದ ಪೂಜಿತರಾಗಿದ್ದ ಶೈವಗುರುಗಳ ಪ್ರಸಿದ್ಧ ಕೇಂದ್ರವಾಗಿಪ್ಪ ಆ ಮಠ ಈಗ ಪ್ರಸಿದ್ಧ ವೀರಶೈವ ಮಠವಾಗಿದೆ. (ಪುಟ 156)

ಕಾಳಾಮುಖರು ವೀರಶೈವರಾಗಿ ಪರಿವರ್ತನೆ ಹೊಂದುವ ಕಾರ್ಯ ಸರಿಸುಮಾರು ಕ್ರಿ. ಶ. 1410-30 ರಲ್ಲಿ ಅಥವಾ ಅದಕ್ಕೂ ಹಿಂದೆ ಆರಂಭವಾಗಿ ನಿಧಾನವಾಗಿ ಮುಂದುವರಿದಂತೆ ಕಾಣುತ್ತದೆ. (ಪುಟ 157)

ವಚನಕಾರ ಸಿದ್ಧರಾಮನು ಆರಂಭದಲ್ಲಾದರೂ 'ಶೈವ'ನಾಗಿದ್ದ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಮುಂದೆ ಅವನು ಚನ್ನಬಸವಣ್ಣನವರಿಂದ ದೀಕ್ಷೆಯನು ಪಡೆದು ವೀರಶೈವನಾಗುತ್ತಾನೆ. (ಪುಟ 157-158)

ಹರಿಹರ ಕವಿಯು ವರ್ಣಿಸಿದ ರೇವಣಸಿದ್ಧನು "ಲಾಕುಳದ ಲಾಕ್ಷಣಿಕ"ನಾಗಿರುವುದರಿಂದ ಅವನು ಲಕುಲೀಶ ಪಂಥದವನಿರಬೇಕು. ಡಾ॥ ಬಿ ಸಿ. ಜವಳಿ, (ಪುಟ 92); ಲಿಂ. ಧ. ಸ್ಥಾಪಕರಾರು ?

ಶಂಕರ ದಾಸಿಮಯ್ಯನು ಶರಣರ ಮಾರ್ಗಕ್ಕೆ ಬರುವ ಮುನ್ನ ಗೋವಿಂದನೆಂಬ ವಿಪ್ರನಾಗಿದ್ದನು. ಅವನು ಆಗ ಕಾಪಾಲಿಕ ಶೈವನಿರಬೇಕು. ಆದುದರಿಂದಲೇ ಹರಿಹರಕವಿಯು ಶಂಕರ ದಾಸಿಮಯ್ಯನನ್ನು "ಕೋಪದ ಕ್ಪಾಪಾಲಿ" ಎಂದು ಕರೆದಿದ್ದಾನೆ. ಡಾ॥ ಬಿ. ಸಿ. ಜವಳಿ, ಅದೇ. (ಪುಟ 93)

ಕೂಡಲ ಸಂಗಮದ ಮಠ

ಕೂಡಲ ಸಂಗಮದ ಮಠವೇ ಲಿಂಗಾಯತ ಮಠವಲ್ಲ ಎಂದಾಗ ಬಸವಣ್ಣನಿಗೆ

ಲಿಂಗಧಾರಣೆ ಹೇಗೆ ಮಾಡಲು ಸಾಧ್ಯವಾದೀತು ? ಆ ಬಗ್ಗೆ ಲಭ್ಯವಿರುವ ಈ ಮಾತುಗಳನ್ನು ನೋಡಿರಿ.

(1) ಈ ಶುದ್ಧ ಶೈವರು ತಮಿಳುನಾಡಿನಲ್ಲಿ ಮಾತ್ರವಲ್ಲ ಕನ್ನಡನಾಡಿನಲ್ಲಿಯೂ ಹನ್ನೆರಡನೆಯ ಶತಮಾನದಲ್ಲಿ ಉಪಲಬ್ಧವಿದ್ದರು. ಶ್ರೀ ಬಸವೇಶ್ವರರು ವಿದ್ಯಾಭ್ಯಾಸ ಭಕ್ತಿಯ ಸಾಧನೆಗಾಗಿ ಮತ್ತು ತಮ್ಮ ಐಕ್ಯಕ್ಕಾಗಿ ಹೋದ ಕೂಡಲ ಸಂಗಮವು ಈ ಶುದ್ಧ ಶೈವರಿಗೇ ಸಂಬಂಧಿಸಿತ್ತೆಂದು ಮೋಳಿಗೆಯ ಮಾರಯ್ಯನವರ ಒಂದು ವಚನವು (ಮೋ. ಮಾ. ವ. 49) ತಿಳಿಸುತ್ತದೆ. ಈ ವಚನದಲ್ಲಿ "ಶುದ್ಧಶೈವ ಕಪ್ಪಡಿ ಸಂಗಮನಾಥನಲ್ಲಿ ಐಕ್ಯವಾದನು" ಎಂದು ಉಕ್ತವಾಗಿದೆ.

—ಡಾ॥ ಬಿ. ಸಿ. ಜವಳಿ, ಲಿಂಗಾಯತ ಧರ್ಮಸ್ಥಾಪಕರಾರು ? –ಪುಟ 76.

(2) ವೀರಶೈವ ಯುಗದ ಪೂರ್ವದಲ್ಲಿ ಪರಮತ ವಿಡಂಬನೆಯನ್ನೇ ಗುರಿಯಾಗಿಟ್ಟುಕೊಂಡು ವಿರಚಿತವಾದ ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯ ಪರೀಕ್ಷೆ ಇವು ವೀರಶೈವದ ಅಸ್ತಿತ್ವವನ್ನೇ ಸೂಚಿಸುವುದಿಲ್ಲ.

—ಡಾ॥ ಬಿ. ಸಿ. ಜವಳಿ. ಲಿಂ. ಧ. ಸ್ಥಾಪಕರಾರು ? ಪುಟ 69

(3) ಈ ಕಾರಣದಿಂದಲೇ ಶ್ರೀ ಬಸವೇಶ್ವರರು ಬೋಧಿಸುತ್ತಿದ್ದ ಹೊಸ ಧರ್ಮಕ್ಕೆ ಪೂರ್ವದ ಅನೇಕ ಶೈವಪಂಥಗಳವರು ವಿಲೀನವಾದಂತೆ ತೋರುತ್ತದೆ. ಹೀಗೆ ವಿಲೀನವಾದವರಲ್ಲಿ ಅಲ್ಲಮಪ್ರಭು, ಸಿದ್ಧರಾಮ, ಮೋಳಿಗೆಯ ಮಾರಯ್ಯ, ಶಂಕರದಾಸಿಮಯ್ಯ, ಆದಯ್ಯ, ಹರಿಹರದೇವ ಮೊದಲಾದವರೇ ಪ್ರಮುಖರೆನ್ನಬಹುದು ; ಈ ಧರ್ಮಾಂತರವು ಹಾಗೆಯೇ ಹದಿನೈದನೆಯ ಶತಮಾನಕ್ಕೂ ಮುಂದುವರಿದು ಚಾಮರಸಾದಿ ಕವಿಗಳನ್ನೂ ಒಳಗೊಳ್ಳುತ್ತದೆ.

—ಡಾ॥ ಬಿ. ಸಿ. ಜವಳಿ. ಪುಟ 71

ಮೋಳಿಗೆ ಮಾರಯ್ಯನವರ 491ನೆಯ ವಚನ.

(ಎ) ಶುದ್ಧಶೈವ ಕಪ್ಪಡಿಯ ಸಂಗಮನಾಥ.........

(ಬಿ) ಶುದ್ಧಶೈವವ ಹೊದ್ದದೆ, ಪೂರ್ವಶೈವವನಾಚರಿಸದೆ, ಮಾರ್ಗಶೈವವ ಮನ್ನಣೆಯ ಮಾಡದೆ, ವೀರಶೈವವನಾಧರಿಸದೆ, ಆದಿಶೈವವನನುಕರಿಸದೆ ಭೇದಿಸಬಾರದ ಲಿಂಗಕರದಲ್ಲಿದ್ದು, ಕಂಗಳಿನಲ್ಲಿ ನಿಂದು........(ಅದೇ ವಚನ)

ಇಲ್ಲಿ ಬಸವಣ್ಣನವರು ಶುದ್ಧಶೈವ, ಪೂರ್ವಶೈವ, ಮಾರ್ಗಶೈವ, ವೀರಶೈವ ಇವಾವುವನ್ನೂ ಅನುಕರಿಸಲಿಲ್ಲ ಎಂಬ ಮಾತು ಸ್ಪಷ್ಟವಿದೆ.

"ಬಸವೇಶ್ವರ ವಚನಾಲು ಸಮಗ್ರ ಸಮೀಕ್ಷಾ". ಲೇಖಕರು : ಡಾ॥ ಬಾಡಾಲ ರಾಮಯ್ಯ. ಪ್ರಕಾಶಕರು : ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ, ಸಿರಿಗೆರೆ. ಈ ಒಂದು ಕೃತಿಯ ಕರ್ತರಾದ ಡಾ॥ ಬಾಡಾಲ ರಾಮಯ್ಯನವರ ವಿದ್ವತ್ಪೂರ್ಣ ಸಂಶೋಧನೆ ಅರ್ಜುನವಾಡ ಶಾಸನಕ್ಕೆ ವಿಶೇಷ ಅರ್ಥವನ್ನಿತ್ತಿದೆಯಲ್ಲದೆ, ಅನೇಕ ಸಮಸ್ಯೆಗಳನ್ನು ಬಗೆಹರಿಸುತ್ತಿದೆ.

ಅರ್ಜುನವಾಡ ಶಾಸನವನ್ನು ವ್ಯಾಖ್ಯಾನಿಸುವ ಡಾ॥ ಬಾಡಾಲರಾಮಯ್ಯನವರು ದೇವರಾಜ ಮುನಿಪನು ಸಂಗನ ಬಸವಣ್ಣನ ಪಾದಕಮಲ ಭೃಂಗನೆಂದು, ಕೂಡಲದ ಮಠಾಧೀಶನಾದ ಇವನು ಬಸವ ಧರ್ಮವನ್ನು ಪ್ರವೇಶಿಸಿದನೆಂದು ಅಭಿಪ್ರಾಯ ಪಡುತ್ತಾರೆ.

ಸಂಗನ ಬಸವನ ಅಂಘ್ರಿಯ
ಭೃಂಗೈಕಂ ದೇವರಾಜ ಮುನಿಪನ ತನಯಂ
ಜಂಗಮ ಪರುಸಂ ಸೋವರ
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥

ಸಂಗನ ಬಸವಣ್ಣನ ಪಾದಕಮಲ ಭೃಂಗನಾದ ದೇವರಾಜ ಮುನಿಪನ ತನಯನು (ಶಿಷ್ಯನು), ಜಂಗಮ ಪರುಷನು, ಸೋವರ ಸಂಗನ ಪ್ರೀತಿಯ ಪುತ್ರನು ಆದ ಕಲಿದೇವರಸನು ಎಂಬಲ್ಲಿ ಸಂಗನ ಬಸವಣ್ಣನ ಪಾದಕಮಲ ಭೃಂಗೈಕನಾದ ದೇವರಾಜ ಮುನಿಪನ ಪ್ರಸ್ತಾಪವಿದೆ. ಪುಟ 82

ಈ ದೇವರಾಜ ಮುನಿಪನಾರು?

ಹಳೇಬೀಡಿನ ಶಾಸನದ ಪ್ರಕಾರ, ಈಶಾನ್ಯಗುರುವಿನ ಓರ್ವ ಶಿಷ್ಯ ದೇವರಾಶಿ ಪಂಡಿತನು. ಈಶಾನ್ಯ ಶಕ್ತಿ ಪಂಡಿತದೇವ ಓರ್ವ ಕಾಳಾಮುಖ ಗುರುವು (E.C.V.B, 117). ಈ ಕಾಳಾಮುಖ ಗುರುವು ಕಲಚುರಿ ರಾಜರಿಗೂ ರಾಜ ಗುರುವಾಗಿದ್ದನು. ಈ ಈಶಾನ ಗುರುವೇ ಬಸವಣ್ಣನಿಗೆ ಮೊಟ್ಟಮೊದಲು ಕಪ್ಪಡಿ ಸಂಗಮದಲ್ಲಿ ಆಶ್ರಯ ನೀಡಿದವನು. ಸಂಗಮೇಶ್ವರಾಲಯದ ಸ್ಥಾನಪತಿಯಾಗಿದ್ದ ಈಶಾನ ಗುರುವು ಬಸವಣ್ಣನನ್ನು ಕಂಡಾಗ ಈತನು ಕಾರಣಿಕನಾಗಳೇ ವೇಳ್ಕುಂ ಎಂದು ಗ್ರಹಿಸಿದ. ಈಶಾನ ಗುರುವಿನ ಶಿಷ್ಯನೇ ದೇವರಾಜ ಪಂಡಿತ. ಇವನು ಬಸವಣ್ಣನ ಭಕ್ತಿಯನ್ನು, ಪ್ರಭಾವವನ್ನು ಕಣ್ಣಾರೆ ಕಂಡವನು. ಭರತ ಖಂಡದಲ್ಲಿ ಬಸವನ ಕೀರ್ತಿ ದಿಕ್ಕು ದಿಕ್ಕುಗಳಿಗೆ ವ್ಯಾಪಿಸಿತು. ಆತ ಒಂದು "ಕೊತ್ತ ಮತಮುನ ಸ್ಥಾಪಿಂಚನು" ಹೊಸಮತವನ್ನು ಸ್ಥಾಪಿಸಿದನು, ಮತ ಪ್ರವರ್ತಕನಾದನು.

ಬಸವನ ಈ ಸಿದ್ಧಾಂತವನ್ನು ದೇವರಾಶಿ ಪಂಡಿತನು ಕಣ್ಣಾರೆ ಕಂಡನು. ಜಗದಾರಾಧ್ಯನಾದ ಬಸವನ ಮತವನ್ನು ತಾನೂ ಕೂಡ ಅನುಸರಿಸಿದನು.

ಬಸವನ ಮತವನ್ನು ಮೊಟ್ಟಮೊದಲು ತಮ್ಮ ಮಠದಲ್ಲಿ ಪ್ರವೇಶ ಮಾಡಿಸಿಕೊಂಡವನು ಈಶಾನ್ಯ ಗುರುವಿನ ಶಿಷ್ಯನಾದ ದೇವರಾಶಿ ಪಂಡಿತ, ದೇವರಾಜ ಮುನಿಪನು. (ಡಾ॥ ಬಾಡಾಲ ರಾಮಯ್ಯ ಪುಟ 85-86. ಈ ಅನುವಾದ ತೆಲುಗು ಮೂಲದ ತದ್ರೂಪು).

ಆಗಮಗಳಲ್ಲಿ ಇಷ್ಟಲಿಂಗ ಶಬ್ದವನ್ನು ಉಲ್ಲೇಖಿಸುವ ಒಂದು ಶ್ಲೋಕವಿದೆ. ಅದಕ್ಕೆ ನಾನು ಏನೂ ಉತ್ತರ ಕೊಟ್ಟಿಲ್ಲ ಎಂದು ಜ. ಚ. ನಿ. ಪುಟ 43ರಲ್ಲಿ ಟೀಕಿಸಿದ್ದಾರೆ. ಈ ಶ್ಲೋಕದ ಬಗ್ಗೆ ಡಾ॥ ಬಿ. ಸಿ. ಜವಳಿಯವರು ಬರೆದಿರುವ ಅಭಿಪ್ರಾಯವನ್ನು ಕೊಟ್ಟುಬಿಡುತ್ತೇನೆ. ಅದೇ ನಮ್ಮ ಅಭಿಪ್ರಾಯ ಎಂದೂ ಹೇಳ ಬಯಸುತ್ತೇನೆ.

ಕೃತಿ : ಲಿಂಗಾಯತ ಧರ್ಮಸ್ಥಾಪಕರಾರು?

ಬಸವಣ್ಣನವರ ವಚನದಲ್ಲಿ ಬರುವ ಪಾಠಾಂತರ :
ಪ್ರಾಣಲಿಂಗಮವಿಶ್ವಸ್ಯ ಗ್ರಾಮಲಿಂಗಂ ಯಃ ಸಮಾಚರೇತ್
ಶ್ವಾನಯೋನಿ ಶತಂಗತ್ವಾ ಚಂಡಾಲ ಗೃಹಮಾಚರೇತ್ ॥
ಆದಯ್ಯನ ವಚನದಲ್ಲಿ:
ಪ್ರಾಣಲಿಂಗ ಮವಿಶ್ವಸ್ಯ ತೀರ್ಥಲಿಂಗಂ ಗತೋನರಃ
ಶುನಕಯೋನಿ ಶತಂಗತ್ವಾ ಚಾಂಡಾಲಗೃಹಮಾ ವಿಶೇತ್ ॥
ಅಕ್ಕಮಹಾದೇವಿ ವಚನದಲ್ಲಿ:
ಇಷ್ಟಲಿಂಗ ಮವಿಶ್ವಸ್ಯ ತೀರ್ಥಲಿಂಗಂ ನಮಸ್ಕೃತಃ
ಶ್ವಾನಯೋನಿ ಶತಂಗತ್ವಾ ಚಾಂಡಾಲ ಗೃಹಮಾಚರೇತ್ ॥

ಈ ಶ್ಲೋಕದಲ್ಲಿಯ ಬದಲಾವಣೆಗಳನ್ನು ವಚನಕಾರರೋ ಇಲ್ಲವೇ ವಚನಗಳ ಪ್ರತಿಕಾರರೋ ಮಾಡಿಕೊಂಡಿರಬೇಕೆಂದೂ, ತಮತಮಗೆ ಅನುಕೂಲವಾಗುವಂತೆ ತಿದ್ದಿಕೊಂಡಿರಬೇಕೆಂದೂ ಹೇಳಬಹುದಾಗಿದೆ. ಈ ಸಂಸ್ಕೃತ ಶ್ಲೋಕಗಳು ಅಕ್ಷರಗಣಗಳನ್ನು ಅವಲಂಬಿಸಿರುವುದರಿಂದಲೂ, ಸಂಸ್ಕೃತದಲ್ಲಿ ಕನ್ನಡದಂತೆ ಎರಡನೆಯ ಅಕ್ಷರ ಪ್ರಾಸವಿಲ್ಲದುದರಿಂದಲೂ, ಮತ್ತು ಸಂಸ್ಕೃತದ ಬರೆಹದ ಭಾಷೆ ಕನ್ನಡದಂತೆ ಅವಸ್ಥಾಂತರಗಳನ್ನು ಹೊಂದದಿದ್ದುದರಿಂದಲೂ ಈ ರೀತಿ "ಪ್ರಾಣ" ವೆನ್ನುವಲ್ಲಿ, "ಇಷ್ಟ" ಇಲ್ಲವೆ "ಭಾವ" ಲಿಂಗವೆಂದು ಬದಲಾಯಿಸಿಕೊಳ್ಳುವುದು ಸುಲಭವಾಗಿದೆ. ಇದರಿಂದ ಅರ್ಥದಲ್ಲಿ ವಿಶೇಷ ಬದಲಾವಣೆಯಾದಂತೆ ಅವರಿಗೆ ಎನಿಸಿಯೇ ಇಲ್ಲ.

ಹೀಗಾಗಿ ಇಂತಹ "ಕೈಯಾಡಿಸಿದ" ಶ್ಲೋಕಗಳಲ್ಲಿ ತಿದ್ದುಪಡಿಗಳನ್ನು ಕಂಡುಹಿಡಿಯುವುದು ದುಸ್ತರ. ಈ ಶ್ಲೋಕಗಳನ್ನೇ ಆಧಾರವಾಗಿಟ್ಟುಕೊಂಡು ನಿರ್ಣಯ ಮಾಡುವುದೂ ಅನುಚಿತವಾದೀತು. (ಪುಟ 117–118)

ಇನ್ನು ಕೆಲವೊಂದು ಸಂದೇಹಗಳಿಗೆ ಸಮಾಧಾನ

1. "ಬಸವಣ್ಣನಿಗೆ ಸಮಯಾಚಾರ ದೀಕ್ಷೆಯಾಗಿತ್ತು ಎಂದೊಮ್ಮೆ ಹೇಳುವರು; ಮತ್ತೊಮ್ಮೆ ದೀಕ್ಷೆಯಾಗಿಲ್ಲ" ಎನ್ನುವರು.

ಸಮಯಾಚಾರ ದೀಕ್ಷೆ ಶೈವಧರ್ಮದ ದೀಕ್ಷೆ. ಇಂದಿಗೂ ತಮಿಳುನಾಡಿನ ಶೈವರಲ್ಲಿ ಆಚರಣೆಯಲ್ಲಿದೆ. ಅದು ಬಸವೋಕ್ತ ಇಷ್ಟಲಿಂಗ ದೀಕ್ಷೆಯಂತೆ ಸಾಮಾಜಿಕ+ಧಾರ್ಮಿಕ ಸಂಸ್ಕಾರವಲ್ಲ ; ಕೇವಲ ಮುಮುಕ್ಷುಗಳು ಸ್ವಂತ ಇಚ್ಛೆಯಿಂದ ಸ್ವೀಕರಿಸಬಹುದಾಗಿದ್ದ ಅಧ್ಯಾತ್ಮ ದೀಕ್ಷೆ ಈ ಸಮಯಾಚಾರ ದೀಕ್ಷೆಗೂ ಲಿಂಗದೀಕ್ಷೆಗೂ ತುಂಬಾ ವ್ಯತ್ಯಾಸವಿದೆ. ಅಲ್ಲಿ ದೀಕ್ಷಾನಂತರ ಇಷ್ಟಲಿಂಗಧಾರಣವಿಲ್ಲ.

2. ದೇವರ ದಾಸಿಮಯ್ಯ ಮೊದಲಾದವರಿಗೆ ದೀಕ್ಷೆ ಇರಲಿಲ್ಲವೆ? ಪುಟ 44

ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ, ಶಂಕರ ದಾಸಿಮಯ್ಯ ಬೇರೆ ಬೇರೆ ಎಂದು, ವಚನಗಳನ್ನು ಬರೆದ ಜೇಡರ ದಾಸಿಮಯ್ಯ ಬಸವಾದಿ ಪ್ರಮಥರ ಸಮಕಾಲೀನನೆಂದು ಬಹುಜನ ವಿದ್ವಾಂಸರ ಅಭಿಪ್ರಾಯ. ವಚನಕಾರ ದಾಸಿಮಯ್ಯ ಮೊದಲು 'ಶಿವದಾಸ'; ನಂತರ ಬಸವಪಥಿಕನಾಗಿರಬೇಕು. ಏಕೆಂದರೆ ಅವನು ಮುಡಿಯಲ್ಲಿ ಲಿಂಗವ ಧರಿಸುವ ಶಿವಭಕ್ತನಾಗಿದ್ದ.

1. ಕಡು ಭಸಿತವ ಪೂಸಿ
   ಮುಡಿಯಲ್ಲಿ ಲಿಂಗವ ಧರಿಸಿ (ವಚನ 146)
2. ಈಶ ನಿಮ್ಮ ಪೂಜಿಸಿದ ಬಳಿಕ, ಅನ್ಯ ದೈವಂಗಳಿಗೆ ಹೇಸಿರಬೇಕು(ವಚನ 143)
3. ತೊಡೆಯಲ್ಲಿ ಮುದ್ರೆಯನೊತ್ತಿದಡೇನೋ.
   ಮಡಿಲಲ್ಲಿ ಲಿಂಗವ ಕಟ್ಟಿದೊಡೇನೋ (ವ. 57)
4. "ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ" (ವಚನ 132) ಎಂದು ಏಕಶಿವೋಪಾಸಕನಾಗಿದ್ದ ದಾಸಿಮಯ್ಯ ಎತ್ತನೇರಿದ ಕರ್ತನೊಬ್ಬನನ್ನೇ ಪೂಜಿಸುತ್ತಿದ್ದ. (ವಚನ 70)

ಇಷ್ಟಲಿಂಗ ಉಪಾಸಕ ಬಸವಣ್ಣ ಹೇಳಿದ್ದು ಈಶನನ್ನು,ಎತ್ತನೇರಿದ ಕರ್ತನನ್ನು ಆರಾಧಿಸಲು ಅಲ್ಲ; ಜಗದಗಲ ಮುಗಿಲಗಲವಿರುವ ಪರಮಾತ್ಮನನ್ನು. ಹೀಗೆ

ಬಸವಣ್ಣ ಏಕದೇವೋಪಾಸಕ. ದಾಸಿಮಯ್ಯನ ಬಗ್ಗೆ ಅತ್ಯಂತ ವಿವರವಾದ ಲೇಖನವೊಂದನ್ನು ಸತ್ಯ–ಸಂದೇಹ–ಸಮಾಧಾನ ಎಂಬ ಪುಸ್ತಕದಲ್ಲಿ ಪ್ರಕಟಿಸಿರುವ ಕಾರಣ, ಅದನ್ನು ಡಾ|| ಜ. ಚ. ನಿಯವರೆಗೆ ಕಳಿಸುವೆನಾದ ಕಾರಣ ದಾಸಿಮಯ್ಯನ ಪ್ರಸ್ತಾಪ ಇಲ್ಲಿಗೆ ಮೊಟಕು ಮಾಡುವೆ.

ಅಲ್ಲದೆ ದಾಸಿಮಯ್ಯನ ಪತ್ನಿ ದುಗ್ಗಳೆ ಬರೆದುದು ಎಂದು ಹೇಳಲಾಗಿರುವ, ಒಂದು ವಚನ ಹೀಗಿದೆ:

ಭಕ್ತನಾದರೆ ಬಸವಣ್ಣನಂತಾಗಬೇಕು.
ಜಂಗಮವಾದರೆ ಪ್ರಭುದೇವರಂತಾಗಬೇಕು
ಯೋಗಿಯಾದರೆ ಸಿದ್ಧರಾಮನಂತಾಗಬೇಕು
ಭೋಗಿಯಾದರೆ ಚೆನ್ನಬಸವಣ್ಣನಂತಾಗಬೇಕು
ಐಕ್ಯನಾದರೆ ನಮ್ಮ ಅಜಗಣ್ಣನಂತಾಗಬೇಕು
ಇಂತೀ ಐವರ ಕಾರುಣ್ಯ ಪ್ರಸಾದವ ಕೊಂಡು
ಸತ್ತಹಾಗಿರಬೇಕಲ್ಲದೆ ತತ್ತ್ವದ ಮಾತು ನಮಗೇಕಯ್ಯ ?
ದಾಸಯ್ಯ ಪ್ರಿಯ ರಾಮನಾಥಾ (ಮಿಶ್ರಸ್ತೋತ್ರದ ವಚನಗಳು 77)

ಶಾಂತಲಿಂಗ ದೇಶಿಕನೆಂಬ ಕವಿ ಈ ಅಂಕಿತದ ವಚನ ದುಗ್ಗಲೆಯದು ಎಂದು ಖಚಿತವಾಗಿ ಹೇಳುತ್ತಾನೆ. ಹೀಗೆ ದಾಸಿಮಯ್ಯ ದುಗ್ಗಲೆಯರು ಅಂದರೆ ವಚನಗಳನ್ನು ಬರೆದ ಜೇಡರ ದಾಸಯ್ಯ – ದುಗ್ಗಲೆಯರು ಬಸವಣ್ಣನವರ ಸಮಕಾಲೀನರು.

ಅಕ್ಕಮಹಾದೇವಿ ಅನುಭವ ಮಂಟಪಕ್ಕೆ ಬಂದಾಗ ಎಲ್ಲರಿಗೂ ಶರಣು ಸಲ್ಲಿಸಿ ವಚನವೊಂದನ್ನು ನುಡಿವಳು :

"ಅನುಮಿಷನಲ್ಲಮಯ್ಯ ಮರುಳು ಶಂಕರಯ್ಯ
ಕೋಲಶಾಂತಯ್ಯ ಮಾದಾರ ಧೂಳಯ್ಯ
ಹಲಾಯುಧ ದಾಸಿಮಯ್ಯ ಭಂಡಾರಿ ಬಸವರಾಜ
ಮುಖ್ಯವಾದ ಚನ್ನಮಲ್ಲಿಕಾರ್ಜುನನ ಶರಣರಿಗೆ
ನಮೋ ನಮೋ ಎಂಬೆನು.

(ವಚನ 201 ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ)

3. "ಹಿಂದೂ ಸಮಾಜ ಅಥವಾ ಅಂದು ಇದ್ದ ಸಮಾಜದಲ್ಲಿ ಸಮಾನವಾದ ಒಂದು ಧಾರ್ಮಿಕ ಸಂಸ್ಕಾರವಿರಲಿಲ್ಲ........" ಇಲ್ಲಿ ಅಂದಿದ್ದ ಸಮಾಜದ ಹೆಸರನ್ನು

ಹೇಳಲು ಹಿಂಜರಿಕೆ, ಇತ್ತೀಂದು ಪರ್ಯಾಯವಾಗಿ ಒಪ್ಪಿರುವಿಕೆ, ಸಿದ್ಧಾಂತ ಸಂಸ್ಕಾರವಿರಲಿಲ್ಲವೆಂದು ಅರ್ಥವಿಲ್ಲದೆ ತೀರ್ಮಾನಿಸಿರುವಿಕೆ. ಪುಟ 44

ಇದು ಜ.ಚ.ನಿಯವರ ಟೀಕೆ. "ಅಂದು ಇದ್ದ ಸಮಾಜ" ಎಂದು ಬಳಸಿದ್ದೇನೆ ಉದ್ದೇಶಪೂರ್ವಕವಾಗಿ. 'ಹಿಂದೂ' ಸಮಾಜ ಎಂಬ ಶಬ್ದ ಇತ್ತೀಚೆಗೆ ಪ್ರಚಲಿತಗೊಂಡ, ಪ್ರಚಾರಗೊಂಡ ಪದ. ಜನಾಂಗವನ್ನು ಸಂಘಟಿಸುವ ಯತ್ನದಲ್ಲಿ ಶ್ರೀ ಸಾವರ್‌ಕರ್, ವಲ್ಲಭಭಾಯಿ, ಹೆಡ್ಗೆವಾರ್ ಮುಂತಾದವರು ಪ್ರಚಾರಕ್ಕೆ ತಂದ ಪದ. ಸಮಾಜ ಎಂದಿನಿಂದಲೋ ಇದೆ. ಆದರೆ 'ಹಿಂದೂ' ಎಂಬ ಪದ ವಚನ ಸಾಹಿತ್ಯ ಮತ್ತದರ ಸಮಕಾಲೀನ ಸಾಹಿತ್ಯದಲ್ಲೆಲ್ಲೂ ಇಲ್ಲ. ಶೈವ, ವೈದಿಕ, ವೈಷ್ಣವ, ಜೈನ, ಬೌದ್ಧ, ಕಾಪಾಲಿಕ, ಶಾಕ್ತ, ಬ್ರಾಹ್ಮಣ, ಕ್ಷತ್ರಿಯ, ಶೂದ್ರ–ಹೀಗೆಲ್ಲ ಶಬ್ದಗಳು ಹಿಂದೆ ಬಳಕೆಯಲ್ಲಿದ್ದವು. ಅನ್ಯ ದೇಶೀಯ ಧರ್ಮಗಳು ಈ ದೇಶದಲ್ಲಿ ಅಡಿಯಿಟ್ಟು, ಧಾಳಿ ಮಾಡತೊಡಗಿದಾಗ ಮೂಲನೆಲದ ಧರ್ಮಕ್ಕೆ ಒಂದು ಹೆಸರನ್ನು ಸಂಘಟನೆಗೆ ಬಳಸುವ ಅವಶ್ಯಕತೆ ಒದಗಿದಾಗ, 'ಹಿಂದು' ಪದ ಹೆಚ್ಚು ಪ್ರಚಾರಕ್ಕೆ ಬಂದಿತು. ಮೊದಲು ಅದು 'ಸಿಂಧು' ಬಯಲಲ್ಲಿ ವಾಸಿಸುವವರಿಗಷ್ಟೆ, ಪರ್ಷಿಯನ್ನರಿಂದ ಕೊಡಲ್ಪಟ್ಟು ಅನ್ವಯಿಸುತ್ತಿತ್ತು. ಆದ್ದರಿಂದ ಬಸವ ಪೂರ್ವದ ಭಾರತೀಯ ಸಮಾಜಕ್ಕೆ 'ಹಿಂದೂ ಸಮಾಜ' ಎಂದು ಕರೆದರೆ ತಪ್ಪಾಗುತ್ತದೆ.

ಎಲ್ಲ ಬೌದ್ಧರಿಗೆ ಒಂದು ಸಂಸ್ಕಾರವಿರುವಂತೆ, ಎಲ್ಲ ಜೈನರಿಗೆ ಇರುವಂತೆ, ಎಲ್ಲ ಶೈವ, ವೈಷ್ಣವರಿಗೆ ಇರಲಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಉಪನಯನ ಸಂಸ್ಕಾರವಿದ್ದರೂ ಒಕ್ಕಲಿಗ, ಕುರುಬ, ನೇಕಾರ, ಬಡಿಗ, ಅಸ್ಪೃಶ್ಯ, ಗಾಣಿಗ, ಕುಂಬಾರ, ಮಡಿವಾಳ– ಈ ಮುಂತಾದವರಿಗೆ, ಮತ್ತು ಸ್ತ್ರೀಯರಿಗೆ ಸಂಸ್ಕಾರವೇ ಇರಲಿಲ್ಲ. ಅಂದೇಕೆ, ಲಿಂಗಾಯತ ಧರ್ಮಕ್ಕೆ ಸೇರಿರುವ ಈ ಪಂಗಡಗಳನ್ನು ಹೊರತುಪಡಿಸಿ ಇಂದೂ ಸಹ ಒಕ್ಕಲಿಗ, ಕುರುಬ, ಹರಿಜನ ಮುಂತಾದ ಜನಾಂಗದವರಿಗೆ ಯಾವ ಸಂಸ್ಕಾರ ಕೊಡಲ್ಪಡುತ್ತಿದೆ? ಸಮಸ್ತ ಜನರನ್ನು ಒಂದು ಸಂಸ್ಕಾರದ ಬಂಧನದೊಳಕ್ಕೆ ತರಲು ಪ್ರಯತ್ನಿಸಿದವರಲ್ಲಿ ಬಸವಣ್ಣನೇ ಪ್ರಥಮ ಕ್ರಾಂತಿಪುರುಷ. ಅಂತೆಯೇ ಈ ಸಮಾಜದಲ್ಲಿ ಎಲ್ಲ ಜಾತಿ, ಉಪಜಾತಿಗಳವರು ಸಮಾವೇಶವಾಗಿರುವುದನ್ನು ನೋಡಬಹುದು.

8) "ಬಸವಣ್ಣನ ಸಾಧನ ಆಕಾಶಯಾನ. ಆತ ಎಲ್ಲರಂತೆ ಸಾಧಕನಲ್ಲ. ವಿಶೇಷ ಪ್ರವಾದಿ. ಬುದ್ಧ, ಏಸುಗಳಂತೆ ಕ್ರಿಯಾಲಿಂಗ ವಿರಹಿತ!" ಇದು ಜ.ಚ.ನಿಯವರ ಟೀಕೆಯ ವೈಖರಿ. ಬುದ್ಧ, ಏಸುವಿನಂತೆ ಬಸವಣ್ಣನು ಒಬ್ಬ ಪ್ರವಾದಿ ಎಂದು ನಾನಂದ ಮಾತ್ರಕ್ಕೆ ಅವರಿಗೆ ಕ್ರಿಯಾಲಿಂಗವಿರಲಿಲ್ಲವಾದಂತೆ,

ಬಸವಣ್ಣನಿಗೆ ಇರಲಿಲ್ಲವೆಂದೇನೂ ಅರ್ಥವಲ್ಲ! ನೂತನ ಪಥ ನಿರ್ಮಾಪಕರಿಗೆ (Path-Finders) ಪ್ರವಾದಿ ಎಂಬ ಅಭಿದಾನ ಬರುವಂತೆ ಬಸವಣ್ಣನಿಗೆ ಬಂದಿದೆ ಎಂದು ನಾನು ಹೇಳಿದ್ದೇನೆ. ಕರ್ನಾಟಕದ ಶ್ರೀಮತಿ 'ಅ' ರವರ ಕಂಠ ಹಿಂದಿಯ ಲತಾಮಂಗೇಶ್ಕರಳಂತೆ ಇದೆ' ಎಂದು ನಾನು ಅಂದರೆ, ಇಲ್ಲಿ ಕಂಠದ ಹೋಲಿಕೆ ಮಾತ್ರ ಹಿಡಿಯಬೇಕೇ ವಿನಾ, "ಶ್ರೀಮತಿ 'ಅ' ಲತಾ ಮಂಗೇಶ್ಕರಳಂತೆ ಶುದ್ಧ ಕಪ್ಪು; ಮದುವೆಯೇ ಆಗಿಲ್ಲ" ಎಂದು ಮಾತಾಜಿಯವರು ಬರೆದಿದ್ದಾರೆ; ಶ್ರೀಮತಿ 'ಅ' ಳಿಗೆ ಮದುವೆಯಾಗಿದೆ. ಆಕೆಯದು ಹೊಂಬಣ್ಣ ಎಂದು ಟೀಕಿಸುವಂತಿದೆ ಜ.ಚ.ನಿಯವರ ವಾದವೈಖರಿ.

9) "ಇವರ ಈ ಅನುಚಿತ ವಾಕ್ಯದಲ್ಲಿ ಸಂಗನೇ ಗುರು, ಸಂಗನೇ ಪತಿ. ದೈವೀ ಕರುಣೆಯೇ ದೀಕ್ಷೆ. ಅದರಿಂದಲೇ ಕರದಿಷ್ಟ ಬರುವಿಕೆ, ಇವರು ಹೀಗೆ ಹೇಳಿದ್ದೆಲ್ಲ ಸರಿ." (ಅಂತೂ ನಾವು ಹೇಳಿದ್ದೆಲ್ಲ ಸರಿ ಎಂದು ಪೂರ್ಣವಿರಾಮ ಚುಕ್ಕೆ ಇಟ್ಟು ಒಪ್ಪಿದ್ದಾರೆ. ಅಷ್ಟೇ ಸಾಕು ನಮಗೆ ?!)

ಈ ವಾಕ್ಯಪ್ರಯೋಗ ನನ್ನದಲ್ಲ, ಹರಿಹರ ಮಹಾಕವಿಯದು. ಆದ್ದರಿಂದ ಅನುಚಿತತೆ ಇದ್ದರೆ ಈ ರಿಜಿಸ್ಟರ್ಡ್ ಪೋಸ್ಟನ್ನು ಹರಿಹರನಿಗೆ Redirect ಮಾಡಲು ಇಚ್ಛಿಸುತ್ತೇನೆ.

"ಪ್ರಾಣೇಶ್ವರನಂ ಪರಮ ಪ್ರೀತಿಯೊಳಪ್ಪಿಕೊಂಡು ಸಂಗಂ ಪತಿಯಾಗಿ, ಬಸವಂ ಸತಿಯಾಗಿ, ಪಂಚಾಕ್ಷರಿಯೆ ಗತಿಯಾಗಿ ಸದ್ಭಕ್ತಿಯೇ ಮತಿಯಾಗಿ" ಇದು ಹರಿಹರನ ವರ್ಣನೆ.

13) "ಬಸವಣ್ಣನವರು ನವಧರ್ಮ ದ್ರಷ್ಟಾರರಂತೆ! ಹಾಗಿದ್ದರೆ ವೀರಶೈವದ ಬೆಳವಿಗೆಗೆ ಬಂದರೆಂದು ಏಕೆ ಎಲ್ಲ ಶರಣರು ಹೇಳಿದರು?" ಜ.ಚ.ನಿಯವರ ಸಂದೇಹ. ಬಸವಣ್ಣನವರು ನವಧರ್ಮ ದ್ರಷ್ಟಾರರು ಎಂಬುದಕ್ಕೆ ಕೆಲವು ಹೇಳಿಕೆಗಳು.

೧. ಕಾಯಕವ ಕಲಿಸುದಕೆ ನಾಯಕನು ಬಸವಯ್ಯ
ಜೀಯ **ಹೊಸಮತಕೆ** ಶಿವಭಕ್ತಿ ಸಾರುದಕೆ
ರಾಯಜೀವನದ ಹೊಸನುಡಿಗೆ. ||ಜನಪದಗೀತೆ 5||

೨. ಕರೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ
ವರ ಚೆನ್ನಬಸವ ಶರಣರಿಗೆ | ಕಂಟಕದ
ಹುರಿಯಾಳು ಕಾಯೊ **ಹೊಸಮತವ** ||೪೫||

೩. ರಾಯಪೂರ್ವಾಚಾರ್ಯ ಸಂಗನ ಬಸವ ಶರಣಾರ್ಥಿ –ಚಾಮರಸ

೪. ಪೂರ್ವಾಚಾರಿ ಭಕ್ತಿ-ಭಂಡಾರಿ ಬಸವಣ್ಣ
ನೀನೆನಗೆ ಗುಹೇಶ್ವರ ಲಿಂಗವ ತೋರಿದೆಯಾಗಿ
ಲೋಕಾದಿ ಲೋಕವೆಲ್ಲವೂ ಕಿಂಚಿತ್ -ಅಲ್ಲಮಪ್ರಭು.

೫. ಬಸವನೇ ಬಿಲ್ಲಾಳಾಗಿ, ಹೊಸಭಕ್ತಿ ಅಂಬಾಗಿ
ಎಸೆದನಯ್ಯಾ ಆ ಲಿಂಗವನು ಗುರಿಮಾಡಿ. -ಚೆನ್ನಬಸವಣ್ಣ.

೬. ಮನ ಕರಣ ಧ್ಯಾನಕ್ಕೆ ತನು ಧ್ಯಾನಮೂರ್ತಿಗೆ
ಉನುಮನಿಯ ಉಲುಹಿನ ಭಾವಕಯ್ಯಾ ;
ಅನುವಿನಾಯತೆಕೆಲ್ಲ ಬಸವ ಮೂಲಿಗನಾಗೆ
ಬಸವಣ್ಣ ಶರಣಯ್ಯ ಯೋಗಿನಾಥ -ಸಿದ್ಧರಾಮೇಶ್ವರ 28

ಹಾಗಿದ್ದರೆ ವೀರಶೈವದ ಬೆಳವಿಗೆಗೆ ಬಂದರೆಂದು ಏಕೆ ಎಲ್ಲ ಶರಣರು ಹೇಳಿದರು ?

ಬಸವಣ್ಣನವರು ಕೊಟ್ಟ ನೂತನ ಧರ್ಮ,ನೂತನ ಸಂವಿಧಾನದಲ್ಲಿ ಅನೇಕ ಧರ್ಮ, ಮತಪಂಥಗಳು ತಮ್ಮ ಸಂಪೂರ್ಣತೆಯನ್ನು ಕಂಡುಕೊಂಡವು, ವಿವಿಧ ಹೂವುಗಳ ಮಕರಂದವು ಜೇನ್ನೊಣದ ಸಹಾಯದಿಂದ ಜೇನು ತುಪ್ಪದಲ್ಲಿ ಪರಿಪೂರ್ಣತೆ ಕಂಡುಕೊಳ್ಳುವಂತೆ ! ಅನೇಕ ವಿಚಾರವಾದಿಗಳ ಕನಸು ಇಲ್ಲಿ ನನಸಾಯಿತು. ಪ್ರೊಫೆಸರ್ ಆರ್. ಕೆ. ಶ್ರೀಕಂಠನ್ ಹೇಳುವಂತೆ, "It is no exaggeration to say that the message of Basava is like a reservoir into which all previous thoughts flowed in and from which all later thoughts flowed out. Kind Like Buddha, simple like Mahavira, compassionate like Jesus, bold like Mohammad, Basava strikes us almost as a wonder of creation. But what attracts us most to him are those teachings of his in which he anticipated the greatest of modern thinkers Karl Marx and Mahatma Gandhi."

ಇಂಗ್ಲೀಷಿನ ಹಮ್ಮು ನಮಗಿದೆಯೆಂದು ನಾನು ಈ ಉಕ್ತಿಯನ್ನು ಬಳಸುತ್ತಿಲ್ಲ. ಇದು ಬಹಳ ಮಹತ್ವಪೂರ್ಣ ಹೇಳಿಕೆಯೆಂದು ತಿಳಿದುಕೊಡುತ್ತಿದ್ದೇನೆ. ಪ್ರೊ.ಆರ್.ಕೆ. ಶ್ರೀಕಂಠನ್ ಹೇಳುತ್ತಾರೆ, "ಬಸವಣ್ಣನ ಸಂದೇಶವು ಒಂದು ಮಹಾನ್ ಜಲಾಶಯದಂತಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. ಇದರೊಳಕ್ಕೆ ಹಿಂದಿನ ಅನೇಕ ವಿಚಾರವಾಹಿನಿಗಳು ಹರಿದು ಬಂದಿವೆ ; ನಂತರದ ನೂತನ ವಿಚಾರವಾಹಿನಿಗಳು ಹೊರ ಹೊಮ್ಮಿವೆ. ಬುದ್ಧನಂತೆ ದಯಾಶೀಲ, ಮಹಾವೀರನಂತೆ ಸರಳಜೀವಿ, ಏಸುವಿನಂತೆ

ಕಾರುಣ್ಯಸಿಂಧು, ಮೊಹಮ್ಮದನಂತೆ ಧೈರ್ಯಶಾಲಿ, ಹೀಗೆ ಬಸವಣ್ಣನವರು ಸೃಷ್ಟಿಯ ಒಂದು ಅದ್ಭುತದಂತೆ ಕಾಣಬರುತ್ತಾರೆ. ಇದೆಲ್ಲಕ್ಕಿಂತ ಮಿಗಿಲಾಗಿ ಅವರತ್ತ ನಮ್ಮನ್ನು ಆಕರ್ಷಿಸುವುದೇನೆಂದರೆ ಆಧುನಿಕರಲ್ಲಿ ಮಹಾನ್ ವಿಚಾರವಾದಿಗಳಾದ ಕಾರ್ಲ್ಸ್ ಮಾರ್ಕ್ಸ್ ಮತ್ತು ಮಹಾತ್ಮಗಾಂಧೀಜಿಯವರ ವಿಚಾರಗಳನ್ನು ಮೊದಲೇ ಹೇಳಿದುದು."

ಬಸವಣ್ಣನವರು ಕೊಟ್ಟ ಉನ್ನತ ತತ್ತ್ವಜ್ಞಾನ, ಜೀವನದ ಮೌಲ್ಯಗಳು, ಧಾರ್ಮಿಕ ವಿಚಾರಗಳು ಸಮಗ್ರವೂ, ಸಂಪೂರ್ಣವೂ ಆಗಿದ್ದರಿಂದ ಹಿಂದಿನ ಅನೇಕ ಮತ ಧರ್ಮಗಳು ಓರೆಕೋರೆಗಳನ್ನು ಕಳೆದುಕೊಂಡು, ಬಸವಧರ್ಮದಲ್ಲಿ ಪರಿಪೂರ್ಣತ್ವವನ್ನು ಸಾಧಿಸಿದ್ದಾಗಿ ಆಯಾ ಮತಪಂಥಗಳ ಅನುಯಾಯಿಗಳು ಭಾವಿಸಿದರು. ಅಂತೆಯೇ ಶಿವಸಮಯ ಪ್ರತಿಷ್ಠಾಪನಾಚಾರ್ಯ, ವೀರಶೈವ ನಿರ್ಣಯ ಪರಮಾವತಾರ, ಶೈವಮತ ಸಾರೋದ್ಧಾರಕ - ಹೀಗೆಲ್ಲ ತಮತಮಗೆ ಕಂಡಂತೆ ವರ್ಣಿಸಿದರು.

14) "ಬುದ್ಧನಂತೆ ಗಿಡದ ಮತ್ತು ಅರಣ್ಯದ ಅಡಿಯಲ್ಲಿದ್ದು ತಪಸ್ಸು ಮಾಡಿದ ಎಂಬರ್ಥದಲ್ಲಿ ಹೇಳಲು ಹೆಣಗಿದ್ದಾರೆ." ಇದು ಜ.ಚ.ನಿಯವರ ನಿರೂಪಣೆ, ನಾನು ಹೇಳಿದ ಮಾತುಗಳಿಂದ ಆಯ್ದುದೆಂಬಂತೆ. ನಾನು ಬರೆಯುವುದೊಂದು, ಅವರು ಎತ್ತಿಕೊಂಡು ತೋರುವುದೊಂದು. (ಈ ಗೊಂದಲ ತಪ್ಪಿಸಲೆಂದೇ ಅವರ ಲೇಖನವನ್ನು ಮರುಮುದ್ರಣ ಮಾಡಿದ್ದೇವೆ)

ಬಸವನೆಂದರೆ ಪಾಪ
ದೆಸೆಗೆಟ್ಟು ಪೋಗುವುದು ಪುಣ್ಯ ವಶವರ್ತಿಯಹುದು ॥

ಎಂಬ ಕವಿವಾಣಿಯನ್ನು 'ಬಸವನೆಂದರೆ ಪಾಪ ದೆಸೆಗೆಟ್ಟು ಹೋಗುವುದು ; ಪುಣ್ಯ ವಶವರ್ತಿಯಹುದು' ಎಂದು ಅರ್ಥಮಾಡುವುದು ಬಿಟ್ಟು, "ಬಸವನೆಂದರೆ ಪಾಪ ; ದೆಸೆಗೆಟ್ಟು ಹೋಗುವುದು ಪುಣ್ಯ" ಎಂದು ಅರ್ಥೈಸಿದಂತೆ ಆಗಿದೆ. ಅಗಸ್ಟ ಕಲ್ಯಾಣ ಕಿರಣದಲ್ಲಿ ನಾನು ಬರೆದಿದ್ದ ವಾಕ್ಯಗಳನ್ನು ಜ.ಚ.ನಿಯವರು ಆಯ್ದುಕೊಂಡ ವಾಕ್ಯಗಳೊಡನೆ ತುಲನೆ ಮಾಡಿ ನೋಡಿರಿ.

"ಬಸವಣ್ಣ, ಜನಕ, ಮಹಾತ್ಮ ಗಾಂಧೀಜಿಯವರಂಥವರು ಬಹಿರಂಗವನ್ನು ಬಹಿಷ್ಕರಿಸದೆ ಅಂತರಂಗದ ಆಳಕ್ಕಿಳಿದರು. ಬಸವಣ್ಣನವರು ಬಹಿರಂಗದಲ್ಲಿ ಹಂತ ಹಂತವಾಗಿ ರಾಜಕೀಯದಲ್ಲಿ ಮೇಲೇರಿದರೂ, ಅಂತರಂಗದಲ್ಲಿ ಅಧ್ಯಾತ್ಮಸಿದ್ಧಿ-ವ್ಯಕ್ತಿತ್ವಗಳು ಅಷ್ಟೇ ಪರಿಪಕ್ವಗೊಳ್ಳತೊಡಗಿದವು.... ಇಂತಹ ಅಪೂರ್ವ ದಾರ್ಶನಿಕ ಅನುಭವಗಳು (Mystic Experiences) ಅಂತರ್ಮುಖಿಗಳು, ಅಂತಶ್ಚಿಂತನಾಸಕ್ತರಿ

ಗಲ್ಲದೆ ಸಾಧ್ಯವಾಗದು. ಅವರಿದನ್ನು ಬುದ್ಧನಂತೆ ಕಾಡಿನಲ್ಲೇ ಸಾಧಿಸಲಿ, ಬಸವಣ್ಣ ನಂತೆ ಮಹಾಮನೆಯ ಜವಾಬ್ದಾರಿ-ಜಂಜಡದ ನಡುವೆಯೇ ಸಾಧಿಸಲಿ !

(ಕಲ್ಯಾಣ ಕಿರಣ ಪುಟ 44)

ಇವು ನಾನು ಬರೆದ ವಾಕ್ಯಗಳು ; ಆದರೆ ಜ.ಚ.ನಿಯವರು ನಾನು ಬರೆದವೆಂದು ಆಯ್ದ ವಾಕ್ಯಗಳು ಎಲ್ಲಿಂದ ಆರಿಸಿಕೊಂಡರೋ ದೇವನೇ ಬಲ್ಲ !!

ಡಾ|| ಜ.ಚ.ನಿಯವರ ಧೋರಣೆ

ಮೊಗ್ಗೆಯ ಮಾಯಿದೇವರು ಒಬ್ಬ ಮಹೋನ್ನತ ಪಂಡಿತರು. ಅವರು ಗುರು ಸ್ಥಲದ ಮಠಾಧೀಶರು. ಕಾಲ ಸುಮಾರು 1500. ಅವರು ಬರೆದ ಶತಕತ್ರಯಗಳು ಸೈದ್ಧಾಂತಿಕ ಆಣಿಮುತ್ತುಗಳು. ಇಂತಹವರ ಶತಕತ್ರಯದ ಮೇಲೆ ಪ್ರವಚನವನ್ನು ಬರೆದವರು ಡಾ|| ಜ.ಚ.ನಿಯವರು. ಶತಕತ್ರಯ ಪ್ರವಚನ ಸುಮಾರು 600 ಪುಟಗಳ ಬೃಹದ್ಗ್ರಂಥ. ಮೊಗ್ಗೆಯ ಮಾಯಿದೇವರು ತಮ್ಮ ಗ್ರಂಥಾರಂಭದಲ್ಲಿ ಬರೆದ 1 ರಿಂದ 6 ಪದ್ಯಗಳು ಅತ್ಯಂತ ಮಹತ್ವಪೂರ್ಣವಾದ ವಿಷಯಗಳನ್ನು ಒಳಗೊಂಡಿವೆ.

1. 'ಶ್ರೀಗುರುವೆ ಮಹಾಗುರುವೆ' ಎಂಬ ಪದ್ಯ ಗುರುವಿನ ಮಹತ್ವವನ್ನು ಸಾರುತ್ತದೆ.

2. 'ಜಯ ಬಸವೇಶ ಭಕ್ತಜನ ಭಾಗ್ಯ ಶುಭೋದಯ' ಎಂಬ ಪದ್ಯವು ಶರಣಧರ್ಮದಲ್ಲಿ ಬಸವಣ್ಣನ ಸ್ಥಾನವನ್ನು ಕುರಿತು ಹೇಳುತ್ತದೆ.

3. ಬಸವಕುಮಾರ ಎಂಬ 3ನೆಯ ಪದ್ಯ, ಮತ್ತು ಪ್ರಭುವೆ ಮಹಾಗುರು ಪ್ರಭುವೆ ಎಂಬ 4ನೇ ಪದ್ಯ—ಈ ಎರಡು ಚನ್ನಬಸವಣ್ಣ ಮತ್ತು ಪ್ರಭುದೇವರ ವ್ಯಕ್ತಿತ್ವವನ್ನು ಮತ್ತು ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು ಶರಣಧರ್ಮದ ತ್ರಿಮೂರ್ತಿಗಳೆಂಬುದನ್ನು ಹೇಳುತ್ತವೆ.

4. "ಬಸವ ಪುರಾತನರಾಚರಿಸಿ ತೋರಿದ" ಎಂಬ ಐದನೆಯ ಪದ್ಯ ಈ ಧರ್ಮದ ಅನುಯಾಯಿಯಾದವನು ನಡೆಯಬೇಕಾದ ಪಥವಾವುದೆಂಬುದನ್ನು, ಜೀವನದ ಬಗೆಯಾವುದೆಂಬುದನ್ನು ತಿಳಿಸುತ್ತದೆ.

5. "ಬಸವನನೊಮ್ಮೆ" ಎಂಬ ಆರನೆಯ ಪದ್ಯ ಈ ಧರ್ಮದ ಅನುಯಾಯಿಗಳಿಗೆ ಆರಾಧ್ಯಗುರುಗಳಾರು ? ಪಥ ನಿರ್ಮಾಪಕರಾರು ? ಎಂಬುದನ್ನು ಚಿತ್ರಿಸುತ್ತದೆ. ಭಾರತದ ಸಂವಿಧಾನವನ್ನು ಬರೆಯುವ ಮೊದಲು Preamble (ಪೀಠಿಕೆ) ಎಂದು ಬರೆದು ಸಂವಿಧಾನಕಾರರು ಪೀಠಿಕೆ ಹಾಕುವಂತೆ, ಮೊಗ್ಗೆಯ ಮಾಯಿದೇವರು ಆರು ಪದ್ಯಗಳಲ್ಲಿ ತಮ್ಮ ಇಡೀ ಕೃತಿಗೆ ಪೀಠಿಕೆ ಹಾಕಿದ್ದಾರೆ.

ಡಾ|| ಜ.ಚ.ನಿಯವರು ಶತಕತ್ರಯ ಪ್ರವಚನ ಪುಸ್ತಕ (ಮುದ್ರಣ 1972)ದ 37ನೆಯ ಪುಟದ ವರೆಗೆ ಗುರುವಿನ ವರ್ಣನೆ ಮಾಡಿ, ನಂತರದ 2 ರಿಂದ 6ರ ವರೆಗಿನ 5 ಪದ್ಯಗಳಿಗೆ ವ್ಯಾಖ್ಯಾನವನ್ನೇ ಬರೆಯದೆ, ಚುಟುಕಾಗಿ ಮೂರುವರೆ ಸಾಲಿನಲ್ಲಿ ನೀರಸವಾಗಿ ಬರೆದು, 38ನೇ ಪುಟದಲ್ಲಿ 7ನೆಯ ಪದ್ಯವನ್ನು ಆರಂಭಿಸಿಕೊಂಡಿದ್ದಾರೆ. ಹೀಗೆ ಐದು ಅತಿ ಮುಖ್ಯ ಪದ್ಯಗಳಿಗೆ ವಿವರಣೆ ನೀಡದೆ ಹಾರಿಸಿಬಿಟ್ಟಿರುವರು. ಇದು ಜ.ಚ.ನಿಯವರ ಧೋರಣೆಗೆ ಕನ್ನಡಿಯನ್ನು ಹಿಡಿಯುತ್ತದೆ. ಹಿಂದಿನ ಮಹಾನುಭಾವಿಗಳು ಬಿಚ್ಚುಮನಸ್ಸಿನಿಂದ ಮಾಡಿದ ಸ್ತುತಿಯನ್ನೂ ಇವರು ಒಪ್ಪಿಕೊಳ್ಳಲಾರದಷ್ಟು ಮುಚ್ಚುಮನಸ್ಸು (closed mind) ಳ್ಳವರಾಗಿದ್ದಾರೆ ಎಂದು ಅನಿವಾರ್ಯವಾಗಿ ನಿರ್ಧರಿಸಬೇಕಾಗುತ್ತದೆ. ಇದು ಶರಣರಿಗೆ ಮಾತ್ರವಲ್ಲ, ಮೊಗ್ಗೆಯ ಮಾಯಿದೇವನಂತಹ ಮಹಾನ್ ಲೇಖಕನಿಗೂ ಮಾಡುವ ಅಪಚಾರವಾಗುತ್ತದೆ. ಏಕೆಂದರೆ ಅವನ ಬಯಕೆಗೆ, ವಿಚಾರಕ್ಕೆ ವಿರುದ್ಧವಾಗಿ ಹೋದಂತೆ ಆಗುತ್ತದೆ.

ಮೊಗ್ಗೆಯ ಮಾಯಿದೇವರು ಬರೆದರೂ, ಅವನ್ನು ಹಾರಿಸಿ ವ್ಯಾಖ್ಯಾನ ಮಾಡದಿರುವ ಪದ್ಯಗಳು ಐದನ್ನು ಇಲ್ಲಿ ಕೊಡಲು ಬಯಸುತ್ತೇನೆ.

೧) ಜಯಬಸವೇಶ ಭಕ್ತಜನ ಭಾಗ್ಯ ಶುಭೋದಯ ವೀರಶೈವ ನಿ
ರ್ಣಯ ಪರಮಾವತಾರ ಶರಣಾಗತ ರಕ್ಷಕ ಚಿದ್ಘನ ಪ್ರಭಾ
ಮಯ ಜಗದಾದಿದೇಶಿಕ ಪುರಾತನ ಪುಂಗವ ಶಾಂಭವೀಪುರಾ
ಶ್ರಯ ಜಯಸೋಮನಾಥ ಜಯದೇವ ಜಯಾವಿರತಂ ಶಿವಾಧವಾ ॥೨॥

ಬಸವೇಶನಿಗೆ ಜಯವಾಗಲಿ. ಅವನು ಭಕ್ತಜನಕ್ಕೆ ಭಾಗ್ಯಪುರುಷನು, ಏಳ್ಗೆಯುಳ್ಳವನು, ವೀರಶೈವವನ್ನು ನಿರ್ಣಯಿಸಿದ ಪರಮಾವತಾರನು, ಶರಣಾಗತರನ್ನು ಕಾಪಾಡುವವನು ; ಘನವಾದ ಚಿತ್‌ಪ್ರಕಾಶ ಸ್ವರೂಪನು, ಜಗದ ಆದಿ ಗುರುವು, ಪುರಾತನರಲ್ಲಿ ಶ್ರೇಷ್ಟನು, ಶಾಂಭವೀಪುರದ (ಸಹಸ್ರಾರ ಚಕ್ರ) ನಿವಾಸಿ ! ಶಿವ ಸ್ವರೂಪನಾದ, ದೈವೀಪುರುಷನಾದ, ಬಸವೇಶನು ನಮ್ಮನ್ನು ಕಾಪಾಡಲಿ ॥

೨) ಬಸವಕುಮಾರ ಭಾಕ್ತಿಕ ಪುರಸ್ಸರ ಷಟ್‌ಸ್ಥಲ ಧೀರ ಚಿತ್ಸುಧಾ
ರಸಭರಿತಾಂತರಂಗ ಸಕಲಾಕ್ಷ ಸಮರ್ಪಿತ ಲಿಂಗ ತತ್ಪ್ರಸಾ
ದಸುಖವಿಶೇಷ ತೃಪ್ತ ಶಿವಯೋಗ ಪದೈಕ ಸಮಾಪ್ತ ನೀನೆ ರ
ಕ್ಷಿಸು ಗಡ ಜೀಯ ಚನ್ನಬಸವಯ್ಯ ಕೃಪಾನಿಧಿಯೇ ಶಿವಾಧವಾ ॥

ಬಸವೇಶನ (ಮಾನಸ) ಅಧ್ಯಾತ್ಮಿಕ ಪುತ್ರನೂ, ಭಕ್ತಾಗ್ರೇಸರನು, ಷಟ್‌ಸ್ಥಲ ಧೀರನೂ, ಜ್ಞಾನಾಮೃತ ರಸದಿಂದ ತುಂಬಿದ ಅಂತರಂಗ ಉಳ್ಳವನು, ಸರ್ವಾಂಗ

ದಿಂದಲೂ ಲಿಂಗಕ್ಕೆ ಅರ್ಪಣೆ ಮಾಡಿದವನೂ, ಲಿಂಗಪ್ರಸಾದದಲ್ಲಿ ಅನನ್ಯ ತೃಪ್ತಿ ಪಡುವವನೂ, ಶಿವಯೋಗದಲ್ಲಿ ನಿರತನು, ಕರುಣಾನಿಧಿಯೂ ಆದ ಚನ್ನಬಸವೇಶ ರಕ್ಷಿಸು ಎಮ್ಮನು ॥

೩) ಪ್ರಭುವೆ ಮಹಾಗುರುಪ್ರಭುವೆ ಲಿಂಗಕಳಾ ಪ್ರಭುವೇ ಚರಾಭಿದ
ಪ್ರಭುವೆ ಶಿವಾತ್ಮ ವಿತ್ಪ್ರಭುವೆ ಯೋಗಿವರ ಪ್ರಭುವೇ ಚಿದಂಗನಾ
ಪ್ರಭುವೆ ಸದಮಲ ಪ್ರಭುವೆ ರಕ್ಷಿಸು ದೇವ ಗುಹೇಶ್ವರಾಲ್ಲಮ
ಪ್ರಭುವೆ ನಿರಂಜನ ಪ್ರಭುವೆ ಮತ್ಪ್ರಭುವೇ ಪ್ರಭುವೇ ಶಿವಾಧವಾ ॥

ಗುರು–ಲಿಂಗ–ಜಂಗಮಕ್ಕೆ ಪ್ರಭುವಾದ ಮಹಾನುಭಾವನೂ, ಶಿವಚೈತನ್ಯ ಸ್ವರೂಪನು, ಯೋಗಿವರನೂ, ಜ್ಞಾನಾಂಗನೆಯ ಪತಿಯು, ನಿರ್ಮಲ ಸ್ವರೂಪನು ಗುಹೇಶ್ವರನ ಕರುಣೆಯ ಕಂದನು, ನಿರಂಜನ ಮೂರ್ತಿಯೂ ಆದ ಪ್ರಭುವೇ ಕಾಪಾಡು.

೪) ಬಸವನನೊರ್ಮೆ ಚನ್ನಬಸವಣ್ಣನನೊಮ್ಮೆ ಗುಹೇಶ್ವರಾಲ್ಲಮ
ಪ್ರಸವ ಯಶೋಮಯ ಪ್ರಭುವನೊಮ್ಮೆ ಸಮಾಹಿತಮಾದ ಭಾಕ್ತಿಕಂ
ಮಸಗೆ ಪುನಃಪುನಃಸ್ಮರಿಸಿ ಕೀರ್ತಿಸಿ ಪಾಡಿ ಭವ ಪ್ರಪಂಚಮಂ
ನುಸುಳುವರಯ್ಯ ವೀರನಿಯಮ ವ್ರತ–ಧರ್ಮಪರರ್ ಶಿವಾಧವಾ ॥5॥

ಒಮ್ಮೆ ಮಹಾಗುರು ಬಸವಣ್ಣನನ್ನು, ಲಿಂಗಮೂರ್ತಿ ಚನ್ನಬಸವಣ್ಣನನ್ನು, ಜಂಗಮಮೂರ್ತಿ ಪ್ರಭುದೇವರನ್ನು, ಉತ್ಕಟವಾದ ಭಕ್ತಿಯಿಂದ ಉದ್ದೀಪಿತರಾಗಿ ಮತ್ತೆ ಮತ್ತೆ ಸ್ಮರಿಸಿ, ಕೀರ್ತಿಸಿ, ಹಾಡಿ ಭವಪ್ರಪಂಚವನ್ನು – ವೀರನಿಯಮ ವ್ರತ ಧರ್ಮವನ್ನು ಆಚರಿಸುವವರು, ದಾಟುವರು.

೫) ಬಸವಪುರಾತನರಾಚರಿಸಿ ತೋರಿದ ಷಟ್‌ಸ್ಥಲಮಾರ್ಗದೊಳ್ ಪ್ರವ
ರ್ತಿಸುತ ಅನೂನ ಭಕ್ತಿರತಿಯಿಂ ತನುವಿತ್ತಮನಂಗಳಂ ಸಮ
ರ್ಪಿಸಿ ಗುರುಲಿಂಗಜಂಗಮಕೆ ವಂಚನೆಯಿಲ್ಲದೆ ಮಾಡಿ ಕೂಡಿ ರಾ
ಜಿಸುವ ಮಹಾತ್ಮರಂ ನೆನೆವುದೇ ಘನ ಮುಕ್ತಿಪದಂ ಶಿವಾಧವಾ ॥6॥

ಬಸವರೇ ಆದಿಪ್ರಮಥರಾಗಿ ಆಚರಿಸಿ ತೋರಿದ, ಹಾಕಿಕೊಟ್ಟ ಷಟ್‌ಸ್ಥಲ ಮಾರ್ಗದೊಳು ಮನಸ್ಸನ್ನು, ಜೀವನವನ್ನು ತೊಡಗಿಸುತ್ತ, ಉತ್ಕಟ ಭಕ್ತಿಯಿಂದ ತನುಮನ ಧನಗಳನ್ನು ಗುರುಲಿಂಗಜಂಗಮಕ್ಕೆ ನಿರ್ವಂಚನೆಯಿಂದ ಮಾಡಿ, ಪರಮಾತ್ಮ ನನ್ನು ಕೂಡಿದ ಮಹಾತ್ಮರನ್ನು ನೆನೆಯುವುದೇ ಮುಕ್ತಿಪದವು.

ಹೀಗೆ ಬಸವಾದಿ ಪ್ರಮಥರ ಘನ ಪರಂಪರೆಯನ್ನು ಮುಕ್ತಮನಸ್ಸಿನಿಂದ ಹೊಗಳಿ, ಅದುವೇ ಇಂದಿನ ಅನುಯಾಯಿಗಳು ಒಪ್ಪಬೇಕಾದ, ಅಪ್ಪಬೇಕಾದ ಮಾರ್ಗ ಎಂದು ಮೊಗ್ಗೆಯ ಮಾಯಿದೇವರು ಘಂಟಾಘೋಷವಾಗಿ ಸಾರಿದ್ದಾರೆ.

ಹೀಗಿದ್ದಾಗ ಆದಿದೇಶಿಕ ಬಸವಣ್ಣ–ಚನ್ನಬಸವಣ್ಣ–ಪ್ರಭುವಿಗೆ ಕೊಟ್ಟ ಆದ್ಯತೆಯನ್ನು ಒಪ್ಪದೆ, ಪದ್ಯಗಳನ್ನೇ ಅರ್ಥೈಸದೆ ಡಾ॥ ಜ.ಚ.ನಿಯವರು ಬಿಟ್ಟಿರುವದು ಬೌದ್ಧಿಕ ಅಪ್ರಮಾಣಿಕತೆಯಲ್ಲದೆ ಮತ್ತೇನು? ಎಂಬುದನ್ನು ಜನರು ಆಲೋಚಿಸಬೇಕು.

೨೦) ಬಸವ ಪ್ರಣೀತ ಲಿಂಗದೀಕ್ಷೆ ಯಾವುದೋ ? ಮತ್ತೇಕೆ ಬಸವ ಧರ್ಮೀಯರು ದೀಕ್ಷೆಯಾಗುವುದಿಲ್ಲ? (ಮಾಮಿಡಿ ಪುಟ 46)

ಮಗುವು ಹುಟ್ಟಿದ ನಂತರ ಮಾಡುವ ಲಿಂಗಧಾರಣೆ, ಬಾಲಕ–ಬಾಲಕಿಯರು ಬಾಲ್ಯಾವಸ್ಥೆ ಕಳೆದು, ತಾರುಣ್ಯ–ಕನ್ನೆಯ ಅವಸ್ಥೆ ಹೊಂದುವಾಗ ಕೊಡಲಾಗುವ ಲಿಂಗದೀಕ್ಷೆಗಳು ಬಸವ ಪ್ರಣೀತ. ಇಂದಿಗೂ ಇವೆರಡೂ ಕಡ್ಡಾಯವಾಗಿ ಆಚರಣೆಯಲ್ಲಿವೆ. ಬಸವ ತತ್ತ್ವ ತಿಳಿದ ಪ್ರತಿಯೊಂದು ಕುಟುಂಬದವರೂ ದೀಕ್ಷಿತರಾಗುತ್ತಾರೆ.

೨೧) 'ಇಷ್ಟಲಿಂಗ' ಶಬ್ದ ಆಗಮದಲ್ಲಿ ಬಂದುದಕ್ಕೆ ವಿವರಣೆ ನೀಡಲಾಗಿದೆ. ಇಷ್ಟಲಿಂಗವು ಬಸವಣ್ಣನವರ ಕೊಡುಗೆ ಎಂಬುದಕ್ಕೆ ಇನ್ನಷ್ಟು ಸ್ಪಷ್ಟ ದಾಖಲೆಗಳು.

1. ಅಗಲದನಂತರದ ಮಿಗೆಮಿಗೆ ಬ್ರಹ್ಮವನು
ತೆಗೆತೆಗೆದು ತೋರಿದನು ಕರತಳದಲಿ
ಅಗಣಿತ ಜಗದೊಳಗೆ ಅಳಿದುಳಿದಗಾಧನು
ಸುಗುಣ ಶ್ರೀ ಗುರು ಬಸವ ಯೋಗಿನಾಥ ॥ ಸಿದ್ಧರಾಮೇಶ್ವರ ॥

2. ಅರಿಯುದಕೆ ಕುರುಹೆಂದು ಕರಲಿಂಗ ನೀಕೊಟ್ಟೆ
ಶರಣೆಂಬು ನುಡಿಯ ಚಲಮಾಡಿ । ಶಿವಮತಕೆ
ಗುರು ಬಸವಲಿಂಗ ನಿಜ ಮಂತ್ರೊ ॥ ಜನಪದ ಸಾಹಿತ್ಯ 49 ॥

3. ಆದಿ ಬಸವಣ್ಣ, ಅನಾದಿ ಲಿಂಗವೆಂದೆಂಬರು
ಹುಸಿ ಹುಸಿ ; ಈ ನುಡಿಯ ಕೇಳಲಾಗದು
ಆದಿ ಲಿಂಗ, ಅನಾದಿ ಬಸವಣ್ಣ
ಲಿಂಗ, ಜಂಗಮ, ಪ್ರಸಾದ ಬಸವಣ್ಣನ ಉದರದಲ್ಲಿ ಹುಟ್ಟಿತ್ತು.
ಇಂತೀ ತ್ರಿವಿಧಕ್ಕೆ ಬಸವಣ್ಣನೇ ಕಾರಣನೆಂದರಿದೆನಯ್ಯಾ;
ಕೂಡಲ ಚನ್ನಸಂಗಮದೇವಯ್ಯಾ. (ಚ.ಬ.ವ. 35)

4. ಕಾಯದೊಳು ಗುರುಲಿಂಗಜಂಗಮ
ದಾಯತವನರಿಯಲ್ಕೆ ಸುಲಭೋ
ಪಾಯದಿಂದಿದಿರಿಟ್ಟು ಬಾಹ್ಯಸ್ಥಲಕೆ ಕುರುಹಾಗಿ ॥ ಚಾಮರಸ ॥

5. ಹರನೆ ಗುರುವಾಗಿ ತಾ ಮರ್ತ್ಯಲೋಕಕೆ ಬಂದು
ಪರಶಿವ ಲಿಂಗವನು ಕರಕೆ ತಂದು ಕೊಟ್ಟ
ಗುರುವೆ ಬಸವಣ್ಣ ಸರ್ವಜ್ಞ ॥ ಸರ್ವಜ್ಞ ॥

24. "ಲಿಂಗಶಬ್ದ ಮಾತ್ರ ಪೂರ್ವದಲ್ಲಿ ಬಳಕೆ ಇದ್ದಿತಂತೆ; ಲಿಂಗಪೂಜೆ ಇರಲಿಲ್ಲವಂತೆ." (ಟೀಕೆ ಪುಟ 47).

ಈ ರೀತಿ ನಾನೆಲ್ಲಿಯೂ ಬರೆದಿಲ್ಲ. ಬಸವಣ್ಣನಿಗೂ ಪೂರ್ವದಲ್ಲಿ ಸ್ಥಾವರಲಿಂಗ ಪೂಜೆ ಇತ್ತು; ಸ್ಥಾವರಲಿಂಗಗಳನ್ನು ಸ್ವಲ್ಪ ಸಣ್ಣದಾದ ಆಕಾರದಲ್ಲಿ ಶಿವಲಿಂಗವಾಗಿ ಮಾರ್ಪಡಿಸಿ ಪೂಜಿಸುವ ಪದ್ಧತಿ ಇತ್ತು. ಇಷ್ಟಲಿಂಗಪೂಜೆ ಮಾತ್ರ ಬಸವಣ್ಣನ ಕಾಲದಿಂದ ಬಂದಿತು ಎಂದು ನಾನು ಬರೆದಿರುವೆ.

"ಸ್ಥಾವರಲಿಂಗ, ಇಷ್ಟಲಿಂಗಗಳ ವ್ಯತ್ಯಾಸ ಮಠಾಧೀಶರಿಗೆ ಆಗಿಲ್ಲವಂತೆ! ಈ ಘಟಾಧೀಶರಿಗಾಗಿದೆ." ಇದು ಜ. ಚ. ನಿಯವರ ಪ್ರೌಢಮಟ್ಟದ ವ್ಯಂಗ್ಯೋಕ್ತಿ. ಇದರಿಂದ ನನಗೇನೂ ಬೇಸರವಿಲ್ಲ. ಏಕೆಂದರೆ ಈ ಜಗತ್ತಿನಲ್ಲಿ ಎಲ್ಲರೂ ಘಟಾಧೀಶರೇ! ದೇಹಧಾರಿಯಾಗಿರುವವರೆಗೆ ಪ್ರತಿಯೊಬ್ಬನೂ ಘಟಾಧೀಶನೇ! ಆದರೆ, ಪ್ರಸಂಗ ಬಂದಾಗ ಮಾನವನಲ್ಲಿ ಸುಪ್ತವಾಗಿ ಹುದುಗಿರುವ ಕ್ಷುಲ್ಲಕತನ ಹೇಗೆ ತೂಕತಪ್ಪಿ ಹೊರಗೆ ಕಾಣಿಸಿಕೊಳ್ಳಬಲ್ಲುದೆಂಬುದಕ್ಕೆ ಒಂದು ಉತ್ತಮ ನಿದರ್ಶನ–ಈ ವ್ಯಂಗ್ಯೋಕ್ತಿ. "ಕಡಿದು ಹೋಗುವ ಸರ್ಪನ ಹೆಡೆಯಲ್ಲಿಯೂ ಸೌಂದರ್ಯ ಕಾಣಬಲ್ಲವನೇ ನಿಜವಾದ ಸಂತ" ಎಂದು ಓರ್ವ ಮಹಾನ್‌ಕವಿ ಹೇಳುತ್ತಾನೆ. ಹಾಗಿದ್ದಾಗ, ಪ್ರೌಢಮಟ್ಟದ ವಿಚಾರವಿನಿಮಯ ನಡೆಯುವಾಗ ಕೀಳ್ಮಟ್ಟದ ವ್ಯಂಗ್ಯೋಕ್ತಿ, ವಕ್ರೋಕ್ತಿಗಳು ಏಕೆ ಬೇಕು?

ಇಷ್ಟಲಿಂಗ–ಸ್ಥಾವರಲಿಂಗಗಳ ವ್ಯತ್ಯಾಸ ಅನೇಕ ಮಠಾಧೀಶರಿಗೆ ತಿಳಿದಿಲ್ಲ; ಎಂದು ನಾನು ಹೇಳಿರುವೆ, ಹೇಳುವೆ. ಆದರೆ ಎಲ್ಲಾ ಮಠಾಧೀಶರಿಗೆ ಎಂದೇನೂ ಹೇಳಿಲ್ಲ, ಹೇಳಲಾರೆ! ಇಂದಿಗೂ ಶುದ್ಧ ಬಸವ ಸಂಪ್ರದಾಯದ ಅನೇಕ ಮಠಾಧೀಶರು ಇದ್ದಾರೆ. ಬಹುಪಾಲು ಮಠಾಧೀಶರು "ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟೆಯಡಿಯಾಗಿ ಬೀಳುವುದು ಬಸವ ಧರ್ಮಕ್ಕೆ ವಿರುದ್ಧ" ಎಂಬುದನ್ನು ಅರಿತಿಲ್ಲ. ನವಗ್ರಹಗಳ ಸ್ಥಾಪನೆ, ಆರಾಧನೆಗಳನ್ನು ಮಾಡಿಕೊಂಡೇ ಬರುತ್ತಿದ್ದಾರೆ.

ಕಲ್ಲಮನೆಯ ಮಾಡಿ, ಕಲ್ಲದೇವರ ಮಾಡಿ
ಆ ಕಲ್ಲು ಕಲ್ಲಮೇಲೆ ಕೆಡೆದರೆ ದೇವರೆತ್ತ ಹೋದರೋ?
ಲಿಂಗಪ್ರತಿಷ್ಠೆಯ ಮಾಡಿದವನಿಗೆ ನಾಯಕ ನರಕ ಗುಹೇಶ್ವರ!

ಎಂಬ ಅಲ್ಲಮಪ್ರಭುವಿನ (ವಚನ 212) ವಾಣಿಗೆ ವಿರುದ್ಧವಾಗಿ ಇಂದು ಎಷ್ಟು ಜನ ಸ್ಥಾವರಲಿಂಗಾರ್ಚನೆಯಲ್ಲಿ, ಸ್ಥಾಪನೆಯಲ್ಲಿ ಆಸಕ್ತರಾಗಿಲ್ಲ!! ನಾನು ಯಾರ ಹೆಸರನ್ನೂ ಹೇಳಬಯಸುವುದಿಲ್ಲ; ಏಕೆಂದರೆ ಬಹಳ ದೊಡ್ಡದೊಡ್ಡವರೆಲ್ಲ ಹೀಗೆ ಮಾಡುತ್ತಿರುವದು ಸ್ಪಷ್ಟವಿದೆ.

ವೀರಭದ್ರ, ನಂದಿ, ಮಲ್ಲಿಕಾರ್ಜುನ
ನೆಂಬ ದೈವಂಗಳಿಗೆ
ನಮ್ಮ ಕುಲದೈವಂಗಳೆಂದು ಹೇಳುವವರಿಗೆ
ಗುರುವಿಲ್ಲ ಲಿಂಗವಿಲ್ಲ ಪಾದೋದಕ ಪ್ರಸಾದವಿಲ್ಲ
ಕೂಡಲ ಚನ್ನಸಂಗಮದೇವಾ. ||ಚನ್ನಬಸವಣ್ಣ 226||

ಸದ್ಯೋಜಾತ, ವಾಮದೇವ, ಅಘೋರ
ತತ್ಪುರುಷ, ಈಶಾನ್ಯವೆಂದು ಶಿವಲಿಂಗದ
ಮೇಲೆ ಪಂಚವಕ್ತ್ರವ ಸ್ಥಾಪಿಸುವ ಅನಾಚಾರಿಯ
ಮಾತ ಕೇಳಲಾಗದು.
ಇಂತಪ್ಪ ಲಿಂಗದ್ರೋಹಿಯ ತೋರದಿರಯ್ಯಾ
ಸಕಲ–ನಿಃಕಲದಂತಹನೇ ಲಿಂಗವು?
ಕೂಡಲ ಚನ್ನಸಂಗಯ್ಯನಲ್ಲಿ ಸರ್ವಾಂಗ
ಲಿಂಗಿ ಬಸವಣ್ಣ ಬಲ್ಲ. (ಚನ್ನಬಸವಣ್ಣ 926)

ಈ ವಚನಗಳಿಗೆ ವಿರುದ್ಧವಾಗಿ ನಡೆಯುವ ಎಷ್ಟು ಜನ ಮಠಾಧೀಶರಿಲ್ಲ? ಅಂಗದ ಮೇಲೆ ಇಷ್ಟಲಿಂಗವಿಲ್ಲದ, ಪೂಜೆಗೊಂದು ವಸ್ತುವಿಲ್ಲದ ಅಲಿಂಗಿಗಳಾದ ಹಿಂದುಗಳು ತಮ್ಮ ಧಾರ್ಮಿಕ ಭಾವನೆಯ ತೃಪ್ತಿಗಾಗಿ ಯಾವುದನ್ನೇ ಆರಾಧಿಸಲಿ, ಆಶ್ರಯಿಸಲಿ, ಪರವಾಗಿಲ್ಲ. ಅಂಗದ ಮೇಲೆ, ತಾನಿದ್ದಲ್ಲಿಯೇ ಪೂಜಿಸಲು ಸಾಧ್ಯವಾಗುವ ಇಷ್ಟಲಿಂಗವೆಂಬ ಮಹಾನ್‌ಸಾಧನವಿದ್ದೂ, ಅದನ್ನು ನಿರ್ಲಕ್ಷಿಸಿ ಪ್ರತೀಕೋಪಾಸನೆ ಮಾಡುವವರಿಗೆ ಏನೆನ್ನಬೇಕು? ಜನಸಾಮಾನ್ಯರ ಪರಿ ಏನೇ ಆಗಲಿ, ಅದಕ್ಕೂ ಅಷ್ಟು ರಿಯಾಯಿತಿ ತೋರೋಣ. ಧರ್ಮಬೋಧಕರೆಂದು ಹೇಳುವ ಹಲವು ಲಿಂಗಾಯತ ಮಠಾಧೀಶರೇ ಅನ್ಯದೇವತಾರ್ಚನೆ, ಸ್ಥಾವರಲಿಂಗೋಪಾಸನೆಯಲ್ಲಿ ತೊಡಗಿದರೆ ಹೇಗೆ? ವಚನ ಸಾಹಿತ್ಯ ಸಂವಿಧಾನದ ಪ್ರಕಾರ ಇದಕ್ಕೆ ಲೈಸೆನ್ಸ್ ಉಂಟೇ? ಅದನ್ನಾದರೂ ಪರಾಂಬರಿಸಲಿ?

೨೨) "'ಬಸವಣ್ಣನವರು ಅನನ್ಯವಾಗಿ ಆರಾಧಿಸುತ್ತಿದ್ದ ಶಿವನ ಆಕಾರದ ಸುಗುಣ ರೂಪದಲ್ಲಿ ಕಾಣಿಸಿಕೊಂಡು ಹಸ್ತಮಸ್ತಕ ಸಂಯೋಗ ಮಾಡಿತು' ಇದು ಇವರ ಮುತ್ತಿನಂತಹ ವಾಕ್ಯಶೈಲಿ" ಜ.ಚ.ನಿಯವರ ಮತ್ತೊಂದು ವಕ್ರೋಕ್ತಿ. ನಾನು ಬರೆದಿರುವದು ಹೀಗೆ, "ನಿರಾಕಾರ ನಿರ್ಗುಣ ಪರಂಜ್ಯೋತಿ ಸ್ವರೂಪವಾದ ಪರಮಾತ್ಮ ತತ್ತ್ವವು (ಇದು ಕರ್ತೃಪದ) ಅವರಲ್ಲಿ ಅವತರಣವಾಗಿ ಅಪೂರ್ವ ಅನುಭವ ನೀಡಿತು. ಅವರು ಅನನ್ಯವಾಗಿ ಆರಾಧಿಸುತ್ತಿದ್ದ ಶಿವನ ಆಕಾರದ ಸಗುಣ

ರೂಪದಲ್ಲಿ (ಪರಮಾತ್ಮ ತತ್ತ್ವವು) ಕಾಣಿಸಿಕೊಂಡು ಹಸ್ತಮಸ್ತಕ ಸಂಯೋಗ ಮಾಡಿತು." (ಆಗಸ್ಟ್ ಕಲ್ಯಾಣ ಕಿರಣ ಪುಟ 47).

ಈ ನಿರೂಪಣೆಯಲ್ಲಿ ಎಲ್ಲಿಯೂ ದೋಷವಿಲ್ಲ. ಅರ್ಥಂಬರ್ಥವಾಗಿ ವಾಕ್ಯವನ್ನು ಎತ್ತಿಕೊಂಡಿರುವ ಜ. ಚ. ನಿಯವರ ಜಾಣ್ಮೆಯಲ್ಲಿ ದೋಷವಿದೆ. ಪರಮಾತ್ಮನನ್ನು ಅವನು–ಅವಳು ಎಂದು ಪುರುಷ-ಸ್ತ್ರೀವಾಚಕವಾಗಿ ಬಳಸದೆ 'ಅದು' (ತತ್) ಎಂದು ನಪುಂಸಕವಾಚಕವಾಗಿ ಬಳಸಿದ್ದೇನೆ. ಏಕೆಂದರೆ ದೈವೀತತ್ತ್ವವು ಒಂದು ನಿರಾಕಾರ, ನಿರ್ಗುಣಶಕ್ತಿ ಮಾತ್ರ (Cosmic energy). ಈ ಶಕ್ತಿಯು ಸೃಷ್ಟಿ. ಸ್ಥಿತಿ, ಲಯ, ತಿರೋಧಾನ, ಅನುಗ್ರಹ ಎಂಬ ಐದು ಕರ್ತವ್ಯಗಳನ್ನು ನಿರ್ವಹಿಸುತ್ತದೆ. ಇದು 'ಅವನು' ಅಲ್ಲದ, 'ಅವಳು' ಅಲ್ಲದ, ಶುದ್ಧ ತತ್ತ್ವ ಮಾತ್ರ. ಇಂತಹ ನಿರಾಕಾರ ತತ್ತ್ವದ ಸಾಕ್ಷಾತ್ಕಾರ ಎರಡು ಬಗೆಯಲ್ಲಿ ಆಗುವುದು. ಒಂದು ಸಗುಣ ಸಾಕ್ಷಾತ್ಕಾರ, ಇನ್ನೊಂದು ನಿರ್ಗುಣ ! ಸಾಧಕನು ಯಾವುದಾದರೊಂದು ಪ್ರಿಯವಾದ ಆಕಾರದಲ್ಲಿ (ಆಕಾರವಿರುವುದು ಮಹಾತ್ಮರಿಗೆ, ಐತಿಹಾಸಿಕ ವ್ಯಕ್ತಿಗಳಿಗೆ ಮಾತ್ರ, ದೇವನಿಗಲ್ಲ) ಆರಾಧಿಸುತ್ತಿರುವಾಗ, ಆ ಆಕಾರದಲ್ಲಿ ನಿರಾಕಾರ ಶಕ್ತಿಯು ಸಾಕಾರ ರೂಹುತಾಳಿ ದರ್ಶನ ನೀಡುವುದು–ವಿದ್ಯುತ್ತು ನಿರಾಕಾರವಿದ್ದು ವಿವಿಧ ಆಕಾರಗಳ ಬಲ್ಬುಗಳಲ್ಲಿ ಪ್ರವಹಿಸಿ, ಪ್ರಕಟವಾದಂತೆ. ಇದಕ್ಕೇ ದಿವ್ಯದರ್ಶನ, ಸಗುಣ ಸಾಕ್ಷಾತ್ಕಾರ (Revelation), ಖಂಡ ಸಾಕ್ಷಾತ್ಕಾರ ಎನ್ನುವುದು. ಇದಕ್ಕೆ ಮುಂದಿನ ಹಂತ ನಿರ್ಗುಣ ಸಾಕ್ಷಾತ್ಕಾರ (Realisation), ಅಥವಾ ಅಖಂಡ ಸಾಕ್ಷಾತ್ಕಾರ. ಇಲ್ಲಿ ಬೆಳಕಿನ ಸ್ವರೂಪದಲ್ಲಿ ದಿವ್ಯಾನುಭವ ದೊರೆಯುವುದು. ಸಂತ ತುಕಾರಾಂ, ಮೀರಾ, ಅಕ್ಕಮಹಾದೇವಿ, ಸಂತ ಪಾಲ್, ರಾಮಕೃಷ್ಣಪರಮಹಂಸ ಎಲ್ಲರೂ ಈ ಸಗುಣ ಸಾಕ್ಷಾತ್ಕಾರದ ಅನುಭವ ಪಡೆದರು. ಇವರಲ್ಲಿ ಕೆಲವರು ನಿರ್ಗುಣದ ಹಂತವನ್ನು ತಲ್ಪಿದರು. ಬಸವಣ್ಣನವರಿಗೆ ಈ ಎರಡೂ ಅನುಭವಗಳಾಗಿದ್ದವು. ಸಗುಣ ಸಾಕ್ಷಾತ್ಕಾರವು ಸಂಗಮದಲ್ಲಿದ್ದಾಗ ಆಯಿತು. ಆಗಲೇ ಇಷ್ಟಲಿಂಗದ ಕಲ್ಪನೆ ಮೈದಳೆಯಿತು. ಸಗುಣ ಸಾಕ್ಷಾತ್ಕಾರ ಬಸವಣ್ಣನವರಿಗಾದುದು ಶಿವನ ಆಕಾರದಲ್ಲಿ !

"ಓಡದಿರು, ನಿನ್ನ ಬೇಡುವಾತ ನಾನಲ್ಲ ಶಿವನೆ ;
ನೋಡುವೆನು ಕಣ್ಣು ತುಂಬ ;
ಆಡಿಪಾಡಿ ನಲಿದಾಡುವೆ ; ಬೇಡೆನ್ನಕೂಡೆ ಮಾತನಾಡಲಾಗದೆ
ಎಲೆ ಶಿವನೇ,
ಕೂಡಲ ಸಂಗಮದೇವಾ, ನೀನಾಡಿಸುವ ಬೊಂಬೆ ನಾನು ‖

(ಬ. ಷ. ವ 1191)

ಇದನ್ನೇ ನಾನು ಬರೆದಿರುವದು, "ಪರಮಾತ್ಮ ತತ್ತ್ವವು ಅವರು ಅನನ್ಯವಾಗಿ (ಅವರೆಗೆ) ಆರಾಧಿಸುತ್ತಿದ್ದ ಶಿವನ ಆಕಾರದ ಸಗುಣ ರೂಪದಲ್ಲಿ ಕಾಣಿಸಿಕೊಂಡು ಹಸ್ತಮಸ್ತಕ ಸಂಯೋಗ ಮಾಡಿತು." ಈ ವಾಕ್ಯದಲ್ಲಿ ಬಂದಿರುವ ಒಂದೊಂದು ಪದವೂ ಅರ್ಥಗರ್ಭಿತವಾಗಿದೆ, ವಾಕ್ಯವಂತೂ ಆಳವಾದ ಅರ್ಥಸಂಪತ್ತಿನಿಂದ ತುಂಬಿದೆ.

"ಜಾತಿ ಬೇಡ ಎನ್ನುವಿರಿ. ಮಾನವ ಜಾತಿ ಬಿಡಲಾಗುವುದೆ ?" (ಪುಟ 49) ಇದು ಜ. ಚ. ನಿಯವರ ಪ್ರಶ್ನೆ. ಇದೊಂದು ಯಕ್ಷ ಪ್ರಶ್ನೆ ! 'ಮಾನವ ಜಾತಿ ಒಂದೇ, ಮಾನವರೆಲ್ಲ ಸಮಾನರು' ಎಂಬ ತಿಳುವಳಿಕೆ ಜನರಲ್ಲಿ, ಧಾರ್ಮಿಕರಲ್ಲಿ, ಮಠಾಧೀಶರಲ್ಲಿ ಇದ್ದಿದ್ದರೆ, ಇಂದು ಹಿಂದೂ ಸಮಾಜದಲ್ಲಿ ಕಾಣುವ ಈ ದುರವಸ್ಥೆ ಏಕಿರುತ್ತಿತ್ತು ? ಮಾನವಜಾತಿ ಬಿಡಲು ಯಾರೂ ಹೇಳರು. ಮಾನವನು ಮಾನವಜಾತಿ ಬಿಟ್ಟು ಪಶುಜಾತಿಗೆ ಸೇರಲು ಬರುವುದೆ ? ಮಾನವರಲ್ಲಿ ಕಲ್ಪನೆ ಮಾಡಿಕೊಂಡಿರುವ ಒಳಜಾತಿ ಬಿಡಲು ನಾವು ಹೇಳುವುದು ! ಅದನ್ನೇ ಬುದ್ಧ, ಬಸವ, ಅಂಬೇಡ್ಕರ್ ಸಹ ಹೇಳಿದ್ದು. 'ಸಂಗಮನಾಥ' ಎಂಬುದು ಪರಮಾತ್ಮವಾಚಕ ಪದವಂತೆ ! ಪರಮಾತ್ಮ ಕೂಡಲ ಎಂಬ ಹೆಸರುಳ್ಳ ಊರಿನಲ್ಲಿ ಮಾತ್ರವೇ ಇರುವನೇನು ? ಆತನು ಸಂಗಮಕ್ಕೆ ಮಾತ್ರ ನಾಥನೇನು ? 'ಕೂಡಲ ಸಂಗಮನಾಥ' ಈ ಶಬ್ದಗಳ ಅರ್ಥವಾಗದವರೊಡನೆ ವಾದಕ್ಕಿಳಿವುದು ಲೇಸಿನದಲ್ಲ." ಇದು ಜ. ಚ. ನಿಯವರ ಟೀಕೆ (ಪುಟ 48).

ಬಾಲಿಶತನದಿಂದ ವಾದಮಾಡುವರೋ ಅಥವಾ ಉದ್ದೇಶಪೂರ್ವಕವಾಗಿ ವಾದ ಮಾಡುವರೋ ನಮಗಂತೂ ಅರ್ಥವಾಗುತ್ತಿಲ್ಲ. "ಸಂಗಮನಾಥ" ಎಂಬ ಪದಕ್ಕೆ ಇವರು ಯಾವ ಅರ್ಥಮಾಡುವರೋ ನಾವರಿಯೆವು. ಸಂಗಮದೇವ, ಸಂಗಮನಾಥ, ಕೂಡಲ ಸಂಗಯ್ಯ ಎಂದು ಬಸವಣ್ಣನವರು ಬಳಸಿದ್ದು ಪರಾತ್ಪರವಸ್ತು (Supreme Reality) ವನ್ನು ಉದ್ದೇಶಿಸಿ ; ಯಾವುದೇ ಗುಡಿ ಗುಂಡಾರಕ್ಕೆ, ಕ್ಷೇತ್ರಕ್ಕೆ ಸೀಮಿತವಾದ ಸ್ಥಾವರಲಿಂಗವನ್ನು ಕುರಿತಲ್ಲ. ನಾವು ಎಂದೂ ಹೇಳದ ವಿಚಾರವನ್ನು ನಾವು ಹೇಳಿದ್ದೇವೆಂದು ಜ. ಚ. ನಿಯವರು ಬರೆಯುವುದು ನೋಡಿದರೆ ವಿಪರೀತ ಆಶ್ಚರ್ಯವೆನಿಸುವುದು. ಅಥವಾ ನಾವು ಬರೆದ ವಾಕ್ಯಗಳು ಅವರಿಗೆ ಅರ್ಥವಾಗುತ್ತಿಲ್ಲವೇನೋ ಎನ್ನಿಸುವುದು. "ದೇವರು ತೀರ್ಥಕ್ಷೇತ್ರಕ್ಕೆ, ಗುಡಿ ಗುಂಡಾರಗಳಿಗೆ ಸೀಮಿತನಾಗಿಲ್ಲ" ಎಂದು ನಾವು ಎಂದಿನಿಂದಲೂ ಹೇಳುತ್ತಲೇ ಬಂದಿದ್ದೇವೆ.

ಅಮೂಲ್ಯನು ಅಪ್ರಮಾಣನು ಆಗೋಚರ ಲಿಂಗವು
ಆದಿಮಧ್ಯಾಂತವಿಲ್ಲದ ಲಿಂಗವು
ಸ್ವತಂತ್ರಲಿಂಗವು, ನಿತ್ಯನಿರ್ಮಲ ಲಿಂಗವು
ಅಯೋನಿ ಸಂಭವನಯ್ಯಾ ನಮ್ಮ ಕೂಡಲಸಂಗಮದೇವ !

ಪ್ರಣವಾರೂಢನು ಪ್ರಣವ ಸ್ವರೂಪನು
ಪ್ರಣವ ಪ್ರಕೃತಿ ಸೌಂಜ್ಞನು, ಪ್ರಣವ ಷಡಂಗ ಸಮರಸ
ನಮ್ಮ ಕೂಡಲ ಸಂಗಮದೇವರು !

ಬಸವಣ್ಣನವರು ತಮ್ಮ ವಚನ ಮುದ್ರಿಕೆಯಾಗಿ ಬಳಸುವ "ಕೂಡಲ ಸಂಗಮದೇವ" ಅಕ್ಕಮಹಾದೇವಿಯ ಚನ್ನಮಲ್ಲಿಕಾರ್ಜುನ, ಪ್ರಭುದೇವರ ಗುಹೇಶ್ವರ–ಈ ಎಲ್ಲವೂ ಅಮೂಲ್ಯನು, ಅಪ್ರಮಾಣನು, ಅಭವನು, ಪ್ರಣವ ಸ್ವರೂಪಿಯೂ ಆದ ಪರಮಾತ್ಮನನ್ನು ಕುರಿತು. ಬಾಲ್ಯದಿಂದಲೂ ಪ್ರಭಾವ ಬೀರಿದ್ದ ಕೆಲವು ದೇವಾಲಯಗಳ ಆರಾಧ್ಯಮೂರ್ತಿಗಳ ಹೆಸರನ್ನು ಶರಣರು ಬಳಸಿಕೊಂಡಿದ್ದರೂ, ಆ ಪದವುಉದ್ದೇಶಿಸುವುದು ಪರಮಾತ್ಮನನ್ನು ಕುರಿತು. "ನೀವು ಮೂಢನಂಬಿಕೆಯಲ್ಲಿದ್ದು ಉಳಿದವರಿಗೆ ಮೂಢನಂಬಿಕೆ ಬೇಡ ಎನ್ನುವಿರಿ. ನೀವು ಮೊದಲುಬಿಡಿ." ಇದು ಜ. ಚ. ನಿಯವರ ಹಿತೋಕ್ತಿ (ಪುಟ 49). ' ಬಹಳ ಸಂತೋಷ. ಆದರೆ ಮೂಢನಂಬಿಕೆ ನಮ್ಮಲ್ಲಿದ್ದರೆ ಅವಾವು ಎಂದು ತಿಳಿಸಿದರೆ ತುಂಬಾ ಉಪಕಾರ. ಏಕೆಂದರೆ ಈ ಕೆಳಕಂಡ ಮೂಢನಂಬಿಕೆಗಳನ್ನು ನಾವು ಎಂದೂ ಮಾಡಿಲ್ಲ, ಮಾಡುತ್ತಿಲ್ಲ.

1. ಜಾತಿವ್ಯವಸ್ಥೆ ಒಪ್ಪುವುದಿಲ್ಲ. ನಮ್ಮ ವಿದ್ಯಾರ್ಥಿನಿಲಯ, ಮಠದಲ್ಲಿ ಎಲ್ಲ ಜಾತಿಯವರಿಗೆ ಪ್ರವೇಶ, ಸಹಭೋಜನ ಇದೆ.

2. ಎಲ್ಲರಿಗೂ ಧಾರ್ಮಿಕ ಸಂಸ್ಕಾರದ ಅವಕಾಶವಿದೆ.

3. ಮೂರ್ತಿಪೂಜೆ, ರುದ್ರಾಭಿಷೇಕ, ಸ್ಥಾವರಾರ್ಚನೆ ಮುಂತಾದ ಬಸವ ಧರ್ಮ ವಿರೋಧಿ ಆಚರಣೆಗಳಿಲ್ಲ.

4. ನವಗ್ರಹಪೂಜೆ, ಪಂಚಾಂಗ ನಂಬುಗೆ, ಜ್ಯೋತಿಷ್ಯ, ಶಕುನ–ಅಪಶಕುನ ನಂಬುಗೆ, ನೆಲ, ನೀರು, ಬೆಂಕಿ, ಯಂತ್ರ–ಈ ಯಾವ ಪೂಜೆಯೂ ಇಲ್ಲ.

5. ಅಡ್ಡಪಲ್ಲಕ್ಕಿ, ಯಜ್ಞ-ಯಾಗಾದಿಗಳಿಲ್ಲ; ಪಂಚಾಮೃತಾಭಿಷೇಕ, ನಂದಾ ದೀವಿಗೆಯ ವ್ರತಗಳಿಲ್ಲ.

6. ಅಯ್ಯ-ಭಕ್ತ ಎಂಬ ಭೇದವಿಲ್ಲ. ಅರ್ಹತೆಯಿಂದ ಯಾರಾದರೂ ಗುರು, ಜಂಗಮ-ಸ್ವಾಮಿಗಳಾಗಬಲ್ಲರು ಎಂಬ ಸಿದ್ಧಾಂತ ಆಚರಣೆಯಲ್ಲಿದೆ.

7. ಕಾಲ, ವಾರ, ತಿಥಿ, ಅಮವಾಸ್ಯೆ, ಹುಣ್ಣಿಮೆ – ಈ ಯಾವ ಭೇದವನ್ನೂ ಮಾಡುವುದಿಲ್ಲ. ನಿತ್ಯಲಿಂಗಾರ್ಚನೆ, ಪ್ರಾರ್ಥನೆ-ಧ್ಯಾನಾದಿಗಳು ಮಾತ್ರ ಆಚರಣೆಯಲ್ಲಿವೆ.

8. ಮೂಢಾಚಾರ, ಕಂದಾಚಾರ, ಅನಾಚಾರ, ಡಂಭಾಚಾರ, ಶುಷ್ಕಾಚಾರ–ಈ ಎಲ್ಲವುಗಳನ್ನೂ ಬಹಿಷ್ಕರಿಸಿದ್ದೇವೆ.

9. ತೀರ್ಥಸ್ನಾನ, ಗೋಪೂಜೆ, ಗಂಗಾಪೂಜೆ, ನಾಗರಪೂಜೆ, ಕುಂಭಾಭಿಷೇಕ — ಈ ಯಾವುವೂ ಆಚರಿಸಲ್ಪಡುವುದಿಲ್ಲ.

10. ವರದಾಶಂಕರ ವ್ರತ, ಹದಿನಾರು ಸೋಮವಾರವ್ರತ, ಸತ್ಯನಾರಾಯಣ ಪೂಜೆ, ಒಣಮಡಿ ಇವಾವೂ ಆಚರಣೆಯಲ್ಲಿಲ್ಲ. ಇಷ್ಟು ಮಾತ್ರವಲ್ಲದೆ, ಯಾವ ಮಠಗಳಲ್ಲಿ, ಮಠಾಧೀಶರಲ್ಲಿ ಇಂತಹ ಮೂಢನಂಬಿಕೆಗಳಿವೆಯೋ ಅವರಿಗಾದರೂ ಶ್ರೀ ಜ. ಚ. ನಿಯವರು ತಿಳಿಹೇಳಿದರೆ ಸಮಾಜಕ್ಕೆ ಬಹುದೊಡ್ಡ ಉಪಕಾರವಾಗುವುದು.

ಇಷ್ಟನ್ನುಳಿದು ಇನ್ನಾವದಾದರೂ ಮೂಢನಂಬಿಕೆಗಳುಂಟೋ ? ಇದ್ದರೆ ತಿಳಿಸಿರಿ. "ನಿಮ್ಮಷ್ಟು ಶೋಷಣೆ ಇನ್ನಾರೂ ಮಾಡಿಲ್ಲ, ಮಾಡುತ್ತಿಲ್ಲ." (ಪುಟ 49). ಇದು ಇನ್ನೊಂದು ಆರೋಪ. ಇದರಲ್ಲೆಷ್ಟು ಸತ್ಯಾಂಶವಿದೆ ನೋಡೋಣ.

ಶೋಷಣೆ ನಡೆಯುವುದು ಮೇಲು-ಕೀಳು ಎಂಬ ಜಾತಿಭೇದವಿದ್ದಾಗ, ಬಲ್ಲಿದ-ಬಡವ ಎಂಬ ವರ್ಗಭೇದವಿದ್ದಾಗ, ತೀಕ್ಷ್ಣಮತಿ–ಮಂದಮತಿ ಎಂಬ ಬುದ್ಧಿ ಭೇದವಿದ್ದಾಗ. ನಮ್ಮಲ್ಲಿ ಶೋಷಣೆ ಎಳ್ಳಷ್ಟೂ ಇಲ್ಲ.

1. ಯಾರನ್ನೂ ಜಾತಿಯ ಕೀಳರಿಮೆ ಹೇರಿ ದೂರವಿಡುವುದಿಲ್ಲ ನಾವು.

2. ಧರ್ಮ ಸಂಸ್ಕಾರವನ್ನಾಗಲೀ, ಜಂಗಮದೀಕ್ಷೆಯನ್ನಾಗಲೀ ಕೊಡುವುದರಲ್ಲಿ ಭೇದವೆಣಿಸಿ, ನಿರಾಕರಿಸುವುದಿಲ್ಲ.

3. ಜನರಲ್ಲಿರುವ ಅಜ್ಞಾನವನ್ನು ಬಳಸಿಕೊಂಡು ಯಾವುದೇ ಯಜ್ಞ-ಯಾಗಾಚರಣೆ, ಹೋಮ-ಶಾಂತಿ, ನವಗ್ರಹಪೂಜೆ, ಗೋದಾನ–ಹಿರಣ್ಯದಾನ ಮುಂತಾದ್ದು ಬೋಧಿಸುವುದಿಲ್ಲ.

4. ಅಡ್ಡಪಲ್ಲಕ್ಕಿ ಏರಿ ಶಿವಾಂಶಿಕರಾದ ಮಾನವರನ್ನು ತುಳಿಯುವುದಿಲ್ಲ. ಕೊಡ ಕೊಡಗಟ್ಟಲೆ ಹಾಲು, ತುಪ್ಪಗಳ ಅಭಿಷೇಕವೆರೆದಾಗಲೀ, ಲಕ್ಷದೀಪಾರ್ಚನೆ ಮಾಡಿಯಾಗಲೀ ಆಪ್ಯಾಯನ ಪ್ರಸಾದವನ್ನು ಕೆಡಿಸುವುದಿಲ್ಲ.

5. ಅನ್ಯರನ್ನು ಕಂಡು ಮತ್ಸರಿಸುವುದಿಲ್ಲ ಅವರಿಗೇಕೆ ಕಾಣಿಕೆ ಕೊಟ್ಟರಿ, ನಮಗೇಕೆ ಕೊಡಲೊಲ್ಲಿರಿ ಎಂದು ಚುಚ್ಚುನುಡಿಯಾಡುವುದಿಲ್ಲ. ದೇವರು ನಮಗಿತ್ತಿರುವ ಜ್ಞಾನವನ್ನೇ ಜನಮನಕ್ಕೆ ನೀಡಿ, ಜನತೆ ಹೃದಯತುಂಬಿ ನೀಡಿದ ಕಾಣಿಕೆಯನ್ನು ದೇವ ಪ್ರಸಾದವೆಂದು ಸ್ವೀಕರಿಸಿ, ಅದು ಕೊಂಚವೂ

ಹಾಳಾಗದಂತೆ ಕಾಯ್ದು, ಜೀವಂತ ದೇವಾಲಯಗಳಾದ ಶಾಲೆ, ಗ್ರಂಥ, ಧರ್ಮಬೋಧಕ—ಇವುಗಳ ತಯಾರಿಕೆಗೆ ವಿನಿಯೋಗಿಸುತ್ತಿದ್ದೇವೆ. ಹೀಗಾಗಿ ಯಾವ ಬಗೆಯ ಶೋಷಣೆಯೂ ಇಲ್ಲಿಲ್ಲ; ಶೋಷಣೆಯ ವಿರುದ್ಧ ಹೋರಾಡುವ ಘೋಷಣೆ ಇದೆ. ಶೋಷಿತರನ್ನು ಪೋಷಿಸುವ ಮಣಿಹ ಹೊತ್ತಿದ್ದೇವೆ. "ಬಸವ ಪೂರ್ವದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಗಳೇ ನಮ್ಮ ಆಚರಣೆಯಲ್ಲಿವೆ. ಮರಳಿ ನೀವೇನು ಹೇಳುವುದು ?" ಇದು ಜ. ಚ. ನಿಯವರ ಸಮಾರೋಪ ಹೇಳಿಕೆ. ಹಾಗಿದ್ದರೆ ವಚನ ಸಾಹಿತ್ಯದ ಅವಲಂಬನೆ ಇಲ್ಲದೆ, ಶರಣರ ಒಂದು ವಚನವನ್ನೂ ಉಲ್ಲೇಖಿಸದೆ ಇವರು ಆ ಪೂರ್ವದ ತತ್ತ್ವಗಳಾವುವು ತಿಳಿಸಬಲ್ಲರೆ? ನಮಗೆ ಗೊತ್ತು, ಇವರು ಎತ್ತಿ ತೋರುವುದು "ಸಿದ್ಧಾಂತ ಶಿಖಾಮಣಿ" ಎಂಬ ಒಂದೇ ಒಂದು ಕೃತಿಯನ್ನು ! ಅದನ್ನು ಬಸವಪೂರ್ವದ ಗ್ರಂಥವೆಂದು ಒಪ್ಪಿಕೊಳ್ಳಲು ಯಾವ ವಿಶ್ವ ವಿದ್ಯಾಲಯದ ಪಂಡಿತರೂ ಸಿದ್ಧವಿಲ್ಲ. ಅದರ ಸಂಸ್ಕೃತ ಇತ್ತೀಚಿನ ಶೈಲಿಯದು. ಡಾ॥ ಬಿ. ಸಿ. ಜವಳಿಯವರ ಸಂಶೋಧನೆಯ ಫಲವಾದ ಮಾತುಗಳನ್ನಿಷ್ಟು ಕೇಳಿ:

"ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಶರಣರು ಪುರಾಣಗಳನ್ನು ಹೇರಳ ವಾಗಿಯೂ, ಸಿದ್ಧಾಂತ ಶಿಖಾಮಣಿಯನ್ನು ಅತಿ ಕಡಿಮೆಯೂ ಬಳಸಿರುವುದು. ಸಿದ್ಧಾಂತ ಶಿಖಾಮಣಿಯ ಒಂದೇ ಒಂದು ಶ್ಲೋಕವು ತೀರ ಇತ್ತೀಚಿನ ಷಣ್ಮುಖ ಸ್ವಾಮಿಯ (ಅಖಂಡೇಶ್ವರ) ವಚನಗಳಲ್ಲಿ ದೊರೆಯುತ್ತದೆ. ಆದುದರಿಂದ ಸಿದ್ಧಾಂತ ಶಿಖಾಮಣಿಯು ಸುಮಾರು ಹದಿನಾರನೆಯ ಶತಮಾನದ ವಚನಕಾರರವರೆಗೆ ಪರಿಚಿತ ವಿದ್ದಂತೆ ಕಾಣುವುದಿಲ್ಲವೆನ್ನಬಹುದು. ಒಂದು ವೇಳೆ ಅದು ಉಪಲಬ್ಧವಿದ್ದಿದ್ದರೂ ಅಪ್ರಮುಖ ಗ್ರಂಥವಾಗಿರಬೇಕೆಂದು ಯಾರಿಗಾದರೂ ಅನ್ನಿಸುತ್ತದೆ ....

ಅಲ್ಲದೆ ಸಂಸ್ಕೃತ ಶ್ಲೋಕಗಳಲ್ಲಿ ಮೂಲ ವಚನಕಾರರಿಗಿಂತ. ಪರರ ಕೈವಾಡವೇ ಹೆಚ್ಚಾಗಿದೆ. ಈ ಕಾರ್ಯವು ಹದಿನೈದನೆಯ ಶತಮಾನದಿಂದೀಚೆಗೆ ನಡೆದಿರಬಹುದು ಎಂಬುದಕ್ಕೆ ಹದಿನೈದನೆಯ ಶತಮಾನದಿಂದೀಚೆಗೆಯೇ ವೀರಶೈವರಲ್ಲಿ ಸಂಸ್ಕೃತದಲ್ಲಿ ಗ್ರಂಥಗಳು ಹೊರಹೊಮ್ಮುತ್ತಿದ್ದುದೇ ಸಾಕ್ಷಿ."

ಪುಟ 119–120

ವಚನ ಸಾಹಿತ್ಯದ ಅವಲಂಬನೆಯಿಲ್ಲದೆ ಅಷ್ಟಾವರಣ, ಪಂಚಾಚಾರ, ಷಟ್ ಸ್ಥಲಗಳನ್ನು ಜ. ಚ. ನಿಯವರು ನಿರೂಪಿಸಿದರೆ ತುಂಬಾ ಉಪಕಾರವಾಗುವುದು.

ಸಮಾರೋಪ

"ಬಸವಣ್ಣ ನಿಮಗೊಬ್ಬರಿಗೆ ಮೀಸಲಿಲ್ಲ" ಎಂದು ನುಡಿದಿದ್ದಾರೆ ಜ.ಚ.ನಿಯವರು. ನಿಜ; ನಾವೆಂದೂ ನಮಗಷ್ಟೇ ಬಸವಣ್ಣ ಮೀಸಲು ಎಂದು ಹೇಳಿಲ್ಲ. ಬಸವಣ್ಣ ಯಾವ ಮಠಾಧೀಶರ ಸೊತ್ತಲ್ಲ; ಲಿಂಗಾಯತ ಸಮಾಜದ ರಜಿಸ್ಟರ್ಡ್ ಆಸ್ತಿಯಲ್ಲ. ಅವನು ವಿಶ್ವಮಾನವ, ವಿಶ್ವವಿಭೂತಿ, ಜಗದ್ಗುರು.

"ಬಸವಣ್ಣ ನಮಗೆ ಮೀಸಲಿಲ್ಲ" ಈ ಮಾತನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಬಸವಣ್ಣನಿಗೆ ನಾವು ಮೀಸಲು ಎಂದು ಸ್ಪಷ್ಟೀಕರಿಸುತ್ತೇವೆ. ಇದು ಅಹಂಕಾರದ ಮಾತಲ್ಲ. ಸಿದ್ಧರಾಮೇಶ್ವರರು ಹೇಳುವಂತೆ :

ಆ ಬಸವನತ್ಯಂತ ಆ ಬಸವನಾನಂದ
ಆ ಬಸವ ಸಕಲಕ್ಕೆ ಆದಿಸಿದ್ಧ
ಆ ಬಸವ ಪಾದವನು ಮಸ್ತಕದಿ ಹೊತ್ತಿರಲು
ಆನು ನೀನಾದೆನ್ನೈ ಯೋಗಿನಾಥ ॥ಪದ್ಯ 39॥

ಬಸವ ಪಾದವನ್ನು ಮಸ್ತಕದ ಮೇಲೆ ಹೊತ್ತು ಶರಣಾಗತ ಭಾವದಿಂದ ಆಡುವ ಮಾತು. ಬಸವಣ್ಣನನ್ನು ಕುದುರೆಯನ್ನಾಗಿ ಮಾಡಿ, ಅವನ ಬಲದ ಮೇಲೆ ಅಹಂಕಾರದಿಂದ ಸವಾರಿ ಮಾಡುವವರು ನಾವಲ್ಲ. ಬಸವಣ್ಣನಿಗೆ ನಾವು ಕುದುರೆ ಯಾಗಿ, ನಮ್ಮ ಮೇಲೆ ಅವನನ್ನು, ಅವನ ತತ್ತ್ವವನ್ನಿಟ್ಟು ಮೆರೆಸಬೇಕೆಂಬುವವರು ನಾವು. ಉತ್ತರಪೂರ್ವಕ ಲೇಖನವು, ಸಾಧಾರಪೂರ್ವಕ ವಿವರಣೆ ನೀಡಬೇಕಾಗಿ ಬಂದುದರಿಂದ ಸಾಕಷ್ಟು ಬೆಳೆದಿದೆ. ಕಲ್ಯಾಣ ಕಿರಣದ ಪುಟಗಳು ಮುಗಿಯುತ್ತ ಬಂದುದರಿಂದ ನಾನು ಇನ್ನೂ ಕೆಲವು ಟೀಕೆ-ಸಂದೇಹಗಳಿಗೆ ಉತ್ತರ ನೀಡಿಲ್ಲ. "ಈ ಮಾತು ನಾವು ಒಪ್ಪಲ್ಲ, ಅದೆಂತು ಸಾಧ್ಯ, ಇದರರ್ಥ ಅವರಿಗೆ ತಿಳಿದಿಲ್ಲ; ಈ ಪದದ ಅರ್ಥವನ್ನರಿಯದವರೊಡನೆ ವಾದವು ಸಲ್ಲದು, ನಮ್ಮ ಸಂಪಾದನೆಯ ಸೊಂಪಿನಲ್ಲಿ ಖಂಡಿಸಲಾಗಿದೆ ನೋಡಿಕೊಳ್ಳಲಿ." ಈ ರೀತಿಯಲ್ಲಿ ನಾವೂ ಬರೆಯುವುದಾಗಿದ್ದಿದ್ದರೆ ದೀರ್ಘ ಲೇಖನವನ್ನು, ಬೇರೆ ಬೇರೆ ಮಹನೀಯರ ಹೇಳಿಕೆಗಳನ್ನು ನೀಡಿ, ಬರೆಯು ವುದು ಅವಶ್ಯಕವಿದ್ದಿರಲಿಲ್ಲ. ಚುಟುಕಗಳ ಹೇಳಿಕೆಯಲ್ಲೇ ಮುಗಿಸಬಹುದಿತ್ತು! "ಶೈವ-ವೀರಶೈವ-ಲಿಂಗಾಯತ ಪದಗಳ ಬಗೆಗೆ ಅರ್ಥವಿಲ್ಲದ ಜೊಳ್ಳುವಾದ ಹೂಡಿದ್ದಾರೆ, 4–6 ಪುಟ ಬೆಳಸಿದ್ದಾರೆ, ಇದರಿಂದ ಇವರ ಮೂಲ ಗುರಿ–ನಿರಿ ಸಾಧಿತವಾಗಿಲ್ಲ" ಎಂದು ಜ.ಚ.ನಿಯವರು ನುಣುಚಿಕೊಂಡಿದ್ದಾರೆಯೇ ವಿನಾ, ವಿಧವಿಧವಾದ ನನ್ನ ವಾದಗಳಿಗೆ ಮಾರುತ್ತರ ನೀಡಿಲ್ಲ.

ಸ್ಥಳಾಭಾವದಿಂದ ಉತ್ತರಿಸದೆ ಬಿಟ್ಟ ಪ್ರಶ್ನೆ-ಟೀಕೆಗಳಿಗೆ ಮತ್ತೆ ಇನ್ನೊಂದು ಸಂಚಿಕೆಯಲ್ಲಿ ಉತ್ತರಿಸುವೆ. ಈ ಲೇಖನಕ್ಕೆ ಪೂರ್ಣವಿರಾಮವಿಡುವ ಮುನ್ನ ಒಂದೆರಡು ಮಾತು ಹೇಳಬಯಸುವೆ.

ಉಗಿ ಬಂಡಿಯೊಂದು ಓಡಬೇಕಾದರೆ ಎರಡು ಹಳಿಗಳು ಬೇಕು. ಹಾಗೆಯೇ ಸಮಾಜದ ಉಗಿಬಂಡಿ ಚಲಿಸಬೇಕಾದರೆ ಧರ್ಮಗುರುವಿನಲ್ಲಿ ಶ್ರದ್ಧೆ-ಧರ್ಮಶಾಸ್ತ್ರದಲ್ಲಿ ನಿಷ್ಠೆ ಅವಶ್ಯಕ. ಜಾತ್ಯತೀತ, ವರ್ಣ, ವರ್ಗರಹಿತ ವೈಚಾರಿಕ ಸಮಾಜದ ನಿರ್ಮಾಣವನ್ನೇ ಲಿಂಗಾಯತರು (ಎಲ್ಲ ಕನ್ನಡಿಗರು, ಭಾರತೀಯರು) ತಮ್ಮ ಗುರಿಯಾಗಿಟ್ಟುಕೊಳ್ಳುವುದಾದರೆ ಬಸವಣ್ಣನವರನ್ನು ತಮ್ಮ ಆರಾಧ್ಯಗುರುವನ್ನಾಗಿ, ವಚನ ಸಾಹಿತ್ಯವನ್ನು ತಮ್ಮ ಧಾರ್ಮಿಕ ಸಂವಿಧಾನವನ್ನಾಗಿ ಇಟ್ಟುಕೊಳ್ಳಬೇಕು. ಬಸವಣ್ಣನ ನಂತರ ಆರೇಳು ಶತಮಾನಗಳ ವರೆಗೆ ಈ ಸಮಾಜದ ಬಂಡಿ, ಸುರಕ್ಷಿತವಾಗಿ ಬಸವ ಗುರುವಿನಲ್ಲಿ ಶ್ರದ್ಧೆ, ವಚನ ಸಾಹಿತ್ಯದಲ್ಲಿ ನಿಷ್ಠೆ ಎಂಬ ಎರಡು ಹಳಿಗಳ ಮೇಲೆ ಸಾಗುತ್ತ ಬಂದಿದೆ. ಅಂತೆಯೇ ಎಲ್ಲ ಜಾತಿ ಮತ ಪಂಥ ಪಂಗಡಗಳವರನ್ನು ತನ್ನ ವಿಶಾಲ ಬಾಹುಗಳಲ್ಲಿ ಇಂಬಿಟ್ಟುಕೊಂಡಿತು. ಇತ್ತೀಚಿನ ಶತಮಾನ, ದಶಕಗಳಲ್ಲಿ ಕೆಲವರು ಈ ಸಮಾಜದ ಬಂಡಿಯು ಹಳಿ ತಪ್ಪುವಂತೆ ಮಾಡಿದ್ದಾರೆ. ಆದ್ದರಿಂದಲೇ ಹಳಿ ತಪ್ಪಿ ಬಿದ್ದ ಸಮಾಜ ಮತ್ತೆ ತನ್ನಲ್ಲಿ ಜಾತಿಭೇದ, ಮೂಢನಂಬಿಕೆ, ಅವೈಚಾರಿಕತೆಗಳನ್ನು ತುಂಬಿಕೊಂಡಿದೆ. ಪ್ರಸ್ತುತ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾಹಿತಿಗಳು, ಧರ್ಮಗುರುಗಳು, ಸಾಮಾಜಿಕ ಕಾರ್ಯಕರ್ತರು ಮತ್ತೆ ಜಾಗೃತಿಯ "ಕ್ರೇನ್"ನ ಬಲದಿಂದ ಹಳಿಗಳಿಗೆ ಈ ಸಮಾಜವನ್ನು ಹೊಂದಿಸಬೇಕಾಗಿದೆ.

"ಲಿಂಗಾಯತ ಧರ್ಮಕ್ಕೆ ಬಸವ ಧರ್ಮ ಎಂದು ಅನ್ನಿರಿ ಎಂದು ಈಗ ಹೇಳುತ್ತಿದ್ದಾರೆ. ಈ ಅವಸ್ಥೆ ಏಕೆ ಬಂತೋ ಇವರಿಗೆ?" (ಮಾಮಿಡಿ 46) ಅವಸ್ಥೆ ಬಂದಿರುವುದು ನಮಗಲ್ಲ, ಅನೇಕ ಉಪಪಂಥಗಳನ್ನು (Lococults) ಬೆಳೆಸುತ್ತಿರುವ ಗುರುಗಳನ್ನು ನಂಬಿರುವ ಸಮಾಜಕ್ಕೆ! ಬಸವಣ್ಣನವರು ವಿನಯಶೀಲರಾಗಿ ತಮ್ಮ ಹೆಸರನ್ನು ಇಡದುದರಿಂದ ತಮ್ಮ ಧರ್ಮಗುರುವಿನ ವಿಚಾರಗಳಿಗೇ ವಿರುದ್ಧವಾಗಿ ನಡೆಯುವ ಬಹುಪಾಲು ಅನುಯಾಯಿಗಳನ್ನು, ಅನೇಕ ಮಠಾಧೀಶರನ್ನು ಇಂದಿಲ್ಲಿ ಕಾಣಬಹುದು. ಮೂಲಗುರುವಿನ ಸಂದೇಶವನ್ನು ನೂರಕ್ಕೆ ನೂರು ಅನುಸರಿಸುವ ಕ್ರೈಸ್ತನನ್ನಾಗಲೀ, ಮುಸಲ್ಮಾನನನ್ನಾಗಲೀ, ಬೌದ್ಧನನ್ನಾಗಲೀ ಕಾಣುವುದು ಕಷ್ಟಸಾಧ್ಯ. ಆದರೆ ಅವರುಗಳು ನೂರಕ್ಕೆ 90ರಷ್ಟು ಆಚರಿಸಿದರೆ, ಇಂದಿನ ಲಿಂಗಾಯತರು ನೂರಕ್ಕೆ ಹತ್ತರಷ್ಟು ಸಹ ಆಚರಿಸುತ್ತಿಲ್ಲ. ತೀರ್ಥಕ್ಷೇತ್ರಗಳಿಗೆ ಹೋಗಿ ಕೂದಲು ಕೊಡುವುದರಿಂದ ಹಿಡಿದು, ಮುಸಲ್ಮಾನರ ದರ್ಗಾಕ್ಕೆ ಹೋಗಿ ಸಕ್ಕರೆ ಕೊಟ್ಟು ಬರುತ್ತಾರೆ. ಪಂಚಸೂತಕಗಳನ್ನು ಆಚರಿಸುವುದೇ ಅಲ್ಲದೆ, ಅಂಗದ ಮೇಲೆ ಲಿಂಗ

ವಿದ್ದವರನ್ನು ಸಂಗಮದೇವ ಎಂಬೆನು ,ಎಂಬ ಬಸವವಾಣಿ ಮರೆತು. ಅಯ್ಯ, ಭಕ್ತ, ಬಣಜಿಗ, ಸಾದ, ಪಂಚಮಸಾಲೆ, ಗಾಣಿಗ, ನೊಳಂಬ, ಜಾಡ-ಎಂದು ಮುಂತಾಗಿ ಭೇದ ಮಾಡುತ್ತಾರೆ. ಇದೇಕೆ ಹೀಗೆ? ತಮ್ಮ ಧರ್ಮದ ಸಂವಿಧಾನ ಏನು ಹೇಳುತ್ತದೆ ಎಂಬುದೇ ಅವರಿಗೆ ತಿಳಿದಿಲ್ಲ. (ಅಥವಾ ತಿಳಿದವರು ತಿಳಿಯಗೊಟ್ಟಿಲ್ಲವೋ ?!) ತಮ್ಮ ಧರ್ಮಗುರು ಏನು ಹೇಳುತ್ತಾನೆಂಬುದೇ ತಿಳಿದಿಲ್ಲ? ಇನ್ನು ಕೆಲವರು ತಿಳಿದವರಿಗೆ ತಿಳಿದಿದೆ ಎಂದು ತೋರ್ಪಡಿಸಿಕೊಳ್ಳಲಾರದ ಮನೋಭಾವ.

ವಿಮಾನ ಎಷ್ಟೇ ಎತ್ತರದಲ್ಲಿ ಹಾರಲಿ-ಎಷ್ಟೇ ದೂರ ಹೋಗಲಿ. ನಿಲ್ದಾಣದ ಕಂಟ್ರೋಲ್ ಟವರ್‌ನ ಸಂಪರ್ಕದಲ್ಲಿದ್ದರೆ ಅದಕ್ಕೆ ಅಪಾಯವಿರದು. ಹಾಗೆಯೇ ಲಿಂಗಾಯತ ಸಮಾಜವೆಂಬ ವಿಮಾನ ವಚನ ಸಾಹಿತ್ಯದ ಕಂಟ್ರೋಲ್ ಟವರಿನ ಸಂಪರ್ಕದಲ್ಲಿ, ಬಸವಣ್ಣನೆಂಬ ಸಂಪರ್ಕಾಧಿಕಾರಿಯ ಹಿಡಿತದಲ್ಲಿದ್ದರೆ ಈ ಸಮಾಜಕ್ಕೆ ಈ ದುರ್ಗತಿ ಬರುತ್ತಿರಲಿಲ್ಲ. ಆ ಸಂಪರ್ಕವನ್ನಿಂದು ಏರ್ಪಡಿಸಬೇಕಾಗಿದೆ; ಹಿಡಿತ ತಪ್ಪಿ ಹಾರಾಡುತ್ತಿರುವ ಈ ಸಮಾಜದ ವಿಮಾನವನ್ನು ಸರಿಯಾದ ಪಥಕ್ಕೆ ಸೇರಿಸಬೇಕಾದ ಹೊಣೆಗಾರಿಕೆ ಎಲ್ಲ ಮಠಾಧೀಶರ ಮೇಲಿದೆ. ಈ ಧರ್ಮ ಎಂದಿತ್ತೋ? ಯಾರಿಂದ ಬಂತೋ ? ಈ ಚರ್ಚೆ ಜನಸಾಮಾನ್ಯರಿಗೆ ಏನೂ ಉಪಯೋಗವಿಲ್ಲ. ಅವರಿಗೀಗ ಬೇಕಾದುದು ಭವಸಾಗರವ ದಾಟಲೊಂದು ಹಡಗು ; ದಿಕ್ಸೂಚಿ ಮತ್ತು ಸಮರ್ಥನಾವಿಕ. ಬಸವಣ್ಣ ಕೊಟ್ಟ ಧರ್ಮವೊಂದು ಅಂಥ ಹಡಗು ; ಅವನ ಸಾಹಿತ್ಯವು ದಿಕ್ಸೂಚಿ, ಅವನೊಬ್ಬ ಮಹಾನಾವಿಕ. ಆಧುನಿಕ ಜಗತ್ತಿನ ಆಧುನಿಕ ವಿಚಾರಗಳು ಒಡ್ಡುವ ಎಲ್ಲ ಸಂದೇಹಗಳ ಅಲೆಗಳನ್ನು ನಿವಾರಿಸಿ ದಡ ಮುಟ್ಟಿಸಬಲ್ಲ ಮಹಾನ್‌ನಾವಿಕ. ಆದ್ದರಿಂದ ಈ ಧರ್ಮಕ್ಕೆ "ಬಸವಧರ್ಮ" ಎಂಬ ಪದ ಅತ್ಯಂತ ಸೂಕ್ತ.

ವಚನ ಸಾಹಿತ್ಯವನ್ನು ಧಾರ್ಮಿಕ ಸಂವಿಧಾನವಾಗಿ ಪರಿಗಣಿಸಿ, ಅದರ ಅಧ್ಯಯನದಲ್ಲಿ ಪ್ರಾಮಾಣಿಕವಾಗಿ ತೊಡಗಿದುದೇ ಆದರೆ, ಕಂದಾಚಾರ, ಜಾತಿಭೇದ, ಅಸ್ಪೃಶ್ಯತೆ, ಶೋಷಣೆ ಸಮಾಜದಿಂದ ಪಲಾಯನಗೊಳ್ಳದಿರವು. ಬಸವಣ್ಣನವರು ಬೋಧಿಸಿದ್ದು ಸರ್ವರ ಉದ್ಧಾರವನ್ನು, ಸರ್ವತೋಮುಖ ಉದ್ಧಾರವನ್ನು ! ಎಲ್ಲರ ಉದ್ಧಾರಕ್ಕೆ ಅವರು ಸೂತ್ರಕೊಟ್ಟಿರುವ ಕಾರಣ, ಅದರಲ್ಲಿ ಅಯ್ಯನವರ ಉದ್ಧಾರವೂ ಇದೆ, ಬ್ರಾಹ್ಮಣರ ಉದ್ಧಾರವೂ ಇದೆ. ಭಕ್ತರ ಉದ್ಧಾರವೂ ಇದೆ, ದಲಿತರ ಉದ್ಧಾರವೂ ಇದೆ. ಬಸವ ತತ್ತ್ವವು ನಿಜಕ್ಕೂ ಆಚರಣೆಗೆ ಬಂದುದಾದರೆ ಭಾರತದ ಅನೇಕ ಸಮಸ್ಯೆಗಳು ಪರಿಹಾರ ಕಾಣಬಲ್ಲವು. ಧಾರ್ಮಿಕ ಶೋಷಣೆಗೊಳಗಾಗಿರುವ ಹರಿಜನ-ಗಿರಿಜನರು, ಶೂದ್ರರು-ಸ್ತ್ರೀಯರು ಎಲ್ಲರೂ ಬೆಳಕುಕಂಡು ಶಿವ ಪಥಿಕರಾಗುವರು. ಬಸವಣ್ಣನವರ ಸಂವಿಧಾನವನ್ನೊಪ್ಪಿಕೊಂಡರೆ ತಮ್ಮ ಸೌಲಭ್ಯಗಳು,



ಮೇಲರಿಮೆಗಳು ಎಲ್ಲಿ ಕುಸಿಯುತ್ತವೋ ಎಂಬ ಭಯ ಯಾವ ಧರ್ಮಗುರುಗಳಿಗೂ ಬೇಡ. ಬೂರ್ಜ್ವಾಗಳ ತಲೆಯೊಡೆದು ಬಡವರಿಗೆ ಹಂಚುವ ಸಾಮ್ಯವಾದವನ್ನೇನೂ ಬಸವಣ್ಣ ಹೇಳಿಲ್ಲ. "ಹಂಚಿಕೊಂಡು ತಿನ್ನಿರಿ, ಕಾಗೆ-ಕೋಳಿಗಳಿಗಿಂತ ಕೀಳಾಗಬೇಡಿ. ನಿಮಗಿರುವ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಸವಲತ್ತನ್ನು ಪ್ರೀತಿಯಿಂದಲೇ ವಂಚಿತರಿಗೆ ಕೊಡಿರಿ. ಅವರು ಮೇಲೇರಿದರೆ ನೀವೇನೂ ಕೆಳಗಿಳಿದಂತಾಗದು. ಪರಿವರ್ತನೆ ಒತ್ತಾಯದಿಂದ ಬೇಡ, ಪ್ರೀತಿಯಿಂದಲಾಗಲಿ." ಎಂದು ಶೋಷಿತರಿಗೆ-ಶೋಷಕರಿಗೆ ಉಭಯತರಿಗೂ ಬಸವಣ್ಣ ಹೇಳಿರುವಾಗ, ಧಾರ್ಮಿಕ ಮೌಲ್ಯಗಳ ತಳಹದಿಯ ಮೇಲೆಯೇ ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕೆಂಬುವವರಿಗೆ ಬಸವಣ್ಣನ ಧಾರ್ಮಿಕ ಸಂವಿಧಾನ ಸೂಕ್ತ ಮಾರ್ಗದರ್ಶಕ ಕೈಪಿಡಿ. ★★

ಲೇಖನ ಸಿದ್ಧಪಡಿಸಲು ಬಳಸಿಕೊಂಡ ಆಧಾರಗ್ರಂಥಗಳು

ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಣೆ

1. ಬಸವಣ್ಣನವರ ಷಟ್‌ಸ್ಥಲ ವಚನಗಳು ಸಂ. ಡಾ|| ಆರ್. ಸಿ. ಹಿರೇಮಠ
2. ಸಿದ್ಧರಾಮೇಶ್ವರರ ವಚನಗಳು ,,
3. ಅಲ್ಲಮಪ್ರಭುವಿನ ವಚನಗಳು ,,
4. ಮಹದೇವಿಯಕ್ಕನ ವಚನಗಳು ,,
5. ಚನ್ನಬಸವಣ್ಣನವರ ವಚನಗಳು ,,
6. ಭೀಮಕವಿಯ ಬಸವ ಪುರಾಣ ,,
7. ಹರಿಹರನ ಬಸವರಾಜ ದೇವರ ರಗಳೆ ಸಂ. ಡಾ|| ಹೆಚ್. ದೇವೀರಪ್ಪ
8. ಸಿಂಗಿರಾಜನ ಬಸವರಾಜ ಚಾರಿತ್ರ್ಯ ಸಂ. ಡಾ|| ಹೆಚ್ ದೇವೀರಪ್ಪ
9. ಮೋಳಿಗೆ ಮಾರಯ್ಯನ ವಚನಗಳು ಸಂ. ರೆ|| ಉತ್ತಂಗಿ ಚನ್ನಪ್ಪ, ಧಾರವಾಡ.
10. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಸಂ. ಡಾ|| ಎಂ. ಚಿದಾನಂದಮೂರ್ತಿ
11. ಜಾನಪದ ಗೀತೆಗಳು-ಒಂದು ಅಧ್ಯಯನ ಡಾ|| ಗದ್ದಿಗಿಮಠ
12. ನುಡಿನೈವೇದ್ಯ ಸಂ. ಸದ್ಗುರು ಶ್ರೀ ಲಿಂಗಾನಂದಸ್ವಾಮಿಗಳು
13. ಲಿಂಗಾಯತ ಧರ್ಮಸ್ಥಾಪಕರಾರು ? ಲೇ. ಡಾ|| ಬಿ. ಸಿ. ಜವಳಿ
14. ಶತಕತ್ರಯ (ಜೇಬಿನ ಆವೃತ್ತಿ) ಸಂ. ಡಾ|| ಜ.ಚ.ನಿ (1971)
15. ಶತಕತ್ರಯ ಪ್ರವಚನ ಸಂ. ಡಾ|| ಜ.ಚ.ನಿ (1972)
16. ಸಂಪಾದನೆಯ ಸೊಂಪು ಸಂ. ಡಾ|| ಜ ಚ.ನಿ
17. ಮಾಮಿಡಿ (ತ್ರೈಮಾಸಿಕ) ಸಂ. ಪ್ರೊ|| ಸಂಗಮನಾಥ ಹಂಡಗಿ

ಹುಬ್ಬಳ್ಳಿ ನಗರದ ನೆಹರೂ ಮೈದಾನದಲ್ಲಿ

ವಿಶ್ವಧರ್ಮ ಪ್ರವಚನ



ಕರ್ನಾಟಕ ರಾಜ್ಯಾದ್ಯಂತ ಅಭೂತಪೂರ್ವ ಪ್ರವಚನಗಳನ್ನು ನೆರವೇರಿಸಿ, ಆಧ್ಯಾತ್ಮಿಕ ವಿಚಾರ ಹಾಗೂ ರಾಷ್ಟ್ರಧರ್ಮ ಪ್ರಜ್ಞೆಯನ್ನು ಜನರಲ್ಲಿ ಜಾಗೃತಗೊಳಿಸಿ, ಸಾಮಾಜಿಕ, ವೈಯಕ್ತಿಕ ಮತ್ತು ನೈತಿಕ ಮೌಲ್ಯಗಳನ್ನು ಜನಮನದಲ್ಲಿ ಬೇರೂರುವಂತೆ ಮಾಡಲು ನಿಸ್ವಾರ್ಥದಿಂದ ಧರ್ಮಪ್ರಚಾರ ಕೈಗೊಂಡು, ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಲ್ಲಿ ಸಂಚರಿಸಿ ಧರ್ಮಪ್ರಚಾರ ಮಾಡಿ ಆಗಮಿಸಿರುವ

ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳಾದ

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ, ಎಂ.ಎ.

ಅವರು ಗುರುವಾರ ದಿನಾಂಕ 5-11-1981 ರಿಂದ

ಸುಮಾರು ಆರು ವಾರಗಳವರೆಗೆ

ಅಖಂಡವಾಗಿ ಪ್ರತಿದಿನ ಸಾಯಂಕಾಲ **6-30** ರಿಂದ **8-30** ರವರೆಗೆ

ವಿಶ್ವಧರ್ಮ ಪ್ರವಚನ ಮಾಡಲಿರುವರು.

ಸರ್ವರಿಗೂ ಸುಸ್ವಾಗತ

24-10-1981
ಹುಬ್ಬಳ್ಳಿ

ಅಧ್ಯಕ್ಷರು
ವಿಶ್ವಧರ್ಮ ಪ್ರವಚನ ಸಮಿತಿ

ಸ್ಫುರಣ-ಕಿರಣ

—ಮಾತಾಜಿ

೧ ಜವಾಬ್ದಾರಿ—ಸಹನೆ

ಹಾಲು-ತರಕಾರಿ ಇತ್ಯಾದಿ ಸಾಗಿಸಲು ಒಂದು ಆಟೋರಿಕ್ಷಾವನ್ನು ಇರಿಸಿದ್ದು, ಅದು ಬಸವಗಂಗೋತ್ರಿಯ ಆವರಣದಲ್ಲಿ ಕೆಟ್ಟು ನಿಂತಿತ್ತು. ಅದನ್ನು ಬೆಂಗಳೂರಿಗೆ ತಂದು ರಿಪೇರಿ ಮಾಡಿಸಬೇಕಿತ್ತು. ನಮ್ಮ ಕಾರಿಗೇ ಅದನ್ನು ಕಟ್ಟಿಕೊಂಡು ಬೆಂಗಳೂರಿನ ತನಕ ತರುವುದೆಂದು, ತಂದು ರಿಪೇರಿಗೆ ಬಿಡುವುದೆಂದು ಆಲೋಚಿಸಿ ಆಟೋರಿಕ್ಷಾವನ್ನು ಕಾರಿಗೆ ಕಟ್ಟಿಕೊಂಡು ಬರಲಾಯಿತು. ಕಾರಿನ ಚಾಲಕರು ಯಾವಾಗಲೂ ಬಿಡುವಂತೆ ಕಾರಿನ ವೇಗಕ್ಕೆ ತಕ್ಕಂತೆ ಬಿಡತೊಡಗಿದಾಗ, ಆಟೋ ಚಾಲಕನು ನಿಲ್ಲಿಸಿ, ಇಳಿದು "ಅಷ್ಟು ವೇಗವಾಗಿ ಬಿಡಬೇಡಿರಿ, ಇದು ಮೂರು ಚಕ್ರದ ವಾಹನ. ಅಷ್ಟು ಬೇಗ ಬೇಗ ನೀವು ಹೊರಟರೆ ಇದು ದಾರಿಯಲ್ಲಿ ಉರುಳುತ್ತೆ" ಎಂದನು. ಆಗ ಕಾರನ್ನು ನಡೆಸುತ್ತಿದ್ದ ಶಿವರಾಯ ಮಾಸ್ಟರ್ ಕಾರಿನ ವೇಗವನ್ನು ತಗ್ಗಿಸಿ, ನಿಧಾನವಾಗಿ ನಡೆಸತೊಡಗಿದರು.

ಕಾರು ಒಂಟಿಯಾಗಿ ಹೋಗುತ್ತಿದ್ದರೆ ಅದು ಎಷ್ಟು ವೇಗದಲ್ಲಿ ಹೋದರೂ ಪರವಾಗಿಲ್ಲ. ಆದರೆ ಅದು ತನ್ನೊಡನೆ ಇನ್ನೊಂದು ವಾಹನವನ್ನು ಎಳೆದುಕೊಂಡು ಹೋಗುವ ಜವಾಬ್ದಾರಿ ಹೊತ್ತಿದ್ದರೆ ನಿಧಾನವಾಗಿ ಹೋಗಬೇಕಾಗುತ್ತದೆಯಷ್ಟೆ. ಇದನ್ನು ಆಲೋಚಿಸುವಾಗ ಒಂದು ವಿಚಾರ ಸ್ಫುರಿಸಿತು. ಮನುಷ್ಯ ಒಂಟಿಯಾಗಿ ತನ್ನ ಪಾಡಿಗೆ ತಾನು ಬಾಳಬೇಕಾದರೆ ತನ್ನ ಆತ್ಮೋದ್ಧಾರ ತಾನು ಮಾಡಿಕೊಳ್ಳಬೇಕಾದರೆ ಹೆಚ್ಚಿನ ಚಿಂತೆ ಮಾಡಬೇಕಿಲ್ಲ. ಸಮಾಜ, ಸಂಸ್ಥೆ ಮುಂತಾದ ಜವಾಬ್ದಾರಿ ಹೊತ್ತಾಗ ಹೆಚ್ಚಿನ ಜವಾಬ್ದಾರಿ, ಸಹನೆ ಜಾಗೃತಿಯಿಂದ ಸಾಗಬೇಕಾಗುತ್ತದೆ.

೨. ಮೂಲದಲ್ಲಿ ತಿದ್ದುಪಡಿ

ಅಕ್ಟೋಬರ್ ಎರಡರಂದು ವಿಶೇಷ ಕಾರ್ಯಕ್ರಮ ಇತ್ತಷ್ಟೇ. ಕಾರ್ಯಕ್ರಮದ

ವಿವರವನ್ನು ಪಟ್ಟಿಹಾಕಿ, ಅದನ್ನು ಪ್ರತಿಮಾಡಲು ಕೊಡಲಾಗಿತ್ತು. ನಾನು ಬರೆದ ಮೂಲ ಪ್ರತಿಯಲ್ಲಿ ಅತಿಥಿಗಳು ಎಂದಿತ್ತು. ನಂತರದಲ್ಲಿ ಪ್ರತಿ ಮಾಡಿದವರು "ಅಥಿತಿ" ಎಂದು ಮಾಡಿದ್ದರು. ನಾನು ಒಮ್ಮೆ ಸಹಜವಾಗಿ ಪರಿಶೀಲಿಸುವಾಗ "ಅಥಿತಿ" ಕಾಣಬಂದು, ಮೂಲಪ್ರತಿಯಲ್ಲಿ ನಾನು ಹೀಗೆ ಬರೆದುಕೊಟ್ಟಿರುವೆನೇನೋ ಎಂಬ ಸಂದೇಹ ಬಂದು ಮತ್ತೆ ನೋಡಿದೆ; ಅತಿಥಿ ಎಂದಿತ್ತು. ಪ್ರತಿ ಮಾಡಿದ ವ್ಯಕ್ತಿ ನಾನೇ ತಪ್ಪು ಬರೆದಿದ್ದೇನೆಂದು ಭಾವಿಸಿ, ಸರಿಯಾಗಿರುವ ಅತಿಥಿಯನ್ನು ಅಥಿತಿ ಮಾಡಿದ್ದರು.

ಇದನ್ನು ನೋಡಿ ಒಂದು ವಿಚಾರ ಸ್ಫುರಿಸಿತು. ಬಸವಣ್ಣನವರಂತಹ ವಿಚಾರವಾದಿ, ಪ್ರಗತಿಪರ ಕ್ರಾಂತಿಪುರುಷರು ಮೂಢನಂಬಿಕೆ ಇತ್ಯಾದಿ ಖಂಡಿಸಿ ಪ್ರಗತಿಪರ, ವೈಚಾರಿಕತೆಯ, ಆಚರಣೆಯ ಒಂದು ಧರ್ಮವನ್ನು ಕೊಟ್ಟರೂ, ನಂತರದ ಕೆಲವರು ಮೂಲ ಗುರುವು ಬರೆದುಕೊಟ್ಟ ಮಾದರಿ ಸಾಹಿತ್ಯವನ್ನೇ ತಿದ್ದಿ, ಲೋಕದ ನಡೆಗೆ ಲೈಸೆನ್ಸ್ ಪಡೆಯಲು ಎಳಸುತ್ತಾರೆ. ನೋಡ್ತಾ ನೋಡ್ತಾನೇ ಮೂಲಗುರುವಿನ ಮಾತಿಗೆ ತದ್ವಿರುದ್ಧವಾಗಿ ನಡೆಯಲು, ವ್ಯಾಖ್ಯಾನಿಸಲು ತೊಡಗುತ್ತಾರೆ. ಲೋಕದ ಪ್ರವಾಹಕ್ಕೆ ಹೊರಗಾದ ವೈಚಾರಿಕ ಸಿದ್ಧಾಂತ ಹೇಳಿದ ತಮ್ಮ ಗುರುವಿನ ಮಾತಿನಲ್ಲೇ ದೋಷವನ್ನು ಕಾಣುತ್ತಾರೆ. ಅದನ್ನು ತಿದ್ದಹೋಗುತ್ತಾರೆ.

೩. ಅತಿಯಾದ ಭಕ್ತಿ

ಒಂದು ದಿನ ಮಂಗಳಾರತಿ ನಡೆಯುತ್ತಿತ್ತು. ಎಲ್ಲರೂ ತನ್ಮಯರಾಗಿ ಹಾಡುತ್ತಿದ್ದೆವು. ಎದುರಿಗಿದ್ದ ಪೀಠದ ಮೇಲಿದ್ದ ಬಸವಣ್ಣನವರ ಫೋಟೋ ಅಂತಃಕರಣಪೂರ್ವಕವಾಗಿ ನೋಡುತ್ತಿತ್ತು. ಯಾರೋ ಆ ಫೋಟೋಕ್ಕೆ ವಿಭೂತಿಯನ್ನು ಹಚ್ಚಿದ್ದರು. ಹಣೆಯ ಮೇಲೆ ಅರ್ಧಚಂದ್ರಾಕೃತಿಯಲ್ಲಿ ಹಚ್ಚಿದ್ದ ಮೂರೆಳೆ ವಿಭೂತಿ ದೂರಕ್ಕೆ ತಲೆಯ ಮೇಲೆ ಎರಡು ಕೋಡುಗಳು ಮೂಡಿದಂತೆ ತೋರುತ್ತಿದ್ದವು. ಫೋಟೋದಲ್ಲಿದ್ದ, ಕಲಾವಿದನು ಚಿತ್ರಿಸಿದ್ದ ವಿಭೂತಿಯೇ ತುಂಬಾ ಚೆನ್ನಾಗಿ ಕಾಣುತ್ತಿತ್ತು. ಮತ್ತೆ ಮೇಲೆ ಹಚ್ಚಿದ್ದು ಫೋಟೋವನ್ನು ಅಂದಗೆಡಿಸಿತ್ತು. ಆಗ ನಾನು ಹೇಳಿದೆ, "ಫೋಟೋದ ಸಹಜ ಸೌಂದರ್ಯ ಕೆಡದಂತೆ ಹೂ ಮಾಲೆಯನ್ನು, ಅಥವಾ ವಿಭೂತಿಯನ್ನು ಧರಿಸಬೇಕು. ನಿಮಗೆ ಭಕ್ತಿ ಇದೆ ಎಂಬುದು ನಿಜ- ಆದರೆ ಆ ಭಕ್ತಿ ನಿಮ್ಮ ಆರಾಧ್ಯಗುರುವಿನ ರೂಪವನ್ನು ಅಂದಗೆಡಿಸಬಾರದು."

ಹೇಳುವಾಗಲೇ ಒಂದು ವಿಚಾರ ಸ್ಫುರಿಸಿತು. ಕೆಲವು ಮಹಾತ್ಮರ ವ್ಯಕ್ತಿತ್ವಗಳು ಅಗಾಧವಾಗಿ, ಅಸಾಮಾನ್ಯವಾಗಿ ಇರುತ್ತವೆ ; ತಮ್ಮ ಜೀವಿತಕಾಲದಲ್ಲೇ ಅಸಂಖ್ಯಾತ ಅನುಯಾಯಿಗಳನ್ನು ಆಕರ್ಷಿಸುತ್ತವೆ. ಉದಾಹರಣೆಗೆ ಬುದ್ಧ-ಬಸವಣ್ಣನವರನ್ನೇ

ತೆಗೆದುಕೊಳ್ಳೋಣ. ಅವರ ವ್ಯಕ್ತಿತ್ವದ ಸಹಜ ಸೌಂದರ್ಯವೇ ಅವರಿಗೆ ಸಾಕಷ್ಟಿರುತ್ತದೆ. ಹೀಗಿರುವಾಗ ಕೆಲವು ಅನುಯಾಯಿಗಳು ಭಕ್ತಿಯ ಅತಿರೇಕದಲ್ಲಿ ಅವರನ್ನು ಪುರಾಣಪುರುಷರನ್ನಾಗಿ ಅಮರ್ತ್ಯ ಮಟ್ಟಕ್ಕೇರಿಸಲು ಹೋಗಿ, ಅವರ ಮೂಲಭೂತ ವ್ಯಕ್ತಿತ್ವವನ್ನೆ ಮರೆಯಾಗುವಂತೆ ಮಾಡುತ್ತಾರೆ. ಫೋಟೋದ ಮೇಲೆ ಮಸಿಚೆಲ್ಲಿ ಅಂದಗೆಡಿಸುವವರು ಬೇರೆ. ಅವರು ದುರುದ್ದೇಶ ಹೊಂದಿದವರು. ಫೋಟೋಕ್ಕೆ ವಿಭೂತಿ ಹಚ್ಚುವವರು ಭಕ್ತರೇ ವಿನಾ ದ್ವೇಷಿಗಳಲ್ಲ. ಆ ಭಕ್ತಿಯೇ ಕೆಲವೊಮ್ಮೆ ಮಹಾತ್ಮರ ವಿಚಾರಗಳ ತೀವ್ರತೆಯನ್ನು ಸತ್ವಹೀನ ಮಾಡುವುದುಂಟು. ಕೈಲಾಸದಿಂದ ಬಸವಣ್ಣನನ್ನು ಇಳಿಸಿ ಹುಟ್ಟಿಸುವ ಪುರಾಣಕಾರರ ವಿಚಾರಧಾರೆಯಾಗಲಿ, ಬುದ್ಧನನ್ನು ದಶಾವತಾರಗಳಲ್ಲಿ ಒಬ್ಬನನ್ನಾಗಲೀ ಸೇರಿಸುವ ಯತ್ನವಾಗಲೀ ಅಷ್ಟೇ ವಿಚಾರಹೀನವಾದವು. ಉಳಿದ ಅನೇಕ ಅವತಾರಗಳು ವರ್ಣಾಶ್ರಮವನ್ನು ಎತ್ತಿ ಹಿಡಿದಿರುವಾಗ, ಬುದ್ಧನ ಅವತಾರದಲ್ಲಿ ಮಾತ್ರ ಅವನು ವರ್ಣಾಶ್ರಮವನ್ನು ವಿರೋಧಿಸಿದನೆಂಬುದು ವಿರೋಧಾಭಾಸವಾದರೆ, ಮಹಾತ್ಮರ ವಿಚಾರದ ತೀವ್ರತೆ ಕಡಿಮೆಮಾಡಲು ಇದೊಂದು ಪರೋಕ್ಷ ಪ್ರಯತ್ನವೆಂದು ಹೇಳಬಹುದು.

೪. ಮೌನ ಗಡಿಯಾರ-ಧ್ವನಿಸುವ ಗಡಿಯಾರ

ಅಮೆರಿಕಾದಲ್ಲಿ ಪ್ರವಾಸದಲ್ಲಿದ್ದಾಗ ಓರ್ವರು ನನಗೆ ಒಂದು ಗೋಡೆ ಗಡಿಯಾರವನ್ನು ಕೊಟ್ಟರು. ಅದು ತೀರಾ ಸರಳ. ಕೇವಲ ಒಂದು ಕಟ್ಟಿಗೆಯ ಹಲಗೆಯನ್ನು ನೋಡಿದಂತೆ ಕಾಣುತ್ತದೆ. ತುಂಬಾ ಕರಾರುವಾಕ್ಕಾಗಿ ಸಮಯ ತೋರುತ್ತದೆ. ಆದರದು ಶಬ್ದ ಮಾಡದು. ಮೌನವಾಗಿ ಚಲಿಸುತ್ತದೆ. ವೇಳೆ ಬೇಕಾದಾಗ ನಾವಾಗಿ ಅದರ ಮುಂದೆ ಹೋಗಿ ನಿಂತು ನೋಡಬೇಕಾಗುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದ ಕಟ್ಟಡದ ಮೇಲಿರುವ ಗೋಪುರ ಗಡಿಯಾರ ದೂರದವರೆಗೆ ಸಮಯ ತೋರಿಸುತ್ತದೆ. ರೇಡಿಯಂ ಧಾತುವಿನಿಂದ ಕೂಡಿರುವ ಕಾರಣ ರಾತ್ರಿಯ ವೇಳೆಯಲ್ಲೂ ಸಮಯವನ್ನು ತೋರುತ್ತದೆ. ರಾತ್ರಿಯ ವೇಳೆ ನೋಡಲು ಕಣ್ಣು ಮಂಜಾಗಿರುವದೆಂದು ಭಾವಿಸಿದರೂ, ಅಥವಾ ಹಗಲಿನಲ್ಲಿ ದೂರದಿಂದ ಮುಳ್ಳು ಕಾಣದೆಂದು ಭಾವಿಸಿದರೂ ಅದರ ಅಣುರಣಿಸುವ ಘಂಟಾನಾದ ಮಧುರವಾಗಿ ಕಿವಿಯ ಮೇಲೆ ಬಿದ್ದು ಸಮಯವನ್ನು ತಿಳಿಸುತ್ತದೆ.

ಅಷ್ಟು ಶಕ್ತಿಯುತ ಗಡಿಯಾರವದು. ಇದನ್ನು ಆಲೋಚಿಸುವಾಗ ಒಂದು ವಿಚಾರ ಸ್ಫುರಿಸಿತು. ಧಾರ್ಮಿಕ ರಂಗದಲ್ಲಿ ಸಾಧನೆಮಾಡಿ, ಅನೇಕ ಬಗೆಯ ಸಿದ್ಧಿ (achievements) ಗಳನ್ನು ಪಡೆದ ಮಹಾತ್ಮರು ಅನೇಕರು ಇರುತ್ತಾರೆ. ಆದರೆ ಅವರೆಲ್ಲರ ಸಾಧನೆ-ಸಿದ್ಧಿಗಳ ಮಟ್ಟವನ್ನು ಒಂದೇ ಎನ್ನಲು ಬರದು. ಕೆಲವು ಅಂಶಗಳ

ಆಧಾರದ ಮೇಲೆ ಅವರನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಮಹಾತ್ಮರು ಮತ್ತು (ಪ್ರವಾದಿಗಳು) ಕಾರಣಿಕರು ಎಂಬುದಾಗಿ. ನಮ್ಮ ದೇಶದಲ್ಲಿಯಂತೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಸಾಕಷ್ಟು ಮಹಾತ್ಮರು ಆಗಿಹೋಗಿದ್ದಾರೆ, ಇಂದೂ ಇರುತ್ತಾರೆ. ಆದರೆ ಇವರಲ್ಲಿ ಬಹುಪಾಲು ಜನ ಮೌನ ಗಡಿಯಾರಗಳಂತೆ. ಭಕ್ತರು ತಾವಾಗಿ ಅವರ ಬಳಿಗೆ ಹೋದಾಗ ಅಷ್ಟಿಷ್ಟು ಉಪದೇಶ ಮಾಡಬಲ್ಲರು; ಸಂದೇಶ ನೀಡಬಲ್ಲರು; ಅನುಗ್ರಹಿಸಬಲ್ಲರು. ಆದರೆ ಬುದ್ಧ, ಬಸವಣ್ಣ, ವಿವೇಕಾನಂದ, ಅರವಿಂದರು- ಇವರು ಕರ್ನಾಟಕ ವಿಶ್ವವಿದ್ಯಾಲಯದ ಗೋಪುರ ಗಡಿಯಾರದಂತೆ, ಮಹಾನ್ ಪ್ರವಾದಿಗಳು. ಅವರ ಮಾರ್ಗದರ್ಶನ ಅವರು ಕೊಟ್ಟ ಸಾಹಿತ್ಯದ ಮೂಲಕ ದೂರದೂರದ ನೆಲೆಗಳನ್ನೂ ತಲುಪಬಲ್ಲುದು. ಅವರ ವಾಣಿ ಪಂಡಿತರನ್ನು ಮಾತ್ರವಲ್ಲ ಪಾಮರರನ್ನೂ ಶತಶತಮಾನಗಳ ವರೆಗೆ ಎಚ್ಚರಿಸಿ, ಮುನ್ನಡೆಸಬಲ್ಲುದು.

೫. ಉತ್ಕಟವಾದ ಅನ್ವೇಷಣೆ

ವಿ.ಕ.ಮಿ. ವಿದ್ಯಾಸಂಸ್ಥೆಗೆ ಸಂಬಂಧಿಸಿದ ಒಂದು ಫೈಲನ್ನು ಸಹಿಗಾಗಿ ತಂದು ನನ್ನ ಮುಂದಿಟ್ಟದ್ದರು. ಸಂಭಾವನಾಗ್ರಂಥದ ಬಗ್ಗೆ ರೂಪುರೇಷೆ ಹಾಕುತ್ತ ಕುಳಿತು, ನಂತರ ನನ್ನ ಉಳಿದ ಕಡತಗಳ ಮಧ್ಯ ಸೇರಿಸಿಕೊಂಡು ಕೋಣೆಗೆ ಒಯ್ದಿದ್ದೆ. ತುಂಬಿ ತುಳುಕುವ ಕಾಗದ ಪತ್ರಗಳು, ಅಲ್ಲಲ್ಲೇ ಬರೆದಿಟ್ಟ ಲೇಖನಗಳು-ಈ ಎಲ್ಲ ಸಂತೆಯ ಮಧ್ಯದಲ್ಲಿ ಆ ಕಡತ ಮಾಯ. ಇರುವ ಮೈತುಂಬ ಕೆಲಸದ ಮಧ್ಯೆ, ಮತ್ತೆ ವ್ಯರ್ಥ ಹುಡುಕಾಟ ಬೇಸರ ತರಿಸುವ ಕೆಲಸ, ಸಮಯ ಹಾಳಾಗುತ್ತಿದೆ ಎಂಬ ಆಕ್ರೋಶ, ರುದ್ರಪ್ಪನವರು ಕೇಳಿದಾಗೆಲ್ಲ ಮೇಲಿನ ಮೇಲಿನ ಫೈಲು ಎತ್ತಿ ನೋಡಿ, ಇಲ್ಲವೆಂದು ಇಲ್ಲೇ ಆಫೀಸಿನಲ್ಲೇ ಇರಬಹುದೆಂದು ಹೇಳಿ, ಬೇರೆ ಇನ್ನೊಂದನ್ನು ಬರೆದುಬಿಡಿ ಎಂದು ತಿಳಿಸಿದೆ. ಪ್ರಯತ್ನಿಸಿ ಆಗದ ಅವರು ಒಂದು ದಿನ ಹೇಳಿದರು : 'ಹಿಂದಿನ ಅನೇಕ ದಾಖಲೆಗಳು ಅಲ್ಲಿದ್ದವು. ಅದಿಲ್ಲದೆ ಬರೆಯಲು ಸಾಧ್ಯವಾಗದು. ಹುಡುಕುವ ಪ್ರಯತ್ನ ಮಾಡಿರಿ'. ಉಳಿದೆಲ್ಲ ಕೆಲಸ ಕೆಟ್ಟರೂ ಚಿಂತೆಯಿಲ್ಲ, ಈಗ ಹುಡುಕಿಯೇ ತೀರಬೇಕು ಎಂದು ಎಲ್ಲ ಕೆಲಸಗಳನ್ನು ಬದಿಗೊತ್ತಿ ಹುಡುಕುವ ದೃಢ ಸಂಕಲ್ಪದೊಡನೆ ಕೋಣೆಹೊಕ್ಕು, ಒಂದು ಕಡೆಯಿಂದ ಅರಸುತ್ತ ಬಂದೆ. ಮೇಜಿನ ಮೇಲಿಂದ ಜಾರಿ ಹಿಂಬದಿ ಬುಡಕ್ಕೆ ಬಿದ್ದ ಕಡತ ಕೈಗೆ ಅಂತೂ ಸಿಕ್ಕಿತು, ಅರ್ಧಗಂಟೆಯ ಅರಸಾಟದ ನಂತರ, ಸಮಾಧಾನದ ಉಸಿರ್ಗರೆದು ತಂದುಕೊಟ್ಟೆ.

ಈ ಹಿಂದೆಯೂ ಆಗಾಗ ಪ್ರಯತ್ನ ಮಾಡಿದ್ದೆ. ಆದರೆ ಮೇಲೆ ಮೇಲೆ ಹುಡುಕಿ, ಸಿಕ್ಕದಾಗ ಕೈಬಿಟ್ಟೆ. ಏನೇ ಆದರೂ ಹುಡುಕಿಯೇ ತೀರಬೇಕು ಎಂದು ಹಟತೊಟ್ಟು

ನಿಂತಾಗ ಅದು ಸಿಕ್ಕಿಯೇ ಬಿಟ್ಟಿತು. ಆಗೊಂದು ವಿಚಾರ ಸ್ಫುರಿಸಿತು. ದಿವ್ಯಾನುಭವವನ್ನು ಹೊಂದಬೇಕೆಂಬ ಅನೇಕ ಮುಮುಕ್ಷುಗಳು ವ್ಯವಹಾರ, ಜಂಜಾಟ, ಬಾಳಿನ ಒತ್ತಡದ ಮಧ್ಯೆ ಕೊಂಚಕೊಂಚ ಹುಡುಕಲು ಯತ್ನಿಸುತ್ತಾರೆ. ಅಷ್ಟು ತೀವ್ರವಾಗಿ ಅದು ಸಿಕ್ಕದಾಗ ನಿರಾಶರಾಗಿ ಕೈಬಿಟ್ಟು ಬಿಡುತ್ತಾರೆ. ನಮ್ಮ ಅದೃಷ್ಟಕ್ಕೆ ಅದು ಸಿಕ್ಕಲು ಸಾಧ್ಯವೇ ಇಲ್ಲ ಎಂದುಕೊಳ್ಳುತ್ತಾರೆ.

ಆದರೆ ಒಂದು ದಿನ ಅಂತರಾತ್ಮನ ಉತ್ಕಟತೆ ಹೆಚ್ಚಾದಾಗ ಪಡೆದೇ ತೀರಬೇಕೆಂಬ ಹಠ ತೊಟ್ಟು ಸಾಧನಾ ಮಗ್ನರಾಗುತ್ತಾರೆ. ಆಗ ಅವರ ಗುರಿ ಲಭ್ಯವಾಗುತ್ತದೆ. ಇದನ್ನೇ ಹಂಬಲ, Aspiration for God ಎನ್ನುವುದು. ಈ ಕೆಳಕಂಡ ವಚನದಲ್ಲಿ ಅದು ಹೇಗೆ ವ್ಯಕ್ತವಾಗಿದೆ ನೋಡಿ :

ಎನ್ನ ಗಂಡ ಬರಬೇಕೆಂದು,
ಎನ್ನಂತರಂಗವೆಂಬ ಮನೆಯ ತೆರಹು ಮಾಡಿ
ಅಷ್ಟದಳವೆಂಬ ಓವರಿಯೊಳಗೆ ನಿಜನಿವಾಸವೆಂಬ ಹಾಸುಗೆಯ ಹಾಸಿ
ಧ್ಯಾನವೆಂಬ ಮೇಲುಕಟ್ಟಂ ಕಟ್ಟಿ, ಜ್ಞಾನವೆಂಬ ದೀಪವ ಬೆಳಗಿ
...........ಎನ್ನ ಬಯಕೆ ಸಯವಾಗಿತ್ತು.
ಹಿಂದೆ ಹನ್ನೆರಡು ವರ್ಷದಲ್ಲಿದ್ದ ಚಿಂತೆಯಿಂದ ನಿಶ್ಚಿಂತೆಯಾಗಿತ್ತು.
ಕೂ ಸಂ. ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು. 1350

೬. ಕೆಟ್ಟ ಟೇಪು

ಒಂದು ಹಳೆಯ ಟೇಪ್ ರೆಕಾರ್ಡರ್ ಕೆಸೆಟ್ ಸಿಕ್ಕಿತು. ಯಾವುದೋ ಮೂಲೆಯಲ್ಲಿತ್ತು. ಹಾಕಿ ನೋಡಿದರೆ "ಗೊಂಯ್ಯೋ" ಎಂದು ಅಸ್ಪಷ್ಟ ಗುಂಗಾನ ಮಾಡತೊಡಗಿತು. ಎಸೆದು ಬಿಡಬೇಕೆಂಬ ಆಸೆ ಹಲವು ಬಾರಿ ಆಗಿದ್ದರೂ, ನೋಡೋಣ ರಿಪೇರಿ ಮಾಡಿಸಿದರೆ ಆದಿತೇನೋ ಎಂದು ಎಸೆಯದೆ ಹಾಗೆ ಇಟ್ಟುಕೊಂಡೆ. 22-10-81 ರಂದು ಎಲ್ಲಾ ಟೆಸ್ಟ್ ಮಾಡುವಾಗ ಇದನ್ನೂ ರೆಕಾರ್ಡರಿಗೆ ಹಾಕಿ ಓಡಿಸತೊಡಗಿದೆ. ಕೀರಲು ಧ್ವನಿಯಿಂದ ಚೀರಿ ಕಡೆಗೆ ನಿಂತೇಬಿಟ್ಟಿತು. ಆಗ ಹೊರತೆಗೆಯಲು ಗುಂಡಿ ಒತ್ತಿದ್ದರೆ ಟೇಪಿನ ಸಮೇತ ಡೆಸ್ಕ್ ಕಚ್ಚಿಕೊಂಡಿತ್ತು. ಬಹಳ ಕಷ್ಟಪಟ್ಟು ಕತ್ತರಿಸಿ ತೆಗೆಯಬೇಕಾಯಿತು. "ತಕ್ಷಣ ಒಯ್ದು ಎಸೆದುಬಿಡು" ಎಂದು ಬೀಸಾಡಿಸಿದೆ.

ಆಗ ಸ್ಫುರಿಸಿದ ಒಂದು ವಿಚಾರವನ್ನು ಶಿಷ್ಯೆ ಮಾತೆ ಗಂಗಾದೇವಿಗೆ ಹೇಳಿದೆ.

"ಇದು ಕೆಟ್ಟ ಟೇಪು ಎಂದು ಎಂದೋ ತಿಳಿದಿತ್ತು. ಆದರೆ ರಿಪೇರಿಯಾಗಬಹುದೇನೋ ಎಂಬ ಆಸೆ ಹೊತ್ತು ಈ ವರೆಗೆ ನೋಡಿದ್ದಾಯಿತು. ಆದರೆ ಈ ಟೇಪು ತಾನೂ ಅಪಸ್ವರದಿಂದ ಹಾಡುವುದಲ್ಲದೆ ಕೆಸೆಟ್ ಡೆಸ್ಕನ್ನೂ ಕಚ್ಚಿಕೊಳ್ಳುವಂತೆ ಮಾಡಿತು ; ಸೇವಾರಂಗದಲ್ಲೂ ಇಂಥ ಸಮಸ್ಯೆ ಬರುತ್ತವೆ. ಕೆಲವರು ದುಃಖಿತರು, ನಿರಾಶ್ರಿತರೂ, ಅಬಲೆಯರು ಎಂದು ಬಂದು ಆಶ್ರಯಕೋರುತ್ತಾರೆ. ಆ ಜಗತ್ತಿನಲ್ಲಿ ಇವರು ಇಂಥ ದುರ್ದೆಸೆಗೆ ಒಳಗಾಗಿರಬಹುದು, ಇಲ್ಲಾದರೂ ಪರಿವರ್ತನೆಗೊಳ್ಳಬಹುದು ಎಂಬ ಆಸೆ ಹೊತ್ತು ಆಶ್ರಯ ನೀಡಿ, ಪರಿವರ್ತಿಸಲು ನಾವು ಎಳಸುತ್ತೇವೆ. ಆದರೆ ಕೆಲವು ಇಂಥ ಕೆಟ್ಟಜೀವಗಳು ಬಂದು ಸೇರಿದ ವಾತಾವರಣವನ್ನೂ ಮಲಿನಗೊಳಿಸುವುದಲ್ಲದೆ, ಮಾನಸಿಕ ವ್ಯಥೆಯನ್ನು ಜಾಸ್ತಿ ಮಾಡಿ, ಕೆಟ್ಟ ಟೇಪು ಡೆಸ್ಕನ್ನು ಕಚ್ಚಿಕೊಳ್ಳುವ ಹಾಗೆ ಮಾಡುವಂತೆ ಸಂಸ್ಥೆಗೂ ಕೆಟ್ಟ ಹೆಸರು ತರುತ್ತಾರೆ. ಅಪಾತ್ರ ದಾನದಂತೆ ಅಪಾತ್ರ ಕ್ಷಮೆ, ಅಪಾತ್ರ ಆಶ್ರಯದಾನವೂ ನಿರರ್ಥಕ ; ಕೆಲವೊಮ್ಮೆ ಅಪಾಯಕಾರಿ."

ದಯವಿಲ್ಲದ ಧರ್ಮವು ಅದೇವುದಯ್ಯಾ ?–ಒಂದು ಅನುಭವ

ಬದುಕಿನಲ್ಲಿ ಹಲವಾರು ಪ್ರಸಂಗಗಳು ಇದಿರಾಗುತ್ತಿರುತ್ತವೆ. ದಯವಿಲ್ಲದ ಧರ್ಮವನ್ನು ಆಚರಿಸುವ ಕೆಲವು ಜನರ ವರ್ತನೆ ಎಷ್ಟು ವಿಚಿತ್ರವಾಗಿರುತ್ತವೆ. ಗಣಪತಿ ಉತ್ಸವದ ಕಾರ್ಯಕ್ರಮ ನಡೆದಿತ್ತು. ಅದಕ್ಕೆ ಆಮಂತ್ರಿಸಿದ್ದರು. ಸುಮಾರು ನೂರು ಮೈಲಿ ಪ್ರಯಾಣ ಮಾಡಿ ಹೋಗಿದ್ದೆವು. ವಿಪರೀತ ಜನಸಂದಣಿ ; ಜನರು ಕಿಕ್ಕಿರಿದಿದ್ದರು. ಕಾರ್ಯಕ್ರಮ ಅದ್ದೂರಿಯಾಗಿ ನಡೆದಿತ್ತು. ಅಂದು ಬೆಳಗಿನಿಂದಲೂ ಗಣಪತಿ ಹೋಮಮಾಡಿ ಏನೇನು ಸುಟ್ಟಿದ್ದರೋ ಅಂತೂ ಹೊಗೆ ಏಳುತ್ತ, ಗಂಟಲನ್ನು ಉರಿಸುತ್ತಿತ್ತು. ಅಂದು ಮುಖ್ಯವಾಗಿ ನಾನು ಮಾನವೀಯತೆ ಬಗ್ಗೆ ಪ್ರವಚನ ಮಾಡಿದ್ದೆ. 'ಏನಿ ಬಂದಿರೆ ಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ? ಕುಳ್ಳಿರೆಂದರೆ ನೆಲ ಕುಳಿಬೀಳುವುದೆ ?' ಈ ವಚನದ ಬಗ್ಗೆ ಅರ್ಥ ಕೇಳಿ ಜನ ಚಪ್ಪಾಳೆ ತಟ್ಟಿದ್ದರು ; ಕಾರ್ಯಕರ್ತರು ಅಷ್ಟೊಂದು ಜನ ಸೇರಿದ್ದನ್ನು ಕಂಡು ಹರ್ಷಿಸಿದ್ದರು.

ರಾತ್ರಿ ಊಟಮಾಡಿ ಪ್ರಯಾಣಿಸುವುದು ಬೇಡವೆಂದು ಹಾಗೆಯೇ ಪ್ರಸಾದ ಸ್ವೀಕರಿಸದೆ ಕಾರ್ಯಕ್ರಮ ಮುಗಿಸಿ ಹೊರಟಿದ್ದೆವು. ಆದರೆ ನಮ್ಮಿಬ್ಬರು ಕಾರ್ಯಕರ್ತರನ್ನು ಅಲ್ಲೇ ಬಿಟ್ಟು ನಾವು ಪ್ರಯಾಣಿಸಬೇಕಾಗಿತ್ತು. ಅವರು ಬೆಳಗಿನಿಂದ ಓಡಾಡಿ ತೀರಾ ಹಸಿದಿದ್ದರು ಮತ್ತು ದಣಿದಿದ್ದರು. ನಮ್ಮನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದ ಪ್ರಮುಖರನ್ನು ಕುರಿತು "ಇವರಿಗೆ ಊಟಕ್ಕಿಡಿರಿ ತುಂಬಾ ಹಸಿದಿದ್ದಾರೆ" ಎಂದು ಸುಮಾರು ಹತ್ತು ಸಲ ಎಚ್ಚರಿಸಿ ನಾವು ಪಯಣಿಸಿದೆವು. ನಂತರ ವಿಚಾರಿ

ಸಿದರೆ ತಿಳಿಯಿತು, ನಾವು ಹೊರಟ ತಕ್ಷಣ ಹೊರಟ ಆ ಕಾರ್ಯಕರ್ತ-ಧಾರ್ಮಿಕರು 'ಊಟಕ್ಕೆ ಬನ್ನಿರಿ' ಎಂದು ಸಹ ಹಸಿದವರನ್ನು ಕರೆಯಲಿಲ್ಲವಂತೆ. ಹಸಿದಿದ್ದವರು ಉಪವಾಸ ಮಲಗಿಕೊಂಡರಂತೆ. ಬಹುಶಃ ಜಡವಾದ ಬೆಂಕಿಯ ಬಾಯಲ್ಲಿ ಕಡುಬು, ತುಪ್ಪ ಎಲ್ಲಾ ಹಾಕಿ ಗಣಪತಿಗೆ ಸಮರ್ಪಿಸಿದ ಮೇಲೆ, ಜೀವಂತ ಜಠರಾಗ್ನಿಗೆ ನೀಡುವುದೇಕೆಂದು ಭಾವಿಸಿರಬಹುದು. ಇದೇ ಹಿಂದೂ ತತ್ತ್ವವಾದರೆ ಹರಿಜನರಾಗಲೀ, ಅಥವಾ ಅಲ್ಪಸ್ವಲ್ಪ ಬುದ್ಧಿಯಿದ್ದ ವಿಚಾರವಾದಿಗಳಾಗಲೀ ಏಕೆ ಹಿಂದು ಕಕ್ಷೆಯಲ್ಲಿ ಉಳಿಯಲು ಬಯಸಿಯಾರು ? ದಯವಿಲ್ಲದ ಧರ್ಮವದೇವುದಯ್ಯಾ ಎಂದು ಅದಕ್ಕೇ ಇಂಥವರಿಗೆ ಬಸವಣ್ಣನವರು ಹಿತವಚನ ಹೇಳುತ್ತಾರೆ. ಎಷ್ಟು ಪುರಾಣ, ಸಂಕೀರ್ತನೆ, ಕಥೆ, ಪ್ರವಚನ ಕೇಳಿದರೇನು ಮಾನವೀಯತೆಯನ್ನು ಕೊಂಚವಾದರೂ ಕಲಿಯದವರು !

★

★ ಗತಿಸಿಹೋದ ಕಾಲವನ್ನು ಅನುಭವಕ್ಕಾಗಿ ನೆನೆದುಕೊ. ಭವಿಷ್ಯತ್ಕಾಲವನ್ನು ಮಾರ್ಗ ನಿರ್ಣಯಕ್ಕಾಗಿ ಚಿಂತಿಸು.

—ಕನ್‌ಫ್ಯೂಷಿಯಸ್

★ ಹಿಂದಿನ ತಪ್ಪು ಮುಂದಿನ ಯಶದ ನಾಂದಿಯಾಗಬಹುದು. ನಮ್ಮ ತಪ್ಪುಗಳಿಂದ ಹಾಗೂ ಅಪಯಶಸ್ಸಿನಿಂದ ನಾವು ಪಾಠ ಕಲಿಯಬೇಕು.

—ಟೈರನ್ ಎಡವರ್ಡ್

★ ಆಪತ್ಕಾಲವನ್ನು ತೆಗಳಬೇಡಿ, ಅದು ನಮ್ಮ ಬಾಳಿಗೆ ಮಧುರವಾದ ಉಪಯೋಗವನ್ನು ನೀಡುತ್ತದೆ.

—ಷೇಕ್ಸ್‌ಪಿಯರ್

★ ಅನುಭವವು ವೆಚ್ಚವಾಗದ ನಿಧಿಯಾಗಿರುವುದು. ಆದರೆ ಸಾಧಕನ ಸಾಧನೆ ಮಾತ್ರ ಅದಕ್ಕೆ ಅತ್ಯವಶ್ಯ.

—ಶ್ರೀ ಅರವಿಂದ

★ ನಿನ್ನದೆಂಬುದನ್ನೆಲ್ಲ ದೇವರಿಗೇ ಅರ್ಪಿಸು. ಅವೆಲ್ಲವೂ ನೂರ್ಮಡಿಯಾಗಿ ನಿನಗೇ ತಿರುಗಿ ಬರುವುವು.

—ಪರಮಹಂಸ

ಬೇವು-ಮಾನವ ದೇಹಕ್ಕೆ ಸಂಜೀವಿನಿ

— ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳು

ನಾನೇನು ವೈದ್ಯನಲ್ಲ ; ಆ ಬಗ್ಗೆ ಅಧ್ಯಯನವನ್ನೂ ಮಾಡಿಲ್ಲ. ಆದರೆ ಒಂದು ಅನುಭವ ಮಾತ್ರ ಓದುಗರ ಮುಂದಿಡುವೆ. ಸಕ್ಕರೆಯ ಕಾಯಿಲೆ, ಮಧುಮೇಹ, ಸಿಹಿಮೂತ್ರರೋಗ ಎಂಬ ಅನೇಕ ಹೆಸರು ಹೊಂದಿರುವ ಶ್ರೀಮಂತರ ಕಾಯಿಲೆ ಡಯಾಬಿಟಿಸ್. ಹೆಚ್ಚು ಚಟುವಟಿಕೆಯಿಂದಿರುವ, ಶ್ರಮದಾಯಕ ದುಡಿಮೆ, ಬೆವರು ಹರಿಯುವ ಬಗೆಯ ಕೆಲಸ ಮಾಡುವವರಿಗೆ ಈ ರೋಗ ಬಾಧಿಸದು. ನೆರಳಿನಲ್ಲಿ, ಅದೂ ಹೆಚ್ಚಾಗಿ ಕುಳಿತೇ ಕೆಲಸ ಮಾಡುವವರ ಮಹಾಮಿತ್ರ ಈ ರೋಗ. ಮೊದಲಿನಿಂದಲೂ ತುಂಬಾ ಚಟುವಟಿಕೆ, ದೇಹಪರಿಶ್ರಮ, ಈಜು, ತಪ್ಪದೆ ಯೋಗಾಸನಗಳ ಅಭ್ಯಾಸ ಇದರಲ್ಲಿಯೇ ಇದ್ದ ನನಗೆ ಸಿಹಿಮೂತ್ರರೋಗ ಬರಬಹುದೆಂಬ ಕಲ್ಪನೆಯೂ ಇರಲಿಲ್ಲ. ಅದು ಹೊಂಚು ಹಾಕುತ್ತಿತ್ತೇನೋ ಬಂದು ದೇಹವನ್ನಾಶ್ರಯಿಸಲು. 1975 ಅಕ್ಟೋಬರಿನಲ್ಲಿ ಕಾರಿನ ಅಪಘಾತವಾದಾಗ ದೀರ್ಘಾವಧಿಯವರೆಗೆ ಮುರಿದ ಕೈಗೆ ಪ್ಲಾಸ್ಟರ್ ಹಾಕಿಕೊಂಡು ಜಡವಾಗಿರಬೇಕಾಯಿತು. ಸಾಲದ್ದಕ್ಕೆ ಆಪರೇಷ ಸರಿಯಾಗಿ ವೈದ್ಯರು ಮಾಡಿರದಿದ್ದ ಕಾರಣ, ಮತ್ತೊಮ್ಮೆ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಆಗ ಮೂತ್ರ ಪರೀಕ್ಷೆ ವೈದ್ಯರು ಮಾಡಿದ್ದರು ; ಸಕ್ಕರೆಯ ಅಂಶವಿರಲಿಲ್ಲ. ಶಸ್ತ್ರಚಿಕಿತ್ಸಾನಂತರ ಪ್ಲಾಸ್ಟರ್ ಹಾಕಿದರು. ಮತ್ತೆ ಜಡವಾಗಿ ಇರಬೇಕಾಯಿತು. ಮೊದಲು ಪ್ಲಾಸ್ಟರ್ ಇದ್ದಾಗ ಕೈಯೆಷ್ಟೇ ಜಡವಾಗಿದ್ದರೂ, ಓಡಾಟ ಕಡಿಮೆ ಮಾಡಿರಲಿಲ್ಲ. ಎರಡನೆಬಾರಿ ಶಸ್ತ್ರಚಿಕಿತ್ಸೆ ಆದಾಗ ಸೊಂಟದ ಭಾಗದಿಂದ ಮೂಳೆಯನ್ನು ತೆಗೆದು ಕೈಮೂಳೆಗೆ ಬೆಸೆದುದರಿಂದ ಜಡವಾಗಿ ಮಲಗಬೇಕಾಯಿತು. ಇಂಥದೊಂದು ಅವಕಾಶವನ್ನು ನೋಡಿ ಸಿಹಿಮೂತ್ರ ಕಾಯಿಲೆ ಮೈಸೇರಿತು ಅಂತ ಕಾಣುತ್ತದೆ ಬಹಳ ದಿನ ನೋಡಿಕೊಂಡಿರದ ಕಾರಣ, ತೀರಾ ಸುಸ್ತಾದಾಗ ನೋಡಿಕೊಂಡೆ. ಅಲೋಪತಿ ವೈದ್ಯರು ಚಿಕಿತ್ಸೆಗೆ ಪ್ರಾರಂಭ ಮಾಡಿದರು. ಸಕ್ಕರೆಯನ್ನು ಹಿಡಿತಕ್ಕೆ ತರಲು ಸತತವಾಗಿ ಚುಚ್ಚುಮದ್ದು, ಗುಳಿಗೆ ಕೊಡಲಾರಂಭಿಸಿದರು. ಆದರೆ, ಅದರ ಪರಿಣಾಮ ವಿಪರೀತ ಮತ್ತು ವೈವಿಧ್ಯ ; ಯಾವಾಗಲೆಂದರೆ ಆಗ ಹಸಿವು, ನೀರಡಿಕೆ, ಸಂಕಟ. ಪ್ರವಚನ ಮಾಡುವಾಗ ನಾಲಿಗೆ ಒಣಗುವುದು.

ಮನಸ್ಸಿಗೆ ತೀರಾ ವ್ಯಥೆ. ಹೊಸ ಕಾಯಿಲೆಯ ವಿಚಿತ್ರ ಅನುಭವ ಬೇರೆ. ಮಾನಸಿಕವಾಗಿ ಏನೋ ಬೇಸರ. ಅಂತೂ ಇಂತೂ ಒದ್ದಾಡುತ್ತಲೇ ಗುಳಿಗೆಗಳನ್ನು ನುಂಗತೊಡಗಿದೆ.

"ಸ್ವಮೂತ್ರ ಚಿಕಿತ್ಸೆ" ಪರಿಣಾಮಕಾರಿ ಚಿಕಿತ್ಸೆ ಎಂದು ಓದಿದ್ದ ನಾನು ಅದನ್ನು ಪ್ರಯೋಗಿಸತೊಡಗಿದೆ. ಅದು ಉತ್ತಮ ಪರಿಣಾಮಕೊಟ್ಟಿತು. ಆದರೆ ಅದರಲ್ಲಿ ಒಂದು ದೊಡ್ಡ ತೊಂದರೆ ಏನೆಂದರೆ ಬೆಳಗಿನ ಜಾವದ ಮೂತ್ರ ಹೆಚ್ಚು ಶಕ್ತಿಶಾಲಿ, ಪರಿಣಾಮಕಾರಿ ವೈದ್ಯಕೀಯ ಗುಣ ಉಳ್ಳದು : ಆದರೆ ಸ್ನಾನ-ಪೂಜೆಯ ಕಡ್ಡಾಯ ನಿಯಮ ಉಳ್ಳವರು ಉಪಯೋಗಿಸುವುದೆಂತು ?

ಕೆಲವರು ಹಾಗಲಕಾಯಿಯ ರಸದ ಬಗ್ಗೆ ಸೂಚಿಸಿದರು. ಅದರ ರಸವನ್ನು ಕುಡಿಯತೊಡಗಿದೆ. ಸಕ್ಕರೆಯನ್ನು ಅದು ನಿಗ್ರಹಿಸಿದರೂ ಭೇದಿ ಆರಂಭವಾಗಿ ಹೊಟ್ಟೆ ಜಾಡಿಸತೊಡಗಿತು. ಅಷ್ಟರಲ್ಲೇ ಬೇವಿನ ರಸದ ಬಗ್ಗೆ ಯಾರೋ ಸೂಚಿಸಿದರು. ಅದನ್ನು ಆರಂಭಿಸಿದೆ. ಅದ್ಭುತ ಪರಿಣಾಮ ಕಾಣಿಸಿತು. ಇದರ ಪರಿಚಯ ಓದುಗರಿಗೂ ಆಗಲೆಂದು, ಅನೇಕರು ಸಿಹಿಮೂತ್ರರೋಗಿಗಳಿಗೆ ಇದರ ಉಪಯುಕ್ತತೆ ತಿಳಿಯಲೆಂದು ಈ ಲೇಖನ ಬರೆಯುತ್ತಿದ್ದೇನೆ.

ಏನು ಮಾಡಬೇಕು ?

ಸುಪ್ರಭಾತದಲ್ಲಿ ಸ್ನಾನ-ಪೂಜೆ ಮುಗಿಸಿ, ಬರಿಯ ಹೊಟ್ಟೆಗೆ ಬೇವಿನ ರಸ ಕುಡಿಯಬೇಕು. ಬೇವಿನ ಚಿಗುರು ಸೊಪ್ಪನ್ನು ಆರಿಸಿತಂದು ಸ್ವಚ್ಛವಾಗಿ ತೊಳೆದು ಅರೆದು ಅದರ ರಸ ಹಿಂಡಿ, ಸೋಸಬೇಕು. ಸೋಸಲ್ಪಟ್ಟ ರಸದಲ್ಲಿ ಎರಡು-ಮೂರು ಕಾಳು ಮೆಣಸನ್ನು ಕುಟ್ಟಿಹಾಕಬೇಕು ; ನಾಲ್ಕಾರು ಹರಳು ಉಪ್ಪನ್ನು ಮತ್ತು ನೀರನ್ನು ಹಾಕಿ ಬೆರೆಸಬೇಕು. ಟೇಬಲ್ ಸ್ಪೂನಿನಲ್ಲಿ ಸುಮಾರು ಎಂಟು ಟೇಬಲ್ ಸ್ಪೂನಿನಷ್ಟು ಅಥವಾ ಅರ್ಧ ಟೀ ಕಪ್ಪಿನಷ್ಟು ರಸವನ್ನು ಬರಿಯ ಹೊಟ್ಟೆಗೆ ಕುಡಿಯಬೇಕು ಕುಡಿದ ಸ್ವಲ್ಪ ಹೊತ್ತು ನಾಲಿಗೆ ಕಹಿ ಕಹಿಯಾಗುತ್ತದೆ. ಹಾಗೆಯೇ ಸ್ವಲ್ಪ ಹೊತ್ತು ಅಡ್ಡಾಡಬೇಕು.

ಸ್ವಲ್ಪ ಜಾಸ್ತಿ ಕುಡಿದರೂ ಅಪಾಯಕಾರಿ ಏನಲ್ಲ. ಕುಡಿಯುವಾಗ ಕಹಿ ಕಹಿ ಎನಿಸಿದರೂ ಇದು ಸಕ್ಕರೆಯ ಕಾಯಿಲೆಯನ್ನು ನಿಗ್ರಹಿಸುವುದೇ ಅಲ್ಲದೆ, ಆರೋಗ್ಯ ದೃಷ್ಟಿಯಿಂದಲೂ ಹಿತಕಾರಿ. ಇದರ ಪರಿಣಾಮದಿಂದ, ಮೂತ್ರದೊಳಗಣ, ರಕ್ತದೊಳಗಣ ಸಕ್ಕರೆಯ ಅಂಶ ಜಾಸ್ತಿಯಾಗದು. ಸುಸ್ತು, ಬಳಲಿಕೆ ಆಗದು. ತಲೆ ತಿರುಗುವಿಕೆ, ನಾಲಿಗೆ ಒಣಗುವಿಕೆ ತಪ್ಪುವುದು. ಕಣ್ಣಿನ ದೃಷ್ಟಿ (ಸಕ್ಕರೆ ಕಾಯಿಲೆ

ಯಿಂದ ಮಂಕಾದುದು) ಸುಧಾರಿಸುವುದು ತೀಕ್ಷ್ಣವಾಗುವುದು. ಚರ್ಮವು ಕಾಂತಿಯುಕ್ತವಾಗುವುದು. ಸಿಕ್ಕಾಪಟ್ಟೆ ಹಸಿವು, ಸಂಕಟ ತಪ್ಪಿ ಹೊಟ್ಟೆ ಸಮಾಧಾನವಾಗಿರುವುದು. ಬೇರಾವ ಔಷಧಿಯ ಸಹಾಯವೂ ಇಲ್ಲದೆ ಸಿಹಿಮೂತ್ರ ರೋಗವನ್ನು ಬೇವಿನ ರಸದಿಂದಲೇ ನಿಗ್ರಹಿಸಲು ಸಾಧ್ಯವಾಗಿದೆ. ವೈಟಮಿನ್ ಮಾತ್ರೆಗಳನ್ನು ಸರ್ಬೆಕ್ಸ್-ಟಿ, ಅಥವಾ ಬೇರಾವುದಾದರೂ ತೆಗೆದುಕೊಳ್ಳಬಹುದು. ಇತ್ತೀಚೆಗೆ ಪ್ರಚಾರಕ್ಕೆ ಬರುತ್ತಿರುವ ಹರ್ಬೋಫಿಟ್ ಆಯುರ್ವೇದ ಮಾತ್ರೆಯನ್ನು ತೆಗೆದುಕೊಳ್ಳಬಹುದು. ಸಿಹಿಮೂತ್ರ ಕಾಯಿಲೆಗಾಗಿ ಆ ಮಾತ್ರೆಯಲ್ಲ ; ಸಾಮಾನ್ಯ ದೃಷ್ಟಿಯಿಂದ ಉಪಯೋಗಕಾರಿ ಇದೆ.

ಬೇವು ನಾಲಿಗೆಗೆ ಕಹಿ ಇದ್ದರೂ, ದೇಹಕ್ಕೆ ಉಪಯುಕ್ತ. ಮನಸ್ಸನ್ನು ಗಟ್ಟಿ ಮಾಡಿಕೊಂಡು ಕುಡಿದರೆ ತುಂಬಾ ಪ್ರಯೋಜನಕಾರಿ, ಅಲ್ಲದೆ ಬಹಳಷ್ಟು ಖರ್ಚಿನ ಬಾಬತ್ತೂ ಇಲ್ಲ ; ಸೈಡ್ ಇಫೆಕ್ಟ್ಸ್ ಮೊದಲೇ ಇಲ್ಲ. ಕುಡಿಯಲಿಕ್ಕೆ ಸ್ವಲ್ಪ ಸಂಯಮವಿದ್ದರೆ ಸಾಕು. ★★

ಬಸವ ವಚನಾಮೃತ

ಬಸವಣ್ಣನವರ ವಚನ "ಅಧರಕ್ಕೆ ಕಹಿ, ಉದರಕ್ಕೆ ಸಿಹಿ ; ನಮ್ಮ ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ" ಎಂಬುದು ಅಷ್ಟೇ ಉಪಯುಕ್ತವಾದ ಹಿತೋಕ್ತಿ. ನಾಲಿಗೆಗೆ ಬೇವು ಕಹಿ ಎಂದು, ಕುಡಿಯಲಾರದೆ ಮನುಷ್ಯ ಬೇರೆ ಏನೇನೋ ನುಂಗುವನು. ಕಷ್ಟಪಟ್ಟು ನಾಲಿಗೆಯನ್ನು ದಾಟಿಸಿಬಿಟ್ಟರೆ, ಹೊಟ್ಟೆಗೇನೂ ರುಚಿ ಇರದು. ಅದು ಸಂತೋಷದಿಂದಲೇ ಸ್ವೀಕರಿಸಿ, ರೋಗವನ್ನು ಗುಣಮಾಡುವುದು. ಬಸವಣ್ಣನವರು ಮತ್ತಿತರ ಶರಣರ ವಚನಗಳಾದರೂ ಅಷ್ಟೇ ; ಅವು ಜಾತೀಯತೆ, ಮೂಢನಂಬಿಕೆ, ಶುಷ್ಕಾಚರಣೆ, ಯಜ್ಞ-ಯಾಗಾದಿಗಳನ್ನು ಖಂಡಿಸಿರುವುದರಿಂದ ತುಂಬಾ ತೀಕ್ಷ್ಣವೆನಿಸುತ್ತವೆ. ಸಹನೆಯಿಂದ, ಬೌದ್ಧಿಕ ಪ್ರಾಮಾಣಿಕತೆಯಿಂದ ಕಟುಸತ್ಯ ಹೇಳುವ ಈ ವಚನಗಳನ್ನು ಅರಗಿಸಿಕೊಂಡುಬಿಟ್ಟರೆ ಅವು ಸಮಾಜದ ಶುದ್ಧೀಕರಣ ಮಾಡುವವೆಂಬುದರಲ್ಲಿ ಸಂದೇಹವೇ ಇಲ್ಲ. ★★

★ ಪ್ರಪಂಚದಲ್ಲಿ ಸಂಪತ್ತಿನಿಂದ, ವಿಜ್ಞಾನದಿಂದ ಶಾಂತಿ ಇಲ್ಲ. ನಿಜವಾದ ಶಾಂತಿ, ಅನುಭವದಿಂದಲೇ ದೊರೆಯುತ್ತದೆ. ಆದ್ದರಿಂದ ಅನುಭವಕ್ಕಾಗಿ ಹೋರಾಡಿರಿ.
—ವಿನೋಬಾ

★ ಕೇವಲ ರಾಜಕೀಯ ಅಥವಾ ಸಾಮಾಜಿಕ ಜೀವನದಿಂದಲೇ ನಾವು ಪರಿಪೂರ್ಣರಾಗಲಾರೆವು. ಧಾರ್ಮಿಕ ಜೀವನದಲ್ಲಿ ನಾವು ಆಸಕ್ತರಾದರೆ ಮಾತ್ರ ಸಾರ್ಥಕವಾಗಿ ಜೀವಿಸಬಲ್ಲೆವು.
—ವಿವೇಕಾನಂದ



—ಮಾತಾಜಿ

(ಡಿಸೆಂಬರ್ ತಿಂಗಳ ಕಂತು)

ಹಿಂದೂ ಪರಂಪರೆ ಮತ್ತು ಧರ್ಮಸಂಕಟ

ಜೈನರು, ಬೌದ್ಧರು ಮತ್ತು ಸಿಖ್ಖರನ್ನು ಒಳಗೊಳ್ಳುವಂತೆ "ಹಿಂದೂ" ಪದಕ್ಕೆ ವಿಶಾಲವಾದ ವಿವರಣೆಯನ್ನು ನೀಡಬೇಕೆಂದು ತೇರಾಪಂಥಿ ಜೈನಶಾಖೆಯ ಮುಖ್ಯಸ ಆಚಾರ್ಯ ತುಲಸಿ ಅವರು ಭಾನುವಾರ ದಿ. ಅಕ್ಟೋಬರ್ 18 ರಂದು ನವದೆಹಲಿಯಲ್ಲಿ ನಡೆದ "ವಿರಾಟ್ ಹಿಂದೂ ಸಮ್ಮೇಳನ"ದಲ್ಲಿ ನುಡಿದಿದ್ದಾರೆ. ಇದು ಮನನ ಮಾಡುವಂತಹ ಮಾತು. ಜೈನರು, ಸಿಖ್ಖರು, ಬೌದ್ಧರು, ಲಿಂಗಾಯತರು ಈ ನಾಲ್ಕು ಸಮಾಜಗಳಲ್ಲಿಯೂ ಆಗಾಗ ಈ ಧರ್ಮಾನುಯಾಯಿಗಳು ಹಿಂದುಗಳೆಂದು ಹೇಳುವ ಕೆಲವರನ್ನು, ಅಲ್ಲ ಎಂದು ವಿರೋಧಿಸುವ ಇನ್ನು ಕೆಲವರನ್ನು ಕಾಣಬಹುದು. ಇದೇಕೆ ಹೀಗೆ? ಜಗತ್ತಿನ ಅನೇಕ ಧರ್ಮಗಳಲ್ಲಿ ಉಪಪಂಥಗಳಿದ್ದು ಕ್ಯಾಥೋಲಿಕ್–ಪ್ರಾಟೆಸ್ಟಂಟ್, ಶಿಯಾ–ಸುನ್ನಿ ಹೀಗೆ ಮತಭೇದಗಳಿವೆ. ಆದರೂ ಅವರಲ್ಲಿ ಕೆಲವು ಮೂಲಭೂತ ತತ್ತ್ವಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಕ್ರಿಸ್ತ ತಮ್ಮ ಗುರು, ಬೈಬಲ್ ಅವರ ಗ್ರಂಥ, ಕ್ರೈಸ್ತ ತಾನು ಎಂಬ ಬಗ್ಗೆಯಾಗಲಿ, ಮೊಹಮ್ಮದ್ ಅವರ ಧರ್ಮಗುರು, ಖುರಾನ್ ಅವರ ಧರ್ಮಗ್ರಂಥ ಮುಸಲ್ಮಾನ್ ತಾನು ಎಂಬ ಬಗ್ಗೆ ಬೇರೊಂದು ಮಾತೇ ಇಲ್ಲ. ಆದರೆ ಹಿಂದೂಗಳಲ್ಲಾದರೋ ನಾನು ಹಿಂದುವೇ, ಅಲ್ಲವೇ ಎಂಬ ಬಗ್ಗೆಯೇ ಅನೇಕರಿಗೆ ಸಂದೇಹ! ಎಷ್ಟು ವಿಚಿತ್ರವಿದಲ್ಲವೆ?

ಇದಕ್ಕೆ ಮುಖ್ಯ ಕಾರಣ ಏನು?

ಹಿಂದೂ ಕಕ್ಷೆ (Hindu orbit ಅಥವಾ zone) ವಿಲಕ್ಷಣವಾಗಿ ವಿಶಾಲವಾಗಿದೆ. ಹಿಂದೂ ಸಮಾಜದಲ್ಲಿ 3 ಬಗೆಯ ವಿಚಾರಧಾರೆಯುಳ್ಳವರನ್ನಿಂದು ಕಾಣಬಹುದಾಗಿದೆ.

1. ಹಿಂದೂ ಧರ್ಮವೆಂದರೆ ವೈದಿಕ ಧರ್ಮ. ವೇದೋಪನಿಷತ್ತು, ಶೃತಿ, ಸ್ಮೃತಿ, ಭಗವದ್ಗೀತೆ, ಪುರಾಣಗಳು, ಬ್ರಹ್ಮಸೂತ್ರಗಳೇ ಹಿಂದೂ ಧರ್ಮಗ್ರಂಥಗಳು. ವರ್ಣಾಶ್ರಮ ಸಮಾಜ ವ್ಯವಸ್ಥೆಯ ಚೌಕಟ್ಟೇ ಇದರ ಸಮಾಜಶಾಸ್ತ್ರ; ಗುಡಿಗುಂಡಾರಾರ್ಚನೆ, ತೀರ್ಥಕ್ಷೇತ್ರ ಪಯಣ, ಮೂರ್ತಿಪೂಜೆ, ಯಜ್ಞ-ಯಾಗಾದಿಗಳೇ ಅರ್ಚನೆಯ ವಿಧಿವಿಧಾನ; ಬಹುದೇವತೆಗಳಲ್ಲಿ ಇರುವ ನಂಬಿಕೆಯೇ ಹಿಂದೂ ದೃಷ್ಟಿಕೋನ ಎಂಬುದನ್ನು ದೃಢವಾಗಿ ನಂಬಿರುವ ಜನ ಒಂದು ಬಗೆ. ಇವರಿಗೆ ಸನಾತನಿಗಳೆಂದು ಹೆಸರಿಡೋಣ ಅಥವಾ ಸಾಂಪ್ರದಾಯಿಕ ನಂಬಿಕೆಯವರೆನ್ನೋಣ (ಸನಾತನ ಎಂಬ ಪದ Eternal values ಎಂಬ ಅರ್ಥದಲ್ಲಿ ಇಲ್ಲಿ ತೆಗೆದುಕೊಂಡಿಲ್ಲ).

2. ಮೇಲೆ ಹೇಳಿದ ಎಲ್ಲ ಲಕ್ಷಣಗಳನ್ನು ಏತಿ ಎಂದರೆ ಪ್ರೇತಿ ಎಂಬಂತೆ ಸಂಪೂರ್ಣವಾಗಿ ವಿರೋಧಿಸಿ, "ನಿಮ್ಮ ಹಿಂದೂ ಧರ್ಮದ ಲಕ್ಷಣಗಳು ಇವೇ ಆದರೆ, ನಿಮಗಿದೋ ಶರಣು ಶರಣಾರ್ಥಿ. ನಮಗೂ ನಿಮಗೂ ಪೂರ್ವ-ಪಶ್ಚಿಮ. ಬುದ್ಧ, ಮಹಾವೀರ, ಬಸವ, ನಾನಕರು ವೇದೋಪನಿಷತ್ತುಗಳನ್ನು ನಂಬಲಿಲ್ಲ; ಅಥವಾ ಆಧಾರಗ್ರಂಥಗಳನ್ನಾಗಿ ಮನ್ನಿಸಲಿಲ್ಲ. ವರ್ಣಾಶ್ರಮ ಜಾತಿ ವ್ಯವಸ್ಥೆಯನ್ನು ನಂಬದ ಅತಿವರ್ಣಾಶ್ರಮಿಗಳು ನಾವು; ಗುಡಿ-ಗುಂಡಾರ ನಿರ್ಮಾಣ, ಮೂರ್ತಿಪೂಜೆ, ಯಜ್ಞ - ಯಾಗಾದಿಗಳನ್ನು ನಂಬದವರು, ಬಹುದೇವೋಪಾಸನೆ ನಂಬದವರು" ಎಂದು ಮಾತ್ರವೇಕೆ ವಿರೋಧಿಸುವವರು, ಅವಸರ ಅವಸರವಾಗಿ ನುಡಿದು, ತ್ವರಿತ ನಿರ್ಧಾರ ತೆಗೆದುಕೊಂಡು ಹಿಂದೂ ಸಮಾಜಕ್ಕೆ ವಿಚ್ಛೇದನ (Divorce) ಕೊಡಬೇಕೆನ್ನುವವರು. ಇವರನ್ನು ಏನೆನ್ನೋಣ. ಉಗ್ರಗಾಮಿಗಳು ಎನ್ನೋಣವೇ? ಇಲ್ಲ, ಸಾಧ್ಯವಿಲ್ಲ. ಬೌದ್ಧ, ಜೈನ, ಮತ್ತು ಲಿಂಗಾಯತ–ಈ ಮೂರು ಅತ್ಯಂತ ಅಹಿಂಸಾ ಪ್ರಧಾನ, ಶಾಂತ ಪ್ರವೃತ್ತಿಯ ಧರ್ಮಗಳು. ಸಿಖ್ ಧರ್ಮ ಸಹ ಗುರು ನಾನಕನ ಕಾಲಕ್ಕೆ ತುಂಬಾ ಮೃದುವಾದ, ಶಾಂತ ಪ್ರವೃತ್ತಿಯ ಅನುಭವ ಪ್ರಧಾನ ಧರ್ಮ. ಗುರುಗೋವಿಂದ ಸಿಂಗ್ ಸಿಖ್ಖರ ಈ ಶಾಂತಿ, ಹೇಡಿತನವಾಗಿ ರೂಪಾಂತರಗೊಳ್ಳುತ್ತಿದ್ದುದನ್ನು ಕಂಡು ಆತಂಕಪಟ್ಟು ಇಸ್ಲಾಂಧರ್ಮದ ವಿರುದ್ಧ ಆತ್ಮರಕ್ಷಣೆ ಮಾಡಿಕೊಳ್ಳಲೋಸುಗ ತುಸು ಶೌರ್ಯವನ್ನು ಅನುಯಾಯಿಗಳಲ್ಲಿ ತುಂಬಿದ.

ಆದರೆ ಅದು ಸ್ವಲ್ಪ Over dose ಆಗಿ ಇತ್ತೀಚೆಗೆ ಬೇರೊಂದು ಉಗ್ರರೂಪವನ್ನೇ ತಳೆಯುತ್ತಿದೆ. ಆದ್ದರಿಂದ ಈ ಧರ್ಮಗಳನ್ನು (ಆ ವಿಚಾರಧಾರೆಯುವರು ಅಹಿಂದು ಧರ್ಮಗಳೆಂದು ತಮ್ಮನ್ನು ತಾವು ಕರೆದುಕೊಂಡರೂ, ಸನಾತನಿಗಳು ಸಹ ಹಾಗೇ ಕರೆದರೂ ನಾವು ಕರೆಯುವುದು ಬೇಡ) ಅಹಿಂದು ಧರ್ಮವೆಂದು ಕರೆಯದೆ ಅವೈದಿಕ ಧರ್ಮಗಳೆಂದು, ಅನುಯಾಯಿಗಳನ್ನು ಅವೈದಿಕರೆಂದು ಕರೆಯೋಣ.

3. ಇಂಥ ತಿಕ್ಕಾಟದ ಮಧ್ಯೆ ರಾಜಿ ಮಾಡಿಸಲು ಯತ್ನಿಸುವ ಗುಂಪು ಇನ್ನೊಂದು. ಈ ಗುಂಪಿನಲ್ಲಿ ಬರುವವರು ಆಚಾರ್ಯ ತುಳಸಿಯುವರು, ನಾವುಗಳು ಮತ್ತು ಇಂಥ ವಿಚಾರಧಾರೆಯ ಅನೇಕರು. ಸ್ವಲ್ಪ ರಾಷ್ಟ್ರೀಯ ಪ್ರಜ್ಞೆ ಇರುವ ಎಲ್ಲರೂ ಈ ವಾದಕ್ಕೆ ಕೈಜೋಡಿಸುತ್ತಾರೆ. ಆರ್. ಎಸ್. ಎಸ್. ಸಹ ಇದೇ ನಂಬಿಗೆ ಹೊಂದಿದೆ ಎಂದು ನಾವು ನಂಬಿದ್ದೇವೆ. (ವೈದಿಕಧರ್ಮ ಮಾತ್ರ ಹಿಂದೂ ಧರ್ಮ ಎಂಬ ದುಡುಕು ನಿರ್ಧಾರಕ್ಕೆ ಅವರು ಬಂದಂತೆ ಕಾಣುವುದಿಲ್ಲ) ಶ್ರೀ ಸಾವರ್ಕರರ ಹಿಂದೂ ಮಹಾಸಭಾದ ವಿಚಾರಧಾರೆಯೂ ಹೀಗೇ ಇದೆ.

ಈ ನೆಲದ ಇತಿಹಾಸ ಒಂದು ಸಾಂಸ್ಕೃತಿಕ ಪರಂಪರೆ (Cultural heritage) ಯೊಡನೆ ಬೆಸೆದುಕೊಂಡು ಬಂದಿದೆ ಮಾತ್ರವಲ್ಲ, ಇದರ ಉಳಿವು-ಅಳಿವು, ಪ್ರಗತಿ, ವಿಗತಿ ಒಂದು ಧಾರ್ಮಿಕ ಪರಂಪರೆಗೆ ಬೆಸುಗೆಯಾಗಿದೆ. ಈ ದೃಷ್ಟಿಯಿಂದ ಆಲೋಚಿಸಿದಾಗ ರಾಷ್ಟ್ರದ ಸಮಗ್ರತೆಯ ದೃಷ್ಟಿಯಿಂದ ಕೊಂಚಕೊಂಚ ಬದಲಾವಣೆ ಸನಾತನಿಗಳು ಮತ್ತು ಅವೈದಿಕರು-ಉಭಯತರಲ್ಲೂ ಆಗತೊಡಗಿದೆ. 'ವೈದಿಕ ಧರ್ಮವನ್ನಷ್ಟೇ ಹಿಂದೂ ಧರ್ಮವೆಂದು ಸಮಾನಗೈದು ಭಾರತಜನ್ಯ ಉಳಿದ ಧರ್ಮಗಳನ್ನು ಹಿಂದೂ ಕಕ್ಷೆಯ ಹೊರಗೆ ಕಳಿಸುವುದು ಮೂರ್ಖತನವಾದೀತು' ಎಂಬ ಅರಿವು ಸನಾತನಿಗಳಲ್ಲಿ ಮೂಡತೊಡಗಿದೆ. ಇಲಿಗೆ ಹೊಡೆಯಹೋಗಿ ಗಣಪತಿಗೆ ಏಟುಹಾಕಿ ಪರಿತಾಪ ಪಡುವಂತೆ, ವೈದಿಕಧರ್ಮದ ಕೆಲವೇ ಕೆಲವು ಲೋಪದೋಷಗಳಿಗಾಗಿ ಹಿಂದೂ ಮತವನ್ನು ತ್ಯಜಿಸುತ್ತೇನೆಂದು ಹೊರಟರೆ ಅದು ರಾಷ್ಟ್ರಕ್ಕೆ ಧಕ್ಕೆ ತರುತ್ತದೆಂಬ ಅರಿವು ಅವೈದಿಕರಲ್ಲಿ ಮೂಡತೊಡಗಿದೆ. ಕ್ರೈಸ್ತರನ್ನೋ ಮುಸ್ಲಿಮರನ್ನೋ ಬೆಸೆಯುವುದು ಅವರ ಕೆಲವು ನಂಬಿಕೆಗಳಾದರೆ ಹಿಂದೂಗಳನ್ನು ಬೆಸೆಯುತ್ತಿರುವದು ರಾಷ್ಟ್ರೀಯ ಭಾವೈಕ್ಯತೆ ಮತ್ತು ಉದಾತ್ತವಾದ ಒಂದು ಸಂಸ್ಕೃತಿ.

ಹಿಂದೂ ಎಂದರೇನು ?

1. **ಇದು ಒಂದು ಮತವಲ್ಲ :**–ಮತ ಎಂದರೆ Opinion ಅಥವಾ ಅಭಿಪ್ರಾಯ,

ಅಥವಾ ದೃಷ್ಟಿಕೋನ. "ಇದು ನನ್ನ ಮತ" ಅಂದರೆ 'ಇದು ನನ್ನ ವಿಚಾರಧಾರೆ' ಎಂಬರ್ಥದಲ್ಲಿ ಜೈನಮತ, ಬೌದ್ಧಮತ ಎಂದು ಬಳಸಬಹುದು. ಆದರೆ ಬೌದ್ಧ, ಜೈನ, ಲಿಂಗಾಯತ ಧರ್ಮಗಳು ಒಂದು ಬೌದ್ಧಿಕ ಅಭಿಪ್ರಾಯ, ದೃಷ್ಟಿಕೋನ ಮಾತ್ರವಲ್ಲ ಜೀವನದ ವಿಧಾನ. ಜೀವ, ದೇವ, ಜಗತ್ತುಗಳನ್ನು ವಿಶ್ಲೇಷಿಸುವ ಸಿದ್ಧಾಂತಗಳೊಡನೆ ಸಮಾಜವನ್ನು ಕಟ್ಟುವ ಇನ್ನಿತರ ಸೂತ್ರಗಳನ್ನು ಇವು ಹೊಂದಿವೆ. ಆದ್ದರಿಂದ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ಚಾರ್ವಾಕ ಶಾದ್ವಾದ ಮುಂತಾದುವನ್ನು ಮತಗಳು, ಸೈದ್ಧಾಂತಿಕ ವಿಚಾರಧಾರೆಗಳು ಎಂದು ನುಡಿಯಬಹುದು ; ಇಂಥ ಹಲವಾರು ಮತಗಳನ್ನು ಹೊಂದಿರುವ ಹಿಂದೂ ತತ್ತ್ವವನ್ನು ಒಂದು ಮತವೆನ್ನಲಾಗದು.

2. **ಇದು ಒಂದು ಪಂಥವಲ್ಲ :**–ಸೈದ್ಧಾಂತಿಕ ಸ್ವತಂತ್ರ ಅಭಿಪ್ರಾಯಗಳೇನೂ ಇಲ್ಲದೆ ಯಾವುದಾದರೊಂದು ವ್ಯಕ್ತಿಯ ಸುತ್ತ ಬೆಳೆದ ಗುಂಪಿಗೆ ಪಂಥ (cult) ಎನ್ನಬಹುದು.ರಜನೀಶರನ್ನೋ ಸಾಯಿಬಾಬಾರನ್ನೋ ಹಿಂಬಾಲಿಸುವ, ಸಿದ್ಧಾರೂಢರನ್ನೋ-ಶರೀಫ ಸಾಹೇಬರನ್ನೋ ಆರಾಧಿಸುವ ಗುಂಪಿಗೆ ಪಂಥ ಎನ್ನಬಹುದು. ಅನುಯಾಯಿಗಳಲ್ಲಿ ಸೈದ್ಧಾಂತಿಕ ತಿಳುವಳಿಕೆಯಾಗಲೀ ಅಥವಾ ವಿಚಾರ ಘರ್ಷಣೆಯಾಗಲೀ ಇರುವುದಿಲ್ಲ. ಓರ್ವ ವ್ಯಕ್ತಿಯ ಶ್ರದ್ಧಾ ಕೇಂದ್ರದ ಸುತ್ತಲೂ ಈ ಗುಂಪು ಬೆಳೆಯುತ್ತಾ ಹೋಗುತ್ತದೆ. 'ಹಿಂದೂ' ಶಬ್ದ ಪಂಥವಾಚಕವೂ ಅಲ್ಲ. ಇದು ಹಲವಾರು ಪಂಥಗಳನ್ನು ಒಳಗೊಂಡಿದೆ. ಪಂಥಗಳ ಗುಂಪುಗಳೂ ಅತಿಯಾಗಿ ಹಿಂದೂ ಸಮಾಜದ ಅನೈಕ್ಯತೆಗೆ ಪ್ರಮುಖ ಕಾರಣವಾಗಿದೆ, ಎಂದೂ ಒಮ್ಮೊಮ್ಮೆ ಅನ್ನಿಸದಿರದು. ಏಕೆಂದರೆ ಈ ಪಂಥಗಳ ಶ್ರದ್ಧಾ ಕೇಂದ್ರಗಳಾದ ವ್ಯಕ್ತಿಗಳು ಕೆಲವೊಮ್ಮೆ ದೇವರ (God) ನ್ನು ಮರೆಸಿ ತಾನೇ ದೇವರು ಎಂಬ ಮಟ್ಟಕ್ಕೂ ಹೋಗಿಬಿಡುತ್ತಾರೆ. ಗುರು-ಸಂತನ ಕೆಲಸ ಕೈಮರದ ಕೆಲಸ. ಮೈಸೂರು 80 ಮೈಲಿ ಎಂದು ಹೇಳುವುದಷ್ಟೇ ಕೈಮರದ ಕರ್ತವ್ಯ. 'ನಾನೇ ಮೈಸೂರು' ಎಂದು ಮೈಸೂರು ಇನ್ನು 80 ಮೈಲಿ ಇದ್ದಾಗಲೇ ಕೈಮರ ಹೇಳುವುದು ಎಷ್ಟು ಹಾಸ್ಯಾಸ್ಪದವೋ ಅಷ್ಟೇ ಹಾಸ್ಯಾಸ್ಪದ 'ನಾನೇ ದೇವರು' ಎನ್ನುವುದು. ಜಗತ್ತನ್ನಾಳುವ ನಿರಾಕಾರ ನಿರ್ಗುಣ ಆತ್ಯಂತಿಕ ಶಕ್ತಿ ಪರಮಾತ್ಮ. ದೇಹಧಾರಿಗಳಾಗಿ ಹುಟ್ಟಿ ಸತ್ತವರೆಲ್ಲ ಎಷ್ಟೇ ದೊಡ್ಡವರಾದರೂ ಮಹಾತ್ಮರು, ದಿವ್ಯಾತ್ಮರೂ ಆಗಬಲ್ಲರು ಮಾತ್ರ.

ಪಂಥಗಳು ಸಾಮಾಜಿಕ ಮತಾಂತರವನ್ನೇನೂ ಮಾಡವು. ಸ್ವಯಂ ಇಚ್ಛೆಯಿಂದ ಬೇಕಾದರೆ ಮುಮುಕ್ಷು ಅನುಯಾಯಿತ್ವ ಸ್ವೀಕರಿಸಬಹುದು.



ಬಸವಣ್ಣ

2. ಹಿಂದುತ್ವವು ಒಂದು ಜಾತಿಯಲ್ಲ.

ಜನನದಿಂದ ಒಂದು ಗುಂಪಿಗೆ ಬಂಧಿತವಾಗುವುದು ಜಾತಿ ಪದ್ಧತಿ. ಹಿಂದೆ ಜಾತಿಗೂ ಕಸುಬಿಗೂ ಗಂಟಿತ್ತು. ಈಗ ಅದು ಅಷ್ಟಾಗಿ ಇಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಇಂದು ಹಿಂದೂ ಸಮಾಜದಲ್ಲಿರುವ ಉಪಪಂಗಡಗಳೆಲ್ಲ ಜಾತಿಗಳಾಗಿಯೇ ಇವೆ. ಏಕೆಂದರೆ ಇಲ್ಲಿ ಓರ್ವನು ಒಂದು ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಆ ಜಾತಿಯವನು ಎಂದು ಹೇಳಿಕೊಳ್ಳುವನು. ಸಂಸ್ಕಾರವನ್ನು ಪಡೆದು ಯಾವನಾದರೊಬ್ಬ ಕ್ರೈಸ್ತನಾಗುವಂತೆ, ಮುಸಲ್ಮಾನನಾಗುವಂತೆ, ಲಿಂಗಾಯತನಾಗುವಂತೆ, ದ್ವಿಜನಾಗುವಂತೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಈ ಅವಕಾಶವಿದೆ) ಇನ್ನೂ ಅನೇಕ ಗುಂಪುಗಳಿಗೆ ಹಿಂದೂ ಚೌಕಟ್ಟಿಗೆ ಅವರನ್ನು ಬಂಧಿಸುವ-ಸೌಲಭ್ಯ ಇಲ್ಲ. "ನೀನೇಕೆ ಹಿಂದು?" ಎಂದರೆ, "ನಾನೀ ಜಾತಿಯಲ್ಲಿ ಹುಟ್ಟಿದ್ದೇನೆ; ಅದಕ್ಕೆ ನಾನು ಹಿಂದು" ಎಂಬುದೊಂದೇ ಸದ್ಯಕ್ಕೆ ಅವನು ಕೊಡಬಲ್ಲ ಉತ್ತರ. ಹೀಗಾಗಿ ಹಿಂದುತ್ವವು ಜಾತಿವಾಚಕವಾಗಿದೆ ಎಂದು ಹೇಳಬಹುದಾದರೂ ಇದು ವಿಕೃತ ರೂಪವಾದ ಕಾರಣ, ಅಧಿಕೃತವಾಗಿ ಹೇಳುವುದು ಸಲ್ಲ.

4. ಹಿಂದು ತತ್ತ್ವವು ಒಂದು ವಿಶಿಷ್ಟ ಧರ್ಮ (Religion) ವಲ್ಲ

ಧರ್ಮವೊಂದು ವಿಶಾಲಪದ. ಅದನ್ನು ಮತದ ದೃಷ್ಟಿಯಲ್ಲಿ ಬಳಸಬಾರದು ಎಂದು ಕೆಲವರು ವಾದಿಸುವುದುಂಟು. ಆದ್ದರಿಂದ ಧರ್ಮಶಬ್ದವನ್ನು Religion ಎಂದು ಭಾಷಾಂತರ ಮಾಡುತ್ತಿದ್ದಂತೆಯೇ ಇಲ್ಲದ ಹುಯಿಲೆಬ್ಬಿಸುವರು ಧರ್ಮ ಪದಕ್ಕೆ ಅನೇಕ ಅರ್ಥಗಳಿವೆ. ಅನೇಕ ರೀತಿಯಲ್ಲಿ ಈ ಶಬ್ದ ಬಳಕೆಯಾಗುತ್ತಿರುವುದು ನಿಜವಾದರೂ, ಯಾವ ಯಾವ ತತ್ತ್ವಗಳ ಸೂತ್ರಗಳಿಂದ ವ್ಯಕ್ತಿ-ಸಮಾಜಗಳನ್ನು, ವ್ಯಷ್ಟಿ-ಸಮಷ್ಟಿಗಳನ್ನು ಸುವ್ಯವಸ್ಥಿತವಾಗಿ, ಸುಂದರವಾಗಿ ಎತ್ತಿಹಿಡಿಯಬಲ್ಲವೋ ಆ ತತ್ತ್ವಗಳ ಸಮುಚ್ಚಯವೇ ಧರ್ಮ (Religion). ಯಾವುದಾದರೊಂದು ತತ್ತ್ವಸಮುಚ್ಚಯವು ಧರ್ಮವೆನ್ನಿಸಿಕೊಳ್ಳಬೇಕಾಗಿದ್ದರೆ ಅದು ವಿಶಿಷ್ಟ ಸಿದ್ಧಾಂತ, ಸಾಧನೆ, ದರ್ಶನ, ಸಂಸ್ಕಾರ, ನೀತಿಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಸಂಸ್ಕೃತಿ, ಪರಂಪರೆ ಸಾಹಿತ್ಯ ಮುಂತಾದವನ್ನು ಹೊಂದಿರಬೇಕು. ಹಿಂದೂ ಸಮಾಜದಲ್ಲಿ ಅನೇಕ ಸಿದ್ಧಾಂತಗಳು, ಸಾಧನೆಗಳು, ದರ್ಶನಗಳೂ ಇವೆ. ಇದು ಹಲವಾರು ಧರ್ಮಗಳ ಒಕ್ಕೂಟದಂತೆ (Federation) ತೋರಿಬರುತ್ತದೆ. ವಿಭಿನ್ನ ಬಗೆಯ ಪುಷ್ಪಗಳು ದಾರವೊಂದರ ಬಲದಿಂದ ಒಂದುಗೂಡಿ ಪೂಮಾಲೆಯಾಗುವಂತೆ, ವಿವಿಧ ಧರ್ಮ, ಮತ, ಪಂಥಗಳು ಹಿಂದೂ ಸಂಸ್ಕೃತಿಯ ಸೂತ್ರದಿಂದ ಬಂಧಿತವಾಗಿವೆ. ತಮ್ಮ

ವೈಯಕ್ತಿಕತೆ ಕಳೆದುಕೊಳ್ಳದೆಯೇ ಹಿಂದೂತ್ವದ ಹೂಮಾಲೆಯಲ್ಲಿ ಶೋಭಿಸುತ್ತಿವೆ. ಹೀಗೆ 'ಹಿಂದೂ'ವು ಜನಾಂಗವಾಚಕವಾದ, ಸಂಸ್ಕೃತಿ ಸೂಚಕವಾದ ಪದ.

ಹಿಂದೂ ಜನಾಂಗದ ತೋಟದಲ್ಲಿ ವೈದಿಕ ಧರ್ಮದ ಕದಳಿ ಫಲವಿದೆ; ಬೌದ್ಧ ಧರ್ಮದ ಮೋಸುಂಬಿ ಇದೆ. ಜೈನಧರ್ಮದ ಹಲಸಿದೆ, ಲಿಂಗಾಯತ ಧರ್ಮದ ಮಾವು ಇದೆ, ಸಿಖ್ ಧರ್ಮದ ಪೇರಲ ಇದೆ. ಈ ತೋಟದಲ್ಲಿ ವಿಹರಿಸುವ ಹಿಂದುವು ತನಗೆ ಬೇಕೆನಿಸಿದ ಬಗೆಯ ಹಣ್ಣು ತಿನ್ನಬಹುದು. ಇದನ್ನೇ ಅದನ್ನೇ ತಿನ್ನಬೇಕೆಂಬ ಹಟವಿಲ್ಲ. ಆದ್ದರಿಂದ ಇಂದು ಹಿಂದು ಜನಾಂಗದ ವಿಶಾಲ ಕಕ್ಷೆಯ ಪರಿಚಯವನ್ನು ವೈದಿಕ, ಅವೈದಿಕ ಧರ್ಮಗಳಿಗೆ ಮಾಡಿಕೊಟ್ಟು ಹಿಂದೂ ಸಮಾಜದೊಡನೆ ವಿಚ್ಛೇದನ ಪಡೆಯಲೆಳಸುವ ಅವೈದಿಕ ಉಗ್ರಗಾಮಿಗಳ ಹೃದಯ ಪರಿವರ್ತನೆ ಮಾಡಿ, ಮನವೊಲಿಸಿ ಇಲ್ಲೇ ಇರಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಒಂದು ದಿನ ಓರ್ವ ಹಿಂದೂ ಹರಿಜನ ಮುಖಂಡರು ಬಂದಿದ್ದರು. ಇನ್ನೊಂದು ದಿನ ಶ್ರೀ ಚಂದ್ರಶೇಖರ ಇಟಗಿ ಎನ್ನುವವರು ಬಂದಿದ್ದರು. ಅವರು ಕೇಳಿದ ಪ್ರಶ್ನೆ ಹೀಗೆ, 'ಹಿಂದೂ ಧರ್ಮವೆಂದರೆ ವೈದಿಕಧರ್ಮ, ಬ್ರಾಹ್ಮಣಧರ್ಮ ಎಂದೇ ಏಕೀಕರಿಸಿ ಮಾತನಾಡುತ್ತಾರೆ. ಆದ್ದರಿಂದ ನಾವೇಕೆ ಹಿಂದೂಗಳೆಂದು ಕರೆದುಕೊಳ್ಳಬೇಕು. ಹಿಂದೂ ಧರ್ಮ ಪರಿಚಯ ಎಂಬ ಪುಸ್ತಕದ ಕರ್ತೃಗಳು ಸಹ ಹಾಗೆ ಬರೆದಿದ್ದಾರೆ.' ನಾನು ಹೇಳಿದೆ, 'ನೋಡಿ ರಾಷ್ಟ್ರದ ಸಮಗ್ರತೆಯ ಪ್ರಜ್ಞೆ, ಹಿಂದೂ ಪರಂಪರೆಯ ವೈವಿಧ್ಯಮಯ ವಿಚಾರದ ಅರಿವು ಇಲ್ಲದವರು ಹಾಗೆ ಹೇಳುತ್ತಾರೆ. ಯಾರೋ ಒಬ್ಬ ನಿಮ್ಮ ಮನೆಯೊಳಕ್ಕೆ ಬಂದು, "ಇದು ನಿನ್ನ ಮನೆಯಲ್ಲ, ನನ್ನ ಮನೆ" ಎಂದು ದಬಾಯಿಸುತ್ತಾನೆ. ನಿಜವಾದ ಮಾಲಿಕರು ನೀವಿದ್ದಾಗ ಬಿಟ್ಟುಹೋಗುವಿರಾ? ಬಿಟ್ಟು ಹೋಗಬೇಕೇಕೆ? ಈಕೆ ನಿಮ್ಮ ತಾಯಿಯಲ್ಲ, ನನ್ನ ತಾಯಿ ಎನ್ನುತ್ತಾನೆ. ಒಪ್ಪಿಕೊಳ್ಳುವಿರಾ? ಈಕೆ ನಿನ್ನ ಹೆಂಡತಿಯಲ್ಲ, ನನ್ನವಳು ಎನ್ನುತ್ತಾನೆ. ಹಾಗೆಂದ ಮಾತ್ರಕ್ಕೆ 'ನಿನ್ನ ಬಳಿಯೇ ಆಕೆ ಇರಲಿ' ಎಂದು ತೊರೆದು ಹೋಗುವಿರಾ? ನಿಮ್ಮ ಹಕ್ಕುಗಳನ್ನು ಸ್ಥಾಪಿಸಲೆತ್ನಿಸುವಿರಿ. ಅದೇ ರೀತಿ ಸಿಂಧೂ ಸಂಸ್ಕೃತಿಯ ಪರಂಪರೆಯವರಾದ, ಹಿಂದೂಗಳಾದ ನೀವು, ಯಾರಾದರೂ ನಿಂತು 'ಇದು ನಿನ್ನ ಮನೆಯಲ್ಲ ನನ್ನದು' ಎಂದ ಮಾತ್ರಕ್ಕೆ ಹಿಂದೂ ಸಮಾಜವನ್ನೇಕೆ ತೊರೆಯಬೇಕು?

"ಇತ್ತೀಚೆಗೆ ಜಾಗೃತಿ, ಅದೂ ಪಶ್ಚಾತ್ತಾಪದ ಜಾಗೃತಿ ಸವರ್ಣೀಯ ಹಿಂದೂಗಳಲ್ಲಾಗುತ್ತಿದೆ. ಅದರ ಸದುಪಯೋಗ ತೆಗೆದುಕೊಳ್ಳಿರಿ. ದುಡುಕಿ ಹೊರಹೋಗದಿರಿ."

ಹಿಂದು ವಿಚಾರಧಾರೆ ಮತ್ತು ಅನ್ಯೆಚಾರಿಕತೆ

ಕೆಲವರಲ್ಲಿ ಆಗುವ ತೊಳಲಾಟ, ಮಾನಸಿಕ ದ್ವಂದ್ವ ಹೋರಾಟ ಅಗಾಧ. ಹಿಂದೂ ಪರಂಪರೆಯನ್ನು ಬಿಟ್ಟು ಹೋಗಲಾರರು ; ಅಪ್ಪಿಕೊಳ್ಳಲೂ ಆರರು. ಓರ್ವ ಅಜ್ಜಿ ಇರುತ್ತಾಳೆ. ನಮ್ಮೆಲ್ಲರನ್ನು ತುಂಬಾ ಮಮತೆಯಿಂದ ಸಾಕಿ ಬೆಳೆಸಿರುತ್ತಾಳೆಂದು ಇಟ್ಟುಕೊಳ್ಳೋಣ. ಅದರಲ್ಲಿಯೂ ತಾಯಿತಂದೆಗಳನ್ನು ಕಳೆದುಕೊಂಡ, ಅನಾಥ ಮೊಮ್ಮಕ್ಕಳನ್ನು ಸಾಕಿ ಬೆಳೆಸಿರುತ್ತಾಳೆ. ಬಡತನದ ಕಷ್ಟಕಾರ್ಪಣ್ಯದಲ್ಲಿ ಬಳಲುತ್ತಲೇ ಕೂಲಿನಾಲಿ ಮಾಡಿ ಸಾಕಿ, ದೊಡ್ಡವರನ್ನು ಮಾಡಿರುತ್ತಾಳೆ. ಬೆಳೆದ ಮೊಮ್ಮಕ್ಕಳು ತುಂಬಾ ಪ್ರಬುದ್ಧ ವಿಚಾರಧಾರೆಯವರಾಗಿರುತ್ತಾರೆ. ಸ್ನೇಹಿತರನ್ನು ಊಟಕ್ಕೆ ಕರೆತಂದರೆ ; 'ಆ ಜಾತಿಯವರನ್ನೇಕೆ ಕರೆತಂದಿರಿ' ಎಂದು ಕೂಗಾಡುತ್ತಾಳೆ. 'ಯಜ್ಞ ಯಾಗ ಮಾಡೋದು ಬೇಡ, ಅದೇ ಹಣವನ್ನು ಧರ್ಮಜಾಗೃತಿಗೆ ಬಳಸೋಣ' ಎಂದರೆ 'ನನ್ನ ಪರಂಪರೆಯನ್ನು ಹಾಳುಮಾಡುತ್ತೀರಾ'ಎಂದು ಗೋಳಾಡುತ್ತಾಳೆ. 'ದೇವರಿಗೇನು ಕೂದಲು ಬೇಕೆ? ಬೇಡ. ಕೂದಲು ಕೊಡಲು ನೂರಾರು ಮೈಲಿ ಏಕೆ ಹೋಗಬೇಕು' ಎಂದು ಪ್ರಬುದ್ಧವಿಚಾರದ ಮೊಮ್ಮಕ್ಕಳು ನುಡಿದರೆ ಜೋರಾಗಿ ರೋದಿಸಿ ಮುಗಿಲು ಹಾರಿಬಿತ್ತೇನೋ ಎಂಬಂತೆ ಮಾಡುತ್ತಾಳೆ. ಆಗ ಆ ಮೊಮ್ಮಕ್ಕಳಿಗೆ ಧರ್ಮಸಂಕಟ. ಅಜ್ಜಿಯ ಮಮತೆಗಾಗಿ ವಿಚಾರಗಳನ್ನು-ವೈಚಾರಿಕತೆಯನ್ನು ಬಲಿಕೊಡಬೇಕೋ ? ಅಂತರಾತ್ಮ ಒಪ್ಪಿದ ಆಚರಣೆಗಾಗಿ ಅಜ್ಜಿಯನ್ನು ನೋಯಿಸಬೇಕೋ !

ಇಂಥ ಧರ್ಮಸಂಕಟ ಬಹಳ ಜನರಿಗಿದೆ. ಮೊಮ್ಮಕ್ಕಳು ಅಜ್ಜಿಯ ವಾತ್ಸಲ್ಯ, ಕಷ್ಟ, ತ್ಯಾಗಗಳನ್ನು ಮರೆಯಲಾರರು ; ಆಕೆ ಹೇಳಿದ್ದನ್ನು ಒಪ್ಪಿಕೊಳ್ಳಲೂ ಆರರು. ಅದೇ ರೀತಿ ಅನೇಕ ವಿಚಾರವಂತರ ಪಾಡಾಗಿದೆ. ಶಿವ, ಅರವಿಂದರು, ವಿವೇಕಾನಂದರು, ಉಪನಿಷತ್‌ಕಾರರು, ಶರಣರು, ತಿರುವಳ್ಳುವರ್ ಮುಂತಾದವರ ವಿಚಾರಧಾರೆ ಕಂಡಾಗ ಹಿಂದೂ ಪರಂಪರೆಯ ಬಗ್ಗೆ ಮಮತೆ. ಇಲ್ಲೇ ಉಳಿವ ಬಯಕೆ! ಜಾತೀಯತೆ, ವರ್ಣಾಶ್ರಮ, ಅಸ್ಪೃಶ್ಯತೆ, ಮೂಢನಂಬಿಕೆ ಕಂಡಾಗ ಬೇಗನೆ ಹೊರಹೋಗುವ ತವಕ.

ನಮ್ಮ ಪ್ರವಚನದಲ್ಲಿ ಗ್ರಹಗತಿ ನಂಬಿಕೆ, ಶಕುನ-ಅಪಶಕುನ ನಂಬಿಕೆ, ಯಜ್ಞ ಯಾಗಾದಿಗಳನ್ನು ನಾವು ವಿರೋಧಿಸಿದರೆ 'ಇವರೆಂತು ಹಿಂದುಗಳು ?' ಎಂದು ಟೀಕಿಸದಿರರು.

ಸೊಲ್ಲಾಪುರ ನಗರದ ಸಮೀಪದ ವೈರಾಗ್ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಒಂದು ಕೋತಿ ಸತ್ತಿದ್ದರಿಂದ ಅದರ ಶವಸಂಸ್ಕಾರವನ್ನು ಅದ್ದೂರಿಯಿಂದ ಮಾಡ

ಲಾಯಿತಂತೆ. ಶಾಸಕರು ಮತ್ತು ಉಳಿದ ರಾಜಕೀಯ ಮುಖಂಡರು ಮೆರವಣಿಗೆಯ ನೇತೃತ್ವ ವಹಿಸಿದ್ದರಂತೆ. ಅಂತಿಮ ಯಾತ್ರೆಯಲ್ಲಿ ಮೂರುಸಾವಿರ ಜನ ಭಾಗವಹಿಸಿದ್ದರಂತೆ. ಹೀಗೆ ನಮ್ಮ ದೇಶದಲ್ಲಿ ಕೋತಿ, ಕಾಗೆ, ನಾಯಿ ಎಲ್ಲವೂ ದೇವರೇ ! ದುರ್ದೈವವೆಂದರೆ ಇಂಥ ಮೂಡಭಕ್ತರು ಜೀವಂತ ಜನರ, ಬಡವರ, ದಲಿತರ ರಕ್ತವನ್ನು ಅಷ್ಟೇ ಚೆನ್ನಾಗಿ ಹೀರಬಲ್ಲರು. ಇದೇ ಹಣವನ್ನು ಯಾರಾದರೂ ಬಡಬಗ್ಗರ ಮದುವೆಗೆ ಕೊಡಿ ಅಂದರೆ ಕೊಟ್ಟಾರೆಯೆ ? ದಾರಿಯಲ್ಲಿ ನೋಡ್ತಾ ನೋಡ್ತಾ ಕಲ್ಲುಗಳೇ ವಿಗ್ರಹಗಳಾಗಿ ಪರಿವರ್ತನೆಗೊಂಡು, ಸುಮ್ಮನಾದರೂ ಇರುತ್ತವೆಯೋ ? ಬೆಣ್ಣೆ, ತುಪ್ಪದ ಸೇವೆ ಬಯಸುತ್ತವೆ. ಹೂವಿನ ಅಲಂಕಾರ, ರೇಷಿಮೆಯ ವಸ್ತ್ರಗಳನ್ನು ಬೇಡುತ್ತವೆ. ವಿವಿಧ ಗುಂಪುಗಳವರನ್ನು ಆಕರ್ಷಿಸಲು ವಿವಿಧ ದೇವತೆಗಳ ತಂಡವೇ ದೇವಾಲಯದಲ್ಲಿ ಸೇರುತ್ತದೆ. ದಾರಿಯ ಬದಿಗೊಂದು ಪುಟ್ಟ ದೇವಾಲಯ, ಅಲ್ಲೊಂದು ಗೋಲಕ; ಅಲ್ಲಿಗೊಬ್ಬ ಪೂಜಾರಿ, ಅವನದೊಂದು ಕುಟುಂಬ ಪೋಷಣೆ. ಆಗಾಗ ಚಂದಾ ವಸೂಲಿ. ಗಣಪತಿ ಹಬ್ಬ, ರಾಮನವಮಿ ಬಂದರಂತೂ ಊರುಕೇರಿಗೆ ಶಬ್ದಾಸುರನ ಹಾವಳಿ, ಪುಂಡುಪೋಕರಿ ಮಕ್ಕಳ ಆಲೆದಾಟ. ಮನೆಯಲ್ಲಿ ಬಿಟ್ಟ ಚಪ್ಪಲಿ, ಬೂಟು ಚಂದಾ ವಸೂಲಿಗೆ ಬಂದಾಗ ಮಾಯ. ಕೊಡದಿದ್ದರೆ ಬೆದರಿಕೆ. (ಈ ಅನುಭವ ಆಗಿದೆ).

ಹೀಗೆ ಓಣಿ ಓಣಿಗೊಂದು ವಿಗ್ರಹಗಳನ್ನು ಕಟೆದು ನಿಲ್ಲಿಸುವ ಬದಲಿಗೆ ವಿಶಾಲವಾದ ಪ್ರಾರ್ಥನಾ ಮಂದಿರಗಳನ್ನು ಮಾಡಿ ಹಿಂದುಗಳು ಒತ್ತಟ್ಟಿಗೆ ಸಮಾವೇಶವಾಗಿ ಪ್ರಾರ್ಥನೆ ಮಾಡುವಂತೆ ವ್ಯವಸ್ಥೆ ಮಾಡಿದರಾಗದೆ? ಇಷ್ಟು ಹೇಳಿದರೆ ಪೂಜಾರಿಗಳ ಕೆಂಗಣ್ಣು ನಮ್ಮ ಮೇಲೆ ಬಿದ್ದಂತೆಯೆ !

ಕೇವಲ ಮೂಢನಂಬಿಕೆ, ಕೆಟ್ಟ ಮತ್ತು ವಿಷಮ ತತ್ತ್ವಗಳೇ ಹಿಂದೂ ತತ್ತ್ವದಲ್ಲಿ ಇದ್ದುದಾದರೆ ಈ ಪರಂಪರೆ ಎಂದೋ ಸಾಯುತ್ತಿತ್ತು. ಇದು ಜೀವಂತವಾಗಿದೆ, ವೃದ್ಧಿಯಾಗುತ್ತಿದೆ ಎಂಬುದೇ ಇದರ ಸತ್ವಕ್ಕೆ ಸಾಕ್ಷಿ. ಒಳ್ಳಿತು ಇಲ್ಲಿದೆ, ವಿಪುಲವಾಗಿದೆ. ಸರೋವರ ತುಂಬಾ ಸುಂದರ, ಆಳ, ಉಪಯುಕ್ತ. ನಯನ ಮನೋಹರ ತಾವರೆಗಳು ಅರಳಿವೆ. ಆದರೆ ತಾವರೆಗಳ ಮಧ್ಯೆ ವಿಪರೀತ ಅಂತರ್‌ಗಂಗೆ, ಜೊಂಡು ಬೆಳೆದು ದುರ್ವಾಸನೆ ಬಡಿಯುತ್ತಿದೆ. ದಂಡೆಯಲ್ಲಿ ನಿಂತು ಯಾರೂ ಅದರ ಚೆಲುವನ್ನು ಸವಿಯದಂತೆ ಮಾಡುತ್ತಿದೆ. ಅದಕ್ಕಾಗಿ ಬೇಸತ್ತು ಕೆಲವರು ದೂರ ಹೊರಟಿದ್ದಾರೆ. ಇನ್ನು ಕೆಲವರು ಆ ಅಂತರ್‌ಗಂಗೆ, ಜೊಂಡುಗಳನ್ನು ತೆಗೆಯಲು ಅವಕಾಶ ಕೊಡದಂತೆ ಕಾವಲಿದ್ದಾರೆ. ಇನ್ನು ಕೆಲವರಿಗೆ ಧರ್ಮಸಂಕಟ ! ಸರೋವರ ಬೇಕು ; ತಾವರೆಬೇಕು. ಅಂತರ್‌ಗಂಗೆ, ಜೊಂಡು, ಮಲಿನತೆ ದುರ್ವಾಸನೆ ಬೇಡ.

ಹಿಂದೂ ಪರಂಪರೆಯೊಂದು ಸುಂದರ ಸರಸಿ. ಇಲ್ಲರಳಿವೆ ಅಸಂಖ್ಯಾತ ಮಹಾಂತರೆಂಬ ದೇವತಾವರೆಗಳು. ಸುತ್ತಲೂ ಹಬ್ಬಿ ಹಸರಿಸಿದೆ ದಾರ್ಶನಿಕ ತತ್ತ್ವಜ್ಞಾನ ವನ. ದುರ್ದೈವದಿಂದ ಒಡನೆಯೇ ಬೆಳೆದಿದೆ ಜಾತೀಯತೆಯ ಅಂತರ್‌ಗಂಗೆ, ಅಸ್ಪೃಶ್ಯತೆಯ ಜೊಂಡು, ಮೂಢನಂಬಿಕೆಯ ಮಲಿನತೆ, ಸಂಕುಚಿತ ವಿಚಾರದ ದುರ್ವಾಸನೆ. ಸನಾತನಿಗಳೇ, ಈ ಜೊಂಡು, ಕೊಳಕು ತೆಗೆಯಲು ಅಡ್ಡಬರಬೇಡಿ; ಬುದ್ಧ, ಬಸವರು ತೆಗೆದಂತೆ ತೆಗೆಯಲು ನೀವೂ ಸಹಾಯಕರಾಗಿ ಸಹಕರಿಸಿರಿ. ಅವೈದಿಕ ಉಗ್ರಗಾಮಿಗಳೇ ಇಂಥದೊಂದು ಸುಂದರ ಸರೋವರವನ್ನು ತೊರೆದು ಮರುಭೂಮಿಗೆ ಹೋಗಬೇಡಿ. ಬನ್ನಿ ಇದು ನಿಮ್ಮದೇ! ಸ್ವಚ್ಛೀಕರಿಸಿ. ನೋಡಿ ಇದರ ಸುತ್ತಲೂ ಎಂಥ ದಾರ್ಶನಿಕ ವನ! ಇದರ ನೆರಳಲ್ಲಿ ಆತ್ಮಾನಂದ ಹೊಂದಬನ್ನಿ. ಎಲ್ಲರೊಂದಾಗಿ ಹಿಂದೂ ಅಧ್ಯಾತ್ಮ ವನದಲ್ಲಿ ಅಮೃತಪುತ್ರರಾಗಿ, ದೇವರಿಗೆ ಶರಣಾಗಿ ಶರಣರಾಗಿ ನಲಿಯೋಣವೆನ್ನಿ.

ಮಾತೆ ಮಹಾದೇವಿ

ಅಕ್ಟೋಬರ ತಿಂಗಳಲ್ಲಿ ಆದ ಕಲ್ಯಾಣ ಕಿರಣ ಆಜೀವ ಸದಸ್ಯರ ಯಾದಿ

ಶರಣರುಗಳಾದ—

1. 912. ಎಸ್. ಮುದ್ದುರಾಜ, ಅನಂತಪುರ
2. 913. ಆರ್. ಎಸ್. ಸೋಮನಾಥ, ಬೆಂಗಳೂರು
3. 914. ಎಂ. ಸೀತಮ್ಮ ಬೆಳ್ಳಿಯಪ್ಪ, ಹುಣಸೂರು
4. 915. ಸಿ. ಎಸ್. ಶಾಂತಮಲ್ಲಪ್ಪ, ಬೆಂಗಳೂರು
5. 916. ಡಾ॥ ಹೆಚ್. ಸಿ. ನಾಗಭೂಷಣಸ್ವಾಮಿ, ಬೆಂಗಳೂರು
6. 917. ಬಿ. ಬಿ. ಬಗಲಿ, ಇಂಡಿ
7. 918. ಹವಳದ ಚನ್ನಪ್ಪ, ನ್ಯಾಮತಿ

ಭಕ್ತಿಪಕ್ಷದ ಸಮ್ಮಿಲನ

— ಪೂಜ್ಯ ಮಾತೆ ಗಂಗಾದೇವಿ

ಅಕ್ಟೋಬರ್ ಒಂದು; ಬಸವ ಗಂಗೋತ್ರಿಯ ಆವರಣದಲ್ಲಿ ಹಬ್ಬದ ವಾತಾವರಣ. ಪರವೂರುಗಳಿಂದ ಧಾವಿಸುವ ಸದ್ಭಕ್ತರು, ಹಬ್ಬಕ್ಕೆ ತಯಾರಿ ನಡೆಸುವ ಕಾರ್ಯಕರ್ತರು. ಜನ ಜಂಗುಳಿಯ ಜೊತೆಗೆ ಮೇಘರಾಜನೂ ಆಗಮಿಸಬೇಕೆ? ಮೇಘರಾಜನು ಬಂದುದು ವರ್ಷಾಧಾರೆಯಲ್ಲಿ ಗಿಡಮರಬಳ್ಳಿಗಳಿಗೆ. ಅಭ್ಯಂಗನ ಮಾಡಿಸಿ, ನೆಲಕ್ಕೆಲ್ಲ ಚಳೇವುಹಾಕಿ, ನಿಸರ್ಗಕ್ಕೆ ಪುನಶ್ಚೇತನ ಕೊಡಲು! ರಾತ್ರಿಯೆಲ್ಲ ಮಳೆಯ ನಾದವನ್ನು ಕೇಳಿ ಬೆಳಗಾಗ ಎದ್ದರೆ, ನಿಸರ್ಗವೆಲ್ಲ ಪ್ರಶಾಂತ. ಎಣ್ಣೆನೀರಿನ ಸ್ನಾನಮಾಡಿ ಕೂದಲನ್ನು ಒಣಗಿಸಿಕೊಳ್ಳಲು ನಿಂತ ಲಲನೆಯಂತೆ, ನಿಸರ್ಗದೇವಿ ಹೊಂಬಣ್ಣದ ಮಂದಸೂರ್ಯನ ಪ್ರಕಾಶದಲ್ಲಿ ಒಣಗಿಸಿಕೊಳ್ಳತೊಡಗಿದ್ದಳು.

ಗಾಂಧೀ ಜಯಂತಿಯಂದು ವಿಶೇಷ ಕಾರ್ಯಕ್ರಮ. ಸುಪ್ರಭಾತದ 10 ಗಂಟೆಗೆ ಕಾರ್ಯಕ್ರಮದ ಆರಂಭ. ಶಾಲಾಮಕ್ಕಳು ಗೌರವರಕ್ಷೆ, ಸಾಮೂಹಿಕ ಪಥ ಸಂಚಲನೆಯ ಮುಖಾಂತರ ಅತಿಥಿಗಳೆಲ್ಲರನ್ನು ವೇದಿಕೆಯತ್ತ ಕರೆದೊಯ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಚಿವ ಬೇಗಾನೆ ರಾಮಯ್ಯನವರೇ ಆದಿಯಾಗಿ ಇನ್ನಿತರ ಅತಿಥಿಗಳಿಗೆ ಹೂವಿನ ಆಟದ ಪ್ರದರ್ಶನ ತೋರಿದರು. (ಬಸವಭಾರತಿ ವಿದ್ಯಾಲಯದ ಕ್ಷಿಪ್ರಪ್ರಗತಿ ಮತ್ತು ತರಬೇತಿಯ ಸಂಕೇತವಾಗಿ ಶಾಲೆಯ ಮಕ್ಕಳು ತಾಲ್ಲೋಕುಮಟ್ಟದ ಮಾರ್ಚ್‌ಫಾಸ್ಟ್‌ನಲ್ಲಿ ಮತ್ತು ಜಿಲ್ಲಾಮಟ್ಟದ ಮಾರ್ಚ್‌ಫಾಸ್ಟ್ ಎರಡರಲ್ಲೂ ಪ್ರಥಮ ಬಹುಮಾನವಾಗಿ ರೋಲಿಂಗ್‌ಷೀಲ್ಡ್ ತಂದಿದ್ದಾರೆ).

ಸಾಮೂಹಿಕ ಪ್ರಾರ್ಥನೆಯೊಡನೆ ಕಾರ್ಯಕ್ರಮ ಆರಂಭವಾಯಿತು. ಪೂಜ್ಯ ಮಾತಾಜಿಯವರ ಮಾರ್ಗದರ್ಶನದಲ್ಲಿ ಶಾಲೆಯ ಮಕ್ಕಳು, ಸದ್ಭಕ್ತರು ಒಕ್ಕೊರಲಿನಿಂದ ಮಾಡಿದ ಪ್ರಾರ್ಥನಾ ನಿನಾದ, ಪ್ರಣವಧ್ವನಿ ಕೇಳುವವರನ್ನು ಪುಳಕಿತಗೊಳಿಸಿದ್ದು ಮಾತ್ರವಲ್ಲ, ಬಸವ ಗಂಗೋತ್ರಿಯ ವಾತಾವರಣದಲ್ಲಿ ಝಣತ್ಕಾರ ಮಾಡಿತು. ಸ್ವಾಗತ ಮತ್ತು ಪರಿಚಯವನ್ನು ಪೂಜ್ಯ ದಯಾನಂದ ಸ್ವಾಮಿಗಳು ಮಾಡಿದರು. ಶರಣ ಎನ್. ಪುಟ್ಟರುದ್ರರವರು ಎಲ್ಲರಿಗೂ ಮಾಲಾರ್ಪಣೆ ಮಾಡಿದರು.



ಪೂಜ್ಯ ಮಾತಾಜಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಅಂದಿನ ಭಕ್ತಿ ಪಕ್ಷದ ಸಮ್ಮೇಳನ ಬಹುಮುಖ ಉದ್ದೇಶವನ್ನು ಹೊಂದಿದುದನ್ನು ಮನನೀಯ ವಾಗಿ ಹೇಳಿದರು. "ಪೂಜ್ಯರಾದ ಗುರೂಜಿಯವರು ಐವತ್ತು ವರ್ಷಗಳನ್ನು ಪೂರೈಸಿ ಐವತ್ತೊಂದಕ್ಕೆ ಕಾಲಿಡುವ ಸಂದರ್ಭದಲ್ಲಿ ಪೂಜ್ಯರನ್ನು ಗೌರವಿಸಲು ಉದ್ದೇಶಿಸಿದ್ದು, ಅದಕ್ಕಾಗಿ ಯೋಜನೆಯೊಂದನ್ನು ಆರಂಭಿಸಲು ಈ ಸಭೆಯನ್ನು ಸೇರಿಸಲಾಗಿದೆ. 1978ರ ಅಕ್ಟೋಬರ್‌ನಲ್ಲಿ ಸಿನಿಮಾ ನಟ ಅಶೋಕಕುಮಾರರಿಂದ ಕೊಡಲ್ಪಟ್ಟ ಬಸವ ಗಂಗೋತ್ರಿಗೆ ಮೂರು ವರ್ಷ ತುಂಬಿದೆ. ಅದರ ಪ್ರಗತಿಯನ್ನು ಸದ್ಭಕ್ತರು ವೀಕ್ಷಿಸಲೆಂದು ಅವರುಗಳನ್ನು ಬರಮಾಡಿಕೊಳ್ಳಲಾಗಿದೆ. ಬರೀ ಜೋಳಿಗೆ ಹಿಡಿದು ವಿವಿಧ ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುತ್ತಿರುವ ನಮಗೆ ಅನೇಕರು ಸಹೃದಯತೆಯಿಂದ ದಾನವನ್ನಿತ್ತಿರುತ್ತಾರೆ. ಅಂಥ ದಾನಿಗಳ ಕೊಡುಗೆ ಇಲ್ಲಿ ಸಾರ್ಥಕವಾಗುತ್ತಿದೆ, ಎಂಬುದನ್ನು ಕೊಟ್ಟವರು ಮತ್ತು ಇನ್ನಿತರರು ಅರಿತರೆ ಅವರಿಗೂ ಸಂತೃಪ್ತಿ. ಈ ಉದ್ದೇಶವನ್ನು ಸಾಧಿಸಲೆಂದೇ ಸಭೆಯನ್ನಿಲ್ಲಿ ಕರೆಯ ಲಾಗಿದೆ. ಅಲ್ಲದೆ, ಬಸವ ಭಾರತಿ ವಿದ್ಯಾಲಯದ ಕಟ್ಟಡ ನಿರ್ಮಾಣಕ್ಕೆ ಅನೇಕ ದಾನಿಗಳು ನಾಡಿನಾದ್ಯಂತದಿಂದ ಸಹಾಯ ಮಾಡಿದ್ದಾರೆ. ಶಾಲೆಯ ಆರಂಭದ ಸಮಯದಲ್ಲಿ ಇವರೆಲ್ಲರನ್ನು ಆಮಂತ್ರಿಸಿ, ಸತ್ಕರಿಸುವುದಾಗಿ ಮಾತುಕೊಟ್ಟಿದ್ದೆನು. ಶಾಲೆಯ ಕಟ್ಟಡದ ಒಂದು ಹಂತ ಪೂರೈಸಿರುವುದರಿಂದ ಅಂತ ದಾನಿಗಳನ್ನಿಲ್ಲಿ ಬರ ಮಾಡಿಕೊಳ್ಳಲಾಗಿದೆ" ಎಂದು ಮಾತನಾಡಿ ಪೂಜ್ಯ ಗುರೂಜಿಯವರ ವ್ಯಕ್ತಿತ್ವ, ಸಾಧನೆ, ಸಿದ್ಧಿಗಳ ಬಗ್ಗೆ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗ್ರಾಮಾಭಿವೃದ್ಧಿ ಮತ್ತು ಪಚಾಯತ ರಾಜ್ಯ ಸಚಿವರಾದ ಶರಣ ಬೇಗಾನೆ ರಾಮಯ್ಯನವರು ತಮ್ಮ ವಿಚಾರಪೂರಿತ, ನಿರರ್ಗಳ ವಾಕ್‌ಧಾರೆಯನ್ನು ಹರಿಸುತ್ತ, ಸಂಸ್ಥೆಯ ಕ್ಷಿಪ್ರ ಪ್ರಗತಿಯನ್ನು ಕಂಡು ಆಶ್ಚರ್ಯ ಮತ್ತು ಆನಂದಗಳನ್ನು ವ್ಯಕ್ತಪಡಿಸಿದರು. ಇಂದಿನ ಶಿಕ್ಷಣ ಕೇವಲ ನಾಗರಿಕತೆಯನ್ನು ಮಾತ್ರ ತಂದೀಯುತ್ತಿದೆ, ಸುಸಂಸ್ಕೃತಿಯನ್ನಲ್ಲ. ಮಾನವನನ್ನು ನಾಗರಿಕನನ್ನು ಮಾಡಲು ಹತ್ತು ನಿಮಿಷ ಸಾಕು. ಒಬ್ಬ ದರ್ಜಿ ಮತ್ತು ಒಬ್ಬ ಹಜಾಮ – ಇಬ್ಬರೇ ಸಾಕು ಆಧುನಿಕ ಶೈಲಿಯ ಕ್ರಾಪ್ ಬಿಡಿಸಿ, ಆಧುನಿಕ ಉಡುಪು ತೊಡಿಸಿದರೆ ಮನುಷ್ಯ ನಾಗರಿಕನಾದ. ಆದರೆ ಇಷ್ಟರಿಂದಲೇ ಸಂಸ್ಕೃತಿ ಬರದು. ಅಂಥ ಸಂಸ್ಕೃತಿ ಮತ್ತು ನೈತಿಕ ಸಂಸ್ಕಾರ ದೊರೆಯುವಂತಹ ಶಿಕ್ಷಣ ಇಲ್ಲಿ ಸಿಗುತ್ತಿದೆ. ಜನಾಂಗ ನಿರ್ಮಾಣದ ಕಾರ್ಯ ನಡೆಯುತ್ತಿದೆ. ಪೂಜ್ಯ ಗುರುಗಳ ಮತ್ತು ಪೂಜ್ಯ ಮಾತೆಯವರ ಮಹಾನ್ ಸಂಕಲ್ಪ ಸಿದ್ಧಿಸುತ್ತಿದೆ. ಪ್ರಶಾಂತ ಪರಿಸರ, ಹರಿವ ನದಿ, ಬಿಸುವ ತಣ್ಣೆಲರು, ಹಸಿರುಡೆಯುಟ್ಟ ತರುಮರ, ಗೋಶಾಲೆಯ ಹಸು–ಕರು,

ಪ್ರಾರ್ಥನೆ ಗೈವ ಶಾಲಾ ಮಕ್ಕಳು, ಅವರ ಶಿಸ್ತುಬದ್ಧ ಜೀವನ – ಇವೆಲ್ಲವು ನನಗೆ ಭಾರತೀಯ ಗುರುಕುಲ ಪದ್ಧತಿಯನ್ನು ನೆನಪಿಗೆ ತರುತ್ತಿವೆ" ಎಂದರು. ಡೆನ್ಮಾರ್ಕ್ ಮತ್ತು ಇತರ ಐರೋಪ್ಯ ದೇಶಗಳನ್ನು ಸಂದರ್ಶಿಸಲು ಹೊರಟ ಅವರು, "ಪೂಜ್ಯ ಮಾತಾಜಿಯವರು ಅಮೆರಿಕಾಗೆ ಹೊರಟಾಗ ಬೀಳ್ಕೊಡಲು ನಾನು ಬಂದಿದ್ದೆ. ಆ ಪುಣ್ಯದಿಂದಲೋ ಏನೋ ಈಗ ನನಗೂ ಆ ಸೌಲಭ್ಯ ಸಿಕ್ಕಿದೆ. ಈಗವರ ಆಶೀರ್ವಾದ ಪಡೆಯಲು ಬಂದಿದ್ದೇನೆ" ಎಂದು ಹೃದಯತುಂಬಿ ಮಾತನಾಡಿದರು.

ಪೂಜ್ಯ ಮಾತೆ ಗಂಗಾದೇವಿಯವರು ಸದ್ಗುರುಗಳ ವ್ಯಕ್ತಿತ್ವದ ಔನ್ನತ್ಯವನ್ನು ವಿವರಿಸಿ, ಹೇಗೆ ಅವರು ಮಾತೃ ಹೃದಯಿಯಾಗಿ, ಸಂಸ್ಥೆಯ ಆಧಾರ ಸ್ತಂಭವಾಗಿ ಇದ್ದಾರೆ ಎಂಬುದನ್ನು ಮನಮುಟ್ಟುವಂತೆ ಹೇಳಿದರು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಡಾ॥ ಸಾ. ಶಿ. ಮರುಳಯ್ಯನವರು 'ಎಂಥಾ ದೈವೀಶಕ್ತಿಯಾಗಿ ಪೂಜ್ಯ ಗುರುಗಳು ಕಾರ್ಯ ಮಾಡುತ್ತಿದ್ದಾರೆಂಬುದನ್ನು ಇಂದಿಲ್ಲಿ ಅರಿಯಬಹುದು. ಅವರು ಯಾರಿಂದಲೂ ಮಾಡಲ್ಪಟ್ಟವರಲ್ಲ, ತಮ್ಮಿಂದ ತಾವು ಆದವರು. ಅಸಮ ಆತ್ಮ ಬಲದಿಂದ, ದೈವಾನುಗ್ರಹದಿಂದ ಧರ್ಮಕ್ರಾಂತಿಯ ಧೀರಯೋಗಿಗಳಾಗಿ ಮೆರೆದವರು' ಎಂದು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ.ಮ.ನಿ.ಪ್ರ. ಶಿವರುದ್ರ ಸ್ವಾಮಿಗಳು, ಬೇಲಿಮಠ ಅವರು ಪೂಜ್ಯ ಗುರೂಜಿಯವರ ವ್ಯಕ್ತಿತ್ವವನ್ನು ಮಾರ್ಮಿಕವಾಗಿ ಪರಿಚಯ ಮಾಡಿಕೊಟ್ಟರು. ಆಶ್ರಮವಾಸಿಗಳು ಸಿದ್ಧಪಡಿಸಿ ಸದ್ಗುರುಗಳಿಗೆ ಮುಂಡಕ್ಕಿಯ ಮಾಲೆಯನ್ನು ಅರ್ಪಿಸಿದ್ದರು ಈ ಮೊದಲು. ಅದನ್ನೇ ಮುಖ್ಯವಾಗಿ ಎತ್ತಿಕೊಂಡು ಬೇಲಿಮಠದ ಶ್ರೀಗಳು ಭಾಷಣ ಮಾಡಿದರು. "ಇದು ಬಾಡದ ಮಾಲೆ. ಅದೇ ರೀತಿ ಸದ್ಗುರುಗಳಿಗೆ ಶಿಷ್ಯರು ಬಾಡದ ನಿಷ್ಠೆ ಎಂಬ ಹೂವಿನ ಮಾಲೆ ಅರ್ಪಿಸಬೇಕು, ಕಿರಿಯ ಗಾತ್ರದ ಮುಂಡಕ್ಕಿಕಾಳುಗಳನ್ನು ಪೋಣಿಸಿ ಇಂಥ ಸುಂದರವಾದೊಂದು ಮಾಲೆಯನ್ನು ಮಾಡಬೇಕಾದರೆ ಶಿಷ್ಯರುಗಳಲ್ಲಿರುವ ಸಹನೆ ವ್ಯಕ್ತವಾಗುತ್ತದೆ. ಗುರುಗಳ ಮೇಲಿಟ್ಟಿರುವ ಅನನ್ಯ ಶ್ರದ್ಧೆಯನ್ನು ಪ್ರತ್ಯಕ್ಷೀಕರಿಸುತ್ತದೆ. ಮುಂಡಕ್ಕಿಗೆ ನೀರು ತಾಗುತ್ತಿದ್ದಂತೆಯೇ ಅದು ಮುದುಡಿ ಬಿಡುವುದು. ಅದೇ ರೀತಿ ಮಾನವ ಜೀವಿತವು ತುಂಬಾ ನಶ್ವರ ಎಂಬ ತತ್ವವನ್ನು ಈ ಮಾಲೆ ಸಾರುತ್ತದೆ.

ಪೂಜ್ಯ ಗುರುಗಳು ಒಂದು ವ್ಯಕ್ತಿಯಲ್ಲ ಮಹಾನ್ ಶಕ್ತಿ. ಅವರ ತಪಸ್ಸು ಇಂದು ಸಿದ್ಧಿಸುತ್ತಿದೆ.



ರು ಬಸವಣ್ಣ
ಗೆ

ಪರಮ ಪೂಜ್ಯರಿಗೆ ಸದ್ಭಕ್ತರು ಪ್ರಾಲಾರ್ಪಣೆ ಮಾಡಿ, ಕಾಣಿಕೆಗಳನ್ನು ಸಮರ್ಪಿಸಿದರು. ಪೂಜ್ಯ ಗುರುಗಳು ಹೃದಯ ತುಂಬಿ ಆಶೀರ್ವಚನವನ್ನು ದಯಪಾಲಿಸಿದರು. "ನಾನೇನು ಅಂಥ ಘನ ಸಾಧನೆಯನ್ನು ಮಾಡಿಲ್ಲ. ನಿಮ್ಮ ಭಕ್ತಿ-ಅಭಿಮಾನಗಳು ಅಂಥದ್ದೊಂದು ಸಾಧನೆಯನ್ನು ಗುರುತಿಸಿವೆ. ನನ್ನ ಜೀವಿತದ ಗುರಿ ಇಷ್ಟೆ. ಕರ್ಪೂರವು ಸ್ವಾಭಾವಿಕವಾಗಿ ಕರಗುತ್ತದೆ. ಉರಿ ಹಚ್ಚಿದಾಗ ಬೇಗ ಬೇಗ ಕರಗುತ್ತದೆ. ಸ್ವಾಭಾವಿಕವಾಗಿ ಅದು ಕರಗಿದಾಗ ಅದರ ಅಸ್ತಿತ್ವ-ಮತ್ತು ಜೀವಿತ ನಿಷ್ಪ್ರಯೋಜಕ. ಬೇಗನೆ ಕರಗಿದರೂ ಚಿಂತೆಯಿಲ್ಲ ಉರಿಯ ಸಂಪರ್ಕದಿಂದ ಕರಗಿದಾಗ ಅದು ಬೆಳಕು ಕೊಟ್ಟು ಕರಗುವುದು. ಅದೇ ರೀತಿ ಮಾನವ ಜೀವವು ಕ್ಷಣ ಕ್ಷಣಕ್ಕೂ ನಶಿಸುವ ವಸ್ತು. ಅದರ ಸಾರ್ಥಕತೆ ತ್ಯಾಗ ಮತ್ತು ಸೇವೆಯಲ್ಲಿದೆ.

ಶ್ರೀ ಬಸವ ಭಾರತಿ ವಿದ್ಯಾಲಯದ ಕಟ್ಟಡ ನಿರ್ಮಾಣಕ್ಕೆ ಧನ ಸಹಾಯ ಗೈದ ದಾನಿಗಳನ್ನು ಸತ್ಕರಿಸಲಾಯಿತು ಮತ್ತು ಕಾರಣಾಂತರದಿಂದ ಬರದಿದ್ದವರನ್ನು ಸ್ಮರಿಸಿಕೊಂಡು ಶುಭವನ್ನು ಹಾರೈಸಲಾಯಿತು.

ಪ್ರಸಾದ ಸ್ವೀಕಾರಾನಂತರ ಸಭೆಯು ಮತ್ತೆ ಸೇರಿತು. ಮಧ್ಯಾಹ್ನ ಮುಖ್ಯವಾಗ ವಿಚಾರಗೋಷ್ಠಿ. ಅದರ ಅಧ್ಯಕ್ಷತೆ ಸಮಾಜ ಕಲ್ಯಾಣ ವಿಭಾಗದ ಸಚಿವ ಶರಣ ಟಿ. ವೆಂಕಟರಮಣ ಅವರದು, ಮುಖ್ಯ ಅತಿಥಿಗಳಾಗಿ ಬಸವಯೋಗಾಶ್ರಮದ ಸಿದ್ಧರಾಮ ಶರಣರು ಬೆಲ್ದಾಳ ಆಗಮಿಸಿದ್ದರು. ಮುಖ್ಯ ಭಾಷಣಕಾರರು, ನಿವೃತ್ತ ನ್ಯಾಯಾಧೀಶ ಶರಣ ಕೊ. ಚನ್ನಬಸಪ್ಪ ಮತ್ತು ಶರಣ ಸಿದ್ಧಾರ್ಥ ಅರಕೇರಿಯವರು. ಮುಖ್ಯ ವಿಷಯ "ಇಸ್ಲಾಮಿಗೆ ಹರಿಜನರ ಮತಾಂತರ, ಪರಿಣಾಮ ಮತ್ತು ಪರಿಹಾರ." ಶ್ರೀ ಸಿದ್ಧರಾಮ ಶರಣರು ತಮ್ಮ ಸ್ವಾನುಭಾವದಿಂದ ವಿವರಣೆ ನೀಡುತ್ತ, "ಈ ಸಮಸ್ಯೆಯನ್ನು ನಾನು ವೈಯಕ್ತಿಕವಾಗಿ ಬಗೆಹರಿಸಿಕೊಂಡು, ಸಾರ್ವಜನಿಕ ಕ್ಷೇತ್ರದಲ್ಲಿಯೂ ಪ್ರಯೋಗಿಸುತ್ತೇನೆ. ಹರಿಜನರನ್ನು ಹಿರಿಯಕಾಲದವರೆಂದು, ಅಪ್ಪಬೊಪ್ಪರೆಂದು ಅಪ್ಪಿಕೊಂಡು ಮೇಲೆತ್ತಿದ ಪ್ರಥಮ ಮಹಾಪುರುಷ ಬಸವಣ್ಣ. ದೇವಾಲಯಗಳು ಮನುಜರಲ್ಲಿ ಭೇದ ಮಾಡಿ ಅಸ್ಪೃಶ್ಯರನ್ನು ಬಹಿಷ್ಕರಿಸಿದರೆ ದೇವಾಲಯಗಳನ್ನೇ ಬಹಿಷ್ಕರಿಸಿದ ಕ್ರಾಂತಿಯ ಕಿಡಿ. ಆತ್ಮಸಾಧನೆಗೆ ಎಲ್ಲರಿಗೂ ಕುರುಹನ್ನು ನೀಡಿ ದೇಹವನ್ನು ದೇವಾಲಯ ಮಾಡುವ ಯೋಗವನ್ನು ಕಲಿಸಿದವನು. ಇಂಥದೊಂದು ಮಹಾನ್ ತತ್ತ್ವ ನಮ್ಮ ಮುಂದಿರುವಾಗ ಇದನ್ನು ತೊರೆದು ಇಸ್ಲಾಂ, ಕ್ರೈಸ್ತ ಧರ್ಮಗಳಿಗೆ ಮತಾಂತರ ಹೊಂದುವದೆಂದರೆ "ಊರ ಮುಂದೆ ಹಾಲಿನ ಹಳ್ಳ ಹರಿಯುವಾಗ ಅದನ್ನು ಕುಡಿವುದು ಬಿಟ್ಟು, ಬೇರೆ ಭಾವಿಯ ತೋಡಿ ಉಪ್ಪನೀರನ್ನುಂಬುವಂತಾಗುತ್ತದೆ" ಎಂದರು.

ಶ್ರೀ ಕೊ. ಚನ್ನಬಸಪ್ಪನವರು ಸಮಸ್ಯೆಯ ಅನಾಥತೆಯನ್ನು ವಿವರಿಸಿ, "ವೈಯಕ್ತಿಕವಾಗಿ ನಾವು ಸುಧಾರಿಸಿ ಅಸ್ಪೃಶ್ಯತೆಯ ಆಚರಣೆ ಬಿಟ್ಟರೆ ಎಷ್ಟೋ ಉಪಕಾರವಾದೀತು" ಎಂದರು. ಶಾಸಕ ಸಿದ್ಧಾರ್ಥ ಅರಕೇರಿಯವರು "ಮತಾಂತರ ಅಸ್ಪೃಶ್ಯತೆಯ ಹೊರೆ ಹಳಚಿಕೊಳ್ಳಲು ಸೂಕ್ತ ತಂತ್ರವಲ್ಲ. ಜನರಲ್ಲಿ ಮೂಲಭೂತ ವಿಚಾರ ಪರಿವರ್ತನೆಯಾಗದೆ ಹರಿಜನರು ಯಾವ ಸಮಾಜವನ್ನು ಸೇರಿದರೂ ಅಷ್ಟೇ! ಅದೇ ರೀತಿ ಸವರ್ಣೀಯರಲ್ಲಿ ಮರುಕ, ಮಾನವೀಯತೆ ಅಳವಡಬೇಕು. ರಾಜಕೀಯ ಪ್ರಚೋದನೆಯ ಕೆಲವರು ಮತಾಂತರದ ಹುಯಿಲೆಬ್ಬಿಸಿದರೂ, ಶ್ರೀ ಸಾಮಾನ್ಯ ಹರಿಜನರು ಮತಾಂತರವನ್ನು ಇಚ್ಛಿಸರು. ಅವರಿಗೀಗ ಬೇಕಾದುದು ಆತ್ಮೀಯತೆ ಮಾತ್ರ, ಅದು ಸಿಕ್ಕರೆ ಅವರು ಮಾತೃಧರ್ಮ-ಸಂಸ್ಕೃತಿಗಳನ್ನು ಖಂಡಿತಾ ತ್ಯಜಿಸರು" ಎಂದರು.

ಪೂಜ್ಯ ಮಾತಾಜಿಯವರು ಸಮಾರೋಪ ಭಾಷಣ ಮಾಡಿದರು. ಸಮಸ್ಯೆಯನ್ನು ವಿಶೇಷವಾಗಿ ವಿಶ್ಲೇಷಿಸಿ ಹರಿಜನರು ಧಾರ್ಮಿಕ-ಆರ್ಥಿಕ ಸ್ವಾವಲಂಬನೆಯತ್ತ ಮುನ್ನಡೆಯಬೇಕು. ಅವರಿಗೆ ಇರುವ ಹೆಸರು "ಆದಿ ಕರ್ನಾಟಕ, ಆದಿ ದ್ರಾವಿಡ" ಅವರು ಈ ನೆಲದ ಮಕ್ಕಳೆಂಬುದನ್ನು ಘಂಟಾಘೋಷವಾಗಿ ಸಾರುತ್ತಿದೆ. ಹೀಗಿರುವಾಗ ತಮ್ಮ ಹಕ್ಕು ಬಾಧ್ಯತೆಗಳನ್ನು ಯಾರಾದರೂ ಕಿತ್ತುಕೊಂಡ ಮಾತ್ರಕ್ಕೇ ಅದನ್ನು ಪಡೆಯಲು ಹೋರಾಡದೆ, ಬಿಟ್ಟುಕೊಡುವುದು ಸಿಂಧುವಲ್ಲ" ಎಂದರು.

ಮುಂದಿನ ಸಭೆಯು ಏಳು ಘಂಟೆಗೆ ಆರಂಭವಾಯಿತು. ಪೂಜ್ಯ ಮಾತಾಜಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಶರಣೆ ಶ್ರೀಮತಿ ಬಸವರಾಜೇಶ್ವರಿ ಭಾಗವಹಿಸಿದರು. 50 ವರುಷ ತುಂಬಿದ ಸದ್ಗುರುಗಳಿಗೆ ಗೌರವಾರ್ಪಣೆ ಮಾಡುವುದು ಅತ್ಯಂತ ಸೂಕ್ತವೆಂದು; ತಾವೂ ಸದ್ಗುರುಗಳ ಕರಕಮಲ ಸಂಜಾತ ಶಿಷ್ಯೆಯಾದ ಕಾರಣ, ಈ ದಿಶೆಯಲ್ಲಿ ತಮ್ಮ ಕೈಲಾದ ಸೇವೆಗೈಯಲು ಸಿದ್ಧವೆಂದರು. ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳ ಅಭಿನಂದನ ಸಮಿತಿಯ ಗೌರವಾಧ್ಯಕ್ಷರಾಗಲು ಅವರು ಒಪ್ಪಿದರು. ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಬೇಕೆಂದು ಅಭಿನಂದನ ಗ್ರಂಥವೊಂದನ್ನು ಸಮರ್ಪಿಸಬೇಕೆಂದು ನಿರ್ಣಯಿಸಲಾಯಿತು.

ಪೂಜ್ಯ ದಯಾನಂದ ಸ್ವಾಮಿಗಳು ಸದ್ಗುರುಗಳ ವ್ಯಕ್ತಿತ್ವದ ಔನ್ನತ್ಯ ಕುರಿತು ಮಾತನಾಡಿದರು. "ಈ ಜಗತ್ತಿನಲ್ಲಿ ಅನೇಕ ಪ್ರಕಾರದ ಗುರುಗಳಿರುತ್ತಾರೆ. ಕೆಲವರು ತಮ್ಮ ಜಾತಿಯವರಷ್ಟೆ ಮುಂದಾಗಬೇಕೆಂದು ಬಯಸುತ್ತಾರೆ. ಉದಾಹರಣೆಗೆ


ಬಸವಣ್ಣ

ಕರ್ಣನಿಗೆ ಶಾಪ ಕೊಟ್ಟ ಪರಶುರಾಮ. ಇನ್ನು ಕೆಲವರು ತನ್ನ ಶಿಷ್ಯರಷ್ಟೇ ಮುಂದೆ ಬರಬೇಕೆಂಬುವವರು. ಉದಾಹರಣೆಗೆ ಏಕಲವ್ಯನ ಬೆರಳು ಕೇಳಿದ ದ್ರೋಣ. ಮತ್ತೆ ಕೆಲವರು ತಮ್ಮ ಶಿಷ್ಯರೂ ಮುಂದೆ ಬರಬಾರದು, ತಾವಷ್ಟೇ ಕೀರ್ತಿಶಾಲಿಗಳಾಗಬೇಕೆನ್ನುವವರು. ಪೂಜ್ಯ ಗುರುಗಳು ಇದರಿಂದ ಸಂಪೂರ್ಣ ಹೊರತು ತಮ್ಮ ಶಿಷ್ಯರು ಮುಂದೆ ಬಂದರೆ ಹರ್ಷಿಸುವ ಮಾತೃ ಹೃದಯಿಗಳು" ಎಂದು ಹೇಳಿದರು.

ಅಕ್ಟೋಬರ್ 3 ರಂದು ಬೆಳಿಗ್ಗೆ ಮತ್ತೊಂದು ವಿಚಾರಗೋಷ್ಠಿ ಪೂಜ್ಯ ಸದ್ಗುರುಗಳ ಘನ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ಉನ್ನತ ನ್ಯಾಯಾಲಯದ ನ್ಯಾಯಮೂರ್ತಿ ಶರಣ ಕೆ. ಭೀಮಯ್ಯನವರು. ಮತ್ತು ಮುಖ್ಯ ಭಾಷಣಕಾರರಾಗಿ ಶರಣೆ ಲೀಲಾದೇವಿ ಪ್ರಸಾದರು ಆಗಮಿಸಿದ್ದರು.

ಪೂಜ್ಯರಾದ ಸದ್ಗುರುಗಳು ಅತ್ಯಂತ ಉದ್ಬೋಧಕವಾದ ಭಾಷಣವನ್ನು ಮಾಡಿ ಹಿಂದೂತ್ವದ ವ್ಯಾಖ್ಯೆಯನ್ನು ನೀಡಿ, ಈ ಸಂಸ್ಕೃತಿಯ ವೈಶಾಲ್ಯವನ್ನು ವಿವರಿಸಿದರು. "ಹಿಂದೂತ್ವವನ್ನು ಸಂಕುಚಿತವಾಗಿ ಅರ್ಥೈಸಿ ತೋರಿಯಬೇಕಾದ ಪ್ರಮೇಯವಿಲ್ಲ. ಇಲ್ಲಿದ್ದೇ ಧಾರ್ಮಿಕ ಹೋರಾಟ ನಡೆಸಿ ಹಕ್ಕುಗಳನ್ನು ಪಡೆದುಕೊಳ್ಳಬೇಕು" ಎಂದರು.

"ಹಿಂದೂ ಸಮಾಜ ಸಂಘಟನೆ" ಎಂಬ ಬಗ್ಗೆ ವಿಶೇಷವಾಗಿ ಮಾತನಾಡಿದ ನ್ಯಾಯಮೂರ್ತಿ ಭೀಮಯ್ಯನವರು "ಜಾತೀಯತೆ, ಅಸ್ಪೃಶ್ಯತೆ ನಿರ್ಮೂಲನವಾಗದ ಹೊರತು ಹಿಂದೂ ಸಮಾಜ ಸಂಘಟನೆಯಾಗದು. ಅನೇಕ ಮಠಪೀಠಾಧೀಶರು ಬಾಯಿ ಮರುಕ ತೋರಿ ಹರಿಜನರನ್ನು ಉದ್ಧರಿಸಲು ಕಂಕಣ ಬದ್ಧರಾದಂತೆ ಮಾತನಾಡಿದರೂ ತಮ್ಮ ಜಾತಿಯ ಚೌಕಟ್ಟನ್ನು ಬಿಟ್ಟು ಹೊರಬರರು. ಇಂದು ಇಲ್ಲಿ ನಡೆಯುತ್ತಿರುವ ಮುಕ್ತ ಚರ್ಚೆ, ಕಳಕಳಿ, ಸಮಾಜ ಸುಧಾರಣೆಯಲ್ಲಿ ತೀವ್ರ ಆಸಕ್ತಿ ಕಂಡು ತುಂಬಾ ಹರ್ಷವಾಗಿದೆ. ಜಾತೀಯತೆ ನಮ್ಮ ದೇಶ ಸಂಸ್ಕೃತಿಗಳನ್ನು ಛಿದ್ರೀಕರಣಗೊಳಿಸುವ ವಿನಾಶಕ ಶಕ್ತಿ. ಇದರ ಕಪಿಮುಷ್ಟಿಯಿಂದ ಪಾರಾಗಲು ಕಂಕಣಬದ್ಧರಾಗಲೇ ಬೇಕು" ಎಂದರು.

ಶ್ರೀಮತಿ ಲೀಲಾದೇವಿ ಪ್ರಸಾದರು ಜಾತಿಯ ರಾಜಕಾರಣ ಹಿಂದುಗಳಲ್ಲಿ ಒಡಕನ್ನು ಉಂಟು ಮಾಡುವ ಬಗ್ಗೆ ವಿಷಾದಿಸಿದರು. ಸಂಸ್ಕೃತಿಯು ಪತನವಾಗದಂತೆ ನೋಡಿಕೊಳ್ಳಬೇಕೆಂದು ಕಳಕಳಿಯ ಕರೆ ಇತ್ತು, ವಿಶ್ವ ಕಲ್ಯಾಣ ಮಿಷನ ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಭಾಷಣಾನಂತರ ವಿವರವಾದ ವಿಚಾರಗೋಷ್ಠಿ ನಡೆಯಿತು. ಪ್ರತಿಜ್ಞಾ ಸ್ವೀಕಾರ ಜರುಗಿ, ಮಂಗಲಾ ನಂತರ ಸಭೆಯು ಚದುರಿತು.

★

ಹಿರಿಯೂರಿನಲ್ಲಿ ವಿಶ್ವಧರ್ಮ ಪ್ರವಚನ

—ವರದಿ : ಬಸವರಾಜ ವಿ. ಎಸ್.

ಬೆಂಗಾಡೆಂದು ಪರಿಗಣಿಸಲ್ಪಟ್ಟ ಕ್ಷಾಮಧಾಮರದಿಂದ ತತ್ತರಿಸುವ ಜಿಲ್ಲೆ ಚಿತ್ರದುರ್ಗ. ಅಲ್ಲಿಷ್ಟು ಹಸಿರು ಕಂಡರೆ ಅದು ವೇದಾವತಿಯ ಕೃಪೆಯಿಂದ (ಹರಿಹರ-ದಾವಣಗೆರೆ ತಾಲ್ಲೋಕುಗಳಿಗೆ ಹಸಿರುಡೆ ಹೊದಿಸಿದ ತುಂಗಭದ್ರೆಯಿಂದಲೂ ಸಹ). ಹಿರಿಯೂರು ತಾಲ್ಲೋಕು, ವೇದಾವತಿಯ ಅಕ್ಕರೆಯ ತಾಲ್ಲೋಕು. ಶಿಸ್ತಿನ ಸಿಪಾಯಿಗಳಂತೆ ತಲೆ ಎತ್ತಿ ನಿಂತು ಚಾಮರ ಬೀಸುವ ತೆಂಗು, ನೆಲದ ಗದ್ದೆಗೆ ಹಾಸಿದ ಬತ್ತದ ಹಸಿರು ರತ್ನಗಂಬಳಿ. ಬೆಳೆದು ನಿಂತ ಕಬ್ಬಿನ ಗದ್ದೆ ಕಣ್ಣಿಗೆ ಬಹು ತಂಪು. ಕಾಲುವೆಯ ನೀರು ಹರಿದು ನೆಲ ಹಸಿರಾದರೆ ಸಾಕೆ ? ದೈವೀಜ್ಞಾನದ ಸುಜಲ ಹರಿದು ಹೃದಯ ಹಸಿರಾಗಬೇಕು, ಬುದ್ಧಿ ವೈಚಾರಿಕತೆಯ ತೆನೆಯೊಡೆಯಬೇಕು. ಈ ಸಂಕಲ್ಪದೊಡನೆ ಹರಿಯಿತು ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳವರ ಜ್ಞಾನಗಂಗಾ ವಾಹಿನಿ.

18-10-1981 ರಿಂದ ಪೂಜ್ಯ ಸದ್ಗುರುಗಳ ಪ್ರವಚನ ಧಾರೆಯ ಪ್ರವಹನ ಹಿರಿಯೂರಿನ ಸರಕಾರಿ ಪ್ರಾಥಮಿಕ ಶಾಲೆಯ ಮೈದಾನದಲ್ಲಿ. ನಗರದ ಜನತೆ ಅತ್ಯುತ್ಸಾಹದಿಂದ ಊರಿನೊಳಕ್ಕೆ ಸ್ವಾಗತ ಬಯಸಿದರು–ಪೂಜ್ಯ ಸದ್ಗುರುಗಳಿಗೆ ಮತ್ತು ತವರು ಜಿಲ್ಲೆಯಾದ ಚಿತ್ರದುರ್ಗಕ್ಕೆ ಪಾದಾರ್ಪಣ ಮಾಡಿದ ಪೂಜ್ಯ ಮಾತಾಜಿಯವರಿಗೆ. ಮೆರವಣಿಗೆ ಮಾಡಿ ಜಯಘೋಷದೊಡನೆ ಸ್ವಾಗತಿಸಿ ಬರಮಾಡಿಕೊಂಡರು.

ಅತ್ಯುತ್ಸಾಹ, ಸಂಭ್ರಮ, ಕುತೂಹಲದಿಂದ ಜನರು ಕಿಕ್ಕಿರಿದು ಬಹಿರಂಗ ಸಭೆಗೆ ಆಗಮಿಸಿದ್ದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಸಕ ಮಸಿಯಪ್ಪನವರು, ಟ. ಡಿ. ಬಿ. ಪ್ರೆಸಿಡೆಂಟ್ ಜ್ಞಾನದೇವರವರು, ಮುನಿಸಿಪಲ್ ಪ್ರೆಸಿಡೆಂಟ್ ಕೆಂಚಪ್ಪನವರು ಭಾಗ ವಹಿಸಿದ್ದರು. ವಿವಿಧ ಸಂಘ ಸಂಸ್ಥೆಗಳವರು, ವಾಣಿಜ್ಯ–ಉದ್ಯಮದಾರರು ಮೆರವಣಿಗೆ ದಾರಿಯಲ್ಲಿ ಬರುವಾಗ ಮತ್ತು ಸಭೆಯಲ್ಲಿ ಮಾಲಾರ್ಪಣೆ ಮಾಡಿದರು.

ಪೂಜ್ಯ ಶ್ರೀ ಸದ್ಗುರುಗಳು ನಿರರ್ಗಳವಾದ ತಮ್ಮ ವಾಕ್‌ಧಾರೆಯಿಂದ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡಿದರಲ್ಲದೆ, ದಿನದಿನಕ್ಕೂ ಅಧಿಕಧಿಕ ಸಂಖ್ಯೆಯಲ್ಲಿ ಜನರು ಪ್ರವಚನಕ್ಕಾಗಿ ನೆರೆಯುತ್ತಿದ್ದು ವಿಶ್ವಧರ್ಮ ಪ್ರವಚನವು ಅದ್ಭುತ ಪರಿಣಾಮವನ್ನು ಉಂಟು ಮಾಡಿದೆ. ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಿಂದೆಲ್ಲ ಜನರು, ಸೈಕಲ್ ಎತ್ತಿನಗಾಡಿಗಳ ಮೇಲೆ ಬಂದು, ಈ ವೈಚಾರಿಕ ಜಾಗೃತಿಯ ಜಾತ್ರೆಯಲ್ಲಿ ಇಮ್ಮಡಿಸಿದ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಐದು ವಾರಕ್ಕೂ ಹೆಚ್ಚಿನ ಕಾಲ ಈ ಪ್ರವಚನ ಕಾರ್ಯಕ್ರಮ ನಡೆಯಲಿದೆ. ★

1) ಆಸತ್ಕಾಲವನ್ನು ತೆಗಳಬೇಡಿ, ಅದು ನಮ್ಮ ಬಾಳಿಗೆ ಮಧುರವಾದ ಉಪಯೋಗವನ್ನು ನೀಡುತ್ತದೆ. —ಷೇಕ್ಸ್‌ಪಿಯರ್

2) ಅನುಭವವು ಹೆಚ್ಚಬೇಕಾಗದೆ ಸ್ಥಿರವಾಗಿರುವದು. ಅನುಭವವನ್ನು ಹೆಚ್ಚಿಸಿಕೊಂಡಷ್ಟೂ ಮನುಷ್ಯನ ಜ್ಞಾನನಿಧಿ ವೃದ್ಧಿಯಾಗುವದು. —ಎಡಿಸನ್

3) ದೈವೀಕೃಪೆಯಿಂದ ಎಲ್ಲವನ್ನೂ ಸಾಧಿಸಿಕೊಳ್ಳಬಹುದು. ಆದರೆ ಸಾಧಕನ ಸಾಧನೆ ಮಾತ್ರ ಅದಕ್ಕೆ ಅತ್ಯವಶ್ಯ. —ಶ್ರೀ ಅರವಿಂದ

4) ನಿನ್ನದೆಂಬುದನ್ನೆಲ್ಲ ದೇವರಿಗೇ ಅರ್ಪಿಸು. ಅವೆಲ್ಲವೂ ನೂರ್ಮಡಿಯಾಗಿ ನಿನಗೇ ತಿರುಗಿ ಬರುವವು. —ಪರಮಹಂಸ

5) ವಿಶ್ವಕ್ಕೆ ಸ್ಫೂರ್ತಿ ಮತ್ತು ಬೆಳಕನ್ನು ನೀಡುವ ಸತ್ಯಸಿದ್ಧಾಂತವನ್ನು ಸಾರುವ ಶಕ್ತಿ ಬಂದಾಗಲೇ ಬಾಳು ಹಸನಾಗುವದು. —ರಮಣ ಮಹರ್ಷಿ

6) ದುರ್ಜನರ ಮುಂದೆ ತಲೆಬಾಗಿಸದಿರು, ಕೆಚ್ಚಿನಿಂದ ತಲೆ ಎತ್ತಿ ನಿಲ್ಲು. ಸಜ್ಜನರಿಗೆ ತಲೆಬಾಗಬೇಕು, ಇದೇ ಧೀರತೆ. —ಪ್ಲೆಟೋ

7) ಕಾರ್ಯ ಮಾಡುವಾಗ ದಕ್ಷನಾಗಿರು, ಮಾತನಾಡುವಾಗ ಎಚ್ಚರದಿಂದಿರು, ಯೋಚಿಸುವಾಗ ದೂರದೃಷ್ಟಿಯಿಂದಿರು. —ಮಾರ್ಕ್ಸ್

8) ದ್ವೇಷ ಹಾಗೂ ಹಗೆಯ ಬೀಜ ಬಿತ್ತಿದರೆ ಯಾವ ಫಲ ದೊರಕೀತು? ದ್ವೇಷ ಹಾಗೂ ಹಗೆಯೇ ಆದರ ಫಲ.

ಸಮಸ್ಯೆ? ಸಮಾಧಾನ!

—ಕಡೂರು ರಾಮಸ್ವಾಮಿ, ತರೀಕೆರೆ

★ ಅಮೆರಿಕಾದಲ್ಲಿ ವೀರಶೈವರಿದ್ದಾರೆಯೇ ಎಂಬ ಪ್ರಶ್ನೆಗೆ ಅಲ್ಲಿ ವೀರಶೈವರು, ಹಿಂದುಗಳು, ಭಾರತೀಯರು, ಏಷಿಯನ್ನರು ಎಲ್ಲರೂ ಇದ್ದಾರೆ ಎಂದಿದ್ದೀರಿ. ವೀರಶೈವರು ಭಾರತೀಯರಲ್ಲವೆ?

* ಲಿಂಗಾಯತರು ಹಿಂದುಗಳೂ ಹೌದು, ಭಾರತೀಯರೂ ಹೌದು, ಏಷಿಯನ್ನರೂ ಹೌದು. ಲಿಂಗಾಯತ ಧರ್ಮವಾಚಕ; ಹಿಂದೂ ಜನಾಂಗವಾಚಕ; ಭಾರತೀಯ ದೇಶವಾಚಕ, ಏಷಿಯನ್ ಭೌಗೋಳಿಕ ಪ್ರದೇಶ ವಾಚಕ. ಆದ್ದರಿಂದ ಇದನ್ನು ಸ್ಪಷ್ಟೀಕರಿಸಲು ಹಾಗೆ ಬರೆಯಬೇಕಾಯಿತು.

ರಾಜಕುಮಾರ್ ಶೆಟಕಾರ್, ಬೀದರ

* ಲಿಂಗವಂತರು ಏಕದೇವೋಪಾಸಕರಂತೆ. ಆದರೆ ಎಷ್ಟೊಂದು ದೇವರುಗಳನ್ನು ಪೂಜಿಸುತ್ತಾರಲ್ಲಾ?

★ ಅವರಿಗೆ ಅವರ ಧರ್ಮ ತಿಳಿದಿದ್ದರಷ್ಟೇ! ಅವರು ಬಸವಣ್ಣನವರೊಡನೆಯೇ ಅವರ ತತ್ತ್ವಗಳನ್ನೂ ಗಂಟುಮೂಟೆಕಟ್ಟಿ ಮುಲಾಜಿಲ್ಲದೆ ಬೀಳ್ಕೊಟ್ಟಿದ್ದಾರೆ.

* ಮುಸ್ಲಿಮರ ದರ್ಗಾಕ್ಕೆ ನೈವೇದ್ಯ ಒಯ್ಯುವ ಮೂಢರಿಗೆ ನಿಮ್ಮ ಉಪದೇಶವೇನು?

★ ಮೂಢ ಜನರಿಗೆ ನಮ್ಮ ಉಪದೇಶವೇನೂ ಇಲ್ಲ. ಅವರನ್ನು ಇಂಥಾ ದುಃಸ್ಥಿತಿಯಲ್ಲಿಟ್ಟು, ಧರ್ಮಪ್ರಚಾರ ಮಾಡದೆ, ಮಠ ಪೀಠ, ಕುರ್ಚಿ ಸಿಂಹಾಸನ, ಬಿರುದುಬಾವಲಿಗಾಗಿ ಹೋರಾಡುವ ಅನೇಕ ಮಠಾಧೀಶರಿಗೆ ಅವಶ್ಯವಿದೆ ಎನಿಸುತ್ತದೆ.

— ಚಂದ್ರಕಾಂತ ಪಾಟೀಲ, ಬೆಂಗಳೂರು

★ "ಕನ್ನಡವು ಏಕೈಕ ಪ್ರಥಮ ಭಾಷೆಯಾಗಬೇಕು" ಎಂದು ಒಂದು ಕಡೆ ಪ್ರಯತ್ನ ನಡೆಯುತ್ತಿದೆ. ಇನ್ನೊಂದು ಕಡೆ ಇಂಗ್ಲಿಷ್ ಶಾಲೆಗಳು ಸಂಖ್ಯೆಯಲ್ಲಿ ಬೆಳೆಯುತ್ತಲೇ ಇವೆ. ಇದೆಂತಹ ವಿಚಿತ್ರ!

* ನಮ್ಮ ದೇಶದಲ್ಲಿ ಎಲ್ಲವೂ ಒಂದು ವಿಚಿತ್ರವೆ! ಎಲ್ಲದರಲ್ಲಿಯೂ ಒಂದು ಸಮಸ್ಯೆ ಇದ್ದೇ ಇರುತ್ತದೆ. ಸಂಕೀರ್ಣವಾದ ಭಾಷೆ, ಸಂಸ್ಕೃತಿಯ ಪರಿಸರ ಇರುವ ಈ ದೇಶದಲ್ಲಿ ಒಂದು ಸಂಪರ್ಕಭಾಷೆ ಬೇಕೇಬೇಕು. ಆಂತರಿಕ ಭಿನ್ನಾಭಿಪ್ರಾಯ ಗಳಿಂದಾಗಿ ಹಿಂದಿಯನ್ನು ಅಂಥದೊಂದು ಸಂಪರ್ಕಭಾಷೆಯನ್ನಾಗಿ ಸ್ವೀಕರಿಸಲು ಬಹುಪಾಲು ಜನರು ಸಿದ್ಧರಿಲ್ಲ. ಹಿಂದುಗಳು ಪರಸ್ಪರ ಕಚ್ಚಾಡುತ್ತ ಮುಸ್ಲಿಂ ರಾಜರಿಗೆ, ಬ್ರಿಟಿಷ್ ವಸಾಹತುವಾದಿಗಳಿಗೆ ಅವಕಾಶ ಮಾಡಿಕೊಟ್ಟಂತೆ ಪರಸ್ಪರರ ಭಾಷೆ ಭಿನ್ನಾಭಿಪ್ರಾಯ ಇಂಗ್ಲಿಷ್ ಈ ದೇಶದಲ್ಲಿ ಭದ್ರವಾಗಿ ಬೇರೂರುವಂತೆ ಮಾಡಿದೆ. ಅಲ್ಲದೆ ತಮ್ಮ ಮಕ್ಕಳ ಭವಿಷ್ಯದ ಬಾಗಿಲು ವಿಸ್ತಾರವಾಗಿರಲೆಂದು ಬಯಸುವ ಮಕ್ಕಳ ತಾಯಿತಂದೆಯರು ಕನ್ನಡೇತರ ರಾಜ್ಯಗಳಲ್ಲಿಯೂ ಅವರಿಗೆ ಅವಕಾಶವನ್ನು ಒದಗಿಸಲು ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸಲು ಬಯಸುವುದು ತೀರಾ ಸಹಜವಾಗಿದೆ. ಸಾಗರೋತ್ತರ ಶಿಕ್ಷಣದ ಹುಚ್ಚು ಐ. ಎ. ಎಸ್. ಐ.ಪಿ.ಎಸ್.ಗಳ ಆಸೆ ಇಂಗ್ಲಿಷ್ ಮಾಧ್ಯಮಕ್ಕೆ ಪ್ರಚೋದಿಸುತ್ತಿದೆ. ಉದ್ಯೋಗಗಳ ಆಸೆ ಹೊತ್ತು ಪರಭಾಷಾ ಮಾಧ್ಯಮಕ್ಕೆ ಮನಸೋಲುತ್ತಿದ್ದಾರೆ ಜನ. ಇದಕ್ಕೆ ಸೂಕ್ತ ಪರಿಹಾರ ಕಂಡು ಹಿಡಿಯದೆ ಸಚಿವರು, ಸಚಿವಾಲಯದವರು ಮಂದಿಗೆ ಕನ್ನಡ ಕಲಿಯಲು ಬೋಧೆ ಮಾಡಿ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳಿಸುತ್ತಾರೆ. ಕನ್ನಡಕ್ಕೆ ಅಗ್ರಸ್ಥಾನ, ಪ್ರಥಮ ಗೌರವ ನೀಡಿ ಇಂಗ್ಲಿಷನ್ನು ಉಳಿಸಿಕೊಳ್ಳುವಂತೆ ಮಾಡಲು ಪರಿಹಾರ ಕಂಡುಹಿಡಿಯುವುದೊಂದೇ ಇಂದಿರುವ ಸಮಸ್ಯೆ!

— ಸುಭಾಷ್, ಆವರಾದ

★ ನೀವು ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರಿಸಿಲ್ಲ; ದುರುದ್ದೇಶದಿಂದಲೋ, ಅನಿವಾರ್ಯವಾಗಿಯೋ?

* ಪ್ರಶ್ನೆ ಕೇಳುವಾಗ ಉಪಯುಕ್ತ ವಿಷಯದ ಬಗ್ಗೆ ಕೇಳಬೇಕು. ಹುಡುಗ-ಹುಡುಗಿ, ಪ್ರೇಮ-ವಿರಸ ಇಂತಹ ವ್ಯಕ್ತಿಗತ ವಿಷಯಗಳ ಬಗ್ಗೆ ಕೇಳಿದಾಗ

ಉತ್ತರಿಸಿದರೆ ಇನ್ನಿತರರಿಗೆ ಏನು ಲಾಭ? ನಿಮ್ಮ ಪ್ರಶ್ನೆಗಳು ಬಹುಜನರಿಗೆ ಉಪಯೋಗವಾಗುವಂತಹ ಸಮಷ್ಟಿ ಪ್ರಶ್ನೆಗಳಾಗಬೇಕು; ಆಗ ಉತ್ತರ ಖಂಡಿತಾ!

— ಎಲಿ ಮರೆಯ ಕಾಯಿ, ಊರ ಹೆಸರು ಬೇಡ

★ ನಾನೋರ್ವ ನಿಸ್ವಾರ್ಥ ಸಮಾಜ ಸೇವಕ. ಕೀರ್ತಿಗಾಗಿಯೋ ಹಣಕ್ಕಾಗಿಯೋ ಕೆಲಸ ಮಾಡುವವನಲ್ಲ. ಒಂದು ಪೀತ ಪತ್ರಿಕೆಯು ಸತತವಾಗಿ ನನ್ನನ್ನು ನಿಂದಿಸುತ್ತಿದೆ. ಇದರಿಂದಾಗಿ ತ್ಯಾಗಕ್ಕೆ ಈ ಸಮಾಜದಲ್ಲಿ ಏನೂ ಬೆಲೆಯೇ ಇಲ್ಲವೆ ಎನ್ನಿಸಿ ಮನಸ್ಸು ಮುದುಡುತ್ತದೆ. ಈ ಸೇವಾಕಾರ್ಯದ ಉಸಾಬರಿಯನ್ನೇ ಬಿಟ್ಟು ಬಿಡೋಣವೇ ಎಂಬ ಭಾವನೆಬರುತ್ತದೆ. ನಿಮ್ಮ ಸಲಹೆ?

* ಹಣಕೊಟ್ಟು ಜಾಹಿರಾತು ಹಾಕಿಸಿಕೊಳ್ಳಬೇಕಾಗುವುದನ್ನು ತಪ್ಪಿಸಿ ಪುಕ್ಕಟ್ಟೆಯಾಗಿ ನಿಮ್ಮ ಪ್ರಚಾರಮಾಡುವ ಕೆಲಸ ಆ ಪೀತಪತ್ರಿಕೆ ತೆಗೆದುಕೊಂಡಿರುವಾಗ ನೀವೇಕೆ ಬೇಸರಿಸಬೇಕು. ನಿಮ್ಮ ಸೇವೆಯ ಬಗ್ಗೆ ತೀರ್ಪುಕೊಡುವ ನ್ಯಾಯಾಧೀಶರು ಇಬ್ಬರು: 1. ಶ್ರೀಸಾಮಾನ್ಯ. ಒಮ್ಮೊಮ್ಮೆ ಇವನು ತಪ್ಪು ತೀರ್ಪುಕೊಟ್ಟರೂ ಸರಿಯಾಗಿ ತೀರ್ಪುಕೊಡುವ ಇನ್ನೊಬ್ಬನು ಪರಮಾತ್ಮ. ಶ್ರೀಸಾಮಾನ್ಯರಿಗೆ ಉಪಕಾರವಾಗುವಂತೆ, ದೇವರು ಮೆಚ್ಚುವಂತೆ ಮುನ್ನಡೆಯಿರಿ. ನರಿ ಕೂಗಿದ ಮಾತ್ರಕ್ಕೆ ದೇವಲೋಕ ಹಾಳಾಗದು.

— ಹೆಸರು ಬೇಡ, ವಿಜಯಪುರ, ಬೆಂಗಳೂರು ಜಿಲ್ಲೆ

★ ಧಾರ್ಮಿಕ ಪತ್ರಿಕೆಗಳನ್ನು ಓದುವ ಹುಚ್ಚು ಬೆಳೆಸಿಕೊಂಡವರಲ್ಲಿ ನಾನೊಬ್ಬ. ಹೀಗಾಗಿ "ಕಲ್ಯಾಣ ಕಿರಣ", "ಮಾಮಿಡಿ" ಎರಡನ್ನೂ ಓದುತ್ತ ಬಂದಿರುವೆ. ಇತ್ತೀಚೆಗೆ ತಮ್ಮ ಮತ್ತು ಜ. ಚ. ನಿಯವರ ಪ್ರಶ್ನೋತ್ತರ ಪೂರ್ವಕ ಲೇಖನಗಳು ಎರಡೂ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ನಮ್ಮ ಬುದ್ಧಿಗೆ ಕವಿದಿದ್ದ ಮಂಕನ್ನು ದೂರಮಾಡಿವೆ. ತಪ್ಪು ಕಲ್ಪನೆ ದೂರಮಾಡಿ ನಿಜಚಿತ್ರ ಕೊಡುತ್ತಿವೆ. ಆದರೆ ಜ. ಚ. ನಿಯವರಂತಹ ಹಿರಿಯರು ಕೆಲವು ವ್ಯಂಗ್ಯೋಕ್ತಿ ಬಳಸುವುದು ಏಕೋ ಸರಿಕಾಣದು. "ಈ ಘಟಾಧೀಶರಿಗೆ ಮಾತ್ರ ತಿಳಿದಿದೆಯಂತೆ" ಎಂದು ನಿಮ್ಮನ್ನು ಕುರಿತು ಬರೆದುದು ನೋವನ್ನು ಉಂಟುಮಾಡಿತು.

* ನೋಯುವ ಅವಶ್ಯಕತೆ ಏನಿಲ್ಲ. "ಹೊಟ್ಟೆಯ ಗುಣ ನಾಲಿಗೆಯಲ್ಲಿ, ಬರೆಯುವವರ ಹೃದಯ ಲೇಖನಿಯಲ್ಲಿ" ಎಂಬುದನ್ನು ಅರಿತರೆ ಸಾಕು. ಈ ಜಗತ್ತಿನಲ್ಲಿ

ಪಿಲ್ಲರೂ ಘಟಾಧೀಶರೇ ! ಮಠಾಧೀಶರು ಆಗಿರಬಹುದು, ಇಲ್ಲದಿರಬಹುದು. ಆದರೆ ಮನುಜರೆಲ್ಲ ಘಟಾಧೀಶರೇ ! ಘಟ ಎಂದರೆ ದೇಹ; ಈಶತ್ವವೆಂದರೆ ಅದರ ಒಡೆತನ. ಘಟಾಧೀಶನಾಗುವುದೇ ಮಾನವ ಜೀವಿತದ ಸಾರ್ಥಕ ಗುರಿ ; ಮಠಾಧೀಶನ ಸ್ಥಾನಕ್ಕಿಂತಲೂ ಇದು ದೊಡ್ಡದು. ದೇಹ, ಮನ, ಇಂದ್ರಿಯ, ಕರಣಗಳಿಗೆ ಒಡೆಯನಾಗುವುದು ಆಧ್ಯಾತ್ಮದ ಚಿರಂತನ ಗುರಿ. ಆದ್ದರಿಂದ ಜ. ಚ. ನಿ. ವ್ಯಂಗ್ಯವಾಗಿ ಬರೆದಿದ್ದರೂ ಅದರಲ್ಲಿ ಒಂದು ಹೊಗಳಿಕೆ ಇರುವುದು ಕಾಣದೆ ? ಕಂಡು ಸಂತೋಷಪಡಿರಣ್ಣ !

9) ಕೇವಲ ರಾಜಕೀಯ ಅಥವಾ ಸಾಮಾಜಿಕ ಜೀವನದಿಂದಲೇ ನಾವು ಪರಿಪೂರ್ಣರಾಗಲಾರೆವು. ಧಾರ್ಮಿಕ ಜೀವನದಲ್ಲಿ ನಾವು ಆಸಕ್ತರಾದರೆ ಮಾತ್ರ ಸಾರ್ಥಕವಾಗಿ ಜೀವಿಸಬಲ್ಲೆವು. —ವಿವೇಕಾನಂದ

10) ಲಾಭಕ್ಕಿಂತಲೂ ಕರ್ತವ್ಯ ಮುಖ್ಯ. ಜಯಕ್ಕಿಂತಲೂ ಸಾಧನೆ ಮುಖ್ಯ. ಫಲಕ್ಕಿಂತಲೂ ಶ್ರಮಿಸುವುದು ಮುಖ್ಯ. ಮಾತಿಗಿಂತಲೂ ಕೃತಿ ಮುಖ್ಯ. —ವೇದ

11) ದುಷ್ಟರ ಸಂಗ ಮಾಡಲು ಬೇಡ, ಶ್ರೇಷ್ಟರ ಸಂಗ ಬಿಡಬೇಡಾ —ಪುರಂದರದಾಸ

12) ಗತಿಸಿಹೋದ ಕಾಲವನ್ನು ಅನುಭವಕ್ಕಾಗಿ ನೆನೆದುಕೊ. ಭವಿಷತ್ಕಾಲವನ್ನು ಮಾರ್ಗ ನಿರ್ಣಯಕ್ಕಾಗಿ ಚಿಂತಿಸು. —ಕನಪ್ಯೂಷಿಯಸ್

13) ಹಿಂದಿನ ತಪ್ಪು ಮುಂದಿನ ಯಶದ ನಾಂದಿಯಾಗಬಹುದು. ನಮ್ಮ ತಪ್ಪುಗಳಿಂದ ಹಾಗೂ ಅಪಯಶಸ್ಸಿನಿಂದ ನಾವು ಪಾಠ ಕಲಿಯಬೇಕು. —ಟ್ರೆರನ್ ಎಡ್ವರ್ಡ್

14) ವಿದೇಶಿ ಭಾಷೆಗಳನ್ನು ತಿಳಿಯದವನು ತನ್ನ ಭಾಷೆಯ ಬಗೆಗೂ ಅಜ್ಞಾನಿಯಾಗಿರುತ್ತಾನೆ. —ಗಯಟೆ

15) ಪ್ರಪಂಚದಲ್ಲಿ ಸಂಪತ್ತಿನಿಂದ, ವಿಜ್ಞಾನದಿಂದ ಶಾಂತಿ ಇಲ್ಲ. ನಿಜವಾದ ಶಾಂತಿ, ಅನುಭವದಿಂದಲೇ ದೊರೆಯುತ್ತದೆ. ಆದ್ದರಿಂದ ಅನುಭವಕ್ಕಾಗಿ ಹೋರಾಡಿರಿ. —ವಿನೋಬಾ

16) ದೇವರನ್ನು ಪ್ರೀತಿಸುವವರು ಎಲ್ಲರನ್ನೂ ಪ್ರೀತಿಸುತ್ತಾರೆ. —ಗುರುನಾನಕ

ಶರಣರ ಬರವೆನಗೆ ಪ್ರಾಣಜೀವಾಳವಯ್ಯ

—ಮಾತಾಜಿ

ಪೂಜ್ಯ ಶ್ರೀ ಮೂರುಸಾವಿರ ಜಗದ್ಗುರುಗಳವರ ಬಸವಗಂಗೋತ್ರಿ ಸಂದರ್ಶನ

ಅಂದು 8-9-1981. ದಿನ ನಿತ್ಯದ ಬಿಡುವಿಲ್ಲದ ಕಾರ್ಯಕ್ರಮದಲ್ಲಿರುವಾಗಲೇ ದೂರವಾಣಿಯ ಕರೆ ಮೊಳಗಿತು. ಕಾರ್ಯಾಲಯದ ಕಾರ್ಯಕರ್ತರು ದೂರವಾಣಿಯ ಕರೆ ಸ್ವೀಕರಿಸಿ, ನನ್ನನ್ನು ಸಂಪರ್ಕಿಸಿದರು. ಹುಬ್ಬಳ್ಳಿಯ ಪೂಜ್ಯ ಮೂರುಸಾವಿರ ಮಠಾಧೀಶ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳವರು ಬೆಂಗಳೂರಿಗೆ ಬಂದಿದ್ದಾರೆ. ಮಾತನಾಡಲು ಇಚ್ಛಿಸುತ್ತಾರೆ. ತುಂಬಾ ಸಂತೋಷವಾಯಿತು. ಪೂಜ್ಯ ಶ್ರೀಗಳೊಡನೆ ಮಾತನಾಡಿದಾಗ ಹಿಡಿಸಲಾರದ ಆನಂದವಾಯಿತು. ಬೇರೊಂದು ಕಾರ್ಯಕ್ರಮಕ್ಕಾಗಿ ಬಂದಿದ್ದ ಶ್ರೀಗಳು ಅಷ್ಟು ಸರಳ ಹೃದಯದಿಂದ ದೂರವಾಣಿಯಲ್ಲಿ ಮಾತನಾಡಿದುದು ಆನಂದದ ಅಲೆಗಳನ್ನೇ ಎಬ್ಬಿಸಿತ್ತು.

"ತಾವು ಬಹಳ ದಿಟ್ಟತನದಿಂದ ಮುನ್ನಡೆಯುತ್ತಿದ್ದೀರಿ. ಅದಮ್ಯ ಉತ್ಸಾಹದಿಂದ ಎಷ್ಟೆಲ್ಲ (ಎಡರು-ತೊಡರು ದಾಂಟಿ, ಟೀಕೆ ಟಿಪ್ಪಣಿ ಎದುರಿಸಿ) ಅಗಾಧವಾದ ಕಾರ್ಯ ಮಾಡಿದ್ದೀರಿ. ಕಂಡು ನಮಗಂತೂ ತೀರಾ ಸಂತಸವಾಗಿದೆ" ಎಂದರು. "ಅದೆಲ್ಲ ಪರಮಾತ್ಮನ ಅನುಗ್ರಹ ಸ್ವಾಮೀಜಿ. ಮಾಡಬೇಕೆಂದರೆ ನಾವಾರು? ಮಹಾಗುರು ಬಸವಣ್ಣ ಏನೇನು ಮಾಡಿಸಬೇಕೆಂದು ಆಶಿಸುತ್ತಾನೋ ಅದನ್ನು ಮಾಡುವುದಷ್ಟೇ ನಮ್ಮ ಕರ್ತವ್ಯ" ಎಂದು ಹೇಳಿ ಪೂಜ್ಯ ಶ್ರೀಗಳನ್ನು ಆಶ್ರಮಕ್ಕೆ ಆಮಂತ್ರಿಸಿದೆವು. "ಲಿಂಗಾನಂದ ಸ್ವಾಮೀಜಿಯವರೆಲ್ಲಿ ?" ಎಂದರು. "ಗುರೂಜಿಯವರು ಕಾಯಕಯೋಗಿಗಳು—ಕೃಷಿಕರೂ ಆಗಿ ಬಸವ ಗಂಗೋತ್ರಿಯಲ್ಲಿದ್ದಾರೆ" ಎಂದು ಹೇಳಿದೆ. "ಬಸವ ಮಂಟಪದಿಂದ ಬಸವ ಗಂಗೋತ್ರಿಗೂ ತಾವು ದಯಮಾಡಿಸಬೇಕು" ಎಂದು ಆಮಂತ್ರಿಸಿದಾಗ ಒಪ್ಪಿ, ಮಧ್ಯಾಹ್ನ ಆಗಮಿಸಿದರು.

ಆಶ್ರಮವಾಸಿಗಳು ಪೂಜ್ಯರಿಗೆ ಪಾದಕ್ಕೆ ನೀರೆರೆದು, ಮಾಲಾರ್ಪಣೆ ಮಾಡಿ ಒಳಕ್ಕೆ ಬರಮಾಡಿಕೊಂಡರು. ಬಸವ ಮಂಟಪದ ಪ್ರಾರ್ಥನಾ ಮಂದಿರ ಕಂಡು ಹರ್ಷಿಸಿದ ಸ್ವಾಮೀಜಿ, ವಿಶ್ವಕಲ್ಯಾಣ ಮಿಷನ್‌ನ ಸಾಹಿತ್ಯ ಪ್ರಕಟಣೆಗಳನ್ನು ನೋಡಿದರು. ಅಲ್ಲಿಂದ ಬಸವ ಗಂಗೋತ್ರಿಗೆ ಹೋದಾಗ ಮುಖ್ಯೋಪಾಧ್ಯಾಯರು ಮತ್ತು ವಿದ್ಯಾರ್ಥಿ ವೃಂದವು ಸಮವಸ್ತ್ರ ಧರಿಸಿ ಗೌರವಾರ್ಪಣೆ ಮಾಡಿ, ಪೂಜ್ಯ ಶ್ರೀಗಳಿಗೆ ಮಾಲಾರ್ಪಣೆಮಾಡಿ ಸ್ವಾಗತಿಸಿತು. ಅವರೊಡನೆ ಶ್ರೀ ನಿಜಗುಣ ಸ್ವಾಮಿಗಳು ಮತ್ತು ಕೆಳದಿಯ ಶ್ರೀ ಗುರುಸಿದ್ಧದೇವರು ಸ್ವಾಮೀಜಿಯವರೂ ಆಗಮಿಸಿದ್ದರು.

ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರೂ ಪುಳಕಿತ ಹೃದಯರಾಗಿ ಸ್ವಾಮೀಜಿಯವರನ್ನು ಬರಮಾಡಿಕೊಂಡು, ಬಸವ ಗಂಗೋತ್ರಿಯ ಮುಗಿಲುಮುಟ್ಟುವ ನೀಲಗಿರಿ ವೃಕ್ಷಗಳು, ಹಸಿರು ಚೆಲ್ಲುತ್ತಾ ಹರಡಿರುವ ತೆಂಗಿನ ಗರಿಗಳು ಚಾಮರ ಬೀಸಿದವು. ಬಸವ ಗಂಗೋತ್ರಿಯ ಆವರಣವನ್ನು ನೋಡಿ ಸ್ವಾಮೀಜಿ ತುಂಬಾ ಸಂತೋಷಭರಿತರಾದರು. ನೀವು ಕೈಗೊಂಡು ನಡೆಸುವ ಕಾರ್ಯಕ್ಕೆ ಮನಸೋತು ಬಸವಣ್ಣನು ಇಂಥದೊಂದು ಜಾಗವನ್ನು ಕೊಟ್ಟಿರಬೇಕು ; ಬೆಂಗಳೂರಿಗೆ ಹತ್ತಿರವಿದ್ದೂ, ನಗರದ ಕಲುಷಿತ ವಾತಾವರಣದಿಂದ ದೂರವಿರುವ ಈ ತಾಣ ನೆಮ್ಮದಿಯ ನೆಲೆ. ಇದಕ್ಕೆ ಜೀವತುಂಬಿ ಹರಿಯುತ್ತಿದೆ "ಬಸವ ಗಂಗಾ"ವಾಹಿನಿ. ಹಿಂದಿನ ಮಾಲಿಕ ಅಶೋಕ್‌ಕುಮಾರ್ ನಿಜಕ್ಕೂ ಪುಣ್ಯಾತ್ಮರು. ತಮ್ಮ ಪರಿಶ್ರಮದ ಗಳಿಕೆಯನ್ನು ನಿಮಗೆ ಕೊಡುವುದರ ಮೂಲಕ ಸಾರ್ಥಕ ಗಳಿಸಿಕೊಂಡರು. ನೀವು ಕೊಟ್ಟಿರುವ ಬೆಲೆ ಏನೂ ಇಲ್ಲ ಎಂದು ಉದ್ಗರಿಸಿದರು. ಜುಳುಜುಳು ಹರಿವ ವಾಹಿನಿ ಮಂಗಳಗೀತೆ ಹಾಡಿದಳು. ಹೇಮರೆಡ್ಡಿ ಮಲ್ಲಮ್ಮ ಗೋಶಾಲೆಯ ಜಗನ್ಮಾತೆ, ಜಯಶ್ರೀ, ಶಿವಾಂಬಿಕೆ(ಹೆಣ್ಣು ಕರುಗಳು) ಕುಣಿದಾಡಿ ಹರ್ಷವನ್ನು ವ್ಯಕ್ತಪಡಿಸಿದವು. ಗೌರವಿಸಿ ಕರೆತಂದ ಬಾಲಕರು "ಹೂವಿನ ಆಟ" (Flower dril) ವನ್ನು ಚೆನ್ನಾಗಿ ಪ್ರದರ್ಶಿಸಿದರು. ಶಾಲೆ, ಪ್ರಸಾದನಿಲಯ, ವಸತಿಗೃಹ ಎಲ್ಲವನ್ನೂ ಕಂಡು ಆನಂದಿಸಿದ ಸ್ವಾಮೀಜಿಯವರೊಡನೆ ಬಸವಗಂಗಾ ವಾಹಿನಿಯಲ್ಲಿ ದೋಣಿಯಲ್ಲಿ ಕುಳಿತು ಸುತ್ತಾಡಿ ಬಂದೆವು. ಕಟ್ಟಿದ ಸೇತುವೆಯ ಬಳಿ ಮಡುಗಟ್ಟಿ ನಿಂತನೀರು, ಅದರ ಇಕ್ಕೆಲಗಳಲ್ಲೂ ಬೆಳೆದ ಹಸಿರುವೃಕ್ಷಗಳ ದಟ್ಟನೆರಳು ಸ್ವರ್ಗೀಯ ದೃಶ್ಯವೊಂದನ್ನು ಕಣ್ಣಿಗೆ ಕಟ್ಟುತ್ತವೆ. ಪ್ರಸಾದ ನಿಲಯದಲ್ಲಿದ್ದ ಬಸವಣ್ಣನವರ ಭಾವಚಿತ್ರದ ಮುಂದೆ ಸಾಮೂಹಿಕವಾಗಿ ಮಂಗಳಾರತಿ ಮಾಡಿದೆವು.

ತಮ್ಮ ಆಗಮನದಿಂದ ಎಲ್ಲರನ್ನೂ ಹರ್ಷಗೊಳಿಸಿದರು ಸ್ವಾಮೀಜಿ. ಹೃದಯದ ಅಂತರಾಳದಿಂದ ನಾವು ಮಾಡಿದ ಅಲ್ಪ ಕಾರ್ಯವನ್ನೇ ಮಹದಾಗಿ ಹೊಗಳಿದರು.

ಅವರು ಮಾಡಿರುವ ಕಾರ್ಯ, ಕಟ್ಟಿರುವ ಬೃಹತ್ ಸಂಸ್ಥೆಗಳ ಚಟುವಟಿಕೆ ಮುಂದೆ ನಮ್ಮ ಕಾರ್ಯಚಟುವಟಿಕೆ ಏನೂ ಅಲ್ಲ. (ಸದ್ಯ ಇಷ್ಟೇ ಸಾಕು. ಈ ಲೌಕಿಕ, ವ್ಯವಹಾರಿಕ, ಲೋಕ ಸಂಗ್ರಹದ ಕೆಲಸಗಳಿಂದ ನಾಲ್ಕು ಜನ ಪರರಿಗೆ ಉಪಕಾರವಾದರೂ ನಮ್ಮ ಮನಶ್ಶಾಂತಿ ಉಳಿಯುವುದೇ ಕಷ್ಟ. ಆಧ್ಯಾತ್ಮ ಸಾಧನೆಗೆ, ಸಾಹಿತ್ಯ ರಚನೆಗಂತೂ ಸ್ವಲ್ಪವೂ ಸಮಯ ಉಳಿಯದಾಗ ತುಂಬಾ ಖೇದವೆನಿಸುತ್ತದೆ.) ಆದರೂ ಸಣ್ಣದನ್ನೇ ದೊಡ್ಡದನ್ನಾಗಿ ಹೊಗಳುವ ಔದಾರ್ಯ ಇರಬಹುದು. ಓರ್ವ ಸಿರಿವಂತನ ಮಗ ಅಪ್ಪ ಮಾಡಿಟ್ಟ ಆಸ್ತಿಯ ಬಲದ ಮೇಲೆ ತಾನೂ ವಿದ್ಯೆಯುಗಳಿಕೆ ವ್ಯಾಪಾರ - ವಾಣಿಜ್ಯ ಮುಂದುವರಿಸುವನು. ಇನ್ನೊಬ್ಬ ಏನೂ ಇಲ್ಲದ ಬರಿಗೈಯಿಂದ ಮುಂದುವರಿದು ಸಾಧಿಸುವನು. ಅವನ ಸಾಧನೆ ಸ್ವಯಂ ಪರಿಶ್ರಮದ ಸಾಧನೆ ; ಅದರಲ್ಲೇ ಹಿರಿಮೆ. ಆ ದೃಷ್ಟಿಯಿಂದ ಬಸವಣ್ಣನ ಭದ್ರ ಕೃಪೆಯ ಬಲದಿಂದ ನಾವು ಮಾಡಿರುವುದು ಪೂಜ್ಯ ಶ್ರೀಗಳನ್ನು ಹರ್ಷಪಡಿಸಿರಲೂ ಸಾಕು.

ಭಾರ ಹೊತ್ತುದಾರಿ ನಡೆಯುತ್ತಾ ಸಾಗುವವನ ಕೈಸೋತಾಗ,ಭಾರ ಹೊರದಿದ್ದರೂ ಹೆಗಲಾಸರೆ ಕೊಟ್ಟು ಸುಧಾರಿಸಿಕೊಳ್ಳಲು ಅಣಿ ಮಾಡಿಕೊಟ್ಟರೆ, "ನಡೆಯಪ್ಪಾ, ಇನ್ನೇನೂ ದೂರವಿಲ್ಲ ; ನೀನು ಹೊತ್ತ ಹೊರೆ ನಿಜಕ್ಕೂ ಪ್ರಯೋಜನಕಾರಿ" ಎಂಬೆರಡು ಆಶ್ವಾಸನೆಯ ಮಾತನಾಡಿದರೆ ಇದೆಷ್ಟೊ ಉಪಕಾರದ ಕಾರ್ಯ ; ಸ್ಫೂರ್ತಿ ನೀಡುವ ವಾಣಿ. ಅದೇ ರೀತಿ ಶ್ರೀಗಳ ಬರವು ಸ್ಫೂರ್ತಿದಾಯಕವಾಗಿತ್ತು. "ಉದಕದ ಬರವು ವಿಶ್ವಕ್ಕೆ ಹೊಸ ರೂಪ ನೀಡುವಂತೆ," "ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ, ಬರಲುಗೊಂಡ ಸಸಿ ಮಳೆ ಸುರಿದಂತೆ" ನಮ್ಮೆಲ್ಲರಿಗೂ ಸ್ಫೂರ್ತಿ, ಉತ್ಸಾಹ ತುಂಬಿ ಹೋದರು ಪೂಜ್ಯ ಜಗದ್ಗುರುಗಳು. "ನಿಜಕ್ಕೂ ನೀವು ಧೈರ್ಯಶಾಲಿಗಳು, ಧೀರಯೋಗಿಗಳು. ಇಟ್ಟ ಹೆಜ್ಜೆ ಹಿಂತೆಗೆಯದೆ ಕೈಗೊಂಡ ಗುರಿಯತ್ತ ನಿರಂತರವಾಗಿ ಮುಂದೆ ಸಾಗುತ್ತಿದ್ದೀರಿ". ಎಂದು ಸದ್ಗುರು ಲಿಂಗಾನಂದ ಸ್ವಾಮಿಗಳನ್ನು ಮನತುಂಬಿ ಹೊಗಳಿದರು.

ಶ್ರೀಗಳ ಬರವು, ಮಾತು, ಒಡನಾಟ, ಸಹೃದಯತೆ ಚಿತ್ತ ಸರೋವರದಲ್ಲಿ ಅರಳಿರುವ ತಾವರೆಗಳಂತಿವೆ; ಇವು ಬಾಡುವ ಹೂವಲ್ಲ, ನೆನಪಿನ ಅಂಗಳದಲ್ಲಿ ಎಂದೆಂದೂ ಉಳಿವ ಮಿನುಗುತಾರೆಗಳು.

ಒಂದು ಮನವಿ

ಮಾನ್ಯ ಶರಣರಲ್ಲಿ

ವಿಜ್ಞಾಪನೆಗಳು. ಪರಮ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಎಲ್ಲರಿಗೂ ಚಿರಪರಿಚಿತರು; ನಾಡಿನಾದ್ಯಂತ ಅಭಿಮಾನಿಗಳ ಸದ್ಭಕ್ತರ ಬಳಗ ಹೊಂದಿದ ವಿಶ್ವಕುಟುಂಬಿಗಳು. ಪ್ರವಚನ ಪಿತಾಮಹರಾಗಿ ಪ್ರವಚನದ ವಿಶೇಷ ಕಲೆಯೊಂದನ್ನು ರೂಢಿಗೆ ತಂದುದೇ ಅಲ್ಲದೆ ಅನೇಕ ಪ್ರವಚನಕಾರರನ್ನು ತರಬೇತಿಗೊಳಿಸಿದವರು. ನಡೆವ ಕನ್ನಡ ಗ್ರಂಥಾಲಯವಾಗಿ, ನುಡಿವ ವಿಶ್ವವಿದ್ಯಾಲಯವಾಗಿ ನಾಡಿನಾದ್ಯಂತ ಸಂಚರಿಸಿ, ಅಪಾರ ಜನ ಜಾಗೃತಿ ಮಾಡಿದ ಜ್ಞಾನಯೋಗಿಗಳು. ಬಸವಣ್ಣನವರ ಕ್ರಾಂತಿಕಾರಿ ಮಾತುಗಳು ಅಷ್ಟಾಗಿ ಪ್ರಚಾರ ಹೊಂದಿರದ ಕಾಲದಲ್ಲಿ, ವಿಕೃತವಾದ ಅರ್ಥ ಮಾಡಲ್ಪಟ್ಟು ದುರುಪಯೋಗವಾಗುತ್ತಿದ್ದ ಸಂದಿಗ್ಧ ಸಮಯದಲ್ಲಿ ಬದ್ಧಕಂಕಣರಾಗಿ ನಿಂತು, ಪ್ರಚಾರಕಾರ್ಯ ಕೈಗೊಂಡ ಕ್ರಾಂತಿಯೋಗಿಗಳು. ವಿಶ್ವಕಲ್ಯಾಣಮಿಷನ್ ಸಂಸ್ಥೆ, ಬಸವ ಭಾರತಿ ರೆಸಿಡೆನ್ಷಿಯಲ್ ಶಾಲೆ, ಕಲ್ಯಾಣ ಕಿರಣ ಮಾಸ ಪತ್ರಿಕೆ, ಸುಯಿಧಾನ ಸುಗ್ರಂಥ ಮಾಲೆ, ಬಸವ ಗಂಗೋತ್ರಿ ಶ್ರೀಗಳ ಸಂಕಲ್ಪಶಕ್ತಿಯ ಫಲ.

ಇಂತಹ ಪೂಜ್ಯ ಶ್ರೀಗಳಿಗೆ 50 ವರ್ಷ ತುಂಬಿವೆ. ಈ ಸಂದರ್ಭದಲ್ಲಿ ನಾಡಿನಾದ್ಯಂತವಿರುವ ಅವರ ಶಿಷ್ಯರ, ಸದ್ಭಕ್ತರ, ಅಭಿಮಾನಿಗಳ ಬಳಗವು ಗೌರವಾರ್ಪಣೆ ಮಾಡಲು ಉದ್ದೇಶಿಸಿದ್ದು ಒಂದು ಸಂಭಾವನಾ ಗ್ರಂಥವನ್ನು ಮತ್ತು ಒಂದು ಸಂಸ್ಮರಣ ಸಂಚಿಕೆಯನ್ನು ಹೊರತರಲು ಸಂಕಲ್ಪಿಸಿದೆ. ಸಂಸ್ಮರಣ ಸಂಚಿಕೆ ಪೂಜ್ಯ ಶ್ರೀಗಳ ಜೀವನ ಪರಿಚಯ, ಕೃತಿ ಪರಿಚಯ, ಸಾಧನೆಗಳ ಸಮಗ್ರ ಚಿತ್ರಣ ಮಾಡುತ್ತಿದ್ದರೆ ಸಂಭಾವನಾ ಗ್ರಂಥ ಶ್ರೀಗಳ ಪರಿಚಯದೊಡನೆ ವಚನ ವಾಙ್ಮಯ, ಜಗತ್ತಿನ ಎಲ್ಲ ಧರ್ಮ ಮತ್ತು ದರ್ಶನಶಾಸ್ತ್ರಗಳ ಪರಿಚಯ ಮಾಡಲಿದೆ. ಧಾರ್ಮಿಕ ರಂಗದ ಉದ್ದಾಮ ಕೃತಿಯಾಗಿ ಹೊರಬರಲಿದೆ ಈ ಕೃತಿ.

ಕರ್ನಾಟಕದ ಒಂದು ದೊಡ್ಡ ನಗರದಲ್ಲಿ ಅಭಿನಂದನ ಸಮಾರಂಭ ನಡೆಯುವುದು. ಇಂತಹ ಮಹಾತ್ಕಾರ್ಯಕ್ಕೆ ಜಾಹಿರಾತು ಮತ್ತು ಕಾಣಿಕೆ ರೂಪದಲ್ಲಿ ಅಗಾಧವಾದ ಆರ್ಥಿಕ ನೆರವು ಬೇಕಾಗುವುದು. ಗ್ರಂಥ ಪ್ರಕಟಣೆಯ ವೆಚ್ಚವನ್ನು ಪೂರೈಸಿ ಉಳಿದ ಹಣವನ್ನು ಒಂದು ನಿಸರ್ಗ ಚಿಕಿತ್ಸಾಧಾಮ (Nature Cure Hospital) ಅಥವಾ ವೈದ್ಯಕೀಯ ಕೇಂದ್ರ (Medical Centre) ವನ್ನು ತೆರೆಯಲು ಬಳಸಲಾಗುವುದು. ಆದ್ದರಿಂದ ಎಲ್ಲರೂ ಸಹೃದಯತೆಯಿಂದ ಧನಸಹಾಯ ನೀಡಲು ನೆರವಾಗುವಿರೆಂದು ಆಶಿಸುತ್ತೇವೆ.

ಶ್ರೀಮತಿ ಬಸವರಾಜೇಶ್ವರಿ
(ಗೌರವಾಧ್ಯಕ್ಷೆ,)
ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ
ಅಭಿನಂದನ ಸಮಿತಿ, ಬೆಂಗಳೂರು.

"ಸುಯಿಧಾನಿ" ಸ್ಮರಣ ಸಂಚಿಕೆಯ

ಜಾ ಹಿ ರಾ ತು ವಿ ವ ರ

ಸಂಸ್ಮರಣ ಸಂಚಿಕೆಯ ರಕ್ಷಾಕವಚ
(ಎರಡು ಬಣ್ಣಗಳಲ್ಲಿ)

4ನೆಯ ಪುಟ	3000 ರೂ
2ನೆಯ ಮತ್ತು 3ನೆಯ ಪುಟ	2000 ರೂ

ವಿಶೇಷವಾಗಿ ಕಾಯ್ದಿರಿಸಿದ ಪುಟಗಳು :

ಎರಡು ಬಣ್ಣಗಳಲ್ಲಿ ಪೂರ್ಣಪುಟ	1500 ರೂ
ಒಂದು ಬಣ್ಣದಲ್ಲಿ ಪೂರ್ಣಪುಟ	1000 ರೂ

ಒಳಪುಟಗಳು :

ಒಂದು ಪೂರ್ಣಪುಟ	500 ರೂ
ಅರ್ಧಪುಟ	300 ರೂ

ವಿ.ಸೂ : — ಅರ್ಧಪುಟಕ್ಕಿಂತ ಕಡಿಮೆಯಾದ ಜಾಹಿರಾತನ್ನು ಸ್ವೀಕರಿಸುವುದಿಲ್ಲ.

ಉಳಿದ ವಿವರ

ಪೂರ್ಣಪುಟ : 19 ಸೆಂ. ಮೀ. × 14 ಸೆಂ. ಮೀ.

ಅರ್ಧಪುಟ : 14 ಸೆಂ. ಮೀ. × 9 ಸೆಂ. ಮೀ.

ಸ್ಕ್ರೀನ್ : ಹಾಫ್‌ಟೋನ್ 80ಕ್ಕೆ ಮೀರದಂತೆ.

* * *

* ಜಾಹಿರಾತುಗಳ ಪೂರ್ಣ ವಿವರಗಳು, ಪೂರ್ಣ ಮೊತ್ತದೊಡನೆ 15-12-1981ಕ್ಕೆ ಮುಂಚೆ ಕೈಸೇರುವಂತಾಗಬೇಕು. ಬ್ಯಾಂಕ್ ಡ್ರಾಫ್ಟ್ ಮತ್ತು ಚೆಕ್‌ಗಳನ್ನು Sri Lingananda Swamiji Felicitation Committee ಹೆಸರಿನಲ್ಲಿ ಬರೆಸಬೇಕು.

* ಪೂಜ್ಯ ಗುರೂಜಿಯವರ ಅಭಿನಂದನ ಕಾರ್ಯಕ್ರಮ, ಸಂಭಾವನಾ ಗ್ರಂಥ ಮುದ್ರಣ, ಸಂಸ್ಮರಣ ಸಂಚಿಕೆಯ ಮುದ್ರಣಕ್ಕೆ ಜಾಹಿರಾತಿನ ರೂಪದಲ್ಲಿ ಅಥವಾ ಕಾಣಿಕೆಯ ರೂಪದಲ್ಲಿ ಹಣ ಕಳಿಸಬಹುದು. ಗ್ರಂಥಪ್ರಕಟಣೆಯ ನಂತರ ಮಿಕ್ಕ ಹಣವನ್ನು ಅವರ ಹೆಸರಿನಲ್ಲಿ ವಿಶೇಷವಾದ ಕಾರ್ಯಮಾಡಲು ಯೋಜಿಸಲಾಗುವುದು.

* ಕಾಣಿಕೆಗಳನ್ನು ಬ್ಯಾಂಕಿನ M. T. ಮುಖಾಂತರವೂ ಕಳಿಸಬಹುದು.

Sri Lingananda Swamiji Felicitation Committee
S. B. A/c No. 5776.
Canara Bank, 1st Block, Rajajinagar
BANGALORE - 560 010.

ಎಂ. ಟಿ. ಮುಖಾಂತರ ಕಳಿಸಿದವರು ದಿನಾಂಕ, ವಿವರ, ವಿಳಾಸ, ಮೊತ್ತ – ಇವುಗಳ ಬಗ್ಗೆ ಬರೆದು ತಿಳಿಸಬೇಕಾಗಿ ವಿನಂತಿ.

ದಾನಿಗಳಿಗೆ ಅವಕಾಶ

1. ತಮ್ಮ ಯಥಾಶಕ್ತಿಗನುಸರಿಸಿ ಜನರು ಕಾಣಿಕೆಗಳನ್ನು ಕಳಿಸಬಹುದು. ಕಳಿಸುವವರು ಹಣದೊಡನೆ ತಮ್ಮ ಪೂರ್ಣವಿಳಾಸ ಮತ್ತು ವಿವರ ಕಳಿಸಬೇಕು.
2. ಚೆಕ್, ಬ್ಯಾಂಕ್ ಡ್ರಾಫ್ಟ್, ನಗದು, ಎಂ. ಓ. —ಈ ಯಾವ ಮುಖಾಂತರವಾದರೂ ಕಾಣಿಕೆ ಕಳಿಸಬಹುದು. ''His Holiness Sadguru Lingananda Swamiji Felicitation Committee'' ಹೆಸರಿಗೆ ಬರೆಸಬೇಕು.
3. ದಾನಿಗಳಿಗೆಲ್ಲ ಅಭಿನಂದನ ಸಮಾರಂಭದ ಆಹ್ವಾನಪತ್ರ ಕಳಿಸಲಾಗುವುದು.
4. 501 ರೂಗಳ ಕಾಣಿಕೆ ಸಲ್ಲಿಸುವವರಿಗೆ ಸ್ಮರಣ ಸಂಚಿಕೆಯ ಒಂದು ಉಚಿತಪ್ರತಿ ಕೊಡಲಾಗುವುದು.
5. 1001 ರೂಗಳ ಮತ್ತು ಅದಕ್ಕೂ ಹೆಚ್ಚಿನ ಕಾಣಿಕೆ ಸಲ್ಲಿಸಿದವರಿಗೆ ಒಂದು ಸಂಭಾವನಾ ಗ್ರಂಥ ಮತ್ತು ಒಂದು ಸ್ಮರಣ ಸಂಚಿಕೆಯನ್ನು ಉಚಿತವಾಗಿ ಕೊಡಲಾಗುವುದು.

ದೇವರ ಕೃಪೆ ಪಡೆಯಲು ಕಾಡಿಗೆ ಹೋಗಿ ತಪಸ್ಸು ಮಾಡಬೇಕಾಗಿಲ್ಲ. ಊಟ ಬಿಟ್ಟು ಉಪವಾಸ ಮಾಡಿ ಸೊರಗ ಬೇಕಾಗಿಲ್ಲ. ಯಜ್ಞಯಾಗಾದಿಗಳನ್ನು ಮಾಡಿ ಬೆಂಕಿಯ ಮುಂದೆ ಮೈಸುಟ್ಟುಕೊಳ್ಳಬೇಕಾಗಿಲ್ಲ. ದೇವರ ನಾಮ ಸ್ಮರಣೆಯೊಂದೆ ಸಾಕು ದೇವರನ್ನೊಲಿಸಿಕೊಳ್ಳುವುದಕ್ಕೆ

—ಕಬೀರದಾಸ

ಭಕ್ತಿಯಿಂದ ದೇವರನ್ನು, ವಿದ್ಯೆಯಿಂದ ರಾಜನನ್ನು, ಹಣದಿಂದ ಸ್ತ್ರೀಯನ್ನು, ಮೋಸದಿಂದ ಹಗೆಯನ್ನು, ನಿಜದಿಂದ ಗೆಳೆಯನನ್ನು ದಯೆಯಿಂದ ಮಕ್ಕಳನ್ನು ಪ್ರೀತಿಯಿಂದ ಪ್ರಾಣಿಗಳನ್ನು, ಜ್ಞಾನದಿಂದ ಮೋಕ್ಷವನ್ನು ವಶಪಡಿಸಿಕೊಳ್ಳಬಹುದು.

—ಕನಕದಾಸ

ಸ್ವಾಗತ ಸಮಿತಿ

ಕಾರ್ಯಾಧ್ಯಕ್ಷೆ:	**ಗೌರವಾಧ್ಯಕ್ಷೆ:**
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ	ಶ್ರೀಮತಿ ಬಸವರಾಜೇಶ್ವರಿ
ಕೋಶಾಧಿಕಾರಿ :	**ಕಾರ್ಯದರ್ಶಿ :**
ಪೂಜ್ಯ ಮಾತೆ ಗಂಗಾದೇವಿ	ಎನ್. ಪುಟ್ಟರುದ್ರ
ಸಂಭಾವನಾ ಗ್ರಂಥ ಸಂಪಾದಕರು :	**ಸ್ಮರಣ ಸಂಚಿಕೆಯ ಸಂಪಾದಕರು :**
ಡಾ॥ ಸಾ. ಶಿ. ಮರುಳಯ್ಯ	ಟಿ. ಆರ್. ಮಹಾದೇವಯ್ಯ

ಸದಸ್ಯರು :

ಶರಣರುಗಳಾದ,

ಐ. ಎಂ. ಮಗದುಮ್; ಬೆಂಗಳೂರು	ಎಂ. ಎಂ. ಬಸವೇಗೌಡರು, ಚಿಕ್ಕಮಗಳೂರು
ಜಿ. ಎಂ. ಹಾಲಪ್ಪ, ದಾವಣಗೆರೆ	ಎಚ್. ಗಂಗಾಧರನ್, ಮೈಸೂರು
ಕೆ. ಎಂ. ನಂಜಪ್ಪ, ಬೆಂಗಳೂರು	ಬಿ. ಎಸ್. ನರೇಗಲ್, ಧಾರವಾಡ
ಬಿ. ಎಂ. ಶಾಂತಮೂರ್ತಿ, ಬೆಂಗಳೂರು	ಜಗದಾಂಬಾ ವಿಶ್ವೇಶ್ವರಯ್ಯ, ತುಮಕೂರು
ಆರ್. ಎಸ್. ಕಲ್ಯಾಣಶೆಟ್ಟರು ,,	ಕೆ. ಎಂ. ಕೊಟ್ರಯ್ಯ, ಹೊಸಪೇಟೆ
ಉಮಾದೇವಿ ಡಿ. ಎಂ. ಚಂದ್ರಶೇಖರ್	ಎನ್. ಎಚ್. ಚನ್ನವೀರಪ್ಪ, ಶಿವಮೊಗ್ಗ
ಎಸ್. ಚಂದ್ರಶೇಖರಪ್ಪ ,,	ಎಂ. ಸಿ. ರಾಜ್, ಮಂಗಳೂರು
ಟಿ. ಎಸ್. ಕರಿಬಸಯ್ಯ ,,	ಭೀಮಣ್ಣ ಖಂಡ್ರೆ, ಭಾಲ್ಕಿ
ರುದ್ರಶೆಟ್ಟಿ ಪಾಟೀಲ್, ಮಹಾಗಾಂವ	ಪರ್ವತಪ್ಪ ಕೋರ್‌ವಾರ್, ಹೈದರಾಬಾದ್

"ಸುಯಿಧಾನಿ" ಸಂಸ್ಮರಣ ಸಂಚಿಕೆ

ಆತ್ಮೀಯರಾದ ಶರಣ ಬಳಗವೇ,

ಪರಮಪೂಜ್ಯ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ವಿಶ್ವ ಕಲ್ಯಾಣ ಮಿಷನ್‌ದ ಸಚೇತಕಶಕ್ತಿ ಮಾತ್ರವಲ್ಲ, ಲಕ್ಷೋಪಲಕ್ಷ ಜನರಿಗೆ ಜ್ಞಾನಗಂಗೆಯನ್ನು ಧಾರೆ ಎರೆದ ಭಗೀರಥ. ದೇವಲೋಕದಲ್ಲಿ ಅಡಗಿದ್ದ ಗಂಗೆಯನ್ನು ತನ್ನ ತಪಸ್ಸಿನ ಬಲದಿಂದ ಶಿವನ ಜಟೆಯ ಮೂಲಕ ಇಳೆಗೆ ಹರಿಸಿದ ಭಗೀರಥನಂತೆ. ಕತ್ತಲೆಯ ದೇವರ ಕೋಣೆಗಳಲ್ಲಿ ಅಡಗಿಕುಳಿತಿದ್ದ, ಸಾಹಿತ್ಯ ಕ್ಷೇತ್ರದ ಅಧ್ಯಯನದಲ್ಲಿ ಮಾತ್ರ ಸೀಮಿತವಾಗಿದ್ದ ವಚನ ಸಾಹಿತ್ಯ ಗಂಗೆಯನ್ನು ಪ್ರವಚನದ ಮೂಲಕ ಜನಸಾಮಾನ್ಯರ ಹೃದಯಭೂಮಿಗೆ ಹರಿಸಿದ ಮಹಾಗುರು.

ಪೂಜ್ಯರ ಪ್ರವಚನದಿಂದ ಪುನೀತರಾದವರು ಅಸಂಖ್ಯಾತರು; ಬಾಳಿನಲ್ಲಿ ನಲಿವು-ನಂಜುಗಳೆರಡನ್ನೂ ಸಮಾನವಾಗಿ ಉಣಕಲಿತವರು ಬಹಳ. ಮೂಢನಂಬಿಕೆ, ಕಂದಾಚಾರಗಳಿಗೆ ತಿಲಾಂಜಲಿಯಿತ್ತು ಸದ್ಧರ್ಮವನ್ನು, ವೈಚಾರಿಕತೆಯನ್ನು ಅಳವಡಿಸಿಕೊಂಡವರು ಅನೇಕರು. ಇವರ ಅನುಭವಗಳು ವಿಶೇಷವಾಗಿರಬಹುದು, ಚೇತೋಹಾರಿಯಾಗಿರಬಹುದು. ನೀವೇ ಅಂಥ ಅನುಭವ, ಪ್ರೋತ್ಸಾಹ, ಪ್ರೇರಣೆ ಪಡೆದಿರಲೂಬಹುದು. ನಿಮ್ಮ ಮತ್ತು ಇನ್ನೂ ಅನೇಕರ ಅನುಭವ, ಅನಿಸಿಕೆ, ಪ್ರವಚನ ಕೇಳಿ ಪಡೆದ ಪ್ರೇರಣೆಗಳನ್ನು ಒತ್ತೆಡೆ ಕ್ರೋಢೀಕರಿಸಿ, ಸಂಗ್ರಹಿಸಿ, ಸೂಕ್ತ ಸಂಸ್ಕಾರಕೊಟ್ಟು ಸಂಸ್ಮರಣ ಸಂಚಿಕೆಯ ರೂಪದಲ್ಲಿ ಹೊರತರುವ ಹೊಣೆಗಾರಿಕೆಯನ್ನು ಶ್ರೀ ಟಿ. ಆರ್. ಮಹಾದೇವಯ್ಯನವರು ಹೊತ್ತಿದ್ದಾರೆ. ಆದ್ದರಿಂದ ನಿಮ್ಮ ಅನುಭವಗಳನ್ನು, ಅನಿಸಿಕೆಗಳನ್ನು ಪ್ರವಚನ ಕಾಲದಲ್ಲಿ ನಡೆದ ವಿಶೇಷ ಪ್ರಸಂಗಗಳೇನಾದರೂ ಇದ್ದರೆ ಅವನ್ನು ಹಾಳೆಯ ಒಂದೇ ಮಗ್ಗುಲಲ್ಲಿ, ಸ್ಪಷ್ಟವಾಗಿ ಬರೆದು ಕಳಿಸಿರಿ.

ಪೂಜ್ಯ ಲಿಂಗಾನಂದ ಸ್ವಾಮಿಗಳು ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ ಆಟದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. N. C. C. ಯಲ್ಲಿಯೂ ಇದ್ದರು. ಆಗಿನಿಂದ ಈಗಿನ ವರೆಗಿನ ವಿವಿಧ ಬಗೆಯ ಭಾವಚಿತ್ರಗಳನ್ನು ಸಂಗ್ರಹಿಸಿ, ಮುದ್ರಿಸುವ

ಆಕಾಂಕ್ಷೆಯಿದೆ. ಅಂಥ ಭಾವಚಿತ್ರಗಳು ಅವರ ಪೂರ್ವಾಶ್ರಮದ ಸ್ನೇಹಿತರ ಬಳಿಯಾಗಲೀ, ಬಂಧುಗಳ ಬಳಿಯಾಗಲೀ ಇದ್ದರೆ ಅದರ ವಿವರವನ್ನು ಬರೆದು ತಿಳಿಸಿರಿ. ಅವಶ್ಯಬಿದ್ದರೆ ತರಿಸಿಕೊಳ್ಳಲಾಗುತ್ತದೆ. ಪೂಜ್ಯರು ಸನ್ಯಾಸ ಸ್ವೀಕರಿಸಿದ ಹೊಸತರಲ್ಲಿ ತೆಗೆಸಿದ ಅನೇಕ ಭಾವಚಿತ್ರಗಳು ಈಗ ನಮ್ಮ ಬಳಿ ಇಲ್ಲ. ಆಗವರು ಪ್ರವಚನ ಮಾಡುತ್ತ ಸಂಚರಿಸಿದ ಊರುಗಳಲ್ಲಿ ಭಕ್ತರ ಬಳಿ ಇರಬಹುದು. ಅಂಥ ಭಾವಚಿತ್ರಗಳಿದ್ದರೆ ಪತ್ರಮುಖೇನ ಅದರ ವಿವರ ತಿಳಿಸಿರಿ. ನಮ್ಮ ಬಳಿ ಅದು ಇಲ್ಲವಾದರೆ ಕೇಳಿ ತರಿಸಿಕೊಳ್ಳುತ್ತೇವೆ.

ಶ್ರೀ ತರಳಬಾಳು ಜಗದ್ಗುರುಗಳೊಡನೆ ಕದಳಿ ಬನದ ಪ್ರವಾಸಕ್ಕೆ 1961ರಲ್ಲಿ ಹೋದಾಗ ದಿ. 16-4-1961 ರಂದು ಕೃಷ್ಣಾನದಿಯಲ್ಲಿ ಈಜಿ, ನದಿಯ ಮಧ್ಯೆ ಧ್ಯಾನಕ್ಕೆ ಕುಳಿತ ಒಂದು ವಿಶೇಷ ಭಂಗಿಯ ಭಾವಚಿತ್ರವನ್ನು ಯಾರೋ ತೆಗೆದಿದ್ದು, ಅದರ ಪ್ರತಿ ಅವಶ್ಯವಾಗಿ ಬೇಕಾಗಿದೆ. ಇದ್ದರೆ ಮರೆಯದೆ ಕಳಿಸಿರಿ. ಪೂಜ್ಯರ ಸಮಗ್ರ ಪರಿಚಯದ ಆಕಾಂಕ್ಷೆ ಹೊತ್ತು ಈ ಸಂಸ್ಮರಣ ಸಂಚಿಕೆ, ಅಭಿನಂದನ ಗ್ರಂಥ ಹೊರಬರುತ್ತವೆ. ಈ ದಿಶೆಯಲ್ಲಿ ವಿವರಗಳನ್ನು ಒದಗಿಸಿದರೆ ತುಂಬಾ ಉಪಕಾರವಾಗುವುದು.

ವ್ಯವಹರಿಸಬೇಕಾದ ವಿಳಾಸ :

ಶ್ರೀ ಟಿ. ಆರ್. ಮಹಾದೇವಯ್ಯ
ಸಂಪಾದಕರು, "ಸುಯಿಧಾನಿ" ಸಂಸ್ಮರಣ ಸಂಚಿಕೆ
ಬಸವ ಮಂಟಪ, 24, ಎರಡನೆ ಬ್ಲಾಕು
ಕಾರ್ಡ್‌ರಸ್ತೆ, ರಾಜಾಜಿನಗರ,
ಬೆಂಗಳೂರು–560 010.

ನಮ್ಮ ಮತ್ಸರ ಭಾವನೆಗಳನ್ನು ಎಷ್ಟು ಬೇಗ ಬಿಟ್ಟುಕೊಟ್ಟರೂ ಒಳ್ಳೆಯದೆ. ಅದು ಹೃದಯದಲ್ಲಿರುವವರೆಗೂ ಉಕ್ಕುತ್ತಿರುವ ಅನ್ನದ ತಿಳಿನೀರಿನಂತೆ ಹೃದಯದಲ್ಲಿ ತುಂಬಿ ತುಳುಕುತ್ತಲೇ ಇರುತ್ತದೆ.

—ಥೋರೊ

ಜ್ಞಾನಾಮೃತ

1. ಮನುಷ್ಯನು ಹಲವು ಸದ್ಗುಣಗಳಿಂದ ಕೂಡಿರಬಹುದು. ಆದರೆ ಅವನ ಯೋಗ್ಯತೆಯನ್ನು ಅಳೆಯುವ ಸಾಧನ ಅವನ ಸದ್ಗುಣಗಳಲ್ಲ. ಅವನ ಸದಾಚಾರವೇ ಆ ಸಾಧನವಾಗಿದೆ.
—ರೊಚೆಪೊರಾಲ್ಡ್.

2. ಪಾಪಿಯು ಯಾವಾಗಲೂ ಪ್ರಕಾಶರಹಿತ ಅಂಧಕಾರವನ್ನೇ ಬಯಸುತ್ತಾನೆ. ಏಕೆಂದರೆ ಪ್ರಕಾಶದಿಂದ ತನ್ನ ಪಾಪಕೃತ್ಯಗಳು ಬೆಳಕಿಗೆ ಬಿದ್ದಾವೆಂದು ಅವನಿಗೆ ಅಂಜಿಕೆಯಿರುತ್ತದೆ.
—ಟಾಲ್‌ಸ್ಟಾಯ್.

3. ಇತರರ ಅನುಗ್ರಹಕ್ಕೆ ಪಾತ್ರನಾಗುವುದಕ್ಕಿಂತ ಅವರ ಅಸೂಯೆಗೆ ಪಾತ್ರನಾಗುವುದು ಮೇಲು. ಏಕೆಂದರೆ ಇತರರ ಅನುಗ್ರಹದ ಹಿಂದೆಯೇ ನೀನವರ ಅಸೂಯೆಗು ಪಾತ್ರನಾಗುವೆ ಎಂಬುದನ್ನು ನೆನಪಿನಲ್ಲಿಟ್ಟುಕೊ.
—ಹೆರೋಡೋಟಸ್.

4. ನಂಬುಗೆಯೇ ಎಲ್ಲ ಧೈರ್ಯಸಾಹಸಗಳಿಗೆ ಮೂಲ ಆಧಾರ, ನಂಬಿಗೆ ಇಲ್ಲದವನ ಹೃದಯ ಮನಸ್ಸುಗಳೆರಡು ಚಿಂತೆ, ಭಯ, ಅಡ್ಡಿ ಆತಂಕ ಪಾಪಗಳಿಂದ ಕೂಡಿರುತ್ತದೆ. ನಂಬುಗೆಯು ವಿಶ್ವಾಸ, ಶ್ರದ್ಧೆ ಮತ್ತು ವಿಜಯಗಳ ಮೂಲವಾಗಿರುತ್ತದೆ.
—ಬುದ್ಧ.

5. ದೇವರೇ ಇಲ್ಲವೆನ್ನುವವರು ನೀರಲ್ಲಿದ್ದು ನೀರು ಕುಡಿಯುವುದಿಲ್ಲ ಎಂದು ಬೂಟಾಟಿಕೆ ಹೇಳುವ ಮೀನಿನಂತೆ. ನೀರಿನಿಂದ ಹೊರಗೆಳೆದು ಹಾಕಿದರೆ ಆ ಮೀನಿನ ಬಣ್ಣ ಬಯಲಾಗುವಂತೆ ಅವರ ಗತಿಯು ಅಷ್ಟೆ!
—ಸ್ವಾಮಿ ರಾಮದಾಸ್.

6. ಜಗತ್ತಿನಲ್ಲಿ ಮೂರ್ಖರು ಹೆಚ್ಚಾಗಿದ್ದಾರೆ. ಆದರೆ ಒಂದು ದುಃಖದ ಸಂಗತಿಯೆಂದರೆ ಆ ಮೂರ್ಖರೆಲ್ಲರು ತಾವು ಬಲ್ಲಿದರೆಂದು ವಾದಿಸುತ್ತಿರುವುದು. ಹೀಗೆ ವಾದ ಮಾಡುವುದಕ್ಕಿಂತ ಅವರು ಸ್ವಲ್ಪವಾದರು ಜಾಣತನ ಮಾಡಿ ತಮ್ಮ ಮೂರ್ಖತೆಯ ಪ್ರಮಾಣವನ್ನು ಕಡಿಮೆಮಾಡಿಕೊಳ್ಳುತ್ತಿದ್ದರೆ ಜಗತ್ತಿನ ಮೌಢ್ಯತೆಯು ಬಹುಭಾಗ ಕಡಿಮೆಯಾಗುವುದು.
—ಉಪನಿಷತ್.

7. ತಿಳಿಯದೆ ಮಾಡಿದ ತಪ್ಪನ್ನು ತಿಳಿದವರು ಹೇಳಿದಾಗ ಸುಧಾರಿಸಿಕೊಳ್ಳಿರಿ. ತಿಳಿಯದವರು ಮಾಡುವಾಗ ಎಚ್ಚರಿಸಿರಿ. ತಪ್ಪೆಂದು ತಿಳಿದುದನ್ನು ತಿದ್ದಿಕೊಳ್ಳದಿರುವುದು, ತಪ್ಪೆಂದು ಕಂಡಾಗ ಇತರರಿಗೆ ಹೇಳದೆ ಸುಮ್ಮನಿರುವುದು ಇವೆರಡು ಸತ್ಕಾರ್ಯಗಳಲ್ಲ. ಚೇಳನ್ನು ಕಂಡಲ್ಲಿ ಕೊಲ್ಲುವಂತೆ ತಪ್ಪನ್ನು ಕಂಡಲ್ಲಿ ಮರ್ದಿಸಿರಿ,
—ಹೆನ್ರಿಚ್.

ಸುಯಿಧಾನ ಸುಗ್ರಂಥಮಾಲೆಯ ಪ್ರಕಟಣೆಗಳು

	ಗ್ರಂಥದ ಹೆಸರು	ಲೇಖಕರು	ರೂ. ಪೈ.
೧	ದೇವರು*	ಸ್ವಾಮಿ ಲಿಂಗಾನಂದ	೨ ೦೦
೨	ಲಿಂಗತತ್ತ್ವದರ್ಪಣ*	,,	೩ ೦೦
೩	ದೇವಪೂಜಾ ವಿಧಾನ	,,	೩ ೫೦
೪	ಶರಣರ ಮೂರು ನಾಟಕಗಳು+	ಡಾ॥ ಎಚ್. ತಿಪ್ಪೇರುದ್ರಸ್ವಾಮಿ	೧ ೫೦
೫	ಅಕ್ಕನ ಪ್ರವಚನ+	ಸ್ವಾಮಿ ಲಿಂಗಾನಂದ	೧೦ ೦೦
೬	ಮಾತೃವಾಣಿ+	ಮಾತೆ ಮಹಾದೇವಿ	೩ ೦೦
೭	ಜಂಗಮ ದರ್ಶನ+	ಸ್ವಾಮಿ ಲಿಂಗಾನಂದ	೧ ೦೦
೮	ವಿರಹ ತರಂಗ+	ಮಾತೆ ಮಹಾದೇವಿ	೩ ೦೦
೯	ಲಿಂಗತತ್ತ್ವದರ್ಪಣ (ಹಿಂದಿ)*	ಸ್ವಾಮಿ ಲಿಂಗಾನಂದ	೩ ೦೦
೧೦	ಶಿವಯೋಗಿಣಿ+	ಮಾತೆ ಮಹಾದೇವಿ	೨ ೦೦
೧೧	ಬಸವ ತತ್ತ್ವದರ್ಶನ+	,,	೧೮ ೦೦
೧೨	ಚಿನ್ಮೂಲಾದ್ರಿಯ ಚಿತ್ಕಳೆ	ಸ್ವಾಮಿ ಲಿಂಗಾನಂದ	೧೦ ೦೦
೧೩	ವಚನ ಸುಧಾ+	ಮಾತೆ ಮಹಾದೇವಿ	೦ ೫೦
೧೪	ಲಿಂಗತತ್ತ್ವದರ್ಪಣ(ಮರಾಠಿ)+	ಸ್ವಾಮಿ ಲಿಂಗಾನಂದ	೩ ೦೦
೧೫	ಗಂಗಾ ತರಂಗ+	ಮಾತೆ ಮಹಾದೇವಿ	೨ ೦೦
೧೬	ಸಾಮೂಹಿಕ ಪ್ರಾರ್ಥನೆ	ಸಂ. ,,	೦ ೫೦

* ಅಚ್ಚಿನಲ್ಲಿವೆ

	ಗ್ರಂಥದ ಹೆಸರು	ಲೇಖಕರು	ರೂ. ಪೈ.
೧೭	ಅಣ್ಣನ ಲಾವಣಿ+	ವಿ. ಸಿದ್ಧರಾಮಣ್ಣ	೦ ೩೫
೧೮	ಹಿಂದು ಯಾರು ?	ಮಾತೆ ಮಹಾದೇವಿ	೧ ೦೦
೧೯	ಬಸವ ವಚನ ಸುಧಾ	ಸಂ. ಮಾತೆ ಮಹಾದೇವಿ	೩ ೦೦
೨೦	ಅಕ್ಕನ ಅಮರವಾಣಿ*	,,	೨ ೦೦
೨೧	ಮಾತೃ ಹರಕೆ	,,	೬ ೦೦
೨೨	ವಚನಾಮೃತ	ಸ್ವಾಮಿ ಲಿಂಗಾನಂದ	೨ ೫೦
೨೩	ವೀರಶೈವ ಧರ್ಮಸ್ಥಾಪಕರಾರು ?*	ಬಿ. ಸಿ. ಜವಳಿ	೪ ೦೦
೨೪	ಕಲ್ಯಾಣ ಕ್ರಾಂತಿ	ಮಾತೆ ಮಹಾದೇವಿ	೪ ೫೦
೨೫	ದೇವರ ಮಕ್ಕಳು	,,	೩ ೦೦
೨೬	ಪತಿತೋದ್ಧಾರಕ	,,	೨ ೦೦
೨೭	ಲಿಂಗಾಯತ ಧರ್ಮ ಕೈಪಿಡಿ	,,	೩ ೦೦
೨೮	ಲಿಂಗಾಯತ ಧರ್ಮ ಸ್ಥಾಪಕರಾರು ?	ಬಿ.ಸಿ. ಜವಳಿ	೪ ೦೦
೨೯	ಬಸವಣ್ಣನವರ ವಚನ ಪದಪ್ರಯೋಗ ಕೋಶ	ಎಸ್. ಆರ್. ಗುಂಜಾಳ	೫೦ ೦೦
೩೦	ದೇವನೆಡೆಗೆ*	ಮಾತೆ ಮಹಾದೇವಿ	೧ ೫೦
೩೧	ಹೆಪ್ಪಿಟ್ಟ ಹಾಲು (ಕಾದಂಬರಿ)	,,	೧೮ ೦೦
೩೨	ಅನುಭವ ಮಂಟಪ*	,,	೧ ೦೦
೩೩	Revolution in Kalyana	Mathe Mahadevi	೫ ೦೦
೩೪	A Guide to Lingayatism	,,	೬ ೦೦

* ಅಚ್ಚಿನಲ್ಲಿವೆ

	ಗ್ರಂಥದ ಹೆಸರು	ಲೇಖಕರು	ರೂ. ಪೈ
೩೫	Emblem of God	Swami Linganand	೬ ೦೦
೩೬	ಅಧ್ಯಾತ್ಮ ಮತ್ತು ಮಹಿಳೆ*	ಮಾತೆ ಮಹಾದೇವಿ	೧ ೦೦
೩೭	ತರಂಗಿಣಿ (ಅಕ್ಕಮಹಾದೇವಿ ಕಾದಂಬರಿ)	,,	೩೩ ೦೦
೩೮	ವಿಶ್ವವಿಭೂತಿ ಬಸವಣ್ಣ	,,	೫ ೦೦
೩೯	Lingayatism	,,	೩ ೦೦
೪೦	ವಿಶ್ವಕಲ್ಯಾಣ ಗೀತೆ	ಸಂ. ,,	೪ ೦೦
೪೧	Mataji A profile	,,	೦ ೫೦
೪೨	ಧರ್ಮಕ್ರಾಂತಿಯ ದಿವ್ಯಜ್ಯೋತಿ	—ಗೊ. ರು. ಚ.	೦ ೫೦
೪೩	ಧರ್ಮಕ್ರಾಂತಿಯ ಧೀರಯೋಗಿ	ಸಂ.–ಮಾತೆ ಮಹಾದೇವಿ	೨ ೦೦
೪೪	ಬಸವ ಚರಣಕೆ ನುಡಿನೈವೇದ್ಯ	,,	೫ ೦೦
೪೫	ಬಸವಣ್ಣನವರ ವಚನಗಳಲ್ಲಿ ಪ್ರಾಣಿ ರೂಪಕ	ಸುಜನಾ	೨ ೦೦
೪೬	ವಿಶ್ವಗುರು ಬಸವಣ್ಣ (ಜೀವನ ಚರಿತ್ರೆ)	ಮಾತಾಜಿ	೪ ೫೦
೪೭	ಪಂಚಧಾರೆ	ಸಂ. ಮಾತಾಜಿ	೫ ೦೦
೪೮	ವಿಶ್ವಕಲ್ಯಾಣ ಮಿಷನ್ ಪಕ್ಷಿನೋಟ		೧ ೦೦
೪೯	ಒಲಿದು ಹಾಡಿದ ಗೀತೆ	ಮಾತಾಜಿ	೩ ೦೦
೫೦	ವಚನ ನವನೀತ	ಸ್ವಾಮಿ ಲಿಂಗಾನಂದ	೩ ೦೦
೫೧	ಇಷ್ಟಲಿಂಗ ಜನಕ ವಿಶ್ವಗುರು ಬಸವಣ್ಣ	ಮಾತಾಜಿ	೦ ೫೦
೫೨	ಬಸವಣ್ಣನವರ ದೀಕ್ಷಾಗುರು ಯಾರು ?	,,	೦ ೫೦
೫೩	ಸತ್ಯ-ಸಂದೇಹ ? ಸಮಾಧಾನ !	,,	೧ ೦೦
೫೪	Lord Basava	,,	೨ ೦೦
೫೫	ವಿಶ್ವಜ್ಯೋತಿ ಬಸವಣ್ಣ (ಸಂಕ್ಷಿಪ್ತ ಜೀವನ ಚರಿತ್ರೆ)	,,	೦ ೫೦

		ರೂ. ಪೈ.
	ಜಗದ್ಗುರು ಬಸವಣ್ಣನವರ ತ್ರಿವರ್ಣರಂಜಿತ ಭಾವಚಿತ್ರಗಳು	
೧	ಪೂರ್ಣ ಡೆಮ್ಮಿ ಆಕಾರ	೪ ೦೦
೨	½ ಡೆಮ್ಮಿ ಆಕಾರ	೨ ೦೦
೩	¼ ಡೆಮ್ಮಿ ಆಕಾರ	೧ ೦೦
೪	ಅಕ್ಕಮಹಾದೇವಿಯ ತ್ರಿವರ್ಣರಂಜಿತ ಭಾವಚಿತ್ರ	೨ ೦೦
೫	ಶ್ರೀ ಮಾತಾಜಿಯವರ ತ್ರಿವರ್ಣರಂಜಿತ ಭಾವಚಿತ್ರ	೨ ೦೦
೬	ಶ್ರೀ ಗುರೂಜಿಯವರ ತ್ರಿವರ್ಣರಂಜಿತ ಭಾವಚಿತ್ರ	೨ ೦೦
	ಪೋಸ್ಟ್‌ಕಾರ್ಡ್ ಸೈಜ್ ತ್ರಿವರ್ಣರಂಜಿತ ಭಾವಚಿತ್ರಗಳು	
೧	ಜಗದ್ಗುರು ಬಸವಣ್ಣ	೦ ೩೫
೨	ಜಗನ್ಮಾತಾ ಅಕ್ಕಮಹಾದೇವಿ	೦ ೩೫
೩	ಪೂಜ್ಯಶ್ರೀ ಸದ್ಗುರುಗಳು	೦ ೩೫
೪	ಪೂಜ್ಯಶ್ರೀ ಮಾತಾಜಿಯವರು	೦ ೩೫
೫	ಲಿಂಗಾಯತ ಯಾರು ? (ಚಾರ್ಟ್)	೦ ೨೫
೬	ವಿಶ್ವವಿಭೂತಿ ಬಸವಣ್ಣನವರ ಅಪೂರ್ವ ವ್ಯಕ್ತಿತ್ವದ ಚಾರ್ಟ್	೦ ೫೦

ವಿ. ಸೂಚನೆ : ನೂರಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ವಿಶೇಷ ರಿಯಾಯಿತಿ ಇದೆ.

ವಿಳಾಸ :—

ಕಾರ್ಯದರ್ಶಿ,
ಬಸವ ಮಂಟಪ
24, ಕಾರ್ಡ್ ರಸ್ತೆ, 2ನೇ ಬ್ಲಾಕು,
ರಾಜಾಜಿನಗರ, ಬೆಂಗಳೂರು–560 010
ದೂರವಾಣಿ : 82335.

ಕಲ್ಯಾಣ ಕಿರಣ

ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ಬ್ಲಾಕು, ಕಾರ್ಡ್‌ರೋಡ್, ರಾಜಾಜಿನಗರ,
ಬೆಂಗಳೂರು-೫೬೦ ೦೧೦.
ದೂರವಾಣಿ : ೮೨೩೩೫.

ಚಂದಾ ವಿವರ :

ಬಿಡಿ ಸಂಚಿಕೆ :	ರೂ.	೧-೫೦
ವಾರ್ಷಿಕ :	ರೂ.	೧೬-೦೦
ದ್ವೈವಾರ್ಷಿಕ :	ರೂ.	೩೧-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಮೂರರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.
* ಪತ್ರಿಕೆ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆ ವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೬-೦೦ (ಹದಿನಾರು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.



ಉಜ್ಜಯನಿಯ ವಿಶ್ವಬಂಧು ಮರುಳುಸಿದ್ಧನ ದೇವಾಲಯದಲ್ಲಿ ವಿಶ್ವಗುರು ಬಸವಣ್ಣನವರ ಶಿಲಾಪ್ರತಿಮೆ. ಸಂಶೋಧನೆ ಮತ್ತು ಬ್ಲಾಕಿನ ಕೊಡುಗೆ ಶರಣ ಹೆಚ್. ದೇವೀರಪ್ಪನವರಿಂದ

Regd. No. KRNB 312

Licenced to post without pre-payment No. WPP-25

